ವಿಶ್ವವಾಣಿ
ವಿಶ್ವಾಸವೇ ವಿಶ್ವ

ಕ್ರಿಕೆಟ್‌ಗೆ ವಿದಾಯ ಹೇಳಿದ ದಿನೇಶ್ ಕಾರ್ತಿಕ್

ಭಾರತ ಕ್ರಿಕೆಟ್ ತಂಡ ಹಾಗೂ ಐಪಿಎಲ್‌ನಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡದ ವಿಕೆಟ್ ಕೀಪರ್, ಬ್ಯಾಟರ್ ದಿನೇಶ್ ಕಾರ್ತಿಕ್ ಅವರು ಎಲ್ಲ ಮಾದರಿಯ ಕ್ರಿಕೆಟ್‌ಗೆ ವಿದಾಯ ಹೇಳಿದ್ದಾರೆ.

350 ಕ್ಷೇತ್ರಗಳಲ್ಲಿ ಎನ್‌ಡಿಎ ಗೆಲ್ಲುವುದು ನಿಶ್ಚಿತವೆಂದಿರುವ ಎಲ್ಲ ಸಮೀಕ್ಷೆ

ಇಂಡಿ ಒಕ್ಕೂಟವು 140ರಿಂದ 170 ಸೀಟಿಗೆ ತೃಪ್ತಿಪಟ್ಟುಕೊಳ್ಳಬೇಕಾದ ಸ್ಥಿತಿ

ಮೋದಿ ಮತ್ತೊಮ್ಮೆ ಖಚಿತ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಸುದೀರ್ಘ ಮೂರು ತಿಂಗಳ ಲೋಕಸಭಾ ಚುನಾವಣೆಯ ಏಳು ಹಂತದ ಮತದಾನ ಪ್ರಕ್ರಿಯೆ ಪೂರ್ಣಗೊಳ್ಳುತ್ತಿದ್ದಂತೆ, ಚುನಾವಣೋತ್ತರ ಸಮೀಕ್ಷೆ ಪ್ರಕಟವಾಗಿದ್ದು, ಬಿಜೆಪಿ 400 ಗುರಿ ಮುಟ್ಟದಿದ್ದರೂ, ಸ್ಪಷ್ಟ ಬಹುಮತದೊಂದಿಗೆ ಅಧಿಕಾರದ ಗದ್ದುಗೆ ಏರುವುದು ಸ್ಪಷ್ಟವಾಗಿದೆ.

ಲೋಕಸಭಾ ಚುನಾವಣಾ ಪೂರ್ವದಲ್ಲಿ ಈ ಬಾರಿ ಎನ್‌ಡಿಎ ಮೈತ್ರಿಕೂಟ 400 ಸೀಟುಗಳನ್ನು ಗೆಲ್ಲುವ ಮೂಲಕ ದಾಖಲೆಯ ರೂಪದಲ್ಲಿ ಅಧಿಕಾರಕ್ಕೇರುವುದಾಗಿ ಹೇಳಿತ್ತು. ಆದರೆ ಬಹುತೇಕ ಸಮೀಕ್ಷೆಗಳಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟ 350ರಿಂದ 370 ಸೀಟುಗಳನ್ನು ಗೆಲ್ಲುವುದು ನಿಶ್ಚಿತ ಎನ್ನಲಾಗಿದೆ. ಇನ್ನೊಂದೆಡೆ ಕಳೆದ ಎರಡು ಅವಧಿಯಲ್ಲಿ ಅಧಿಕೃತ ಪ್ರತಿಪಕ್ಷ ಸ್ಥಾನವನ್ನು ಪಡೆಯುವಲ್ಲಿ 'ವಿಫಲ'ವಾಗಿದ್ದ ಕಾಂಗ್ರೆಸ್ ಈ ಬಾರಿ ಅಧಿಕೃತ ಪ್ರತಿಪಕ್ಷವಾಗಿ ಹೊರಹೊಮ್ಮುವ ಮೂಲಕ 'ಸಾಧನೆ'ಯನ್ನು ವೃದ್ಧಿಸಿಕೊಳ್ಳುವ ಸಾಧ್ಯತೆಯಿದೆ ಎಂದು ಬಹುತೇಕ ಸಮೀಕ್ಷೆಗಳು ಭವಿಷ್ಯ ನುಡಿದಿವೆ.

ಈ ಬಾರಿಯೂ ನಿರೀಕ್ಷೆಯಂತೆ ಉತ್ತರ ಭಾರತದಲ್ಲಿ ಬಿಜೆಪಿ ಕ್ಲೀನ್ ಸ್ವೀಪ್ ಮಾಡುವುದು ಬಹುತೇಕ ಖಚಿತ ಎನ್ನಲಾಗುತ್ತಿದೆ. ಅದರಲ್ಲಿಯೂ ಅತಿಹೆಚ್ಚು ಸೀಟುಗಳಿರುವ ಉತ್ತರ ಭಾರತದಲ್ಲಿ ಕನಿಷ್ಠ 60ರಿಂದ 65 ಕ್ಷೇತ್ರಗಳನ್ನು ಗೆಲ್ಲುವ ಸಾಧ್ಯತೆಯಿದೆ ಎಂದು ಬಹುತೇಕ ಸಮೀಕ್ಷೆಗಳು ಭವಿಷ್ಯ ನುಡಿದಿವೆ.

ಕಳೆದ ಬಾರಿಗಿಂತಲೂ ಉತ್ತಮ ಸಂಖ್ಯೆ: ಬಹುತೇಕ ಸಮೀಕ್ಷೆಗಳಲ್ಲಿನ ಸಂಖ್ಯೆಯನ್ನು ಗಮನಿಸಿದರೆ, 2019ರ ಲೋಕಸಭಾ ಚುನಾವಣೆಗೆ ಹೋಲಿಸಿದರೆ ಈ ಬಾರಿ ಕಳೆದ ವರ್ಷಕ್ಕಿಂತ ಹೆಚ್ಚಿನ ಸೀಟು ಗೆಲ್ಲುವುದು ಖಚಿತ ಎನ್ನಲಾಗಿದೆ. ಕಳೆದ ಬಾರಿ ಬಿಜೆಪಿ ನೇತೃತ್ವದ ಎನ್‌ಡಿಎ 353 ಸ್ಥಾನಗಳನ್ನು ಗಳಿಸಿತ್ತು. ಆದರೆ ಈ ಬಾರಿ ಈ ಸಂಖ್ಯೆ 360ಕ್ಕೆ ಏರಿಕೆಯಾಗುವ ಸಾಧ್ಯತೆಯಿದೆ ಎಂದು ಹೇಳಲಾಗಿದೆ. ಆದರೆ ಇನ್ನೊಂದೆಡೆ ಕಾಂಗ್ರೆಸ್ ನೇತೃತ್ವದ ಮೈತ್ರಿಕೂಟ ಕಳೆದ ಬಾರಿ 91 ಸ್ಥಾನ ಪಡೆದಿದ್ದರೆ, ಈ ಬಾರಿ 100ರ ಗಡಿ ದಾಟುವುದು ಖಚಿತ ಎಂದು ಬಹುತೇಕ ಸಮೀಕ್ಷೆಗಳು ತಿಳಿಸಿವೆ.

- ಉತ್ತರ ಭಾರತ, ಪೂರ್ವ ಭಾರತದಲ್ಲಿ ಬಿಜೆಪಿ ಕ್ಲೀನ್ ಸ್ವೀಪ್
- ದಕ್ಷಿಣ ಭಾರತದ ಎಲ್ಲ ರಾಜ್ಯದಲ್ಲಿಯೂ ಅರಳಿದ ಕಮಲ
- ಉತ್ತರ ಪ್ರದೇಶದಲ್ಲಿಯೇ ಬಿಜೆಪಿ ತೆಕ್ಕೆಗೆ 62ಕ್ಕೂ ಹೆಚ್ಚು ಸ್ಥಾನ
- ಗುಜರಾತ್, ಮಧ್ಯಪ್ರದೇಶ ಬಿಜೆಪಿಯಿಂದ ಕ್ಲೀನ್ ಸ್ವೀಪ್
- ಕೇರಳ, ತಮಿಳುನಾಡಿನಲ್ಲಿ ಬಿಜೆಪಿ ಖಾತೆ ತೆರೆಯುವುದು ಖಚಿತ
- ಬಿಹಾರ, ರಾಜಸ್ಥಾನ, ಹರಿಯಾಣದಲ್ಲಿ ಬಿಜೆಪಿಗೆ ಅಲ್ಪ ಹಿನ್ನಡೆ ಸಾಧ್ಯತೆ
- ದೆಹಲಿಯಲ್ಲಿ ಆಮ್ ಆದ್ಮಿ ಸಾಧನೆ ಶೂನ್ಯವಾಗುವ ಸಾಧ್ಯತೆ
- ಕಾಂಗ್ರೆಸ್ ಈ ಬಾರಿ 100 ಗಡಿ ದಾಟುವುದು ಖಚಿತವೆಂದ ಸಮೀಕ್ಷೆ
- ಈ ಬಾರಿ ಅಧಿಕೃತ ಪ್ರತಿಪಕ್ಷದ ಸ್ಥಾನ ಪಡೆಯಲಿರುವ ಕಾಂಗ್ರೆಸ್
- ಕರ್ನಾಟಕದಲ್ಲಿ ಎರಡಂಕಿಗೆ ಜಿಗಿಯಲಿರುವ ಕಾಂಗ್ರೆಸ್

ಏಜೆನ್ಸಿ	ಎನ್‌ಡಿಎ	ಇಂಡಿಯ	ಇತರೆ
ಚಾಣಕ್ಯ	376	103	29
ಜನ್ ಕಿಬಾತ್	372	151	15
ರಿಪಬ್ಲಿಕ್-ಪಿ ಮಾರ್ಕ್	359	154	30
ಎಬಿಪಿ	353-283	152-182	4-12
ರಿಪಬ್ಲಿಕ್ ಭಾರತ್- ಮ್ಯಾಟ್ರಿಕ್ಸ್	353	118-123	43-48
ದೈನಿಕ್ ಭಾಸ್ಕರ್	281-350	145-201	33-49
ನ್ಯೂಸ್ ನೇಷನ್	360	161	--
ಸಿಎನ್‌ಎಕ್ಸ್	371-401	109-139	28-38
ಸರಾಸರಿ	349-366	151-164	33-38

ಕರ್ನಾಟಕದಲ್ಲಿ ಕಾಂಗ್ರೆಸ್ ಸುಧಾರಣೆ ಸಂಭವ

ವಿಧಾನಸಭಾ ಚುನಾವಣೆಯಲ್ಲಿ ಗ್ಯಾರಂಟಿಗಳ ಮೂಲಕ ಯಶಸ್ಸಾಗಿದ್ದ ಕಾಂಗ್ರೆಸ್ ನಿರೀಕ್ಷೆ ಮಾಡಿದಷ್ಟು ಸಾಧನೆ ತೋರದಿದ್ದರೂ, ಕಳೆದ ಲೋಕ ಚುನಾವಣೆಗೆ ಹೋಲಿಸಿದರೆ ಫಲಿತಾಂಶ ವೃದ್ಧಿಸಿಕೊಳ್ಳುವಲ್ಲಿ ಯಶಸ್ವಿಯಾಗಿದೆ ಎಂದು ಸಮೀಕ್ಷೆಗಳು ತಿಳಿಸಿವೆ.

ಬಹುತೇಕ ಸಮೀಕ್ಷಾ ಏಜೆನ್ಸಿಗಳು ಬಿಜೆಪಿ-ಜೆಡಿಎಸ್ 20-22 ಸೀಟುಗಳನ್ನು ಗೆಲ್ಲುವ ಸಾಧ್ಯತೆಯಿದ್ದರೆ, ಕಾಂಗ್ರೆಸ್ 8 ರಿಂದ 10 ಸ್ಥಾನಗಳಲ್ಲಿ ಗೆಲ್ಲುವ ಸಾಧ್ಯತೆಯಿದೆ ಎನ್ನುವುದು ಸಮೀಕ್ಷೆಯಲ್ಲಿ ಸ್ಪಷ್ಟವಾಗಿದೆ. ಈ ಮೂಲಕ ಡಬಲ್ ಡಿಜಿಟ್ ಸ್ಥಾನಗಳನ್ನು ಪಡೆಯುವ ಹುಮ್ಮಸ್ಸಿನಲ್ಲಿದ್ದ ಕಾಂಗ್ರೆಸ್‌ಗೆ ಹಿನ್ನಡೆ ಸಾಧ್ಯತೆ ಇದೆ. ಆದರೆ ಒಂದಂಕಿಯಿಂದ ಎಂಟರಿಂದ 10 ಸ್ಥಾನಕ್ಕೆ ಹೋಗಿರುವುದು ಸಮಾಧಾನ ತಂದಿದೆ. ಇನ್ನೊಂದೆಡೆ ಜೆಡಿಎಸ್-ಬಿಜೆಪಿ ಮೈತ್ರಿಯಿಂದ ಕ್ಲೀನ್ ಸ್ವೀಪ್ ಮಾಡುವ ಮಾತುಗಳನ್ನು ಆಡಿದ್ದ ಬಿಜೆಪಿ ಕಳೆದ ಬಾರಿಯಷ್ಟು ಸೀಟುಗಳನ್ನು ಗೆಲ್ಲಲು ಸಾಧ್ಯವಿಲ್ಲ ಎನ್ನುವುದು ಸ್ಪಷ್ಟವಾಗಿದೆ. ಆದರೆ ಹಳೇ ಮೈಸೂರು ಭಾಗದಲ್ಲಿ ಸಂಘಟನೆಯ ಬಲ ಹೆಚ್ಚಿಸಿಕೊಳ್ಳಬೇಕು ಎನ್ನುವ ಬಿಜೆಪಿಯ ಆಲೋಚನೆಗೆ ಜೆಡಿಎಸ್ ಮೈತ್ರಿ ಸಹಾಯ ಮಾಡಿರುವುದು ಸ್ಪಷ್ಟವಾಗಿದೆ. ಪೆನ್‌ಡ್ರೈವ್ ಹಗರಣ ಮತದಾರರ ಮೇಲೆ ಬಹುದೊಡ್ಡ ಪರಿಣಾಮ ಬೀರಿಲ್ಲ. ಹಾಸನದಲ್ಲಿ ಸಮಸ್ಯೆಯಾಗಿರುವುದು ಸ್ಪಷ್ಟವಾಗಿದ್ದರೂ, ರಾಜ್ಯಾದ್ಯಂತ ಅಥವಾ ಮಂಡ್ಯದಲ್ಲಿ ಜೆಡಿಎಸ್‌ಗೆ ಅಡ್ಡಪರಿಣಾಮ ಬೀರಿಲ್ಲ ಎಂದು ಸಮೀಕ್ಷೆಗಳು ತಿಳಿಸಿವೆ.

ಕರ್ನಾಟಕದಲ್ಲಿ ಕಥೆಯೇನು?

ಏಜೆನ್ಸಿ	ಎನ್‌ಡಿಎ	ಇಂಡಿಯ
ಎಬಿಪಿ-ಸಿವೋಟರ್	23-25	03-05
ಇಂಡಿಯಾ ಟುಡೆ	22-25	03-05
ಆ್ಯಕ್ಸಿಸ್ ಮೈ ಇಂಡಿಯಾ	23-25	03-05
ರಿಪಬ್ಲಿಕ್	22	06
ಸಿಎನ್‌ಎನ್	21-24	03-07
ಜನ್ ಕಿ ಬಾತ್	21-23	05-07

ಪುಟ ತೆರೆದಂತೆ...

ಸ್ಟಾರ್ ಹೋಟೆಲಿನಲ್ಲಿ ಕೆಲಸ ಮಾಡಿದವರು ಸಿಕ್ಕಾಗ ಏನು ಮಾಡಬೇಕು?
ಇದೇ ಅಂತರಂಗ ಸುದ್ದಿ
ವಿಶ್ವೇಶ್ವರ ಭಟ್
ಸಂ.ಪುಟ | 6

ಗುಮ್ಮನೂ ದೇವರಂತೆ ಸರ್ವಾಂತರ್ಯಾಮಿ, ಸರ್ವರೂಪಧಾರಿ
ತಿಳಿರು ತೋರಣ
ಶ್ರೀವತ್ಸ ಜೋಶಿ
ಸಂ.ಗಮ | 7

ದಾರಿದೀಪೋಕ್ತಿ

ನಿಮ್ಮ ಜೀವನದಲ್ಲಿ ಬರುವ ಯಾರನ್ನೂ ತಿರಸ್ಕರಿಸಬೇಡಿ. ಒಳ್ಳೆಯವರಿಂದ ನಿಮಗೆ ಉತ್ತಮ ಗೆಳೆತನ, ಸಂತಸ ಸಿಗುತ್ತದೆ. ಕೆಟ್ಟವರಿಂದ ನೀವು ಕಹಿ ಅನುಭವ ಮತ್ತು ಪಾಠವನ್ನು ಕಲಿಯುತ್ತೀರಿ. ಪ್ರತಿಯೊಬ್ಬರೂ ಕಲಿಯಲು ಒಂದಿಲ್ಲೊಂದು ವಿಷಯ ಇದ್ದೇ ಇರುತ್ತದೆ.

ವಕ್ರತುಂಡೋಕ್ತಿ

ನೀವು ಎಲ್ಲರನ್ನೂ ಖುಷಿಪಡಿಸಲು ಸಾಧ್ಯವಿಲ್ಲ, ಕಾರಣ ನೀವು ಬಿಯರೂ ಅಲ್ಲ, ಬಿರ್ಯಾನಿಯೂ ಅಲ್ಲ.

ಎಸ್‌ಐಟಿಗೆ ಸಿಗದ ಭವಾನಿ ದರ್ಶನ

ವಿವರಪುಟ → 4

ಸಿಐಡಿ ವರದಿಯಲ್ಲಿ ನಾಗೇಂದ್ರ ಹೆಸರಿದ್ದರೆ ರಾಜೀನಾಮೆ ಪಡೆಯಲು ಸಿದ್ಧತೆ

ನಿಗಮದ ಎಂಡಿ ಪದ್ಮನಾಭ್, ಲೆಕ್ಕಾಧಿಕಾರಿ ಪರಶುರಾಮ್ ಎಸ್‌ಐಟಿ ವಶಕ್ಕೆ

ನಾಗೇಂದ್ರ ರಾಜೀನಾಮೆ ಪಡೆಯಲು ಹೆಚ್ಚಿದ ಒತ್ತಡ

ಬೆಂಗಳೂರು: ವಾಲ್ಮೀಕಿ ಅಭಿವೃದ್ಧಿ ನಿಗಮದ ಬಹುಕೋಟಿ ಹಗರಣದಲ್ಲಿ ಸಚಿವ ನಾಗೇಂದ್ರ ಅವರ ರಾಜೀನಾಮೆ ಪಡೆಯಲು ಬಿಜೆಪಿ ತನ್ನ ಪಟ್ಟು ಮುಂದುವರಿಸಿದ್ದು, ಕಾಂಗ್ರೆಸ್ ನಾಯಕರು ಈ ವಿಷಯದಲ್ಲಿ 'ಮೌನಕ್ಕೆ' ಶರಣಾಗಿದ್ದಾರೆ.

ಕಳೆದ ಮೂರು ದಿನಗಳಿಂದ ಸಚಿವ ನಾಗೇಂದ್ರ ಅವರ ರಾಜೀನಾಮೆಗೆ ಬಿಜೆಪಿ ಆಗ್ರಹಿಸುತ್ತಿದೆ. ಆದರೆ ಕಾಂಗ್ರೆಸ್ ನಾಯಕರು ರಾಜೀನಾಮೆ ಪಡೆಯುವ ಬಗ್ಗೆ ತುಟಿ ಬಿಚ್ಚದೇ ಅಂತರ ಕಾಯ್ದುಕೊಂಡಿರುವುದು ಗಮನಿಸಿದರೆ, ಸಿಐಡಿ ವರದಿಯಲ್ಲಿ ಸಚಿವ ನಾಗೇಂದ್ರ ಹೆಸರು ಪ್ರಸ್ತಾಪವಾಗಿದ್ದರೆ ರಾಜೀನಾಮೆ ಪಡೆಯುವ ಲೆಕ್ಕಾಚಾರದಲ್ಲಿಯೇ ಇದ್ದಾರೆ ಎನ್ನುವುದು ಸ್ಪಷ್ಟ.

ಈಗಾಗಲೇ ಸಿಐಡಿಯು ಅಕ್ರಮಕ್ಕೆ ಸಂಬಂಧಿಸಿದಂತೆ ವರದಿ ಸಿದ್ಧಪಡಿಸಿದೆ. ಆದರೆ ವರದಿಯಲ್ಲಿ ಸಚಿವ ನಾಗೇಂದ್ರ ಅವರ ಹೆಸರು ಪ್ರಸ್ತಾಪಿಸಲಾಗಿದೆಯೇ ಎನ್ನುವ ಕುತೂಹಲ ಅನೇಕರಲ್ಲಿದೆ. ಒಂದು ವೇಳೆ ನಾಗೇಂದ್ರ ಅವರ ಹೆಸರು ಪ್ರಸ್ತಾಪವಾಗಿದ್ದರೆ, ರಾಜೀನಾಮೆ ಪಡೆಯುವ ಮೂಲಕ ಮುಜುಗರದಿಂದ ತಪ್ಪಿಸಿಕೊಳ್ಳಲು ಹೈಕಮಾಂಡ್ ಸೂಚನೆ ನೀಡಿದೆ ಎಂದು ಮೂಲಗಳು ತಿಳಿಸಿವೆ.

ಇನ್ನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಇಬ್ಬರೂ ಪ್ರತಿಕ್ರಿಯಿಸಿದ್ದು, ಪ್ರಕರಣವನ್ನು ಪಾರದರ್ಶಕವಾಗಿ ತನಿಖೆ ನಡೆಸುವ ಮಾತುಗಳನ್ನು ಆಡಿದ್ದಾರೆ. ಇದರೊಂದಿಗೆ ಸಚಿವರ ರಾಜೀನಾಮೆ ಪಡೆಯುವುದಿಲ್ಲ ಎಂದು ಹೇಳದೇ, ತನಿಖೆಯ ಬಳಿಕ ಮುಂದೇನು ಮಾಡಬೇಕು ನೋಡೋಣ ಎಂದಿದ್ದಾರೆ. ಈ ಮೂಲಕ ಒಂದು ವೇಳೆ ಹೆಸರು ಪ್ರಸ್ತಾಪವಾಗಿದ್ದರೆ ರಾಜೀನಾಮೆ ಪಡೆಯುವುದು ನಿಶ್ಚಿತ ಎನ್ನುವ ಪರೋಕ್ಷ ಸಂದೇಶ ರವಾನಿಸಿದ್ದಾರೆ.

- ವಾಲ್ಮೀಕಿ ಅಭಿವೃದ್ಧಿ ನಿಗಮದ ಅಕ್ರಮಕ್ಕೆ ಸಂಬಂಧಿಸಿದಂತೆ ಸಿಐಡಿಯಿಂದ ವರದಿ ಸಿದ್ಧ
- ಸಚಿವ ನಾಗೇಂದ್ರ ರಾಜೀನಾಮೆ ಪಡೆಯುವ ಬಗ್ಗೆ ತುಟಿ ಬಿಚ್ಚದ ಕಾಂಗ್ರೆಸ್ ನಾಯಕರು
- ಮುಜುಗರದಿಂದ ತಪ್ಪಿಸಿಕೊಳ್ಳಲು ರಾಜೀನಾಮೆ ಪಡೆಯುವಂತೆ ಹೈಕಮಾಂಡ್ ಸೂಚನೆ

ಇಬ್ಬರು ಅಧಿಕಾರಿಗಳು ಎಸ್‌ಐಟಿ ಕಸ್ಟಡಿಗೆ

ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದಿದೆ ಎನ್ನಲಾದ ಬಹುಕೋಟಿ ಹಗರಣ ಪ್ರಕರಣದಲ್ಲಿ ಬಂಧಿತ ಆರೋಪಿಗಳಾಗಿರುವ ನಿಗಮದ ವ್ಯವಸ್ಥಾಪಕ ನಿರ್ದೇಶಕ ಪದ್ಮನಾಭ್ ಹಾಗೂ ಲೆಕ್ಕಾಧಿಕಾರಿ ಪರಶುರಾಮ್ ಅವರನ್ನು ಆರು ದಿನ ಪೊಲೀಸ್ ಕಸ್ಟಡಿಗೆ ಒಪ್ಪಿಸಿ, ಎಸಿಎಂಎಂ ಕೋರ್ಟ್ ಆದೇಶಿಸಿದೆ. ವಾಲ್ಮೀಕಿ ನಿಗಮ ಹಗರಣ ಪ್ರಕರಣದ ಸಮಗ್ರ ತನಿಖೆ ನಡೆಸಲು ಸಿಐಡಿ ಆರ್ಥಿಕ ಅಪರಾಧಗಳ ವಿಭಾಗದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಮನೀಶ್ ಖರ್ಬೀಕರ್ ನೇತೃತ್ವದಲ್ಲಿ ವಿಶೇಷ ತನಿಖಾ ತಂಡವನ್ನು ಸರಕಾರ ರಚಿಸಿತ್ತು. ತಂಡ ರಚನೆಯಾದ ಎರಡು ಗಂಟೆಗಳಲ್ಲೇ ವಾಲ್ಮೀಕಿ ನಿಗಮದ ಎಂಡಿ ಪದ್ಮನಾಭ್ ಹಾಗೂ ಲೆಕ್ಕಾಧಿಕಾರಿ ಪರಶುರಾಮ್ ಅವರನ್ನು ಎಸ್‌ಐಟಿ ಬಂಧಿಸಿ, ಆರೋಪಿಗಳನ್ನು ಎಸಿಎಂಎಂ ನ್ಯಾಯಾಲಯದ ಮುಂದೆ ಹಾಜರುಪಡಿಸಿತ್ತು. ವಾದ-ಪ್ರತಿವಾದಗಳನ್ನು ಆಲಿಸಿದ ಬಳಿಕ ಕೋರ್ಟ್ ಆರೋಪಿಗಳನ್ನು 6 ದಿನಗಳ ಕಾಲ ಪೊಲೀಸ್ ಕಸ್ಟಡಿಗೆ ನೀಡಿ ಆದೇಶಿಸಿತು. ನಿಗಮದ ಹಗರಣ ಬೆಳಕಿಗೆ ಬಂದ ಬಳಿಕ ಎಂಡಿ ಪದ್ಮನಾಭ್ ಹಾಗೂ ಲೆಕ್ಕಾಧಿಕಾರಿ ಪರಶುರಾಮ್ ಪರಾರಿಯಾಗಿದ್ದರು. ಬೆಂಗಳೂರು ಹೊರವಲಯದಲ್ಲಿ ಅವರನ್ನು ಬಂಧಿಸಲಾಗಿತ್ತು. ಇಂದು ಬಂಧಿತರನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿ ಬಳಿಕ ಎಸ್‌ಐಟಿ ತನ್ನ ಕಸ್ಟಡಿಗೆ ಪಡೆಯಿತು.

ಪರಿಷತ್ ಚುನಾವಣೆಗೆ ಈವರೆಗೂ ಯಾವುದೇ ನಾಮಪತ್ರ ಸಲ್ಲಿಕೆಯಾಗಿಲ್ಲ

ನಾಮಪತ್ರ ಸಲ್ಲಿಕೆಗೆ ಇನ್ನೊಂದೇ ದಿನ ಬಾಕಿ

ಬೆಂಗಳೂರು: ವಿಧಾನಸಭೆಯಿಂದ ವಿಧಾನ ಪರಿಷತ್ ಚುನಾವಣೆಗೆ ನಾಮಪತ್ರ ಸಲ್ಲಿಸಲು ಇನ್ನೊಂದೇ ದಿನ ಬಾಕಿಯಿದ್ದರೂ, ಮೂರೂ ಪಕ್ಷಗಳು ಈವರೆಗೆ ತಮ್ಮ ಅಭ್ಯರ್ಥಿಗಳನ್ನು ಪ್ರಕಟಿಸದಿರುವುದು ಭಾರಿ ಕುತೂಹಲಕ್ಕೆ ಕಾರಣವಾಗಿದೆ.

ಜೂನ್ 3ಕ್ಕೆ ನಾಮಪತ್ರ ಸಲ್ಲಿಸಲು ಕೊನೆಯ ದಿನವಾಗಿದ್ದು, ಕಾಂಗ್ರೆಸ್‌ನಿಂದ ಏಳು, ಬಿಜೆಪಿಯಿಂದ ಮೂರು ಹಾಗೂ ಜೆಡಿಎಸ್‌ನಿಂದ ಒಬ್ಬರನ್ನು ಆಯ್ಕೆ ಮಾಡಲು ಅವಕಾಶವಿದೆ. ಮೂರೂ ಪಕ್ಷಗಳಲ್ಲಿ ತಮಗಿರುವ ಸ್ಥಾನಗಳಿಗೆ ಭಾರಿ ಪೈಪೋಟಿ ಇರುವುದರಿಂದ ಕೊನೆ ಕ್ಷಣದವರೆಗೆ ಅಭ್ಯರ್ಥಿಗಳನ್ನು ಯಾವ ಪಕ್ಷಗಳೂ ಪ್ರಕಟಿಸಿಲ್ಲ. ಸೋಮವಾರವೇ ನಾಮಪತ್ರ ಸಲ್ಲಿಸಲು ಕೊನೆಯ ದಿನವಾಗಿರುವುದರಿಂದ ಭಾನುವಾರ ಸಂಜೆಯೊಳಗೆ ಪಟ್ಟಿ ಪ್ರಕಟಿಸುವುದು ಅನಿವಾರ್ಯ. → 4

ಇಂದು ಕಾಂಗ್ರೆಸ್ ಶಾಸಕಾಂಗ ಸಭೆ

ಕಾಂಗ್ರೆಸ್ ಪಾಲಿನ ಏಳು ಸ್ಥಾನಗಳಿಗೆ ಸಂಬಂಧಿಸಿದಂತೆ ಹೈಕಮಾಂಡ್ ತೆಗೆದುಕೊಂಡಿರುವ ತೀರ್ಮಾನವನ್ನು ತಿಳಿಸಲು ಹಾಗೂ ಒಂದು ವೇಳೆ ಚುನಾವಣೆ ನಡೆದರೆ, ಯಾರು ಯಾರಿಗೆ ಮತ ಹಾಕಬೇಕು ಎನ್ನುವ ಬಗ್ಗೆ ಚರ್ಚೆ ನಡೆಸಲು ಕಾಂಗ್ರೆಸ್ ಭಾನುವಾರ ಸಂಜೆ ಆರು ಗಂಟೆಗೆ ಶಾಸಕಾಂಗ ಪಕ್ಷದ ಸಭೆ ಕರೆದಿದೆ. ವಿಧಾನಸಭೆಯಿಂದ ಪರಿಷತ್‌ಗೆ ನಡೆಯಲಿರುವ ಚುನಾವಣೆಗೆ ಸೀಮಿತವಾಗಿ ಈ ಸಭೆ ನಡೆಯಲಿದೆ. ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ್ ನೇತೃತ್ವ ವಹಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ನನ್ನ ವಿರುದ್ಧ ಮಾಡಿರುವ ಷಡ್ಯಂತ್ರ ಎಂದ ಪ್ರಜ್ವಲ್

ಹೊಳೆನರಸೀಪುರಕ್ಕೆ ಕರೆದೊಯ್ದು ಮಹಜರು ಸಿದ್ಧತೆ

ನಾನವನಲ್ಲ

ಬೆಂಗಳೂರು: ಲೈಂಗಿಕ ದೌರ್ಜನ್ಯ ಮತ್ತು ಅತ್ಯಾಚಾರ ಪ್ರಕರಣದಲ್ಲಿ ಬಂಧನವಾಗಿರುವ ಸಂಸದ ಪ್ರಜ್ವಲ್ ರೇವಣ್ಣ ವಿಚಾರಣೆ ತೀವ್ರಗೊಂಡಿದೆ. ಎಸ್‌ಐಟಿ ಪ್ರಶ್ನೆಗಳಿಗೆ ಪ್ರಜ್ವಲ್ ರೇವಣ್ಣ 'ನಾನವನಲ್ಲ, ನನಗೆ ಗೊತ್ತಿಲ್ಲ' ಎಂಬ ಉತ್ತರವನ್ನೇ ನೀಡುತ್ತಿದ್ದಾರೆ.

ಎಸ್‌ಐಟಿ ಪೊಲೀಸರು ಪ್ರಜ್ವಲ್ ರೇವಣ್ಣ ಅವರ ವಿರುದ್ಧ ದಾಖಲಾಗಿರುವ ಮೂರು ಎಫ್‌ಐಆರ್ ಕುರಿತಾಗಿ ಪ್ರಶ್ನೆಗಳನ್ನು ಕೇಳಿದ್ದಾರೆ. ಅದೇ ರೀತಿ ಪ್ರಜ್ವಲ್ ರೇವಣ್ಣ ಅವರಿಗೆ ಸಂಬಂಧಿಸಿದ್ದು ಎಂದು ಹೇಳಲಾದ ವಿಡಿಯೊಗಳಲ್ಲಿರುವ ಕೆಲವು ದೃಶ್ಯಗಳ ಕುರಿತೂ ಅವರಿಗೆ ಪ್ರಶ್ನೆ ಕೇಳಲಾಗಿದ್ದು, ಯಾವುದೇ ಪ್ರಶ್ನೆ ಕೇಳಿದರೂ 'ನಮ್ಮ ವಕೀಲರನ್ನು ಕೇಳಬೇಕು' ಎಂದಷ್ಟೇ ಪ್ರಜ್ವಲ್ ಹೇಳುತ್ತಿದ್ದಾರೆ. ಮತ್ತೊಂದೆಡೆ ಹೊಳೆನರಸೀಪುರ ನಿವಾಸಕ್ಕೆ ಕರೆದೊಯ್ದು ಮಹಜರು ನಡೆಸಲು ಸಿದ್ಧತೆ ನಡೆಯುತ್ತಿದೆ.

ಶುಕ್ರವಾರ ನಡೆದ ಪ್ರಾಥಮಿಕ ವಿಚಾರಣೆಯಲ್ಲಿ ಎಸ್‌ಐಟಿ ಕೇಳಿದ ಪ್ರಶ್ನೆಗಳಿಗೆ ಪ್ರಜ್ವಲ್ ಸ್ಪಷ್ಟ ಉತ್ತರ ನೀಡಿಲ್ಲ. ಶನಿವಾರ ದಿನವಿಡೀ ವಿಚಾರಣೆ ಮಾಡಿದರೂ ಕಿಂಚಿತ್ತೂ ಮಾಹಿತಿ ನೀಡಿಲ್ಲ. ಆಮಿಷ ಒಡ್ಡಿ ಮಹಿಳೆಯರನ್ನು ಲೈಂಗಿಕವಾಗಿ ದುರ್ಬಳಕೆ ಮಾಡಿಕೊಂಡಿದ್ದೀರಾ? ಬಿಡುಗಡೆಗೊಂಡ ವಿಡಿಯೊದಲ್ಲಿ ಇರುವವರು ನೀವೇನಾ? ಎಂಬ ಪ್ರಶ್ನೆಗಳನ್ನು ಪೊಲೀಸರು ಕೇಳಿದ್ದಾರೆ. ಆದರೆ, ಎಲ್ಲ ಪ್ರಶ್ನೆಗಳಿಗೆ ಪ್ರಜ್ವಲ್ ಒಂದೇ ಉತ್ತರ ನೀಡಿದ್ದಾರೆ. ಎಲ್ಲವನ್ನೂ ಎಡಿಟ್ ಮಾಡಿ ಮಾರ್ಫ್ ಮಾಡಲಾಗಿದೆ. ವಿಡಿಯೊದಲ್ಲಿ ನಾನು ಇದ್ದೇನೆ ಎಂಬುದಕ್ಕೆ ಯಾವ ಸಾಕ್ಷಿಯೂ ಇಲ್ಲ. ಎಲ್ಲವನ್ನೂ ದ್ವೇಷದಿಂದ ಮಾಡಿರುವಂಥದ್ದು. ಎಲ್ಲ ವಿಡಿಯೊಗಳನ್ನು ತಿರುಚಲಾಗಿದೆ. ಇದು ತನ್ನದಲ್ಲ ಎಂದ ಮೇಲೆ ಉಳಿದ ಪ್ರಶ್ನೆಗೆ ನನ್ನ ಬಳಿ ಉತ್ತರ ಇಲ್ಲ ಎಂದು ಪ್ರಜ್ವಲ್ ಹೇಳಿದ್ದಾರೆ.

ಮೊಬೈಲ್ ಪತ್ತೆ ಮಾಡುವುದು ಸವಾಲು

ವಿಚಾರಣೆ ಚುರುಕುಗೊಳಿಸಿದ ಎಸ್‌ಐಟಿ ಅಧಿಕಾರಿಗಳಿಗೆ ಪ್ರಜ್ವಲ್ ಮೊಬೈಲ್ ಪತ್ತೆ ಮಾಡುವುದು ದೊಡ್ಡ ಸವಾಲಾಗಿದೆ. ವಿಡಿಯೊ ರೆಕಾರ್ಡ್ ಮಾಡಿದ ಮೊಬೈಲ್‌ಗಾಗಿ ಎಸ್‌ಐಟಿ ಹುಡುಕಾಟ ನಡೆಸುತ್ತಿದೆ. ಆದರೆ, ಒಂದು ವರ್ಷದ ಹಿಂದೆಯೇ ಮೊಬೈಲ್ ಕಳೆದುಹೋಗಿದೆ ಎಂದು ಪ್ರಜ್ವಲ್ ರೇವಣ್ಣ ಹೇಳಿದ್ದಾರೆ. ಮೊಬೈಲ್ ಕಳೆದುಹೋಗಿದ್ದಕ್ಕೆ ನಾನು ಸ್ಥಳೀಯ ಠಾಣೆಯಲ್ಲಿ ದೂರು ಕೂಡ ನೀಡಿದ್ದೆ. ಕೆಎಸ್‌ಪಿ ಆ್ಯಪ್ ಮೂಲಕವೂ ದೂರು ದಾಖಲಿಸಿದ್ದೆ. ಕಳೆದ ವರ್ಷ ಮಾರ್ಚ್ 29ರಂದು ಪಿಎ ಭರತ್ ರಾಜ್ ಮೂಲಕ ದೂರು ನೀಡಲಾಗಿದೆ. ಪೊಲೀಸರು ಕೂಡ ಪ್ರಕರಣ ದಾಖಲಿಸಿಕೊಂಡು, ಮೊಬೈಲ್ ಪತ್ತೆಗೆ ಮುಂದಾಗಿದ್ದರು ಎಂದು ಹೇಳಿದ್ದಾರೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ಮುಂಗಾರು ಮಳೆ ಪ್ರವೇಶ, ಹವಾಮಾನ ಇಲಾಖೆಯಿಂದ ಆರೆಂಜ್ ಅಲರ್ಟ್ ಘೋಷಣೆ
ಸುದ್ದಿ

ಮುಂಗಾರಲ್ಲೂ, ಎಕ್ಸಿಟ್ ಪೋಲಲ್ಲೂ ಎಲ್ಲಾ ಕಡೆ 'ಆರೆಂಜ್ ಅಲರ್ಟ್'... ಹ್ಯಾಂಗ್ ತಡ್ಕೋಳ್ಳೊದು...



ಕೊನೇ ಹಂತದಲ್ಲಿ ಶೇ.58 ಮತದಾನ



ದೆಹಲಿ: 7 ರಾಜ್ಯಗಳು ಹಾಗೂ ಒಂದು ಕೇಂದ್ರಾಡಳಿತ ಪ್ರದೇಶದ ಒಟ್ಟು 57 ಕ್ಷೇತ್ರಗಳಿಗೆ ಶೇ.58.34ರಷ್ಟು ಮಂದಿ ತಮ್ಮ ಹಕ್ಕು ಚಲಾಯಿಸಿದ್ದಾರೆ. ಜಾರ್ಖಂಡ್‌ನಲ್ಲಿ ಶೇ. 67.95, ಒಡಿಶಾದಲ್ಲಿ ಶೇ.62.46, ಪಂಜಾಬ್‌ನಲ್ಲಿ ಶೇ.55.20, ಉತ್ತರ ಪ್ರದೇಶದಲ್ಲಿ ಶೇ.54, ಪಶ್ಚಿಮ ಬಂಗಾಳದಲ್ಲಿ ಶೇ.69.89, ಬಿಹಾರದಲ್ಲಿ ಶೇ. 48.86, ಹಿಮಾಚಲ ಪ್ರದೇಶದಲ್ಲಿ ಶೇ.66.56 ಮತ್ತು ಚಂಡೀಗಢದಲ್ಲಿ ಶೇ.62.80 ಮತದಾನವಾಗಿದೆ. ಕೋಲ್ಕತಾ ಸಮೀಪದ ಜಾದವಪುರ ಕ್ಷೇತ್ರ ವ್ಯಾಪ್ತಿಯ ಭಾಂಗನರ್ ಸತೂಲಿಯಾ ಪ್ರದೇಶಲ್ಲಿ ಇಂಡಿಯನ್ ಸೆಕ್ಯುಲರ್ ಫ್ರಂಟ್ ಮತ್ತು ಸಿಪಿಐ (ಎಂ) ಬೆಂಬಲಿಗರ ನಡುವೆ ಮಾರಾಮಾರಿ ನಡೆದಿದೆ. ಈ ವೇಳೆ ನಾಡ ಬಾಂಬ್‌ಗಳನ್ನು ಎಸೆಯಲಾಗಿದ್ದು, ಕೆಲವು ಐಎಸ್‌ಎಫ್ ಬೆಂಬಲಿಗರಿಗೆ ಗಾಯಗಳಾಗಿವೆ. ವಿವರಪುಟ → 10

ಸಿಇಟಿ ಪರೀಕ್ಷೆಯ ಫಲಿತಾಂಶ ಪ್ರಕಟ

ಬೆಂಗಳೂರು: ಎಂಜಿನಿಯರಿಂಗ್ ಸೇರಿದಂತೆ ನಾನಾ ವೃತ್ತಿಪರ ಕೋರ್ಸ್‌ಗಳಿಗೆ ಏ.18, 19 ರಂದು ನಡೆಸಿದ್ದ ಸಿಇಟಿ ಪರೀಕ್ಷೆಯ ಫಲಿತಾಂಶವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಶನಿವಾರ ಪ್ರಕಟಿಸಿದೆ. ವಿದ್ಯಾರ್ಥಿಗಳು ಪ್ರಾಧಿಕಾರದ ಜಾಲತಾಣ http://kea.kar.nic.inನಲ್ಲಿ ಫಲಿತಾಂಶವನ್ನು ನೋಡಬಹುದು ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ತಿಳಿಸಿದ್ದಾರೆ. ಪ್ರಾಧಿಕಾರವು ಒಂದೂವರೆ ತಿಂಗಳ ಹಿಂದೆ ಎಂಜಿನಿಯರಿಂಗ್ ಜತೆಗೆ ವೆಟರ್ನರಿ, ಕೃಷಿ ವಿಜ್ಞಾನ, ಫಾರ್ಮಸಿ, ನ್ಯಾಚುರೋಪತಿ, ಯೋಗ ಮತ್ತು ಬಿ.ಎಸ್‌ಸಿ (ನರ್ಸಿಂಗ್) ಕೋರ್ಸ್‌ಗಳಿಗೆ ರಾಜ್ಯದ 737 ಕೇಂದ್ರಗಳಲ್ಲಿ ಪರೀಕ್ಷೆ ನಡೆಸಿತ್ತು. ಒಟ್ಟು 3,10,314 ಅಭ್ಯರ್ಥಿಗಳು ಈ ಪರೀಕ್ಷೆ ಬರೆದಿದ್ದರು.

ಗಂಭೀರ್ ಟೀಮ್ ಇಂಡಿಯಾ ಕೋಚ್?

ಮುಂಬೈ: ಟೀಮ್ ಇಂಡಿಯಾದ ಮಾಜಿ ಆರಂಭಿಕ ಆಟಗಾರ ಗೌತಮ್ ಗಂಭೀರ್ ಭಾರತ ತಂಡದ ಕೋಚ್ ಆಗಲಿದ್ದಾರೆ ಎಂದು ವರದಿಯಾಗಿದೆ. ಟಿ20 ವಿಶ್ವಕಪ್ ಮುಕ್ತಾಯದೊಂದಿಗೆ ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಅವರ ಕಾರ್ಯಾವಧಿ ಮುಗಿಯಲಿದ್ದು, ಇದಾದ ಬಳಿಕ ಗಂಭೀರ್ ಅಧಿಕಾರ ಸ್ವೀಕರಿಸುವುದು ಖಚಿತ ಎನ್ನಲಾಗಿದೆ. ನೂತನ ಕೋಚ್ ಆಗಿ ಆಯ್ಕೆಯಾದವರ ಕಾರ್ಯಾವಧಿ 2027ರ ಡಿಸೆಂಬರ್ 31ಕ್ಕೆ ಮುಕ್ತಾಯಗೊಳ್ಳುತ್ತದೆ. 2027ರಲ್ಲಿ ನಡೆಯುವ ಏಕದಿನ ವಿಶ್ವಕಪ್ ಟೂರ್ನಿಯೂ ಈ ಕೋಚ್‌ಗೆ ಸಿಗಲಿದೆ. ಗಂಭೀರ್ ಕೋಚ್ ಆಗುವ ದೃಷ್ಟಿಯಿಂದಲೇ ಈ ಬಾರಿ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಿರಲಿಲ್ಲ ಎನ್ನಲಾಗಿದೆ.

ವಾಣಿಜ್ಯ ಸಿಲಿಂಡರ್ ದರ ₹69.50 ಕಡಿತ

ದೆಹಲಿ: ತೈಲ ಕಂಪನಿಗಳು ಜೂನ್ 1 ರಿಂದ ತಕ್ಷಣದಿಂದ ಜಾರಿಗೆ ಬರುವಂತೆ ವಾಣಿಜ್ಯ ಬಳಕೆಯ ಎಲ್‌ಪಿಜಿ ಗ್ಯಾಸ್ ಸಿಲಿಂಡರ್ ಬೆಲೆಯನ್ನು ₹ 69.50 ಹಾಗೂ ಜೆಟ್ ಇಂಧನ (ಎಟಿಎಫ್) ದರವನ್ನು ಶೇ.6.5ರಷ್ಟು ಕಡಿತಗೊಳಿಸಿವೆ. ಇದರೊಂದಿಗೆ ದೆಹಲಿಯಲ್ಲಿ 19 ಕೆ.ಜಿ ವಾಣಿಜ್ಯ ಎಲ್‌ಪಿಜಿ ಸಿಲಿಂಡರ್‌ನ ಬೆಲೆ ₹1,676 ಇಳಿದಿದೆ. ಸ್ಥಳೀಯ ತೆರಿಗೆಗಳ ಆಧಾರದ ಮೇಲೆ ಬೆಲೆಗಳು ರಾಜ್ಯದಿಂದ ರಾಜ್ಯಕ್ಕೆ ಭಿನ್ನವಾಗಿರುತ್ತವೆ. ಈ ವರ್ಷದಲ್ಲಿ 3ನೇ ಬಾರಿಗೆ ಇಂಧನ ದರವನ್ನು ಕಡಿತಗೊಳಿಸಲಾಗಿದೆ. ಮಾರ್ಚ್ 1 ರಂದು 19 ಕೆ.ಜಿ ವಾಣಿಜ್ಯ ಎಲ್‌ಪಿಜಿ ಸಿಲಿಂಡರ್‌ಗಳ ದರವನ್ನು ₹19 ಮತ್ತು ಏಪ್ರಿಲ್‌ನಲ್ಲಿ ₹30.50 ರಷ್ಟು ಕಡಿತಗೊಳಿಸಲಾಗಿತ್ತು.

ಸಹಕಾರ ಸಂಘಗಳ ಅಪರ ನಿಬಂಧಕರು (ನಿ.441)
ದಾವಾ ಪಂಚಾಯ್ತಿ ನ್ಯಾಯಾಲಯ, ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳಿ ನಿ., ಬೆಂಗಳೂರು.
ಇವರ ನ್ಯಾಯಾಲಯದಲ್ಲಿ ನಂ.132, 2ನೇ ಮಹಡಿ, ಕೆ.ಹೆಚ್.ರಸ್ತೆ, ಬೆಂಗಳೂರು–560027.

ವಾದಿ

ಪ್ರಭಾರ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ, ದಿ ನ್ಯಾಷನಲ್ ಕೋ–ಆಪರೇಟಿವ್ ಬ್ಯಾಂಕ್ ಲಿ.,
ನಂ.73/1, ಗಾಂಧಿಬಜಾರ್ ಮುಖ್ಯರಸ್ತೆ, ಬಸವನಗುಡಿ, ಬೆಂಗಳೂರು–560 004.

ಪ್ರತಿವಾದಿಗಳು

ವ್ಯಾಜ್ಯ ಸಂಖ್ಯೆ : ಎ.ಆರ್.ಡಿ / ಯು.ಬಿ.ಎಫ್ /1006/2024–25

1) **ಶ್ರೀ ಅರುಣ್ ಅರ್,** ನಂ.10, ಟೆಲಿಫೋನ್ ಟವರ್ ಕಟ್ಟಡ, ಮೈತ್ರೀ ಶಾಲೆ ಎದುರಿಗೆ, ದೂರವಾಣಿ ನಗರ ಪೋಸ್ಟ್, ಬೆಂಗಳೂರು–560 016.
2) **ಶ್ರೀಮತಿ ಸತ್ಯ ಎಮ್,** ನಂ.10, 1 ನೇ ಮಹಡಿ, ಮಯೂರ್ ಬೇಕರಿ ಮೇಲೆ, ಎ.ನಾರಾಯಣಪುರ, ಮೈತ್ರೀ ಶಾಲೆ ಎದುರಿಗೆ, ಬೆಂಗಳೂರು–560 016
3) **ಶ್ರೀಮತಿ ಸುಮತಿ ಎಸ್,** ನಂ.10, ಟೆಲಿಫೋನ್ ಟವರ್ ಕಟ್ಟಡ, ಮೈತ್ರೀ ಶಾಲೆ ಎದುರಿಗೆ, ದೂರವಾಣಿ ನಗರ ಪೋಸ್ಟ್, ಬೆಂಗಳೂರು–560 016.
ದಾವಾ ಮೊತ್ತ: ರೂ.34,008/–

1ನೇ, 2ನೇ ಮತ್ತು 3ನೇ ಪ್ರತಿವಾದಿಗಳಿಗೆ ದಿನಪತ್ರಿಕೆ ಮೂಲಕ ನೋಟೀಸ್ ಜಾರಿಮಾಡುವ ಬಗ್ಗೆ

ವ್ಯಾಜ್ಯ ಸಂಖ್ಯೆ : ಎ.ಆರ್.ಡಿ / ಯು.ಬಿ.ಎಫ್ /1010/2024–25

1) **ಶ್ರೀ ಸತೀಶ್ ಕುಮಾರ್ ಎಸ್ ಅರ್,** ನಂ.367/ಸಿ, 2ನೇ ಅಡ್ಡ ರಸ್ತೆ, ಸತ್ಯಮೂರ್ತಿ ರಸ್ತೆ, ರಾಮಸ್ವಾಮಿ ಪಾಳ್ಯ, ಕಮ್ಮನಹಳ್ಳಿ ಮುಖ್ಯರಸ್ತೆ, ಬೆಂಗಳೂರು–560033.
2) **ಶ್ರೀ ಮಾರುತಿ ಎಸ್,** ನಂ.ಜಿ79, 3ನೇ ಮುಖ್ಯರಸ್ತೆ, ಎಚ್ ಎ ಎಲ್, ಓ ಟಿ ಎಸ್, ವಿಮಾನಪುರ, ಬೆಂಗಳೂರು–560 017.
3) **ಶ್ರೀ ಯೆಲ್ಲೇಶ್ವರ ಕೆ,** ನಂ.ಡಿ–333, ಪೂರ್ವ 4ನೇ ಲೇನ್, ಐ.ಟಿ.ಐ ಕಾಲೋನಿ, ದೂರವಾಣಿ ನಗರ, ಕೆ.ಅರ್ ಪುರಂ, ಬೆಂಗಳೂರು–560 016.
ದಾವಾ ಮೊತ್ತ: ರೂ.1,84,010/–

2ನೇ ಮತ್ತು 3ನೇ ಪ್ರತಿವಾದಿಗಳಿಗೆ ದಿನಪತ್ರಿಕೆ ಮೂಲಕ ನೋಟೀಸ್ ಜಾರಿಮಾಡುವ ಬಗ್ಗೆ

ವ್ಯಾಜ್ಯ ಸಂಖ್ಯೆ : ಎ.ಆರ್.ಡಿ / ಯು.ಬಿ.ಎಫ್ /1011/2024–25

1) **ಶ್ರೀ ನಾಗೇಶ್ ಎ,** ನಂ.34, 2ನೇ ಮುಖ್ಯ ರಸ್ತೆ, ಲಕ್ಷ್ಮಿ ನಾರಾಯಣಪುರ ಪೋಸ್ಟ್, ದೇವಯ್ಯ ಪಾರ್ಕ ಹತ್ತಿರ, ಬೆಂಗಳೂರು–560 021.
2) **ಶ್ರೀಮತಿ ಪುಷ್ಪವತಿ ಸಿ,** ನಂ.32, ಡಿ ಎನ್ ಬಜಾನ ಮಂದಿರ, ಪಟ್ಟೆಲಮ್ಮ ರಸ್ತೆ, ಎ.ನಾರಾಯಣಪುರ, ಬೆಂಗಳೂರು–560 016.
3) **ಶ್ರೀ ಮಂಜುನಾಥ್ ಎ,** ನಂ.40, 8ನೇ ಅಡ್ಡ ರಸ್ತೆ, ಶ್ರೀ ಎಮ್ ವಿ ನಗರ, ಕಲ್ಕೆರೆ ಮುಖ್ಯ ರಸ್ತೆ, ರಾಮಮೂರ್ತಿ ನಗರ, ಬೆಂಗಳೂರು–560 016.
ದಾವಾ ಮೊತ್ತ: ರೂ.2,15,381/–

1ನೇ ಮತ್ತು 2ನೇ ಪ್ರತಿವಾದಿಗಳಿಗೆ ದಿನಪತ್ರಿಕೆ ಮೂಲಕ ನೋಟೀಸ್ ಜಾರಿಮಾಡುವ ಬಗ್ಗೆ

ವ್ಯಾಜ್ಯ ಸಂಖ್ಯೆ : ಎ.ಆರ್.ಡಿ / ಯು.ಬಿ.ಎಫ್ /1012/2024–25

1). **ಶ್ರೀಮತಿ ಕಲೈ ಸೆಲ್ವಿ,** ನಂ.2, ಇಂದಿರಾ ಶ್ರೀ ನಿಲಯ, 3ನೇ ಅಡ್ಡ ರಸ್ತೆ, 1ನೇ ಬ್ಲಾಕ್, ಅಕ್ಷಯ ನಗರ, ಟಿ.ಸಿ.ಪಾಳ್ಯ ಮುಖ್ಯ ರಸ್ತೆ, ಬೆಂಗಳೂರು–560016.
2). **ಶ್ರೀ ಕನ್ನನ್ ಅರ್,** ನಂ.6, 1ನೇ ಅಡ್ಡ ರಸ್ತೆ, ಗ್ರೀನ್ ಗಾರ್ಡನ್ ಲೇಔಟ್, ಎನ್.ಅರ್.ಐ ಲೇಔಟ್, ಕಲ್ಕರೆ ರಸ್ತೆ, ಬೆಂಗಳೂರು–560 036.
3) **ಶ್ರೀ ಸೆಲ್ವರಾಜ್ ಅರ್,** ನಂ.41, 1ನೇ ಮುಖ್ಯ ರಸ್ತೆ, ಇಂದಿರ ಗಾಂಧಿ ಸ್ಟೆಷನ್, ಅಯ್ಯಪ್ಪ ದೇವಾಸ್ಥನ ಎದುರು, ಉದಯ ನಗರ, ಬೆಂಗಳೂರು–560 016.
ದಾವಾ ಮೊತ್ತ: ರೂ.26,737/–

2ನೇ ಮತ್ತು 3ನೇ ಪ್ರತಿವಾದಿಗಳಿಗೆ ದಿನಪತ್ರಿಕೆ ಮೂಲಕ ನೋಟೀಸ್ ಜಾರಿಮಾಡುವ ಬಗ್ಗೆ

ವ್ಯಾಜ್ಯ ಸಂಖ್ಯೆ : ಎ.ಆರ್.ಡಿ / ಯು.ಬಿ.ಎಫ್ /1013/2024–25

1). **ಶ್ರೀ ಗಿರೀಶ್ ಎಚ್,** ನಂ.100, ಎಸ್ ಬಿ ಸಿ ಎಸ್. ಜ್ಞಾನ ಭಾರತಿ, ನಾಗದೇವನ ಹಳ್ಳಿ 2ನೇ ಹಂತ, ಕೆಂಗೇರಿ, ಬೆಂಗಳೂರು–560 056.
2) **ಶ್ರೀ ಮೋಹನ್ ರಾವ್ ವಿ,** ನಂ.472, 6ನೇ ಮುಖ್ಯ ರಸ್ತೆ, 8ನೇ ಆಡ್ಡ ರಸ್ತೆ, ಮೈಕೋ ಲೇಔಟ್, ಬಿ.ಟಿ.ಎಮ್ 2ನೇ ಹಂತ, ಬೆಂಗಳೂರು–560 030.
3) **ಶ್ರೀ ಚಂದ್ರಪ್ಪ,** ನಂ.37, 3ನೇ ಮುಖ್ಯ ರಸ್ತೆ, 4ನೇ ಅಡ್ಡ ರಸ್ತೆ, ಮಾರುತಿ ಲೇಔಟ್, ಬಸಪುರ, ಎಲ್ಟೆಟ್ರಾನಿಕ್ ಸಿಟಿ ಪೋಸ್ಟ್, ಬೆಂಗಳೂರು–560 030.
ದಾವಾ ಮೊತ್ತ: ರೂ.81,244/–

3ನೇ ಪ್ರತಿವಾದಿಗೆ ದಿನಪತ್ರಿಕೆ ಮೂಲಕ ನೋಟೀಸ್ ಜಾರಿಮಾಡುವ ಬಗ್ಗೆ

ವ್ಯಾಜ್ಯ ಸಂಖ್ಯೆ : ಎ.ಆರ್.ಡಿ / ಯು.ಬಿ.ಎಫ್ /1015/2024–25

1). **ಶ್ರೀ ಶಿವಪ್ಪ ಎಸ್,** ಹಿಂದೂಸ್ತಾನ್ ಏರೊನಾಟಿಕ್ಸ್ ಲಿ., ಸಿಬ್ಬಂದಿ ಸಂಖ್ಯೆ:2431–75966–52, ಇಂಜಿನಿಯರ್ ಕ್ವಾಲಿಟಿ ಕಂಟ್ರೋಲ್, ಓವರ ಹೌಲ್ ಡಿವಿಸನ್, ವಿಮಾನಪುರ, ಬೆಂಗಳೂರು–560017.
2). **ಶ್ರೀ ಶ್ರೀನಿವಾಸನ್ ಸಿ,** ಹಿಂದೂಸ್ತಾನ್ ಏರೊನಾಟಿಕ್ಸ್ ಲಿ., ಇಂಜಿನಿಯರ್ ಸಿಬ್ಬಂದಿ ಸಂಖ್ಯೆ:2420–71263–96, ಓವರ ಹೌಲ್ ಡಿವಿಸನ್, ವಿಮಾನಪುರ, ಬೆಂಗಳೂರು–560017.
3) **ಶ್ರೀ ರೇಣುಕಪ್ಪ,** ಹಿಂದೂಸ್ತಾನ್ ಏರೊನಾಟಿಕ್ಸ್ ಲಿ., ಸೂಪರವೈಸರ್ ಸಿಬ್ಬಂದಿ ಸಂಖ್ಯೆ:2430–75892–80, ಕ್ವಾಲಿಟಿ ಸೂಪರವೈಸರ್ ವಿಭಾಗ, ಓವರ ಹೌಲ್ ಡಿವಿಸನ್, ಬೆಂಗಳೂರು–560017.
ದಾವಾ ಮೊತ್ತ: ರೂ.1,46,925/–

1ನೇ, 2ನೇ ಮತ್ತು 3ನೇ ಪ್ರತಿವಾದಿಗಳಿಗೆ ದಿನಪತ್ರಿಕೆ ಮೂಲಕ ನೋಟೀಸ್ ಜಾರಿಮಾಡುವ ಬಗ್ಗೆ

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 70ರ ಪ್ರಕಾರ ವಾದಿಯು, ಪ್ರತಿವಾದಿಗಳ ವಿರುದ್ಧ ದಾವೆಯನ್ನು ದಾಖಲಿಸಿ, ಸದರಿ ದಾವೆಯಲ್ಲಿ ಮೇಲೆ ತಿಳಿಸಿದ ಪ್ರತಿವಾದಿಯವರಿಗೆ ಆರ್.ಪಿ.ಎಡಿ ಮೂಲಕ ನೋಟೀಸ್ ಜಾರಿಮಾಡಲಾಗಿದ್ದು, ಮೇಲೆ ತಿಳಿಸಿದ ಪ್ರತಿವಾದಿಗಳಿಗೆ ನೋಟೀಸ್ ಜಾರಿಯಾಗದ ಕಾರಣ, ದಿನಪತ್ರಿಕೆಯಲ್ಲಿ ಪ್ರಕಟಿಸುವ ಮೂಲಕ ನೋಟೀಸ್ ಜಾರಿ ಮಾಡಲು ಅನುಮತಿ ಕೋರಿದ್ದನ್ನು ಮನ್ನಿಸಿ, ಪ್ರಕರಣದ ವಿಚಾರಣೆಯನ್ನು **ದಿನಾಂಕ 05.06.2024 ರಂದು ಬೆಳಿಗ್ಗೆ 11.00 ಗಂಟೆಗೆ ಸಹಕಾರ ಸಂಘಗಳ ಅಪರ ನಿಬಂಧಕರು(ನಿ.441) ದಾವಾ ಪಂಚಾಯ್ತಿ ನ್ಯಾಯಾಲಯ, ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ನಿ., ಬೆಂಗಳೂರು** ಇವರ ನ್ಯಾಯಾಲಯ, ನಂ.132, 2ನೇ ಮಹಡಿ, ಕೆಂಗಲ್ ಹನುಮಂತಯ್ಯ ರಸ್ತೆ, ಬೆಂಗಳೂರು–560027 ಇಲ್ಲಿ ನಿಗದಿಪಡಿಸಿದ್ದು, ವಿಚಾರಣೆಗೆ ಹಾಜರಾಗಲು ಪ್ರತಿವಾದಿಗಳಿಗೆ ಈ ಮೂಲಕ ಸಮನ್ಸ್ ಜಾರಿಮಾಡಿದೆ. ಈ ವ್ಯಾಜ್ಯದ ವಿಷಯದಲ್ಲಿ ನಿಮ್ಮ ಪರವಾದ ಲೆಕ್ಕಪತ್ರಗಳನ್ನು/ದಾಖಲೆಗಳನ್ನು ಮತ್ತು ಸಾಕ್ಷಿಗಳೊಂದಿಗೆ ಹಾಜರಾಗುವಂತೆ ಸೂಚಿಸಿದೆ. ತಪ್ಪಿದ್ದಲ್ಲಿ, ವ್ಯಾಜ್ಯವನ್ನು ನಿಮ್ಮ ಗೈರು ಹಾಜರಿಯಲ್ಲಿಯೇ ವಿಚಾರಣೆ ಮಾಡಿ ಇತ್ಯರ್ಥ ಮಾಡಲಾಗುವುದೆಂದು ಈ ಮೂಲಕ ತಿಳಿಸಲಾಗಿದೆ.

ದಿನಾಂಕ : 31.05.2024 ರಂದು ನ್ಯಾಯಾಲಯದ ಮೊಹರಿನೊಂದಿಗೆ ಕೊಡಲ್ಪಟ್ಟಿದೆ.

ಸಹಕಾರ ಸಂಘಗಳ ಅಪರ ನಿಬಂಧಕರು (ನಿ.441) ಕ.ರಾ.ಸ.ಪ. ಬ್ಯಾಂಕುಗಳ ಮಹಾಮಂಡಳಿ ನಿ., ಬೆಂಗಳೂರು
ಇವರ ಆದೇಶದ ಮೇರೆಗೆ
ಸ್ಥಳ: ಬೆಂಗಳೂರು **ಸಹಿ/– (ಅಧಿಕೃತ ಅಧಿಕಾರಿ)**

ಅಥಾಂಗ್ ದೇವನಹಳ್ಳಿ ಟೋಲ್‌ವೇ ಪ್ರೈ. ಲಿ.,

ದಿನಾಂಕ: 03.06.2024ರ 00:00:00 ಗಂಟೆಯಿಂದ ಅನ್ವಯವಾಗುವಂತೆ ಟೋಲ್ ಪ್ಲಾಜಾ (ಕಿ.ಮೀ. 538.000 (ಸಾದಹಳ್ಳಿ ಗೇಟ್) ಮತ್ತು ಕಿ.ಮೀ. 536.500 (ಪೂಜನಹಳ್ಳಿ) ಬಳಕೆದಾರರ ಶುಲ್ಕ (ಟೋಲ್) ಪರಿಷ್ಕೃತ ದರಗಳ ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ಭಾರತ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಿ ಪತ್ರ ಸಂ. ಎನ್‌ಹೆಚ್‌ಎಐ/ಪಿಐಯು–ಬಿಎನ್‌ಜಿ// ಎನ್‌ಹೆಚ್–7/ಕೆಎನ್‌ಟಿ–2/ಎಡಿಟಿಪಿಎಲ್/2024/3478, ದಿನಾಂಕ: 21.03.2024 & ಎನ್‌ಹೆಚ್‌ಎಐ/13013/547/ಸಿಜಿ/23–24/ಯೂಜರ್ ಫೀ ರಿವಿಜನ್/ಇಫೈಲ್–245361 ದಿನಾಂಕ: 30.05.2024 ಪ್ರಕಾರ **ಟೋಲ್ ಪ್ಲಾಜಾ ಕಿ.ಮೀ. 538.000 (ಸಾದಹಳ್ಳಿ ಗೇಟ್) ಮತ್ತು ಕಿ.ಮೀ. 536.500 (ಪೂಜನಹಳ್ಳಿ)** (ಒಟ್ಟು ಉದ್ದ 22.12; 534.720 ಕಿ.ಮೀ.ಗಳಿಂದ 556.840 ಕಿ.ಮೀ.) ಎನ್‌ಹೆಚ್–7 (ಹೊಸ ಎನ್‌ಹೆಚ್–44)ರ ಕಿ.ಮೀ. 534.720 ರಿಂದ ಕಿ.ಮೀ. 556.840 ರವರೆಗೆ (ಹೈದರಾಬಾದ್–ಬೆಂಗಳೂರು ವಿಭಾಗ) ದಿನಾಂಕ: 03.06.2024ರ **00:00:00** ಸಮಯದಿಂದ ಅನ್ವಯಿಸುವಂತೆ ಬಳಕೆದಾರರ ಶುಲ್ಕವನ್ನು ಪರಿಷ್ಕರಿಸಲಾಗಿದೆ. ಪರಿಷ್ಕೃತ ಶುಲ್ಕವು ಈ ಕೆಳಗಿನಂತೆ ಅನ್ವಯಿಸುತ್ತದೆ.

ಕ್ರ. ಸಂ.	ವಾಹನಗಳ ವರ್ಗ	ಫಾಸ್ಟ್‌ಟ್ಯಾಗ್ ಮೂಲಕ ಮಾತ್ರ ಲಭ್ಯ (ಮೊತ್ತ ರೂ.ಗಳಲ್ಲಿ)			
		ಏಕಮುಖ ಪ್ರಯಾಣಕ್ಕೆ ಶುಲ್ಕ (ರೂಪಾಯಿಗಳಲ್ಲಿ)	ಒಂದು ದಿನದೊಳಗೆ ಪ್ರಯಾಣದಿಂದ ಹಿಂತಿರುಗುವ ಶುಲ್ಕ (ರೂಪಾಯಿಗಳಲ್ಲಿ)	ಶುಲ್ಕ ಪಾವತಿಯ ದಿನಾಂಕದಿಂದ ಒಂದು ತಿಂಗಳಲ್ಲಿ 50 ಏಕ ಮುಖ ಪ್ರಯಾಣಕ್ಕಾಗಿ ಮಾಸಿಕ ಪಾಸ್ (ರೂಪಾಯಿಗಳಲ್ಲಿ)	ಸ್ಥಳೀಯ ಮಾಸಿಕ ಪಾಸ್
1	ಕಾರು/ಜೀಪು/ವ್ಯಾನ್/ ಅಥವಾ ಲಘು ಮೋಟಾರು ವಾಹನ	115	170	3835	340
2	ಲಘು ವಾಣಿಜ್ಯ ವಾಹನ, ಲಘು ಸರಕು ವಾಹನ ಅಥವಾ ಮಿನಿ ಬಸ್	175	265	5890	
3	ಟ್ರಕ್ / ಬಸ್ (2 ಆಕ್ಸೆಲ್)	355	535	11845	
4	ಬಹು ಆಕ್ಸೆಲ್ ವಾಹನಗಳು (3 ರಿಂದ 6 ಆಕ್ಸೆಲ್‌ಗಳು)	540	810	17975	
5	ಭಾರಿಗಾತ್ರದ ವಾಹನಗಳು	700	1055	23410	

1. **ಫಾಸ್ಟ್‌ಟ್ಯಾಗ್ ಮೂಲಕ ಮಾತ್ರ ಮೇಲಿನ ಟೋಲ್ ಪ್ಲಾಜಾಗಳಲ್ಲಿ ಈ ಕೆಳಗಿನ ರಿಯಾಯಿತಿಗಳು ಲಭ್ಯವಿದೆ:**
   (i) ಎಲ್ಲಾ ವರ್ಗದ ವಾಹನಗಳು ಪಾವತಿಸಿದ ಸಮಯದಿಂದ 24 ಗಂಟೆಗಳ ಒಳಗೆ ಹಿಂತಿರುಗಿದರೆ ಅಂತಹ ವಾಹನಗಳಿಗೆ ರಿಯಾಯಿತಿಗಳು ಲಭ್ಯವಿದೆ.
   (ii) ಎಲ್ಲಾ ವರ್ಗದ ವಾಹನಗಳಿಗೆ ಪಾವತಿಸಿದ ದಿನಾಂಕದಿಂದ ಒಂದು ತಿಂಗಳಲ್ಲಿ 50 ಅಥವಾ ಹೆಚ್ಚಿನ ಏಕ ಪ್ರಯಾಣಗಳಿಗೆ ಮಾಸಿಕ ಪಾಸ್.
   (iii) ಟೋಲ್ ಪ್ಲಾಜಾದಿಂದ 20 ಕಿ.ಮೀ ವ್ಯಾಪ್ತಿಯಲ್ಲಿ ವಾಸಿಸುವ ವಾಣಿಜ್ಯೇತರ ವಾಹನಗಳಿಗೆ ಪ್ರತಿ ಕ್ಯಾಲೆಂಡರ್ ತಿಂಗಳಿಗೆ ಪಾಸ್ **ರೂ. 340/–**
   ಗಮನಿಸಿ: ಮೇಲೆ ತಿಳಿಸಲಾದ ರಿಯಾಯಿತಿಗಳನ್ನು ಭಾರತ ಸರ್ಕಾರದ ಫಾಸ್ಟ್‌ಟ್ಯಾಗ್ ಕಾರ್ಯಕ್ರಮದ ಮೂಲಕ ಮಾತ್ರ ಪಡೆಯಬಹುದು. **ಎನ್‌ಹೆಚ್‌ಎಐ** ನೀತಿ ಸುತ್ತೋಲೆ ಸಂಖ್ಯೆ ಎನ್‌ಹೆಚ್‌ಎಐ/13013/ಸಿಜಿ/2019–20/147464 ದಿ. 15.01.2020 ಮತ್ತು ಎನ್‌ಹೆಚ್‌ಎಐ ನೀತಿ ಮಾರ್ಗಸೂಚಿ/ಮಾಸಿಕ ಪಾಸ್‌ಗಳ ನಿರ್ವಹಣೆ/2018, ಪಾಲಿಸಿ ಸಂ. 17.5.78 ದಿ. 16.02.2018.
2. ವಿನಾಯಿತಿ ಪಡೆದ ವಾಹನಗಳ ಪಟ್ಟಿಯನ್ನು ರಾಷ್ಟ್ರೀಯ ಹೆದ್ದಾರಿ ಶುಲ್ಕ (ದರಗಳು ಮತ್ತು ಸಂಗ್ರಹಗಳ ನಿರ್ಣಯ) ತಿದ್ದುಪಡಿ ನಿಯಮಗಳು, 2008 ರಲ್ಲಿ ನೀಡಲಾಗಿದೆ [ಜಿ.ಎಸ್.ಆರ್.838 (ಇ) ದಿನಾಂಕ: 05.12.2008].
3. ಅನುಮತಿ ಪಡೆದಿರುವುದಕ್ಕಿಂತ ಹೆಚ್ಚಿನ ತೂಕವನ್ನು ತುಂಬಿಸಿರುವಂತಹ ವಾಹನಗಳು, ಗರಿಷ್ಠ ಅನುಮತಿಸಿರುವ ಜಿವಿಡಬ್ಲ್ಯೂ (ಒಟ್ಟು ವಾಹನ ತೂಕ) ಗಿಂತ ಹೆಚ್ಚಿನ ತೂಕದ ಶೇಕಡಾವಾರು ಆಧಾರದ ಮೇಲೆ ಅನ್ವಯವಾಗುವ ಬಳಕೆದಾರ ಶುಲ್ಕದ 10 ಪಟ್ಟು ಪಾವತಿಸಲು ಹೊಣೆಗಾರರಾಗಿರಬೇಕು ಮತ್ತು ಅಂತಹ ಹೆಚ್ಚುವರಿ ತೂಕವನ್ನು ತಮ್ಮ ಸ್ವಂತ ವೆಚ್ಚದಲ್ಲಿ ತೆಗೆದುಹಾಕಿ ಮತ್ತು ಎನ್‌ಎಚ್ ಶುಲ್ಕದ ಪ್ರಕಾರ ಹೆದ್ದಾರಿಯನ್ನು ಬಳಸುವುದು. (ದರಗಳು ಮತ್ತು ಸಂಗ್ರಹದ ನಿರ್ಣಯದಂತೆ) ತಿದ್ದುಪಡಿ ನಿಯಮಗಳು 2013, 2015 ಮತ್ತು 2018 ರಲ್ಲಿ ರ.ಸಾ.ಹೆ.ಸ. ಪ್ರಕಟಿಸಿದ ಗೆಜೆಟ್ ಅಧಿಸೂಚನೆ ಸಂಖ್ಯೆ ಜಿಎಸ್‌ಆರ್ 778 (ಇ) ದಿನಾಂಕ 16.12.2013, ಜಿ.ಎಸ್.ಆರ್.220 (ಇ) ದಿನಾಂಕ 23.03.2015 & ಜಿ.ಎಸ್.ಆರ್. 920 (ಇ) ದಿ. 25.09.2018, ಮತ್ತು ಎನ್‌ಎಚ್‌ಎಐ ನೀತಿ ಸುತ್ತೋಲೆ ಸಂಖ್ಯೆ 11041/218/2007– ಆಡಳಿತ ದಿ. 31.12.2015.
4. ಗೆಜೆಟ್‌ನಲ್ಲಿ ಪ್ರಕಟವಾದ ದಿನಾಂಕ: 07.02.2011ರ ಶುಲ್ಕ ಅಧಿಸೂಚನೆಯನ್ನು ವೀಕ್ಷಿಸಲು, ದಿನಾಂಕ: **21.03.2024** ರ ಎನ್‌ಎಚ್‌ಎಐ ಪತ್ರವು ಪರಿಷ್ಕೃತ ಬಳಕೆದಾರರ ಶುಲ್ಕದ ಅನುಮೋದನೆ ಮತ್ತು ರಿಯಾಯಿತಿ ಒಪ್ಪಂದ, ನಿಬಂಧನೆಗಳನ್ನು ಒಳಗೊಂಡಿದೆ. ಹೆಚ್ಚಿನ ಮಾಹಿತಿಗೆ ವೆಬ್‌ಸೈಟ್ **http://tis.nhai.gov.in/**ಗೆ ಭೇಟಿ ನೀಡಬಹುದು.
5. ಯಾವುದೇ ವಿಚಾರಣೆ / ಸಲಹೆ ಸೂಚನೆ / ದೂರುಗಳನ್ನು ನೀಡಬೇಕಾದಲ್ಲಿ ಕೆಳಗಿನ ವಿಳಾಸವನ್ನು ಸಂಪರ್ಕಿಸಿ :–

ರಿಯಾಯಿತಿದಾರ	ಸ್ವತಂತ್ರ ಇಂಜಿನಿಯರ್	ಎನ್‌ಹೆಚ್‌ಎಐ
ಸಾರ್ವಜನಿಕ ಸಂಪರ್ಕ ಅಧಿಕಾರಿ ಮೆ. ಅಥಾಂಗ್ ದೇವನಹಳ್ಳಿ ಟೋಲ್‌ವೇ ಪ್ರೈ. ಲಿ.,	**ಟೀಂ ಲೀಡರ್** **ಮೆ॥ ಎಲ್‌ಎನ್ ಮಾಳವಿಯಾ ಇನ್ಫ್ರಾ ಪ್ರಾಜೆಕ್ಟ್ಸ್ ಪ್ರೈ. ಲಿ.,**	**ಯೋಜನಾ ನಿರ್ದೇಶಕ** ಪಿಐಯು–ಬೆಂಗಳೂರು
ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಹತ್ತಿರ, ಬೆಸ್ ಕ್ಯಾಂಪ್ ಕಛೇರಿ, ಎನ್‌ಹೆಚ್–7, ದೇವನಹಳ್ಳಿ ರಸ್ತೆ, ಬೆಂಗಳೂರು–562157	**ಪ್ರಾಜೆಕ್ಟ್ ಕಛೇರಿ: ಎಂ ರಾಮಯ್ಯ ಮ್ಯಾನ್ಷನ್, 1ನೇ ಮಹಡಿ, ಶಾಂತಿನಗರ, ಸೂಲಿಬೆಲೆ ರಸ್ತೆ, ದೇವನಹಳ್ಳಿ ಪಟ್ಟಣ, ಬೆಂಗಳೂರು ಗ್ರಾಮಾಂತರ–562110**	**ಕ್ರ.ಸಂ. 13, 14 ಕಿ.ಮೀ. ನಾಗಸಂದ್ರ, ಬೆಂಗಳೂರು–ತುಮಕೂರು ರಸ್ತೆ (ಎನ್‌ಹೆಚ್–4) ಬೆಂಗಳೂರು–560073**
6366944965	**+91 80 29580770**	**080 - 28394403**

- **15ನೇ ಫೆಬ್ರವರಿ, 2021** ರಿಂದ ಎಲ್ಲಾ ರಾ.ಹೆ. ಟೋಲ್ ಪ್ಲಾಜಾಗಳಲ್ಲಿ ಫಾಸ್ಟ್‌ಟ್ಯಾಗ್ ಕಡ್ಡಾಯವಾಗಿದೆ. ಭಾರತ ಸರ್ಕಾರ ನಿರ್ದೇಶನದ ಸುತ್ತೋಲೆಗಳನ್ನು **ದಿನಾಂಕ: 12/02/2021ರ** ಮೂಲಕ ಹೊರಡಿಸಲಾಗಿದೆ.
- ರ.ಸಾ.ಹೆ.ಸ. ಪತ್ರ ಸಂಖ್ಯೆ.ಎಚ್–25016/02/2020–ಟೋಲ್ ದಿನಾಂಕ: 13ನೇ ಫೆಬ್ರವರಿ 2021 ಮತ್ತು ದಿನಾಂಕ: 14ನೇ ಫೆಬ್ರವರಿ 2021ರ ಪ್ರೆಸ್ ನೋಟ್ ಪ್ರಕಾರ ಟೋಲ್ ಪ್ಲಾಜಾಗೆ ಪ್ರವೇಶಿಸುವ ಫಾಸ್ಟ್‌ಟ್ಯಾಗ್ ಇಲ್ಲದ ವಾಹನಗಳು ಬಳಕೆದಾರರ ಶುಲ್ಕದ 2 (ಎರಡು) ಪಟ್ಟು ದಂಡವಾಗಿ ಪಾವತಿಸಬೇಕಾಗುತ್ತದೆ.

ನಗರದಲ್ಲಿ ಮುಂಗಾರಿನ ಆರ್ಭಟ ಆರಂಭ

ಜೂನ್‌ನ ಆರಂಭಕ್ಕೆ ನಗರದಲ್ಲಿ ಭಾರೀ ಮಳೆ | ಜೂ.8ರವರೆಗೆ ವ್ಯಾಪಕ ಮಳೆ ಎಂದ ಹವಾಮಾನ ಇಲಾಖೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ನಗರದಲ್ಲಿ ಜೂನ್ ತಿಂಗಳ ಮೊದಲ ದಿನವೇ ಗುಡುಗು ಮಿಂಚು ಸಹಿತ ಭಾರೀ ಮಳೆಯಾಗಿದ್ದು,ಜೂನ್ 8 ರವರೆಗೆ ನಗರದಲ್ಲಿ ವ್ಯಾಪಕ ಮಳೆಯಾಗುತ್ತದೆ ಹವಾಮಾನ ಇಲಾಖೆ ತಿಳಿಸಿದೆ.

ಕೇರಳಕ್ಕೆ ಮುಂಗಾರು ಮಾರುತಗಳು ಅಪ್ಪಳಿಸಿದ ಬೆನ್ನಲ್ಲೇ ರಾಜಧಾನಿ ಬೆಂಗಳೂರಿನಲ್ಲಿ ಮಳೆ ಆರ್ಭಟ ಆರಂಭವಾಗಿದ್ದು, ಬಹುತೇಕ ಪ್ರದೇಶಗಳಲ್ಲಿ ಇಂದು ಭಾರಿ ಮಳೆ ಸುರಿಯಲಾರಂಭಿಸಿದೆ. ಅರಬ್ಬೀ ಸಮುದ್ರದ ಆಗ್ನೇಯ ಭಾಗದಲ್ಲಿ ಸುಳಿಗಾಳಿ ಎದ್ದಿರುವ ಕಾರಣ ಕರ್ನಾಟಕದಲ್ಲಿ ಮಳೆಯಾಗಲಿದೆ. ಕೇರಳ ಪ್ರವೇಶಿಸಿರುವ ಮಾನ್ಸೂನ್ ಒಂದೆರಡು ದಿನಗಳಲ್ಲಿ ಕರ್ನಾಟಕಕ್ಕೂ ಲಗ್ಗೆಯಿಡಲಿದೆ. ಸಾಮಾನ್ಯವಾಗಿ ಜೂನ್ 7 ರ ನಂತರ ಮುಂಗಾರು ಕರ್ನಾಟಕವನ್ನು ಪ್ರವೇಶಿಸುತ್ತದೆ ಆದರೆ ಈ ಬಾರಿ ಒಂದು ವಾರದಷ್ಟು ಮೊದಲೇ ಅದರ ಪ್ರವೇಶವಾಗಲಿದೆ.ಮುಂಗಾರು ಈಗಾಗಲೇ ಕೇರಳವನ್ನು ಪ್ರವೇಶಿಸಿದ್ದು ಒಂದೆರಡು ದಿನಗಳಲ್ಲಿ ಮಾನ್ಸೂನ್ ಕರ್ನಾಟಕಕ್ಕೂ ಲಗ್ಗೆಯಿಡಲಿದೆ ಎಂದು ಇಲಾಖೆಯ ಅಧಿಕಾರಿ ಸಿಎಸ್ ಪಾಟೀಲ್ ಹೇಳಿದರು.

ಶನಿವಾರ ನಗರದ ಹಲವೆಡೆಗಳಲ್ಲಿ ಮಿಂಚು–ಗುಡುಗು ಸಹಿತ ವ್ಯಾಪಕ ಮಳೆಯಾಗುತ್ತಿದ್ದು, ಹಲವು ಕಡೆಗಳಲ್ಲಿ ಆಲಿಕಲ್ಲು ಸಹಿತ ಭಾರಿ ಮಳೆಯಾಗಿದೆ. ಹಲವು ದಿನಗಳ ವಿರಾಮದ ಬಳಿಕ ಬೆಂಗಳೂರಿನಲ್ಲಿ ಮತ್ತೆ ಮಳೆಯಾಗುತ್ತಿರುವುದು ಜನರ ಖುಷಿ ಹೆಚ್ಚಿಸಿದ್ದು, ಕೆಲ ಕಾಲದ ಬಿಡುವಿನಲ್ಲಿ ಭಾರಿ ಸೆಖೆಯಿಂದ ಬೇಸತ್ತಿದ್ದ ಜನಕ್ಕೆ ಮಳೆ ತಂಪೆರದಿದೆ. ನಗರದಲ್ಲಿ ಬೆಳಗ್ಗಿನಿಂದ ತಾಪಮಾನ ಹೆಚ್ಚಿದ್ದು, ಮಳೆ ಬಂದ ಬಳಿಕ ತಂಪಿನ ವಾತಾವರಣ ಕಂಡು ಬಂದಿದೆ. ಹಲವು ದಿನಗಳ ಬಳಿಕ ಮತ್ತೆ ಮಳೆ ಬಂದಿದ್ದು ಜನರ ಸಂತಸ ಹೆಚ್ಚಿದೆ.

ಹರಿದು ಹೋದ ಬೃಹತ್ ಹೋರ್ಡಿಂಗ್

ಕೇವಲ ಒಂದೂವರೆ ಗಂಟೆಯ ಮಳೆಗೆ ನಗರದ ರಸ್ತೆಗಳು ಜಲಾವೃತಗೊಂಡು ನದಿಯಂತಾಗಿವೆ. ಒಂದೆಡೆ ಭಾರಿ ಮಳೆ ಮತ್ತೊಂದೆಡೆ ರಸ್ತೆಗಳು ಜಲಾವೃತ್ತವಾದ್ದರಿಂದ ವಾಹನ ಸವಾರರು ಪರದಾಡಬೇಕಾಯಿತು. ಹೆಬ್ಬಾಳದಲ್ಲಿ ಸವಾರರು ಮೇಲ್ಸೇತುವೆ ಕೆಳಗೆ ನಿಂತು ಮಳೆಯಿಂದ ರಕ್ಷಣೆ ಪಡೆದರೆ, ಅಲ್ಲಿಯೇ ಇದ್ದ ಬೃಹತ್ ಹೋರ್ಡಿಂಗ್‌ನ ಜಾಹಿರಾತು ಪರದೆ ಪ್ರಬಲ ಗಾಳಿಗೆ ಸಿಲುಕಿ ಹರಿದು ಹೋಯಿತು.

ನದಿಯಂತಾದ ಸರ್ಜಾಪುರ

ಹೆಬ್ಬಾಳದ ಬಿಇಎಲ್ ಸರ್ಕಲ್ ನ ಸುರಂಗ ಮಾರ್ಗದಲ್ಲಿ ನೀರು ನಿಂತು ವಾಹನ ಸವಾರರು ಪರದಾಡುವಂತಾಯಿತು. ಒಂದೆಡೆ ಜಲಾವೃತ್ತಗೊಂಡ ರಸ್ತೆಗಳಿಂದ ಸವಾರರು ಅವಸ್ಥೆ ಪಟ್ಟರೆ ಮತ್ತೊಂದೆಡೆ ರಸ್ತೆಗುಂಡಿಗಳು ವಾಹನ ಸವಾರರಿಗೆ ಮತ್ತಷ್ಟು ಸಮಸ್ಯೆಯನ್ನುಂಟು ಮಾಡಿದೆ. ಮಳೆ ನೀರು ನಿಂತು ರಸ್ತೆಗುಂಡಿ ಕಾಣದೇ ವಾಹನ ಸವಾರರು ಜೀವ ಪಣಕ್ಕಿಟ್ಟು ವಾಹನ ಚಲಾಯಿಸಬೇಕಿದೆ. ಮಾರತ್ ಹಳ್ಳಿ ಜಂಕ್ಷನ್ ನಲ್ಲಿ ಸವಾರರು ನೀರಿನಲ್ಲಿ ಮುಳುಗಿದ ರಸ್ತೆ ಗುಂಡಿ ದಾಟಲು ಹರಸಾಹಸಪಡುತ್ತಿದ್ದಾರೆ. ಸರ್ಜಾಪುರದಲ್ಲಿ ತಗ್ಗು ಪ್ರದೇಶಗಳಿಗೆ ನೀರು ನುಗ್ಗಿದ್ದು, ಇಡೀ ಪ್ರದೇಶ ನದಿಯಂತಾಗಿದೆ. ಭಾರೀ ಮಳೆಗೆ ಯಲಚೇನನ ಹಳ್ಳಿಯಲ್ಲಿ ಪ್ರವಾಹ ಪರಿಸ್ಥಿತಿಯುಂಟಾಗಿದ್ದು, ನೀರಿನ ರಭಸಕ್ಕೆ ವಾಹನಗಳು ಕೊಚ್ಚಿಹೋಗುತ್ತಿದೆ. ಈ ಹಿನ್ನೆಲೆ ಕಳೆದ 12 ವರ್ಷಗಳಿಂದ ಈ ಪ್ರದೇಶದಲ್ಲಿ ಇದೇ ಪರಿಸ್ಥಿತಿ ಇದ್ದು ಕೂಡಲೇ ಅಧಿಕಾರಿಗಳು ಬಂದು ಸಮಸ್ಯೆ ಬಗೆಹರಿಸುವಂತೆ ಸ್ಥಳೀಯ ನಿವಾಸಿಗಳು ಬಿಬಿಎಂಪಿ ವಿರುದ್ಧ ಪ್ರತಿಭಟನೆ ನಡೆಸಿದ್ದಾರೆ.

ಎಲ್ಲೆಲ್ಲಿ ಮಳೆ?

ಶಿವಾಜಿನಗರ, ಬೆಳ್ಳಂದೂರು, ಮಾರತಹಳ್ಳಿ, ಹೆಬ್ಬಾಳ, ವಿದ್ಯಾರಣ್ಯಪುರ, ಬೊಮ್ಮಸಂದ್ರ, ಎಲೆಕ್ಟ್ರಾನಿಕ್ ಸಿಟಿ, ಎಚ್‌ಎಸ್‌ಆರ್ ಲೇಔಟ್, ಕೋರಮಂಗಲ, ಪದ್ಮನಾಭನಗರ, ಉತ್ತರಹಳ್ಳಿ, ರಾಜರಾಜೇಶ್ವರಿ ನಗರ, ಸದಾಶಿವನಗರ, ಶೇಷಾದ್ರಿಪುರ, ಬೊಮ್ಮನಹಳ್ಳಿ, ಬಸವನಗುಡಿ, ಮಹಾಲಕ್ಷ್ಮೀ ಲೇಔಟ್, ದೊಮ್ಮಲೂರು, ಇಂದಿರಾನಗರ, ರಾಜಾಜಿನಗರ, ಮಲ್ಲೇಶ್ವರ, ಹಲಸೂರು, ವಸಂತನಗರ, ಕೆ.ಆರ್. ಪುರ, ಮಹದೇವಪುರ, ಬಾಣಸವಾಸಿ, ಎಚ್‌ಬಿಆರ್ ಲೇಔಟ್, ಕಲ್ಯಾಣ ನಗರ, ಕಮ್ಮನಹಳ್ಳಿ, ಲಿಂಗರಾಜಪುರ, ಮತ್ತಿಕೆರೆ, ಪೀಣ್ಯ, ಜಯನಗರ, ಕಾಮಾಕ್ಷಿಪಾಳ್ಯ, ಕೆಂಗೇರಿ ವಿಜಯನಗರ ಸೇರಿದಂತೆ ಹಲವು ಕಡೆಗಳಲ್ಲಿ ಉತ್ತಮ ಮಳೆಯಾಗಿದೆ.

ಮಳೆಯ ಅಬ್ಬರಕ್ಕೆ ಬಿದ್ದ ಮರ , ಕೊಂಬೆಗಳ ಮಾಹಿತಿ

ಉಪವಿಭಾಗ	ವಲಯ	ಮರಗಳು	ತೆರವು	ಕೊಂಬೆಗಳು	ತೆರುವು
ದಕ್ಷಿಣ	ದಕ್ಷಿಣ	-	1	10	5
ದಕ್ಷಿಣ	ಆರ್ ಆರ್ ನಗರ	2	1	5	2
ದಕ್ಷಿಣ	ಬೊಮ್ಮನಹಳ್ಳಿ	-	-	4	3
ದಕ್ಷಿಣ	ಪಶ್ಚಿಮ	2	1	2	1
ಉತ್ತರ	ಮಹದೇವಪುರ	1	-	1	-
ಉತ್ತರ	ಯಲಹಂಕ	-	-	8	5
ಉತ್ತರ	ಪೂರ್ವ	2	1	2	2
ಉತ್ತರ	ದಾಸರಹಳ್ಳಿ	1	1	-	-
ಒಟ್ಟು		9	4	32	18

ಯಾವ ಜಿಲ್ಲೆಗಳಲ್ಲಿ ಮತ್ತೆ ಮಳೆ

ಜೂನ್ 1ರಿಂದ ಮಳೆ ಅಬ್ಬರ ಮತ್ತೆ ಶುರುವಾಗುವ ನಿರೀಕ್ಷೆ ಇತ್ತು, ಆದರೆ ಜೂನ್ ಆರಂಭದಲ್ಲೇ ಮಳೆಯ ಆರ್ಭಟದ ಮುನ್ಸೂಚನೆ ದೊರೆತಿದ್ದು, ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ, ಉಡುಪಿ ಸೇರಿದಂತೆ ಕೊಡಗು ಚಿಕ್ಕಮಗಳೂರು, ಉತ್ತರ ಕನ್ನಡದಲ್ಲಿ ಮಳೆಯ ಮುನ್ಸೂಚನೆ ಇತ್ತು. ಬೆಂಗಳೂರು ಸುತ್ತಮುತ್ತ ಕೂಡ ಮಳೆಯಾಗುವ ನಿರೀಕ್ಷೆ ಇತ್ತು. ಅದರಂತೆ ಈಗ ಮಳೆ ಅಬ್ಬರ ಶುರುವಾಗಿದೆ. ಅಲ್ಲದೆ, ಜೂನ್ 3 ರಂದು ಮಳೆ ಮತ್ತಷ್ಟು ಹೆಚ್ಚಾಗಲಿದೆ ಎಂದು ಹೇಳಲಾಗುತ್ತಿದೆ.

ಯತ್ನಾಳ್ ತಕರಾರು ಅರ್ಜಿ ತೀರ್ಪು ಕಾಯ್ದಿರಿಸಿದ ಹೈಕೋರ್ಟ್

ಬೆಂಗಳೂರು: ಉಪ ಮುಖ್ಯಮಂತ್ರಿ, ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ. ಕೆ. ಶಿವಕುಮಾರ್ ವಿರುದ್ಧದ ಆದಾಯ ಮೀರಿ ಆಸ್ತಿ ಗಳಿಕೆ ಆರೋಪ ಕುರಿತು ತನಿಖೆ ನಡೆಸಲು ಸಿಬಿಐಗೆ ನೀಡಿದ್ದ ಅನುಮತಿಯನ್ನು ರಾಜ್ಯ ಕಾಂಗ್ರೆಸ್ ಸರಕಾರ ಹಿಂಪಡೆದಿತ್ತು. ಈ ಆದೇಶ ರದ್ದು ಕೋರಿ ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಮತ್ತು ಕೇಂದ್ರೀಯ ತನಿಖಾ ಸಂಸ್ಥೆ ಸಲ್ಲಿಸಿದ್ದ ಎರಡು ಪ್ರತ್ಯೇಕ ತಕರಾರು ಅರ್ಜಿಗಳ ವಿಚಾರಣೆಯನ್ನು ಪೂರ್ಣಗೊಳಿಸಿರುವ ಹೈಕೋರ್ಟ್, ತೀರ್ಪು ಕಾಯ್ದಿರಿಸಿದೆ.

ಡಿ.ಕೆ. ಶಿವಕುಮಾರ್ ಅವರ ವಿರುದ್ಧ ಆದಾಯ ಮೀರಿ ಆಸ್ತಿ ಗಳಿಕೆ ಆರೋಪದ ತನಿಖೆ ನಡೆಸಲು 2019ರ ಸೆ.25ರಂದು ಅಂದಿನ ರಾಜ್ಯ ಬಿಜೆಪಿ ಸರಕಾರ ನೀಡಿದ್ದ ಸಮ್ಮತಿ ಹಿಂಪಡೆದ ಕಾಂಗ್ರೆಸ್ ಸರಕಾರದ ಕ್ರಮ ಪ್ರಶ್ನಿಸಿ ಶಾಸಕ ಯತ್ನಾಳ್ ಮತ್ತು ಸಿಬಿಐ ಸಲ್ಲಿಸಿದ್ದ ಪ್ರತ್ಯೇಕ ಅರ್ಜಿಗಳನ್ನು ಸಲ್ಲಿಸಿದ್ದರು. ಈ ಅರ್ಜಿಗಳ ವಿಚಾರಣೆ ನಡೆಸಿದ ಹಿರಿಯ ನ್ಯಾಯಮೂರ್ತಿ ಕೆ. ಸೋಮಶೇಖರ್ ಅವರ ನೇತೃತ್ವದ ವಿಭಾಗೀಯ ಪೀಠ, ತೀರ್ಪು ಕಾಯ್ದಿರಿಸಿತು.

ಡಿ.ಕೆ. ಶಿವಕುಮಾರ್ ಮತ್ತು ಸರಕಾರದ ಪರ ವಕೀಲರ ವಾದಕ್ಕೆ ಪ್ರತ್ಯುತ್ತರ ನೀಡಿದ ಸಿಬಿಐ ವಿಶೇಷ ಸರಕಾರಿ ಅಭಿಯೋಜಕ ಪಿ. ಪ್ರಸನ್ನ ಕುಮಾರ್, ಒಮ್ಮೆ ಸಿಬಿಐ ತನಿಖೆಗೆ ನೀಡಿದ ಅನುಮತಿಯನ್ನು ಹಿಂಪಡೆಯುವ ಅಧಿಕಾರ ಸರಕಾರಕ್ಕಿಲ್ಲ. ಈಗಾಗಲೇ ಪ್ರಕರಣದ ತನಿಖೆ ಬಹುತೇಕ ಪೂರ್ಣಗೊಂಡಿದೆ. ತನಿಖೆ ಪ್ರಗತಿಯಲ್ಲಿರುವಾಗ ತನಿಖೆಗೆ ನೀಡಿದ್ದ ಅನುಮತಿ ಹಿಂಪಡೆಯುವುದು ಕಾನೂನುಬಾಹಿರ. ಸರಕಾರದ ಆದೇಶ ರದ್ದುಪಡಿಸಬೇಕು ಎಂದು ನ್ಯಾಯಪೀಠವನ್ನು ಮನವಿ ಮಾಡಿದರು.

ಈ ಹಿಂದಿನ ವಿಚಾರಣೆ ವೇಳೆ ರಾಜ್ಯ ಸರಕಾರ ಮತ್ತು ಡಿ. ಕೆ. ಶಿವಕುಮಾರ್ ಪರ ವಕೀಲರು, ಈ ಹಿಂದಿನ ಸರಕಾರ ರಾಜಕೀಯ ಪ್ರೇರಿತವಾಗಿ ಸಿಬಿಐ ತನಿಖೆಗೆ ಸಮ್ಮತಿ ಸೂಚಿಸಿತ್ತು. ಸಿಬಿಐ ತನಿಖೆಗೆ ಸಮ್ಮತಿ ನೀಡುವಾಗ ಅನುಸರಿಸಬೇಕಾದ ನಿಯಮಗಳನ್ನು ಪಾಲಿಸಿಲ್ಲ ಹಾಗೂ ವಿವೇಚನೆ ಬಳಸಿಲ್ಲ. ಇದರಿಂದ ಹಾಲಿ ರಾಜ್ಯ ಸರಕಾರವು ಸಿಬಿಐಗೆ ನೀಡಿದ್ದ ಅನುಮತಿ ಹಿಂಪಡೆದಿದೆ. ಅನುಮತಿ ಹಿಂಪಡೆಯಲು ಸರಕಾರಕ್ಕೆ ಅಧಿಕಾರವಿದೆ. ಈ ಕ್ರಮ ಕಾನೂನು ಬಾಹಿರವಾಗಿಲ್ಲ. ಆದ್ದರಿಂದ ಅರ್ಜಿಗಳನ್ನು ವಜಾಗೊಳಿಸಬೇಕು ಎಂದು ಕೋರಿದ್ದರು.

ಮತ ಎಣಿಕೆ ಕೇಂದ್ರದಲ್ಲಿ ಅಹಿತಕರ ಘಟನೆ ನಡೆಯದಿರಲಿ

ಪಾಲಿಕೆ ಕೇಂದ್ರ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಅಧಿಕಾರಿಗಳಿಗೆ ಜಿಲ್ಲಾ ಚುನಾವಣಾಧಿಕಾರಿ ತುಷಾರ್ ಗಿರಿನಾಥ್ ಸೂಚನೆ

ಬೆಂಗಳೂರು: ಮತ ಎಣಿಕೆ ಕೇಂದ್ರಗಳ ಬಳಿ ಯಾವುದೇ ರೀತಿಯ ಅಹಿತಕರ ಘಟನೆ ನಡೆಯದಂತೆ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಅಧಿಕಾರಿಗಳಿಗೆ ಜಿಲ್ಲಾ ಚುನಾವಣಾಧಿಕಾರಿ ತುಷಾರ್ ಗಿರಿನಾಥ್ ಸೂಚನೆ ನೀಡಿದರು.

ಲೋಕಸಭಾ ಚುನಾವಣೆಯ ಮತ ಎಣಿಕೆ ಸಂಬಂಧಿಸಿದಂತೆ ಪಾಲಿಕೆ ಕೇಂದ್ರ ಕಚೇರಿಯಲ್ಲಿ ಸಭೆ ನಡೆಸಿ ಮಾತನಾಡಿ, ಲೋಕಸಭಾ ಚುನಾವಣೆಯ ಮತ ಎಣಿಕೆಯು 4ನೇ ಜೂನ್ 2024 ರಂದು ನಡೆಯಲಿದ್ದು, ಈ ಸಂಬಂಧ ಮತ ಎಣಿಕೆ ದಿನದಂದು ಎಲ್ಲಾ ರೀತಿಯ ಸಿದ್ದತೆಗಳನ್ನು ಮಾಡಿಕೊಳ್ಳಬೇಕು. ನಗರದಲ್ಲಿ ಮೂರು ಮತ ಎಣಿಕೆ ಕೇಂದ್ರಗಳು ಬರಲಿದ್ದು, ಚುನಾವಣಾ ಆಯೋಗದ ಮಾರ್ಗಸೂಚಿ ಅನ್ವಯ ಮತ ಎಣಿಕೆ ಕೇಂದ್ರಗಳ ಬಳಿ ಸಿಸಿ ಟಿವಿ ಹಾಗೂ ವೀಡಿಯೋಗ್ರಫಿ ವ್ಯವಸ್ಥೆ ಮಾಡಿಕೊಳ್ಳಬೇಕು ಎಂದು ಸೂಚನೆ ನೀಡಿದರು.

ಲೋಕಸಭಾ ಚುನಾವಣೆಯ ಮತ ಎಣಿಕೆ ಸಂಬಂಧಿಸಿದಂತೆ ಪಾಲಿಕೆ ಕೇಂದ್ರ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಜಿಲ್ಲಾ ಚುನಾವಣಾಧಿಕಾರಿ ತುಷಾರ್ ಗಿರಿನಾಥ್ ಮಾತನಾಡಿದರು.

ಬೆಂಗಳೂರು ಪದವೀಧರ ಕ್ಷೇತ್ರದ ಚುನಾವಣೆಗೆ ಸಂಬಂಧಿಸಿದಂತೆ ಜೂನ್ 3 ರಂದು ಮತದಾನ ನಡೆಯಲಿದ್ದು, ಈ ಸಂಬಂಧ ಎಲ್ಲಾ ರೀತಿಯ ಸಿದ್ಧತೆಗಳನ್ನು ಮಾಡಿಕೊಳ್ಳಲು ಅಧಿಕಾರಿಗಳಿಗೆ ಈ ಸಂದರ್ಭದಲ್ಲಿ ಸೂಚನೆ ನೀಡಿದರು.

ಈ ವೇಳೆ ಚುನಾವಣಾ ವಿಭಾಗದ ವಿಶೇಷ ಆಯುಕ್ತ ಸೆಲ್ವಮಣಿ, ಅಪರ ಜಿಲ್ಲಾ ಚುನಾವಣಾಧಿಕಾರಿ ವಿನೋತ್ ಪ್ರಿಯಾ, ಸ್ನೇಹಲ್, ದಯಾನಂದ್, ಚುನಾವಣಾ ವಿಭಾಗದ ಸಹಾಯಕ ಆಯುಕ್ತ ರವಿ ಚಂದ್ರ ನಾಯ್ಕ್ ಸೇರಿದಂತೆ ಇನ್ನಿತರ ಸಂಬಂಧಪಟ್ಟ ಅಧಿಕಾರಿಗಳು ಇದ್ದರು.

> ಮತ ಎಣಿಕೆ ಕೇಂದ್ರಗಳ ಬಳಿ ಸ್ಥಾಪಿಸುವ ಮಾಧ್ಯಮ ಕೇಂದ್ರಗಳಲ್ಲಿ ಎಲ್ಲಾ ರೀತಿಯ ವ್ಯವಸ್ಥೆಯನ್ನು ಸರಿಯಾಗಿ ಮಾಡಿರಬೇಕು. ಮಾಧ್ಯಮ ಪ್ರತಿನಿಧಿಗಳಿಗೆ ಕುಡಿಯುವ ನೀರು, ಶೌಚಾಲಯದ ವ್ಯವಸ್ಥೆ ಸೇರಿದಂತೆ ಇನ್ನಿತರ ಸೌಲಭ್ಯಗಳನ್ನು ಸರಿಯಾಗಿ ಕಲ್ಪಿಸಬೇಕು. ಮತ ಎಣಿಕೆ ಸಿಬ್ಬಂದಿಗಳನ್ನು ನಿಯೋಜಿಸಿ ತರಬೇತಿಯನ್ನು ನೀಡಲಾಗಿದೆ. ಭದ್ರತೆಗಾಗಿ ಪೊಲೀಸ್ ಸಿಬ್ಬಂದಿಯನ್ನು ಕೂಡಾ ನಿಯೋಜಿಸಲಾಗಿದೆ. ಅಂಚೆ ಮತ ಪತ್ರ ಎಣಿಕೆಯನ್ನು ಸರಿಯಾಗಿ ಮಾಡಬೇಕು.
>
> **–ತುಷಾರ್ ಗಿರಿನಾಥ್**
> ಜಿಲ್ಲಾ ಚುನಾವಣಾಧಿಕಾರಿ

ಮಾನ್ಯ 1 ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಕನಕಪುರ
ಸಿ.ಮಿಸ್. ನಂ.34/2024

ಅರ್ಜಿದಾರರು: ಶ್ರೀ. ಲಕ್ಷ್ಮಮ್ಮ ಮತ್ತು ಇತರರು.
ವಿರುದ್ಧ
ಪ್ರತಿ ಅರ್ಜಿದಾರರು: ಜನನ ಮತ್ತು ಮರಣ ನೋಂದಣಾಧಿಕಾರಿಗಳು, ತಹಸಿಲ್ದಾರ್ ಕನಕಪುರ ಹಾಗೂ ಮತ್ತೊಬ್ಬರು.
ಪ್ರಕಟಣೆ
ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1ರಿಂದ 3ನೇ ಅರ್ಜಿದಾರರ ತಂದೆ ಶ್ರೀ. ರಾಮೇಗೌಡ ಕೋಂ ಲೇ. ಚಿನ್ನರಾಕೇಗೌಡ ಉ ಕುಂಟ ರವರು ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಕೋಡಿಹಳ್ಳಿ ಹೋಬಳಿ, ದೊಡ್ಡಕಬ್ಬಳ್ಳಿ ಅಂಚೆ, ದೊಡ್ಡಕಬ್ಬಳ್ಳಿ ಗ್ರಾಮದಲ್ಲಿ ದಿನಾಂಕ:02-08-1989 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ 06-07-2024ರ ಬೆಳಿಗ್ಗೆ ಸರಿಯಾಗಿ 11-00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ನೀರಾದಿ ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥಗೊಳಿಸಲಾಗುವುದು.
ದಿನಾಂಕ: 01/06/2024 ರಂದು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.
ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು
ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಕನಕಪುರ
ಅರ್ಜಿದಾರರ ಪರ ವಕೀಲರು
ರಮೇಶ್.ಎಸ್.
ವಕೀಲರು, ಕನಕಪುರ
ಸ್ಥಳ: ಕನಕಪುರ
ದಿನಾಂಕ: 01-06-2024

ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಕನಕಪುರ
ಸಿ.ಮಿಸ್. ನಂ.153/2024

ಅರ್ಜಿದಾರರು: ಶ್ರೀ. ಕೊಮಲ ಕೋಂ ಲೇಟ್ ಕೃಷ್ಣಶೆಟ್ಟಿ, ವಾಸ: ವಾರ್ಡ್ ನಂ.09, ಮೇಗಳಬೀದಿ, ರಾಮನಗರ ಮೈನ್ ರೋಡ್ ನೀಲಕಠೇಶ್ವರ ರೋಡ್ ಕನಕಪು ಟೌನ್ ರಾಮನಗರ ಜಿಲ್ಲೆ, ಮತ್ತು ಇತರರು.
ವಿರುದ್ಧ
ಪ್ರತಿ ಅರ್ಜಿದಾರರು: 1) ನಗರಸಭೆ ಅಧಿಕಾರಿಗಳು ಜನನ ಮತ್ತು ಮರಣ ಪ್ರಮಾಣ ನೋಂದಣಿ ಕನಕಪುರ
ಪ್ರಕಟಣೆ
ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1ನೇ ಅರ್ಜಿದಾರರಿಗೆ ಅಜ್ಜಿಯಾದ ಮತ್ತು 2ನೇ ಅರ್ಜಿದಾರರಿಗೆ ಮೊಮ್ಮಗಳಾದ ಕಾಳಮ್ಮ ಕೋಂ ಲೇಟ್ ವೆಂಕಟರಮಣಯ್ಯಶೆಟ್ಟಿ ರವರು ದಿನಾಂಕ:10-05-1980 ರಂದು ವಾಸ- ವಾರ್ಡ್ ನಂ9, ಮೇಗಳಬೀದಿ, ರಾಮನಗರ ಮೈನ್ ರೋಡ್, ನೀಲಕಂಠೇಶ್ವರ ರೋಡ್, ಕನಕಪುರ ಟೌನ್, ರಾಮನಗರ ಜಿಲ್ಲೆ ಅರ್ಜಿದಾರರ ಮನೆಯಲ್ಲಿ ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ 8-07-2024ರ ಬೆಳಿಗ್ಗೆ ಸರಿಯಾಗಿ 11-00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ನೀರಾದಿ ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.
ದಿನಾಂಕ: 31ನೇ ಮೇ 2024 ರಂದು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.
ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು
ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ. ನ್ಯಾಯಾಲಯ ಕನಕಪುರ
ಅರ್ಜಿದಾರರ ಪರ ವಕೀಲರು
ಅರ್ಜುನ್.ಡಿ.
ವಕೀಲರು, ಕನಕಪುರ
ಸ್ಥಳ: ಕನಕಪುರ

ಮಾನ್ಯ ಗೌರವಾನ್ವಿತ 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಕನಕಪುರ
ಸಿ.ಮಿಸ್. ನಂ.307/2024

ಅರ್ಜಿದಾರರು: 1. ಶ್ರೀ. ತಗಡೇಗೌಡ ಬಿನ್ ಲೇಟ್ ತಗಡೇಗೌಡ, ತಗಡೇಗೌಡನದೊಡ್ಡಿ ಗ್ರಾಮ, ಐ ಗೊಲ್ಲಹಳ್ಳಿ ಗ್ರಾಮ ಮತ್ತು ಅಂಚೆ, ಉಯ್ಯಾಂಬಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ. ಮತ್ತು ಇತರರು.
ವಿರುದ್ಧ
ಪ್ರತಿ ಅರ್ಜಿದಾರರು: 1) ಜನನ ಮತ್ತು ಮರಣ ಪ್ರಮಾಣ ನೋಂದಣಿ ಅಧಿಕಾರಿಗಳು, ಕನಕಪುರ 2) ಗ್ರಾಮ ಲೆಕ್ಕಧಿಕಾರಿಗಳು, ತಗಡೇಗೌಡನದೊಡ್ಡಿ ಐ ಗೊಲ್ಲಹಳ್ಳಿ ಪಂಚಾಯಿತಿ ಮತ್ತು ಅಂಚೆ, ಉಯ್ಯಾಂಬಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ.
ಪ್ರಕಟಣೆ
ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ 1 ರಿಂದ 9ನೇ ಅರ್ಜಿದಾರರ ಅಜ್ಜಿಯಾದ ಶ್ರೀಮತಿ. ನಿಂಗಮ್ಮ ಕೋಂ ಲೇಟ್ ಶ್ರೀ. ದೊಡ್ಡೇಗೌಡ ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಉಯ್ಯಾಂಬಳ್ಳಿ ಹೋಬಳಿ, ಐ ಗೊಲ್ಲಹಳ್ಳಿ ಅಂಚೆ, ತಗಡೇಗೌಡನದೊಡ್ಡಿ ಗ್ರಾಮದಲ್ಲಿ ದಿನಾಂಕ: 20.01.1970ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ ದಿನಾಂಕ: 11.07.2024 ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.
2024ರ ಮೇ 28 ನೇ ತಾರಿಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.
ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು
ಮಾನ್ಯ 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಕನಕಪುರ
ಅರ್ಜಿದಾರರ ಪರ ವಕೀಲರು
ಎ.ಎಂ.ಮುನಿಚಿಕ್ಕಯ್ಯ., ಬಿಎ., ಎಲ್.ಎಲ್.ಬಿ
ವಕೀಲರು, ಕನಕಪುರ
ಸ್ಥಳ: ಕನಕಪುರ

ಮಾನ್ಯ ಗೌರವಾನ್ವಿತ 2ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಕನಕಪುರ
ಸಿ.ಮಿಸ್. ನಂ.364/2024

ಅರ್ಜಿದಾರರು: 1. ಶ್ರೀಮತಿ. ಚಿಕ್ಕತಾಯಮ್ಮ ಕೋಂ ಲೇಟ್ ನಿಂಗೇಗೌಡ @ ನಿಂಗಯ್ಯ, ವಯಸ್ಸು 59 ವರ್ಷ, ವಾಸ: ಬೋರಮ್ಮನದೊಡ್ಡಿ ಗ್ರಾಮ, ಕಸಬಾ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ. ಮತ್ತು ಇತರರು.
ವಿರುದ್ಧ
ಪ್ರತಿ ಅರ್ಜಿದಾರರು: 1) ಜನನ ಮತ್ತು ಮರಣ ಪ್ರಮಾಣ ನೋಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ ತಾಲ್ಲೂಕು, ಕನಕಪುರ. 2) ಗ್ರಾಮ ಲೆಕ್ಕಾಧಿಕಾರಿಗಳು, ಕಸಬಾ ವೃತ್ತ, ಕಸಬಾ ಹೋಬಳಿ, ಕನಕಪುರ ತಾಲ್ಲೂಕು ರಾಮನಗರ ಜಿಲ್ಲೆ.
ಪ್ರಕಟಣೆ
ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ 4ನೇ ಅರ್ಜಿದಾರರ ತಾಯಿ, 1ನೇ ಅರ್ಜಿದಾರರ ಅತ್ತೆ, 2 ಮತ್ತು 3ನೇ ಅರ್ಜಿದಾರರ ಅಜ್ಜಿಯವರಾದ ಸೀರಮ್ಮ ಕೋಂ. ಲೇಟ್ ಲಿಂಗೇಗೌಡ ರವರು ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಕಸಬಾ ಹೋಬಳಿ, ಬೋರಮ್ಮನದೊಡ್ಡಿ ಗ್ರಾಮದಲ್ಲಿ ದಿನಾಂಕ: 21.12.2005ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ ದಿನಾಂಕ: 08.07.2024 ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.
2024ರ ಮೇ 29 ನೇ ತಾರಿಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.
ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು
ಮಾನ್ಯ 2ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ. ನ್ಯಾಯಾಲಯ ಕನಕಪುರ
ಅರ್ಜಿದಾರರ ಪರ ವಕೀಲರು
ಕೆ.ವಿ.ಮಹದೇವಯ್ಯ.,
ವಕೀಲರು, ಕನಕಪುರ
ಸ್ಥಳ: ಕನಕಪುರ

ಮಾನ್ಯ ಗೌರವಾನ್ವಿತ 2ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಕನಕಪುರ
ಸಿ.ಮಿಸ್. ನಂ.365/2024

ಅರ್ಜಿದಾರರು: 1. ಶ್ರೀಮತಿ. ಚಿಕ್ಕತಾಯಮ್ಮ ಕೋಂ ಲೇಟ್ ನಿಂಗೇಗೌಡ @ ನಿಂಗಯ್ಯ, ವಯಸ್ಸು 59 ವರ್ಷ, ವಾಸ: ಬೋರಮ್ಮನದೊಡ್ಡಿ ಗ್ರಾಮ, ಕಸಬಾ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ. ಮತ್ತು ಇತರರು.
ವಿರುದ್ಧ
ಪ್ರತಿ ಅರ್ಜಿದಾರರು: 1) ಜನನ ಮತ್ತು ಮರಣ ಪ್ರಮಾಣ ನೋಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ ತಾಲ್ಲೂಕು, ಕನಕಪುರ. 2) ಗ್ರಾಮ ಲೆಕ್ಕಾಧಿಕಾರಿಗಳು, ಕಸಬಾ ವೃತ್ತ, ಕಸಬಾ ಹೋಬಳಿ, ಕನಕಪುರ ತಾಲ್ಲೂಕು ರಾಮನಗರ ಜಿಲ್ಲೆ.
ಪ್ರಕಟಣೆ
ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ 4ನೇ ಅರ್ಜಿದಾರರ ತಂದೆ, 1ನೇ ಅರ್ಜಿದಾರರ ಮಾವ, 2 ಮತ್ತು 3ನೇ ಅರ್ಜಿದಾರರ ತಾತನವರಾದ ಲಿಂಗೇಗೌಡ ಬಿನ್ ಲೇಟ್ ಚನ್ನೇಗೌಡ ರವರು ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಕಸಬಾ ಹೋಬಳಿ, ಬೋರಮ್ಮನದೊಡ್ಡಿ ಗ್ರಾಮದಲ್ಲಿ ದಿನಾಂಕ: 19.03.1986ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ ದಿನಾಂಕ: 08.07.2024 ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.
2024ರ ಮೇ 29 ನೇ ತಾರಿಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.
ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು
ಮಾನ್ಯ 2ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ. ನ್ಯಾಯಾಲಯ ಕನಕಪುರ
ಅರ್ಜಿದಾರರ ಪರ ವಕೀಲರು
ಕೆ.ವಿ.ಮಹದೇವಯ್ಯ.,
ವಕೀಲರು, ಕನಕಪುರ
ಸ್ಥಳ: ಕನಕಪುರ

ಮದ್ಯ ಮಾರಾಟ ನಿಷೇಧ ಎತ್ತಿಹಿಡಿದ ಹೈ

ಆಹಾರ ಪದಾರ್ಥಗಳ ವಿತರಣೆ ಮತ್ತು ಸೇವನೆಗೆ ಅಡ್ಡಿ ಇರುವುದಿಲ್ಲ

ಬೆಂಗಳೂರು: ರಾಜ್ಯದಲ್ಲಿ ಪದವೀಧರರು ಮತ್ತು ಶಿಕ್ಷಕರ ಕ್ಷೇತ್ರಗಳ ಚುನಾವಣೆ ಹಿನ್ನೆಲೆಯಲ್ಲಿ ಚುನಾವಣೆ ದಿನ ಮತ್ತು ಫಲಿತಾಂಶ ದಿನಗಳಲ್ಲಿ ಮದ್ಯ ಮಾರಾಟಕ್ಕೆ ನಿಷೇಧ ಹೇರಿರುವ ಚುನಾವಣಾ ಆಯೋಗದ ಕ್ರಮವನ್ನು ಹೈಕೋರ್ಟ್ ಎತ್ತಿ ಹಿಡಿದಿದೆ. ಇದೇ ವೇಳೆ, ಬಾರ್ ಮತ್ತು ರೆಸ್ಟೋರೆಂಟ್‌ಗಳಲ್ಲಿ ಆಹಾರ ಪದಾರ್ಥಗಳ ವಿತರಣೆ ಮತ್ತು ಸೇವನೆಗೆ ಅಡ್ಡಿ ಇರುವುದಿಲ್ಲ ಎಂದು ಸ್ಪಷ್ಟಪಡಿಸಿ ಆದೇಶಿಸಿದೆ.

ವಿಧಾನ ಪರಿಷತ್ ಚುನಾವಣೆ ನಡೆಯುವ ಮತ್ತು ಫಲಿತಾಂಶ ಪ್ರಕಟವಾಗುವ ದಿನ ಮದ್ಯ ಮಾರಾಟಕ್ಕೆ ನಿರ್ಬಂಧ ವಿಧಿಸಿ ಚುನಾವಣಾ ಆಯೋಗ ಆದೇಶ ಹೊರಡಿಸಿದೆ. ಇದರ ವಿರುದ್ಧ ಮದ್ಯ ಮಾರಾಟ ಪರವಾನಗಿ ಹೊಂದಿರುವ ಕುಶಾಲ್ ರಾಜ್ ಎಂಬುವರು ಹೈಕೋರ್ಟ್‌ಗೆ ಸಲ್ಲಿಸಿದ್ದರು. ಈ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಹೇಮಂತ್ ಚಂದನಗೌಡರ್ ನೇತೃತ್ವದ ಪೀಠವು ಅರ್ಜಿ ವಜಾಗೊಳಿಸಿದೆ. ಬಾರ್ ಮತ್ತು ರೆಸ್ಟೋರೆಂಟ್‌ಗಳಲ್ಲಿ ಆಹಾರ ಪದಾರ್ಥಗಳ ವಿತರಣೆಗೆ ಅಡ್ಡಿಪಡಿಸದಂತೆ ಜಿಲ್ಲಾಧಿಕಾರಿಗಳು ಮತ್ತು ಪೊಲೀಸ್ ಆಯುಕ್ತರಿಗೆ ನಿರ್ದೇಶನ ನೀಡಿದೆ.

48 ಗಂಟೆ ಮದ್ಯ ಮಾರಾಟಕ್ಕೆ ನಿರ್ಬಂಧ ವಿಧಿಸಿದ ಚು.ಆಯೋಗ

ಮೂರು ಪದವೀಧರ ಕ್ಷೇತ್ರಗಳು ಮತ್ತು ಮೂರು ಶಿಕ್ಷಕರ ಕ್ಷೇತ್ರಗಳಿಂದ ವಿಧಾನ ಪರಿಷತ್ತಿಗೆ ಜೂನ್ 3ರಂದು ಚುನಾವಣೆಗಳು ನಡೆಯಲಿದೆ. ಜೂ. 6ರಂದು ಫಲಿತಾಂಶ ಪ್ರಕಟವಾಗಲಿದೆ. ಈ ಹಿನ್ನೆಲೆಯಲ್ಲಿ ಚುನಾವಣೆ ನಡೆಯುವ ಬೆಂಗಳೂರು ಪದವೀಧರ ಕ್ಷೇತ್ರದ ಬಿಬಿಎಂಪಿ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆ ಮತ್ತು ಕರ್ನಾಟಕ ಆಗ್ನೇಯ ಶಿಕ್ಷಕರ ಕ್ಷೇತ್ರದ ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಗಳನ್ನು ಒಳಗೊಂಡಂತೆ ಚುನಾವಣೆ ನಡೆಯುವ ಮತ್ತು ಫಲಿತಾಂಶ ಪ್ರಕಟವಾಗುವ ದಿನಗಳ 48 ಗಂಟೆ ಕಾಲ ಮದ್ಯ ಮಾರಾಟ ಮಾಡುವುದಕ್ಕೆ ನಿರ್ಬಂಧ ವಿಧಿಸಿ ಚುನಾವಣಾ ಆಯೋಗ ಆದೇಶ ಹೊರಡಿಸಿದೆ.

ದಲಿತ ಮಹಿಳೆಯ ಮನೆ ಧ್ವಂಸ: ದೂರು ದಾಖಲು

ಬೆಂಗಳೂರು: ದಲಿತ ಮಹಿಳೆಯೊಬ್ಬರ ಮನೆಯನ್ನುನೆರೆಮನೆಯವರು ಧ್ವಂಸ ಮಾಡಿರುವ ಘಟನೆ ಬೆಂಗಳೂರಿನ ಚಿಕ್ಕಜಾಲದ ಪಾಳೇಕಮ್ಮ ನಗರದಲ್ಲಿ ನಡೆದಿದೆ.



ಮನೆ ಕಳೆದುಕೊಂಡ ದಲಿತ ಮಹಿಳೆ ಗಂಡನನ್ನ ಕಳೆದುಕೊಂಡು ನಿರ್ಗತಿಕರಾಗಿದ್ದರು. ಆ ಮಹಿಳೆಗೆ ಆಸರೆ ಆಗಲೆಂದು ಆಕೆಯ ತಾಯಿ ಒಂದೂ ಪುಟ್ಟ ಮನೆಯನ್ನುಗ್ರಾಮದಲ್ಲಿ ಕಟ್ಟಿಕೊಟ್ಟಿದ್ದರು. ಆದರೆ ಪಕ್ಕದ ಮನೆಯಲ್ಲಿ ವಾಸವಾಗಿದ್ದ ಮಣಿ, ಮಂಜು, ಪವಿತ್ರ, ಪಾಪಮ್ಮ, ರಾಜೇಶ್ವರಿ ಎನ್ನುವವರು ಏಕಾಏಕಿ ಈ ಜಾಗ ನಮಗೆ ಸೇರಿದ್ದು ಎಂದು ದರ್ಪದಿಂದ ಮನೆಯನ್ನು ಹೊಡೆದು ಹಾಕಿದ್ದಾರೆ ಎಂಬ ಆರೋಪವಿದೆ. ಇದಲ್ಲದೆ ಗಲಾಟೆ ವೇಳೆ ಮನೆಯಲ್ಲಿ ಇದ್ದ ಇಬ್ಬರು ಹೆಣ್ಣು ಮಕ್ಕಳ ಜತೆ ಗಂಡಸರು ಅಸಭ್ಯವಾಗಿ ವರ್ತಿಸಿ ಮನೆಯಿಂದ ಹೊರ ದಬ್ಬಿದ್ದಾರೆ. ಈ ಕೃತ್ಯದ ಬಗ್ಗೆ ರಕ್ಷಿತಾ ಪೊಲೀಸರಿಗೆ ದೂರು ದಾಖಲಿಸಲು ಹೋದಾಗ ಪೊಲೀಸರು ಕೂಡ ದೂರು ದಾಖಲಿಸಿ ಕೊಳ್ಳದೆ ಅಸಡ್ಡೆ ತೋರಿದ್ದಾರೆ ಎನ್ನಲಾಗಿದೆ.

ಪಾಠಗಳಿಂದ ವಂಚಿತರಾದ ಮಕ್ಕಳು | ಮಕ್ಕಳಿಗೆ ಶಿಕ್ಷಣ ಸಿಗದೆ ಪರದಾಟ

ಬಿಬಿಎಂಪಿ ಶಾಲೆಗಳಲ್ಲಿ ಶಿಕ್ಷಕರ ಕೊರತೆ; ಪಾಠಕ್ಕೆ ತೊಂದರೆ

ಬೆಂಗಳೂರು: ಬಿಬಿಎಂಪಿ ಶಾಲೆಗಳಲ್ಲಿ ತರಗತಿ ಆರಂಭವಾಗಿದ್ದರೂ ಇನ್ನೂ ಶಿಕ್ಷಕರ ನೇಮಕಾತಿಯಾಗದ ಹಿನ್ನೆಲೆ ಶಾಲೆಗೆ ಬಂದರೂ ಮಕ್ಕಳಿಗೆ ಶಿಕ್ಷಕರ ಕೊರತೆಯಿಂದ ಪಾಠ ಪ್ರವಚನಗಳಿಗೆ ಅಡ್ಡಿಯುಂಟಾಗಿದೆ ಎನ್ನು ಆರೋಪಗಳು ಕೇಳಿ ಬಂದಿದೆ.

ಬಿಬಿಎಂಪಿಯು ಸೆಕ್ಯುರಿಟಿ ಏಜೆನ್ಸಿ ಮೂಲಕ ಶಿಕ್ಷಕರ ನೇಮಕಕ್ಕೆ ಮುಂದಾಗಿದ್ದು, ಇವೆಲ್ಲದರ ಮಧ್ಯೆ ಪಾಠ ಕೇಳಲು ಬಂದರೂ ಪಾಠ ಮಾಡಲು ಶಿಕ್ಷಕರ ಕೊರತೆಯಿಂದಾಗಿ ಪಾಠ ಪ್ರವಚನಕ್ಕೆ ಸಮಸ್ಯೆಯಾಗಿದೆ. ರಾಜ್ಯ ಸರಕಾರದ ಎಡವಟ್ಟಿನಿಂದಾಗಿ ಪಾಲಿಕೆಗೆ ಶಿಕ್ಷಕರ ಕೊರತೆಯುಂಟಾಗಿದ್ದು, ಮಕ್ಕಳಿಗೆ ಶಿಕ್ಷಣ ಸಿಗದೆ ಪರದಾಡುವ ಸ್ಥಿತಿ ನಿರ್ಮಾಣವಾಗಿದೆ. ಪಾಲಿಕೆಯು ಕಳೆದ ಮೂರು ದಿನಗಳ ಹಿಂದೆ ಶಾಲಾ ಶಿಕ್ಷಕರ ನೇಮಕಕ್ಕೆ ಸೆಕ್ಯುರಿಟಿ ಏಜೆನ್ಸಿಗೆ ಜವಾಬ್ದಾರಿ ನೀಡಿದ್ದು, ಇದಾದ ಬಳಿಕ ಟೆಂಡರ್ ರದ್ದು ಮಾಡಿದರೂ ಕೂಡಾ ಇನ್ನೂ ಶಿಕ್ಷಕರ ನೇಮಕವಾಗಿಲ್ಲ.ಇತ್ತ ತರಗತಿಗಳು ಆರಂಭವಾದರೂ ಕೂಡಾ ಶಿಕ್ಷಕರಿಲ್ಲದೆ ಮಕ್ಕಳ ಅಭ್ಯಾಸ ಮೇಲೆ ಪರಿಣಾಮವುಂಟಾಗಿದೆ ಎಂದು ಆರೋಪಿಸಲಾಗುತ್ತಿದೆ.

ಪಾಲಿಕೆ ವ್ಯಾಪ್ತಿಯಲ್ಲಿ 20 ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳಿದ್ದು, ಈ ಮಕ್ಕಳಿಗೆ ಪಾಠ ಮಾಡುವುದಕ್ಕಾಗಿ ಪಾಲಿಕೆಯಲ್ಲಿ 150 ಖಾಯಂ ಶಿಕ್ಷಕರಿದ್ದಾರೆ ಉಳಿದಂತೆ 700ಕ್ಕೂ ಅಧಿಕ ಶಿಕ್ಷಕರು ಗುತ್ತಿಗೆ ಆಧಾರದಲ್ಲಿ ಕಾರ್ಯ ನಿರ್ವಹಿಸುತ್ತಿದ್ದರು. ಆದರೆ ಗುತ್ತಿಗೆ ರದ್ದಾಗಿರುವುದರಿಂದ ಶಿಕ್ಷಕರ ಕೊರತೆಯುಂಟಾಗಿದ್ದು, ಶಿಕ್ಷಕರ ಕೊರತೆ ಕಂಡು ಬಂದಿದೆ. ಪಾಲಿಕೆಯು ಏಜೆನ್ಸಿಯ ಟೆಂಡರ್‌ನ್ನು ರದ್ದು ಮಾಡಿದ ಬಳಿಕ ಎಸ್‌ಡಿಎಂಸಿ

ಮೂಲಕ ಶಿಕ್ಷಕರನ್ನ ನೇಮಿಸಲು ಸರಕಾರ ಸಮಿತಿಯನ್ನು ರಚನೆ ಮಾಡಿದೆ. ಈ ಸಮಿತಿ ಎಲ್ಲವನ್ನು ಪರಿಶೀಲಿಸಿ ಜೂನ್ 10ರೊಳಗಾಗಿ ಗುತ್ತಿಗೆ ಆಧಾರದಲ್ಲಿ ಶಿಕ್ಷಕರನ್ನು ನೇಮಿಸಬೇಕಾಗಿದೆ. ಆದರೆ ಈಗಾಗಲೇ ತರಗತಿಗಳು ಆರಂಭವಾಗಿರುವುದರಿಂದ ಶಿಕ್ಷಕರ ನೇಮಕ ಆಗೋ ತನಕ ಮಕ್ಕಳು ಪಾಠ-ಪ್ರವಚನವಿಲ್ಲದೇ ಕಾಯೋ ಅನಿವಾರ್ಯತೆ ಎದುರಾಗಿದೆ.

ಎಚ್‌ಎಸ್‌ಆರ್‌ಪಿ ಪ್ಲೇಟ್ ಅಳವಡಿಕೆಗೆ ಜೂ.1 ಗಡುವು

ಬೆಂಗಳೂರು: ರಾಜ್ಯ ಸಾರಿಗೆ ಇಲಾಖೆಯು ಎರಡು ಮೂರು ಬಾರಿ ಗಡುವು ನೀಡಿದರೂ ಎಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್ ಅಳವಡಿಕೆ ಕಡಿಮೆ ಪ್ರಮಾಣ ದಲ್ಲಾಗಿದ್ದು, ಕೇವಲ 41 ಲಕ್ಷ ವಾಹನಗಳು ಮಾತ್ರ ನಂಬರ್ ಪ್ಲೇಟ್ ಅಳವಡಿ ಸಿಕೊಳ್ಳಲು ಮುಂದಾಗಿದ್ದಾರೆ ಎಂದು ತಿಳಿದುಬಂದಿದೆ.

2019ಕ್ಕೂ ಮೊದಲು ನೋಂದಣಿಯಾದ ವಾಹನಗಳಿಗೆ ಎಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್ ಅಳವಡಿಸಿಕೊಳ್ಳಲು ಜೂ.1ರವರೆಗೆ ಗಡುವು ನೀಡಲಾಗಿದ್ದು, ಎರಡು ಮೂರು ಬಾರಿ ಗಡುವನ್ನು ವಿಸ್ತರಿಸಿದರೂ ನಂಬರ್ ಪ್ಲೇಟ್ ಅಳವಡಿಕೆ ಪ್ರಮಾಣ ಕಡಿಮೆಯಾಗಿದೆ. 2 ಕೋಟಿ ವಾಹನಗಳಲ್ಲಿ 41 ಲಕ್ಷ ವಾಹನಗಳು ಮಾತ್ರ ಎಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್ ಅಳವಡಿಸಿಕೊಳ್ಳಲು ಮುಂದಾಗಿದ್ದು, ಈ ಬಳಿಕ ಹೈ ಕೋರ್ಟ್ ಜೂನ್.12 ರ ವರೆಗೆ ಎಚ್‌ಎಸ್‌ಆರ್‌ಪಿ ಅಳವಡಿಸದ ವಾಹನ ಮಾಲೀಕರ ವಿರುದ್ಧ ಕ್ರಮ ಕೈಗೊಳ್ಳುವಂತಿಲ್ಲ, 12 ರವರೆಗೆ ಅವಕಾಶ ನೀಡಬೇಕು ಎಂದು ಸೂಚನೆ ನೀಡಿದ್ದು, ಗಡುವು ಮುಗಿದ ನಂತರವೂ ಅಳವಡಿಸಿಕೊಂಡಿಲ್ಲ ಎಂದರೆ ಮೊದಲ ಬಾರಿ 500 ರು. 2ನೇ ಬಾರಿ 1 ಸಾವಿರ 3ನೇ ಬಾರಿ ಗಾಡಿ ಸೀಜ್ ಮಾಡ್ತಿವಿ ಎಂದು ಸಾರಿಗೆ ಇಲಾಖೆ ಅಡಿಷನಲ್ ಕಮೀಷನರ್ ಮಲ್ಲಿಕಾರ್ಜುನ್ ಎಚ್ಚರಿಕೆ ನೀಡಿದ್ದಾರೆ.

ಸಮಾಚಾರ ಸಣ್ಣದಲ್ಲ

ಕಿರಣ್ ಅಧಿಕಾರ ಸ್ವೀಕಾರ

ಬೆಂಗಳೂರು: ಕುದುರೆಮುಖ ಕಬ್ಬಿಣ ಅದಿರು ಗಣಿಗಾರಿಕೆ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾಗಿ ಜೆ.ವಿ.ಕಿರಣ್ ಅಧಿಕಾರ ಸ್ವೀಕರಿಸಿದ್ದಾರೆ. ಕಿರಣ್ ಅವರು

ಮೆಕ್ಯಾನಿಕಲ್ ವಿಭಾಗದಲ್ಲಿ ಬಿ.ಟೆಕ್ ಪೂರ್ಣಗೊಳಿ ಸಿದ್ದು, ಸ್ಟೀಲ್ ಹಾಗೂ ಅದಿರು ಕ್ಷೇತ್ರದಲ್ಲಿ ವಿವಿಧ ಸಂಸ್ಥೆಗಳಲ್ಲಿ ಗಣನೀಯ ಸಾಧನೆ ಮಾಡಿದ್ದಾರೆ. ಒಡಿಸ್ಸಾ ಮೂಲದ ಬಿಆರ್‌ಪಿಎಲ್‌ನಲ್ಲಿ ಕಾರ್ಯ ನಿರ್ವಾಹಕ ಉಪಾಧ್ಯಕ್ಷರಾಗಿ ಪ್ರಮುಖ ಪಾತ್ರವಹಿ ಸಿದ್ದರು. 2019ರಲ್ಲಿ ಕುದುರೆಮುಖ ಕಬ್ಬಿಣದ ಅದಿರು ಸಂಸ್ಥೆಗೆ ಜನರಲ್ ಮ್ಯಾನೇಜರ್ ಆಗಿ ಸೇರ್ಪಡೆಯಾದ ಕಿರಣ್ ಅವರು, ಬಳಿಕ ನಿರ್ದೇಶಕರಾಗಿ ಕಾರ್ಯನಿರ್ವ ಹಿಸಿದ್ದರು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಡ್ರಗ್ಸ್ ಮಾರಾಟ ಇಬ್ಬರ ಸೆರೆ

ಬೆಂಗಳೂರು: ಮಾದಕವಸ್ತು ಮಾರಾಟ ಮಾಡುತ್ತಿದ್ದ ಇಬ್ಬರು ಡ್ರಗ್ ಪೆಡ್ಲರ್‌ಗಳನ್ನು ಜಗಜೀವನರಾಮನಗರ ಪೊಲೀಸರು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಪಾದರಾಯನಪುರ ಅರಾಫತ್ ನಗರದ ಮೊಹಮ್ಮದ್ ಅದಿಲ್ (25) ಮುದಾಸೀರ್ ಪಾಷ ಅಲಿಯಾಸ್ ಪೇಂದ(21)ಬಂಧಿತ ಆರೋಪಿಗಳು. ಬಂಧಿತರಿಂದ 21.30 ಗ್ರಾಂ ಎಂಡಿಎಂಎ, 4 ಖಾಲಿ ಪ್ಲಾಸ್ಟಿಕ್ ಕವರ್ ಗಳು, ಎಲೆಕ್ಟ್ರಾನಿಕ್ ತೂಕದ ಯಂತ್ರ, 3 ಸಾವಿರ ನಗದನ್ನು ವಶಕ್ಕೆ ಪಡೆದು ತನಿಖೆಯನ್ನು ಕೈಗೊಳ್ಳ ಲಾಗಿದೆ. ಜಗಜೀವನರಾಮನಗರದ ವಿ.ಎಸ್. ಗಾರ್ಡನ್‌ನ ನಾಗರಕಲ್ಲು ದೇವಸ್ಥಾನದ ಬಳಿ ಗಿರಾಕಿಗಳಿಗೆ ಮಾದಕ ವಸ್ತು ಎಂಡಿಎಂಎ ಮಾರಾಟ ಮಾಡುತ್ತಿದ್ದಾಗ ಕಾರ್ಯಾಚರಣೆ ಕೈಗೊಂಡು ಆರೋಪಿಗಳನ್ನು ಬಂಧಿಸಲಾಗಿದೆ.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: 2023-2024ನೇ ಸಾಲಿನ ಎಸ್‌ಎಸ್ ಎಲ್‌ಸಿ ಮತ್ತು ಪಿಯುಸಿಯಲ್ಲಿ ಶೇ. 85 ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದ ಬೆಂಗಳೂರು ನಗರ ಮತ್ತು ಗ್ರಾಮಾಂತರ ವ್ಯಾಪ್ತಿಯಲ್ಲಿರುವ ಕುಂಬಾರ ಜನಾಂಗದ ಪ್ರತಿಭಾನ್ವಿತ ವಿದ್ಯಾರ್ಥಿ ಗಳಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ವಿದ್ಯಾರ್ಥಿಗಳು ಜೂ. 5ರ ಒಳಗೆ ಅರ್ಜಿಯೊಂದಿಗೆ ದೃಢೀಕರಿಸಲ್ಪಟ್ಟ ಅಂಕಪಟ್ಟಿ, ಜಾತಿ ಪ್ರಮಾಣ ಪತ್ರ ಮತ್ತು 2 ಭಾವಚಿತ್ರಗಳನ್ನು ಕಚೇರಿಗೆ ತಲುಪಿಸತಕ್ಕದ್ದು. ಜೂ. 26 ರಂದು ಬೆಳಿಗ್ಗೆ 10.30ಕ್ಕೆ ಕುಂಬಾರ ಸಂಘದ ವತಿಯಿಂದ ಬಿ.ವಿ. ರಾಮಚಂದ್ರಪ್ಪ ಸಭಾಂಗಣದಲ್ಲಿ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಏರ್ಪಡಿಸಲಾಗಿದೆ. ಮಧ್ಯಾಹ್ನ 1.30ರಿಂದ ವಧು-ವರರ ಮುಖಾ ಮುಖಿ ಕಾರ್ಯಕ್ರಮವನ್ನು ಆಯೋಜಿಸ ಲಾಗಿದ್ದು, ಆಸಕ್ತರು ಈ ಅವಕಾಶವನ್ನು ಸದುಪ ಯೋಗ ಪಡಿಸಿಕೊಳ್ಳಬೇಕೆಂದು ಕೋರಲಾಗಿದೆ. ನೋಂದಾಯಿಸಿಕೊಳ್ಳುವ ವಧು-ವರರು ಪೋಸ್ಟ್ ಕಾರ್ಡ್ ಅಳತೆಯ ಭಾವಚಿತ್ರದೊಂದಿಗೆ ಆಗಮಿಸಬೇಕು ಎಂದು ಪ್ರಕಟಣೆ ತಿಳಿಸಿದೆ. ಹೆಚ್ಚಿನ ಮಾಹಿತಿಗೆ 6362619668, 080-26705264.

ಡಿಕೆಶಿ ಹೇಳಿಕೆ ತಳ್ಳಿಹಾಕಿರುವ ಕೇರಳದ ರಾಜರಾಜೇಶ್ವರಿ ದೇವಾಲಯ ಆಡಳಿತ ಮಂಡಳಿ

ಯಾಗ; ಡಿಕೆ ಹೇಳಿಕೆಗೆ ಭಾರಿ ವಿರೋಧ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಮುಖ್ಯಮಂತ್ರಿ ಸಿದ್ದರಾಮಯ್ಯ ಡಿಸಿಎಂ ಡಿ.ಕೆ. ಶಿವಕುಮಾರ್ ವಿರುದ್ಧ ಶತ್ರು ಭೈರವಿಯಾಗ ನಡೆದಿದೆ ಎನ್ನುವ ಡಿಕೆಶಿ ಹೇಳಿಕೆಗೆ ತೀವ್ರ ವಿವಾದಕ್ಕೆ ಕಾರಣವಾಗಿದ್ದು, ಕೇರಳ ಸರಕಾರ ಹಾಗೂ ಕಣ್ಣೂರಿನ ರಾಜರಾಜೇಶ್ವರಿ ದೇವಾಲಯದ ಆಡಳಿಯ ಮಂಡಳಿ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದೆ. ವಿವಾದವಾಗುತ್ತಿದ್ದಂತೆ ಪ್ರತಿಕ್ರಿಯಿಸಿರುವ ಡಿ.ಕೆ.ಶಿವಕುಮಾರ್, 'ತಮ್ಮ ಹೇಳಿಕೆಯನ್ನು ತಪ್ಪಾಗಿ ಅರ್ಥೈಸಲಾಗಿದೆ' ಎಂದು ಸ್ಪಷ್ಟಪಡಿಸಿದ್ದಾರೆ.

ಕೇರಳದ ದೇವಸ್ಥಾನದಲ್ಲಿ ಪ್ರಾಣಿ ಬಲಿ ಒಳಗೊಂಡ ಶತ್ರು ಭೈರವಿ ಯಾಗ ನಡೆಸಲಾಗಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೀಡಿದ್ದ ಹೇಳಿಕೆಯನ್ನು ಕಣ್ಣೂರಿನ ತಳಿಪರಂಬದಲ್ಲಿರುವ ಶಿವ ದೇವಾಲಯವಾದ ಶ್ರೀ ರಾಜರಾಜೇಶ್ವರಿ ದೇವಸ್ಥಾನದ ಆಡಳಿತ ಮಂಡಳಿ ತಳ್ಳಿಹಾಕಿದೆ.

ಮಲಬಾರ್ ದೇವಸ್ಥಾನ ಮಂಡಳಿ ಸಹಾಯಕ ಕಮಿಷನರ್ ಗಿರೀಶ್ ಕುಮಾರ್ ಅವರು ಇದಕ್ಕೆ ಪ್ರತಿಕ್ರಿಯೆ ನೀಡಿದ್ದು, ಕೇರಳದ ಬಹುತೇಕ ದೇವಾಲಯಗಳಲ್ಲಿ ಶತ್ರು ಸಂಹಾರ ಪೂಜೆಯನ್ನು ನಡೆಸಲಾಗುತ್ತಿದ್ದು, ಯಾವುದೇ ಜೀವಿಯ ಬಲಿದಾನವಿಲ್ಲದ ಸರಳ ಪೂಜೆಯಾಗಿರುತ್ತದೆ. ಇಂತಹ ಆರೋಪಗಳು ಆಧಾರರಹಿತವಾಗಿವೆ. ಈ ಪ್ರದೇಶದಲ್ಲಿ ಯಾವುದೇ ದೇವಾಲಯಗಳು ಅಕ್ರಮ ಆಚರಣೆಗಳಲ್ಲಿ ತೊಡಗುವುದಿಲ್ಲ ಎಂದು ಹೇಳಿದ್ದಾರೆ.

ಇದಕ್ಕೆ ಪುಷ್ಟಿ ನೀಡುವಂತೆ ರಾಜರಾಜೇಶ್ವರಿ ದೇವಸ್ಥಾನ ಹಾಗೂ ಸಮೀಪದ ದೇವಸ್ಥಾನಗಳಲ್ಲಿ ನಡೆಯುವ ಧಾರ್ಮಿಕ ವಿಧಿ ವಿಧಾನಗಳ ಸಮಗ್ರ ವರದಿಯನ್ನು ಸಲ್ಲಿಸಲಾಗಿದೆ. ಈ ವರದಿಯು ಡಿ. ಕೆ.ಶಿವಕುಮಾರ್ ಅವರು ಮಾಡಿದ ಆರೋಪಗಳನ್ನು ನಿರಾಕರಿಸುವುದಕ್ಕೆ ಸಾಕ್ಷಿಯಾಗಿದೆ. ಈ ದೇವಾಲಯಗಳು ಕಾನೂನುಬದ್ಧ ಮತ್ತು ಸಾಂಪ್ರದಾಯಿಕ ಆಚರಣೆಗಳಿಗೆ ಬದ್ಧವಾಗಿರುವು ದನ್ನು ತೋರಿಸುತ್ತವೆ. ಕಣ್ಣೂರಿನ ತಿರುವರ್ಕಾಡು ಭಗವತಿ ದೇವಸ್ಥಾನ ಅಂದರೆ ಮಡಾಯಿ ಕಾವುನಲ್ಲಿ ಮಾತ್ರ ಜೀವಿ ಯ ಬಲಿ ನೀಡಲಾಗುತ್ತದೆ ಎನ್ನುವ ಮಾತನ್ನು ಸ್ಥಳೀಯರು ಹೇಳಿದ್ದಾರೆ.

ಇತ್ತೀಚೆಗೆ ರಾಜರಾಜೇಶ್ವರಿ ದೇವಸ್ಥಾನಕ್ಕೆ ಭೇಟಿ ನೀಡಿದ್ದೆ. ನಾನು ರಾಜರಾಜೇಶ್ವರಿ ದೇವರ ಭಕ್ತ. ಎಲ್ಲಿ ವಾಮಾಚಾರ ನಡೆಯುತ್ತಿದೆ ಎನ್ನುವ ಬಗ್ಗೆ ಮಾಹಿತಿ ನೀಡಲು ಆ ದೇವಾಲಯದ ಹೆಸರು ಬಳಸಿದೆ. ಅದರ ಆಸುಪಾಸಿನ ಖಾಸಗಿ ಜಾಗದಲ್ಲಿ ನಡೆದಿದೆ ಎಂದು ಸ್ಪಷ್ಟವಾಗಿ ಹೇಳಿದ್ದೇನೆ. ಯಾರು ಈ ಯಾಗದ ಹಿಂದೆ ಇದ್ದಾರೆ ಎಂದು ಈಗ ಬಹಿರಂಗ ಪಡಿಸಲು ನಾನು ಇಚ್ಛಿಸುವುದಿಲ್ಲ. ನನಗೆ ಬಂದ ಮಾಹಿತಿಯನ್ನು ನಿಮಗೆ ನೀಡಿದ್ದೇನೆ. ಈ ಪ್ರಕರಣದ ಬಗ್ಗೆ ತನಿಖೆ ಮಾಡುವುದಾಗಿ ಕೇರಳದ ಸಚಿವರು ತಿಳಿಸಿದ್ದು, ಅವರ ನಿರ್ಧಾರವನ್ನು ಸ್ವಾಗತಿಸುತ್ತೇನೆ.

-ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಶತ್ರು ಭೈರವಿಯಾಗದ ಬಗ್ಗೆ ಡಿಕೆಶಿ ನೀಡಿದ್ದ ಹೇಳಿಕೆಗೆ ಕೇರಳ ಸರಕಾರ ಛೀಮಾರಿ ಹಾಕಿದೆ. ದೇವೇಗೌಡರು ಇದನ್ನು ಮಾಡಿದ್ದಾರೆ ಅಂತಾ ಬಿಂಬಿಸಲು ಡಿ.ಕೆ. ಶಿವಕುಮಾರ್ ಈ ರೀತಿ ಹೇಳಿದ್ದಾರೆ. ಕೇರಳದ ಛೀಮಾರಿಗೆ ಕಾಂಗ್ರೆಸ್ ನವರು ಒಬ್ಬರೂ ಪ್ರತಿಕ್ರಿಯೆ ಕೊಟ್ಟಿಲ್ಲ. ಇಷ್ಟು ವೈಫಲ್ಯವಿದೆಯೇ? ಈ ಸಂಬಂಧ ಸಿಎಂ ಕೇರಳ ಸರಕಾರಕ್ಕೆ ಪತ್ರ ಬರೆಯಲಿ

- ಆರ್. ಅಶೋಕ್, ಪ್ರತಿಪಕ್ಷ ನಾಯಕ

ಯಾರ ಭಾವನೆಗಳಿಗೂ ಧಕ್ಕೆಯಾಗುವಂತೆ ನಡೆದುಕೊಂಡಿಲ್ಲ

ಸಿಎಂ ಹಾಗೂ ತಮ್ಮ ವಿರುದ್ಧ ಕೇರಳದ ದೇವಸ್ಥಾನದ ಸಮೀಪದ ಖಾಸಗಿ ಜಾಗದಲ್ಲಿ ಶತ್ರು ಭೈರವಿ ಯಾಗ ನಡೆಯುತ್ತಿರುವುದಾಗಿ ಹೇಳಿದ್ದೇನೆಯೇ ಹೊರತು ಕೇರಳದ ದೇವಸ್ಥಾನದಲ್ಲಿ ನಡೆಯುತ್ತಿರುವುದಾಗಿ ಹೇಳಿಲ್ಲ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಸ್ಪಷ್ಟನೆ ನೀಡಿದರು. ಕೇರಳದ ದೇವಾಲಯಗಳಲ್ಲಿ ವಾಮಾಚಾರ, ಪ್ರಾಣಿಬಲಿ ನಡೆಯುತ್ತಿಲ್ಲ ಎಂಬ ಕೇರಳ ಸಚಿವೆಯ ಹೇಳಿಕೆ ಬಗ್ಗೆ ಮಾಧ್ಯಮಗಳು ಕೇಳಿದಾಗ, ನಾನು ದೇವಾಲಯದಲ್ಲಿ ವಾಮಾಚಾರ ನಡೆಯುತ್ತಿದೆ ಎಂದು ಎಲ್ಲಿಯೂ ಹೇಳಿಲ್ಲ. ನನ್ನ ಹೇಳಿಕೆಯನ್ನು ತಪ್ಪಾಗಿ ಅರ್ಥೈಸಿಕೊಳ್ಳಲಾಗಿದೆ. ಕೇರಳ ದೇವರ ನಾಡು. ಅಲ್ಲಿನ ದೇವಾಲಯಗಳ ಬಗ್ಗೆ ನನಗೆ ಅಪಾರ ಗೌರವಿದೆ. ನಾನು ಯಾರ ಭಾವನೆಗಳಿಗೂ ಧಕ್ಕೆಯಾಗುವಂತೆ ನಡೆದುಕೊಂಡಿಲ್ಲ ಎಂದರು.

7 ರೈತರಿಗೆ ಸಂರಕ್ಷಣಾ ರೈತ ಪ್ರಶಸ್ತಿ ಪ್ರದಾನ | ಸಹಸ್ರಾರು ಸಂಖ್ಯೆಯಲ್ಲಿ ರೈತರು, ಗ್ರಾಹಕರು, ವ್ಯಾಪಾರಿಗಳು ಭಾಗಿ

ತ್ರಿಫಲ ವೈವಿಧ್ಯತಾ ಮೇಳಕ್ಕೆ ಚಾಲನೆ

ತ್ರಿಫಲ ವೈವಿಧ್ಯತಾ ಮೇಳವನ್ನು ಐಸಿಎಆರ್‌ನ ಉಪ ಪ್ರಧಾನ ನಿರ್ದೇಶಕ ಡಾ. ಸಂಜಯ್ ಕುಮಾರ್ ಸಿಂಗ್ ಉದ್ಘಾಟಿಸಿದರು.

ಬೆಂಗಳೂರು: ಅಧಿಕ ನಾರಿನಾಂಶವುಳ್ಳ ಮಾವು ಹಾಗೂ ಹಲಸು ಸೇರಿದಂತೆ ತರಹೇವಾರಿ ಹಣ್ಣುಗಳ ತ್ರಿಫಲ ವೈವಿಧ್ಯತಾ ಮೇಳ 2024 ಹಲಸು, ಬಾಳೆ ಮತ್ತು ಮಾವು ಪ್ರದರ್ಶನವನ್ನು ಶುಕ್ರವಾರ ಐಸಿಎಆರ್‌ನ ಉಪ ಪ್ರಧಾನ ನಿರ್ದೇಶಕ ಡಾ. ಸಂಜಯ್ ಕುಮಾರ್ ಸಿಂಗ್ ಉದ್ಘಾಟಿಸುವ ಮೂಲಕ ಚಾಲನೆ ನೀಡಲಾಯಿತು.

ನಗರದಲ್ಲಿ ನಡೆಯುವ ಬೃಹತ್ ಮಾವು ಮೇಳದಲ್ಲೊಂದಾಗಿರುವ ತ್ರಿಫಲ ವೈವಿಧ್ಯತಾ ಮೇಳವನ್ನು ತಮಿಳುನಾಡಿನ ತಿರುಚ್ಚಿಯ ರಾಷ್ಟ್ರೀಯ ಬಾಳೆಹಣ್ಣು ಸಂಶೋಧನಾ ಕೇಂದ್ರದ ಸಹಕಾರದಲ್ಲಿ ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ ಹಮ್ಮಿಕೊಂಡಿದ್ದು, ಜೂನ್ 2ರವರೆಗೂ ಈ ಮೇಳ ನಡೆಯಲಿದೆ.

ಕಾರ್ಯಕ್ರಮದಲ್ಲಿ ಮಾವು, ಹಲಸು ಮತ್ತು ಬಾಳೆ ಜೀನೋಟೈಪ್‌ಗಳನ್ನು ಸಂರಕ್ಷಿಸುವಲ್ಲಿ ಶ್ರಮಿಸಿದ 7 ರೈತರಿಗೆ 'ಸಂರಕ್ಷಣಾ ರೈತ ಪ್ರಶಸ್ತಿ'ಯನ್ನು ನೀಡಲಾಯಿತು. ಎರಡು ತಿಳುವಳಿಕೆ ಒಪ್ಪಂದಗಳನ್ನು ಸಹ ವಿನಿಮಯ ಮಾಡಿಕೊಳ್ಳಲಾಯಿತು ಎಂದು ಐಐಎಚ್ ಆರ್ ಮಾಹಿತಿ ನೀಡಿದೆ. ಮೇಳದಲ್ಲಿ ಸಹಸ್ರಾರು ಸಂಖ್ಯೆಯಲ್ಲಿ ರೈತರು, ಗ್ರಾಹಕರು, ವ್ಯಾಪಾರಿಗಳು, ಪಾಲುದಾರರು ಭಾಗವಹಿಸಿದ್ದರು.

ನಾರಿನಾಂಶ, ಪೌಷ್ಠಿಕಾಂಶದ ಹಣ್ಣುಗಳ ಪ್ರದರ್ಶನ ಮೂರು ದಿನಗಳ ಈ ಮೇಳದಲ್ಲಿ ನಾರಿನಾಂಶವುಳ್ಳ ಅತ್ಯುತ್ತಮ ರುಚಿಯ ಮಾವುಗಳು ಸೇರಿದಂತೆ ಅನೇಕ ಹಣ್ಣುಗಳು ಪ್ರದರ್ಶನಕ್ಕೆ ಇಡಲಾಗಿದ್ದು, ಈ ಮಾವನ್ನು ಮಧುಮೇಹ ಇರುವವರು ತಿನ್ನಬಹುದು. ಕಾರ್ಯಕ್ರಮವು ಸುಮಾರು 300 ಮಾವು, 100 ಹಣ್ಣುಗಳು ಮತ್ತು 100 ಬಾಳೆಹಣ್ಣುಗಳ ವೈವಿಧ್ಯತೆ ಪ್ರದರ್ಶನವಿದೆ.

ಸಿಇಟಿ ಪರೀಕ್ಷೆಯ ಫಲಿತಾಂಶ ಪ್ರಕಟ

ಬೆಂಗಳೂರು: ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಎಂಜಿನಿಯರಿಂಗ್ ಸೇರಿದಂತೆ ಹಲವು ವೃತ್ತಿಪರ ಕೋರ್ಸುಗಳಿಗಾಗಿ ಏ.18 ಮತ್ತು 19ರಂದು ನಡೆಸಲಾಗಿದ್ದ ಸಿಇಟಿ ಪರೀಕ್ಷೆಯ ಫಲಿತಾಂಶವನ್ನು ಪ್ರಕಟಿಸಿದ್ದು, 2,15,595 ಅಭ್ಯರ್ಥಿಗಳು ಎಂಜಿನಿಯರಿಂಗ್, 2,15,965 ಅಭ್ಯರ್ಥಿಗಳು ಬಿ.ಎಸ್ಸಿ (ಕೃಷಿ) ಹಾಗೂ 2,19,887 ವಿದ್ಯಾರ್ಥಿಗಳು ವೆಟರ್ನರಿ ಕೋರ್ಸುಗಳಿಗೆ ಪ್ರವೇಶ ಪಡೆಯಲು ಅರ್ಹ ರಾಗಿದ್ದಾರೆ ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ತಿಳಿಸಿದರು.

ಪ್ರಾಧಿಕಾರವು ಒಂದೂವರೆ ತಿಂಗಳ ಹಿಂದೆ ಎಂಜಿನಿಯರಿಂಗ್ ಜತೆಗೆ ವೆಟರ್ನರಿ, ಕೃಷಿ ವಿಜ್ಞಾನ, ಫಾರ್ಮಸಿ, ನ್ಯಾಚುರೋಪತಿ ಅಂಡ್ ಯೋಗ ಮತ್ತು ಬಿ.ಎಸ್ಸಿ (ನರ್ಸಿಂಗ್) ಕೋರ್ಸುಗಳಿಗೆ ರಾಜ್ಯದ 737 ಕ್ಷೇತ್ರಗಳಲ್ಲಿ ಸಿಇಟಿ ನಡೆಸಿದ್ದು, ಒಟ್ಟು 3,49,653 ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದರು. ಅಂತಿಮವಾಗಿ 3,10,314 ಅಭ್ಯರ್ಥಿಗಳು ಈ ಪರೀಕ್ಷೆ ಬರೆದಿದ್ದರು. ಸಿಇಟಿ ಪರೀಕ್ಷೆಯಲ್ಲಿ ಎಲ್ಲ ನಾಲ್ಕು ವಿಷಯಗಳಲ್ಲೂ ಪಠ್ಯಕ್ಕೆ ಹೊರತಾದ 50 ಪ್ರಶ್ನೆಗಳನ್ನು ಕೇಳಲಾಗಿತ್ತು. ವಿಷಯ ತಜ್ಞರ ನಿರ್ದೇಶನದ ಮೇರೆಗೆ ಈ ಪ್ರಶ್ನೆಗಳನ್ನು ಮೌಲ್ಯಮಾಪನದ ಸಂದರ್ಭದಲ್ಲಿ ಪರಿಗಣಿಸದೆ ಕೈಬಿಡಲಾಗಿದೆ. ಜತೆಗೆ ಭೌತಶಾಸ್ತ್ರ ಮತ್ತು ಗಣಿತದಲ್ಲಿ ತಲಾ 1 ಕೃಪಾಂಕ ನೀಡಲಾಗಿದೆ. ಪರಿಷ್ಕೃತ ಕೀ ಉತ್ತರಗಳ ಆಧಾರದ ಮೇಲೆ ಮೆರಿಟ್ ಪಟ್ಟಿಯನ್ನು ಸಿದ್ಧಪಡಿಸಲಾಗಿದೆ. ಈ ವರ್ಷ ದ್ವಿತೀಯ ಪಿಯುಸಿಗೆ ಎರಡು ಪರೀಕ್ಷೆಗಳನ್ನು ಮಾಡಿದ್ದು, ಅವುಗಳಲ್ಲಿ ಅತಿ ಹೆಚ್ಚು ಅಂಕವನ್ನು ರಾಂಕ್ ಪಟ್ಟಿಗೆ ಪರಿಗಣಿಸಲಾಗಿದೆ. ಅಭ್ಯರ್ಥಿಗಳು ವಿಷಯ ವಾರು ಅಂಕಗಳ ವಿವರಗಳನ್ನು ಜಾಲತಾಣದಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು ಎಂದು ತಿಳಿಸಿದ್ದಾರೆ.

ಈಗ ದೊರೆತಿರುವ ಫಲಿತಾಂಶದ ಪ್ರಕಾರ 2,15,595 ಅಭ್ಯರ್ಥಿಗಳು ಎಂಜಿನಿಯರಿಂಗ್, 2,15,965 ಅಭ್ಯರ್ಥಿಗಳು ಬಿ.ಎಸ್ಸಿ (ಕೃಷಿ), 2,19,887 ವಿದ್ಯಾರ್ಥಿಗಳು ವೆಟರ್ನರಿ ಕೋರ್ಸುಗಳಿಗೆ ಪ್ರವೇಶ ಪಡೆಯಲು ಅರ್ಹರಾಗಿದ್ದಾರೆ. ಆದರೆ, ಅಭ್ಯರ್ಥಿಗಳ ಮೂಲ ಪ್ರಮಾಣಪತ್ರಗಳ ಪರಿಶೀಲನೆ ಮುಗಿಯುವವರೆಗೂ ಈ ಅರ್ಹತೆ ತಾತ್ಕಾಲಿಕ ಸ್ವರೂಪದ್ದಾಗಿರುತ್ತದೆ. ಯುಜಿ ನೀಟ್ ಪರೀಕ್ಷೆಯ ಫಲಿತಾಂಶ ಮತ್ತು ಎಂಸಿಸಿ ಕೌನ್ಸೆಲಿಂಗ್ ವೇಳಾಪಟ್ಟಿಯನ್ನು ಗಣನೆಗೆ ತೆಗೆದುಕೊಂಡು, ಬಳಿಕ ವೃತ್ತಿಪರ ಕೋರ್ಸುಗಳ ಪ್ರವೇಶಕ್ಕೆ ಜಂಟಿ ಕೌನ್ಸೆಲಿಂಗ್ ನಡೆಸಲಿರುವ ದಿನಾಂಕಗಳನ್ನು ಪ್ರಕಟಿಸಲಾಗುವುದು ಎಂದು ಮಾಹಿತಿ ನೀಡಿದರು. ಆರ್ಕಿಟೆಕ್ಚರ್ ಕೋರ್ಸಿಗೆ ಪ್ರವೇಶ ಬಯಸಿರುವ ಅಭ್ಯರ್ಥಿಗಳಿಗೆ 'ನಾಟಾ' (ಎನ್ಎಟಿಎ) ಪರೀಕ್ಷೆಯಲ್ಲಿ ಅವರು ಗಳಿಸಲಿರುವ ಅಂಕಗಳನ್ನು ಪರಿಗಣಿಸಿ ರಾಂಕಿಂಗ್ ಘೋಷಿಸಲಾಗುವುದು. ಬಿಪಿಟಿ, ಬಿಪಿಒ, ಬಿ.ಎಸ್ಸಿ (ಅಲೈಡ್ ಹೆಲ್ತ್ ಸೈನ್ಸಸ್) ಕೋರ್ಸುಗಳಿಗೆ ಸಂಬಂಧಿಸಿದ ಫಲಿತಾಂಶಕ್ಕೂ ಇದೇ ಸೂತ್ರವನ್ನು ಅನುಸರಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಆತಂಕಕ್ಕೆ ಒಳಗಾಗಬೇಡಿ

ಕೆಲವು ಅಭ್ಯರ್ಥಿಗಳು ತಮ್ಮ ಸಿಇಟಿ ಅರ್ಜಿಯಲ್ಲಿ ಜನ್ಮ ದಿನಾಂಕ/ದ್ವಿತೀಯ ಪಿಯುಸಿ ಅಂಕಗಳನ್ನು ನಮೂದಿಸಿಲ್ಲ. ಇಂಥವರ ಫಲಿತಾಂಶವನ್ನು ಸದ್ಯಕ್ಕೆ ತಡೆ ಹಿಡಿಯಲಾಗಿದೆ. ಇಂತಹ ಅಭ್ಯರ್ಥಿಗಳು ಪ್ರಾಧಿಕಾರದ ಪೋರ್ಟಲ್ ನಲ್ಲಿ ಅಗತ್ಯ ವಿವರಗಳನ್ನು ತುಂಬಿದ ತಕ್ಷಣ ಫಲಿತಾಂಶವನ್ನು ಪ್ರಕಟಿಸಲಾಗುವುದು. ಆದ್ದರಿಂದ ಈ ಅಭ್ಯರ್ಥಿಗಳು ಆತಂಕಕ್ಕೆ ಒಳಗಾಗಬೇಕಾಗಿಲ್ಲ ಎಂದು ಪ್ರಾಧಿಕಾರ ತಿಳಿಸಿದೆ.

ಜಾಲತಾಣದಲ್ಲಿ ಉತ್ತರಗಳು ಪ್ರಕಟ

ಅಭ್ಯರ್ಥಿಗಳು ಓಎಂಆರ್ ಉತ್ತರ ಪತ್ರಿಕೆಯಲ್ಲಿ ನಮೂದಿಸಿರುವ ಉತ್ತರಗಳನ್ನು ಮತ್ತು ಸರಿಯಾದ ಉತ್ತರಗಳನ್ನು ಕೂಡ ಪ್ರಾಧಿಕಾರದ ಜಾಲತಾಣದಲ್ಲಿ ಪ್ರಕಟಿಸಲಾಗುವುದು. ವಿದ್ಯಾರ್ಥಿಗಳು ಇವುಗಳನ್ನು ತಮಗೆ ಪರೀಕ್ಷಾ ದಿನದಂದೇ ನೀಡಿರುವ ಓಎಂಆರ್ ಉತ್ತರ ಪತ್ರಿಕೆಗಳ ಜತೆ ತಾಳೆ ಮಾಡಿ ನೋಡಿಕೊಳ್ಳಬಹುದು. ವಿವಿಧ ಮೀಸಲಾತಿ ಪ್ರವರ್ಗಗಳ ಅಡಿ ಬರುವ ಅರ್ಹ ಅಭ್ಯರ್ಥಿಗಳ ವಿವರಗಳನ್ನು ಮತ್ತು ಜಿಲ್ಲಾವಾರು ಅಭ್ಯರ್ಥಿಗಳ ವಿವರಗಳನ್ನು ಕೂಡ ಈಗಾಗಲೇ ಪ್ರಕಟಿಸಲಾಗಿದೆ ಎಂದು ಪ್ರಾಧಿಕಾರ ತಿಳಿಸಿದೆ.

ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಲದ ಸಭಾಂಗಣದಲ್ಲಿ ಸಚಿವ ಎಚ್. ಕೆ. ಪಾಟೀಲ್ ರವರ ನೇತೃತ್ವದಲ್ಲಿ ಕರೆದಿದ್ದ ರಾಜ್ಯದ ಪ್ರಮುಖ ಬ್ಯಾಂಕುಗಳ ಅಧ್ಯಕ್ಷರು ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಸಭೆ ನಡೆಯಿತು. ಈ ವೇಳೆ ತ್ಯಾಗರಾಜ ಕೋ ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಡಾ. ಎಂ. ಆರ್. ವೆಂಕಟೇಶ್, ಮಹಾಮಂಡಲ ನಿರ್ದೇಶಕ ರುದ್ರೇಗೌಡರು ಮತ್ತು ವೆಂಕಟರಾಮರೆಡ್ಡಿ ಸೇರಿದಂತೆ ವಿವಿಧ ಸಹಕಾರ ಬ್ಯಾಂಕ್‌ನ ಪ್ರಮುಖರು ರಾಜ್ಯದ ಸಹಕಾರ ಬ್ಯಾಂಕುಗಳ ಪರವಾಗಿ ಮನವಿ ಪತ್ರ ಸಲ್ಲಿಸಿದರು.

ನ್ಯಾಯಾಲಯಕ್ಕೆ ಖುದ್ದು ಹಾಜರಾದ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್

ರಾಹುಲ್‌ಗೆ ರಿಲೀಫ್; ಜೂ.7ಕ್ಕೆ ಹಾಜರಾಗಲು ಸೂಚನೆ

ಬೆಂಗಳೂರು: ಬಿಜೆಪಿಗೆ ಮಾನನಷ್ಟ ಪ್ರಕರಣದಲ್ಲಿ ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ. ಕೆ.ಶಿವಕುಮಾರ್ ಅವರಿಗೆ ಜಾಮೀನು ಸಿಕ್ಕ ಬೆನ್ನಲ್ಲೇ ರಾಹುಲ್ ಗಾಂಧಿಗೆ ರಿಲೀಫ್ ಸಿಕ್ಕಿದೆ.

ಪ್ರಕರಣದ 4ನೇ ಆರೋಪಿ ರಾಹುಲ್ ಗಾಂಧಿ ಅವರು ಶನಿವಾರ ವಿಚಾರಣೆಗೆ ಹಾಜರಾಗದ ಹಿನ್ನೆಲೆ ಜಾಮೀನು ರಹಿತ ವಾರಂಟ್ ಜಾರಿ ಮಾಡುವಂತೆ ದೂರುದಾರರ ಪರ ವಕೀಲ ಮನವಿ ಮಾಡಿದ್ದರು. ಆದರೆ, ವಾರಂಟ್ ನೀಡದೆ, ಜೂನ್ 7 ರಂದು ಖುದ್ದು ಹಾಜರಾಗಲು 42ನೇ ಎಸಿಎಂಎಂ ಕೋರ್ಟ್ ಸೂಚನೆ ನೀಡಿದೆ.

ಸಿಆರ್‌ಪಿಸಿ 205 ಅಡಿಯಲ್ಲಿ ಸಲ್ಲಿಸಿದ್ದ ಅರ್ಜಿ ಮಾನ್ಯ ಮಾಡಲಾಗಿದ್ದು, ಜೂನ್ 7 ರಂದು ಖುದ್ದು ಹಾಜರಾಗಲು ರಾಹುಲ್ ಗಾಂಧಿಗೆ ಸೂಚನೆ ನೀಡಲಾಗಿದೆ. ಬಿಜೆಪಿ ಮಾನನಷ್ಟ ಮಾಡಿದ್ದಾರೆ ಎಂದು ಆರೋಪಿಸಿ ಬಿಜೆಪಿ ಪ್ರಧಾನ ಕಾರ್ಯದರ್ಶಿ ಕೇಶವ ಪ್ರಸಾದ್ ಖಾಸಗಿ ದೂರು ದಾಖಲಿಸಿದ್ದರು. ಈ ಹಿನ್ನೆಲೆ ಶನಿವಾರ ಕೋರ್ಟ್‌ಗೆ ಹಾಜರಾಗಿದ್ದ ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ್ ಅವರಿಗೆ ಜಾಮೀನು ನೀಡಲಾಗಿತ್ತು. ರಾಹುಲ್ ಗಾಂಧಿ ಹಾಜರಾಗದ ಹಿನ್ನೆಲೆ ವಾರಂಟ್ ಜಾರಿ ಮಾಡುವಂತೆ ದೂರುದಾರ ಪರ ವಕೀಲರು ಮನವಿ ಮಾಡಿದ್ದರು. ಆದರೆ, ಕೋರ್ಟ್ ವಿಚಾರಣೆಗೆ ಹಾಜರಾಗಲು ರಾಹುಲ್ ಗಾಂಧಿಗೆ ಸೂಚಿಸಿದೆ.

ದೂರುದಾರರ ಪರ ಹಾಜರಾದ ವಕೀಲ ವಿನೋದ್ ಕುಮಾರ್, ನ್ಯಾಯಾಲಯದಿಂದ ಸಮನ್ಸ್ ಜಾರಿ ಆದಾಗ ಬರಬೇಕು. ಪದೇ ಪದೆ ಕಾರಣ ನೀಡಿದರೆ ಹೇಗೆ? ಎರಡು ಮೂರು ಸಲ ವಿನಾಯಿತಿ ನೀಡಲು ಅವಕಾಶ ಇಲ್ಲ ಎಂದು ಕಾನೂನಿನಲ್ಲಿ ಸ್ಪಷ್ಟವಾಗಿ ಹೇಳಿದೆ. ಮುಂದೆಯೂ ಬೇರೆ ಬೇರೆ ಸಭೆ ಇದೆ ಅಂತ ಹಾಜರಾಗದೇ ಇರಬಹುದು. ರಾಹುಲ್ ಗಾಂಧಿ ರಾಷ್ಟ್ರೀಯ ನಾಯಕರೇ ಆಗಿರಲಿ, ಕಾನೂನಿನ ಮುಂದೆ ಎಲ್ಲರೂ ಒಂದೇ. ಹೀಗಾಗಿ ರಾಹುಲ್ ಗಾಂಧಿಗೆ ವಾರಂಟ್ ಜಾರಿ ಮಾಡಿ ಎಂದು ಮನವಿ ಮಾಡಿದ್ದರು.

ಸಿಎಂ, ಡಿಸಿಎಂಗೆ ಷರತ್ತುಬದ್ಧ ಜಾಮೀನು: ಬಿಜೆಪಿಗೆ ಮಾನನಷ್ಟ ಪ್ರಕರಣದಲ್ಲಿ 42ನೇ ಎಸಿಎಂಎಂ ಕೋರ್ಟ್ ಮುಂದೆ ಹಾಜರಾದ ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿಕೆ ಶಿವಕುಮಾರ್ ಅವರಿಗೆ ಷರತ್ತುಬದ್ಧ ಜಾಮೀನು ನೀಡಲಾಗಿತ್ತು. ಪ್ರಕರಣದ ಇನ್ನೊಬ್ಬ ಆರೋಪಿ ರಾಹುಲ್ ಗಾಂಧಿ ಗೈರು ಹಾಜರಾದ ಹಿನ್ನೆಲೆಯಲ್ಲಿ ನ್ಯಾಯಾಧೀಶರು ಗರಂ ಆಗಿದ್ದರು.

ಏನಿದು ಪ್ರಕರಣ?

2023ರ ಮೇ 8ರಂದು 42ನೇ ವಿಶೇಷ ನ್ಯಾಯಾಲಯದಲ್ಲಿ ಬಿಜೆಪಿ ರಾಜ್ಯ ಕಾರ್ಯದರ್ಶಿ ಎಸ್. ಕೇಶವ ಪ್ರಸಾದ್ ಖಾಸಗಿ ದೂರ ದಾಖಲು ಮಾಡಿದ್ದರು. ಪ್ರಕರಣದಲ್ಲಿ ಎ1 ಕೆಪಿಸಿಸಿ, ಎ2 ಡಿಕೆ ಶಿವಕುಮಾರ್, ಎ3 ಆರೋಪಿಯಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಎ4 ಆರೋಪಿ ಯಾಗಿ ರಾಹುಲ್ ಗಾಂಧಿ ಅವರನ್ನು ಹೆಸರಿಸಲಾಗಿದೆ. ಬಿಜೆಪಿ ಸರಕಾರ 2019ರಿಂದ 2023ರವರೆಗೆ ಭ್ರಷ್ಟ ಆಡಳಿತ ನಡೆಸಿತ್ತು. ಆಗಿನ ಸಿಎಂ ಹುದ್ದೆ 2500 ಕೋಟಿ ರು.ಗೆ ಮಾರಾಟವಾಗಿತ್ತು. ಮಂತ್ರಿಗಳ ಹುದ್ದೆ 500 ಕೋಟಿ ರು. ಬಿಜೆಪಿ ಹೈಕಮಾಂಡ್‌ಗೆ ನೀಡಿ ಪಡೆದಿದ್ದಾರೆ. ಈ ಮೂಲಕ ಭ್ರಷ್ಟಾಚಾರ ಮಾಡಿದ್ದಾರೆ. ಇದಲ್ಲದೆ ಕೋವಿಡ್ ಕಿಟ್ ಪೂರೈಕೆ ಟೆಂಡರ್‌ನಲ್ಲಿ ಶೇ.75 ಡೀಲ್ ನಡೆದಿದೆ. ಪಿಡಬ್ಲ್ಯುಡಿ ಗುತ್ತಿಗೆ ಟೆಂಡರ್ ಗಳಲ್ಲಿ ಶೇ.40 ರಷ್ಟು ಡೀಲ್, ಮಠಕ್ಕೆ ನೀಡುವ ಅನುದಾನದಲ್ಲಿ ಶೇ.30 ರಷ್ಟು ಡೀಲ್, ಉಪಕರಣಗಳ ಪೂರೈಕೆಯಲ್ಲಿ ಶೇ.40 ರಷ್ಟು ಡೀಲ್, ಮಕ್ಕಳಿಗೆ ನೀಡುವ ಮೊಟ್ಟೆ ಪೂರೈಕೆಯ ಟೆಂಡರ್‌ನಲ್ಲಿ ಶೇ.30 ರಷ್ಟು ಡೀಲ್, ರಸ್ತೆ ಕಾಮಗಾರಿಗಳ ಟೆಂಡರ್‌ನಲ್ಲಿ ಶೇ.40 ರಷ್ಟು ಡೀಲ್ ನಡೆದಿದೆ ಎಂದು ಆರೋಪಿಸಿದ್ದರು.

ಸಿಎಂ, ಡಿಸಿಎಂ ಹಾಜರು

ಕಳೆದ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಬಿಜೆಪಿ ವಿರುದ್ಧ ಭ್ರಷ್ಟಾಚಾರದ ಆರೋಪ ಮಾಡಿ ಮಾನನಷ್ಟ ಮೊಕದ್ದಮೆಯ ಕಾನೂನು ಸಂಘರ್ಷ ಎದುರಿಸುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಅವರಿಗೆ ನ್ಯಾಯಾಲಯ ಜಾಮೀನು ಮಂಜೂರು ಮಾಡಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಾಲಯ ರಾಹುಲ್‌ಗಾಂಧಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಶಿವಕುಮಾರ್ ಅವರಿಗೆ ಸಮನ್ಸ್ ಜಾರಿ ಮಾಡಿತ್ತು. ನ್ಯಾಯಾಲಯಕ್ಕೆ ಬಂದ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಅವರನ್ನು ಸರಕಾರಿ ಅಭಿಯೋಜಕರ ಕೊಠಡಿಯಲ್ಲಿ ಕುಳಿತಿರಲು ಹೇಳಿತ್ತಾದರೂ, ಇಬ್ಬರು ನಾಯಕರು ಜನಸಾಮಾನ್ಯರಂತೆ ನ್ಯಾಯಾಲಯದ ಹೊರಗಡೆ ನಿಂತು, ತಮ್ಮ ಹೆಸರು ಕೂಗುವವರೆಗೂ ಕಾದು ಕುಳಿತಿದ್ದು ವಿಶೇಷವಾಗಿತ್ತು.



ಗುಂಡಿಟ್ಟು ಕೊಲ್ಲುವ ಕಾನೂನು ಜಾರಿಗೆ ಬರಲಿ

ಸಾಗರ: ತಪ್ಪು ಮಾಡಿದವರನ್ನು ಗುಂಡಿಟ್ಟು ಕೊಲ್ಲುವ ಕಾನೂನು ಜಾರಿಗೆ ಬರಬೇಕು. ರಾಜ್ಯ ಸರಕಾರವನ್ನು ಪದೇಪದೇ ಟೀಕಿಸುವ ಬಿಜೆಪಿಯವರು ಕೇಂದ್ರದಲ್ಲಿರುವ ತಮ್ಮ ನೇತೃತ್ವದ ಪಕ್ಷದ ಮೇಲೆ ಅಂತಹ ಕಾನೂನು ಜಾರಿಗೆ

ತರಲು ಒತ್ತಡ ಹೇರಲಿ ಎಂದು ಶಾಸಕ, ಅರಣ್ಯ ಕೈಗಾರಿಕಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಗೋಪಾಲಕೃಷ್ಣ ಬೇಳೂರು ಸಲಹೆ ನೀಡಿದ್ದಾರೆ.

ಇಲ್ಲಿನ ಸರಕಾರಿ ಪದವಿಪೂರ್ವ ಕಾಲೇಜಿನಲ್ಲಿ ಶನಿವಾರ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ತಮ್ಮ ಪಕ್ಷದ ಅಭ್ಯರ್ಥಿಗಳ ಪರವಾಗಿ ಮತಯಾಚನೆ ನಡೆಸಿ, ಪತ್ರಕರ್ತರ ಪ್ರಶ್ನೆಗಳಿಗೆ ಉತ್ತರಿಸಿದ ಅವರು, ಬೇರೆಬೇರೆ ಸಂದರ್ಭದಲ್ಲಿ ಗಲಭೆ ಮಾಡಿದಾಗ ಹಿಂದೂ ಮುಸ್ಲಿಂ ಕ್ರಿಶ್ಚಿಯನ್ ಸೇರಿದಂತೆ ಯಾವುದೇ ಧರ್ಮದವನು ಮಾಡಿದ್ದರೂ ಅವನಿಗೆ ಏಕರೂಪದ ಶಿಕ್ಷೆ ನೀಡಬೇಕು. ಅಂತಹ ಕಾನೂನು ತರಲಿ. ನಿಮ್ಮ ಕೈನಲ್ಲಿ ಸಾಧ್ಯವಿಲ್ಲ ಎಂದರೆ ಸರಕಾರ ನಮ್ಮ ಕೈಗೆ ಕೊಡಿ ನಾವು ಅಂತಹ ಕಾಯ್ದೆ ಜಾರಿಗೆ ತರುತ್ತೇವೆ. ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣ ದುರುಪಯೋಗಕ್ಕೆ ಸಂಬಂಧಪಟ್ಟಂತೆ ಯಾರೇ ತಪ್ಪು ಮಾಡಿದರೂ ಅವರಿಗೆ ಕಠಿಣ ಶಿಕ್ಷೆಯಾಗಬೇಕು ಎಂದರು.

ಎಸ್‌ಐಟಿ ತನಿಖೆಗೆ ಕೊಟ್ಟಿರುವುದು ಸಿದ್ದರಾಮಯ್ಯನವರ ನಾಟಕ

ತೀರ್ಥಹಳ್ಳಿ: ಹಣ ವರ್ಗಾವಣೆ ಆಗಿರುವುದೇ ಬಹಳ ದೊಡ್ಡ ಹಗರಣದ ಸಂಕೇತ, ಹಾಗಾಗಿ ಸಿಬಿಐ ತನಿಖೆ ಆಗಬೇಕು, ಪ್ರಕರಣದ ತನಿಖೆಯನ್ನು ಮಣ್ಣು ಮುಚ್ಚಲು ಎಸ್‌ಐಟಿ ರಚನೆ ಮಾಡಿದ್ದಾರೆ. ಎಸ್‌ಐಟಿ ಎನ್ನುವುದು ಸಿದ್ದರಾಮಯ್ಯನವರ ಒಂದು

ನಾಟಕ ಎಂದು ಆರಗ ಜ್ಞಾನೇಂದ್ರ ಹೇಳಿದರು.

ಶನಿವಾರ ಪಟ್ಟಣದ ಕೊಪ್ಪ ಸರ್ಕಲ್ ನಲ್ಲಿ ಚಂದ್ರಶೇಖರನ್ ಆತ್ಮಹತ್ಯೆ ಪ್ರಕರಣದಲ್ಲಿ ಸಚಿವ ನಾಗೇಂದ್ರ ಅವರು ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿ ಪ್ರತಿಭಟನೆ ನಡೆಸಿ ನಂತರ ಮಾಧ್ಯಮದ ಜತೆಗೆ ಮಾತನಾಡಿ, ಎಸ್‌ಐಟಿಯನ್ನು ನಾವು ಒಪ್ಪುವುದಿಲ್ಲ,ಈ ಹಗರಣವನ್ನು ಸಿಬಿಐ ಗೆ ಒಪ್ಪಿಸಬೇಕು ಮತ್ತು ದಲಿತರ ಹಣ ಈ ರೀತಿ ದುರುಪಯೋಗ ಆಗುವುದು ಅಮಾನವೀಯ ಎಂದರು.

ಇವರ ಲೂಟಿಯಿಂದ ಇನ್ನು ಎಷ್ಟು ಮಂದಿ ಅಧಿಕಾರಿಗಳು ಸಾಯುತ್ತಾರೋ ಗೊತ್ತಿಲ್ಲ, ಇವರ ಮೇಲೆ ಮರ್ಡರ್ ಕೇಸ್ ದಾಖಲಿಸಬೇಕು, ಸಚಿವರ ಮೇಲೆ ಮರ್ಡರ್ ಕೇಸ್ ದಾಖಲಿಸಬೇಕು ಅವರಿಂದಲೇ ಸತ್ತಿದ್ದು. ಅವರ ನಿರ್ದೇಶನದಿಂದಲೇ ಹೀಗೆ ಆಗಿದ್ದು, ಅವರಿಗೆ ನಿರ್ದೇಶನ ಕೊಟ್ಟಿದ್ದು ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಅವರು ಎಂದು ಆರೋಪಿಸಿದರು.

ಕಾರ್ಯಕರ್ತರು ನನ್ನನ್ನು ಗೋ ಬ್ಯಾಕ್ ಅಂದಿಲ್ಲ

ಮಂಗಳೂರು: ನನ್ನನ್ನು ಕ್ಷೇತ್ರದಲ್ಲಿ ಮತದಾರರು ನಿರ್ಲಕ್ಷ್ಯ ಮಾಡಿಲ್ಲ. ಒಂದು ಚುನಾವಣೆಯನ್ನೂ ಸೋತಿಲ್ಲ. ಕಾರ್ಯಕರ್ತರು ನನ್ನನ್ನು ವಿರೋಧಿಸಿ ಗೋಬ್ಯಾಕ್ ಅಂದಿಲ್ಲ. ನಮ್ಮಲ್ಲಿ ಗೋಬ್ಯಾಕ್ ಅಂದವರಿಗೆ ಬೇರೆ ಕ್ಷೇತ್ರದಲ್ಲಿ ಟಿಕೆಟ್ ನೀಡಲಾಗಿದೆ.

ನನಗೆ ಅಂತಹ ಪರಿಸ್ಥಿತಿ ಬಂದಿಲ್ಲ ಎಂದು ನೈರುತ್ಯ ಪದವೀಧರ ಕ್ಷೇತ್ರದ ಅಭ್ಯರ್ಥಿ ರಘುಪತಿ ಭಟ್ ಬಿಜೆಪಿ ನಾಯಕರ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಕೆಲವರಿಗೆ ಅಧಿಕಾರ ಇಲ್ಲದೆ ಇರಲು ಆಗದು ಎಂಬ ಬಿ.ಎಲ್. ಸಂತೋಷ್ ಅವರ ಹೇಳಿಕೆ ಕುರಿತಂತೆ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯೆ ನೀಡಿದ ಅವರು, ಈ ಮಾತನ್ನು ಎಲ್ಲರನ್ನೂ ಉದ್ದೇಶಿಸಿ ಹೇಳಿರಬಹುದು. 70 ವರ್ಷ ಮೇಲ್ಪಟ್ಟವರು, ಸೋತವರನ್ನೂ ಲೋಕಸಭೆಗೆ ನಿಲ್ಲಿಸಲಾಗಿದೆ. ತಾನು ಮುಖ್ಯಮಂತ್ರಿಯಾಗಬೇಕು, ತನ್ನ ಪುತ್ರ ಅಧ್ಯಕ್ಷನಾಗಬೇಕು ಎಂಬ ನಾಯಕರಿಗೂ ಹೇಳಿರಬಹುದು. ನಾನು ಈ ಸ್ಪರ್ಧೆ ಮಾಡಲು ಕಾರಣ ನಾನು ಸಕ್ರಿಯವಾಗಿ ಜನಪ್ರತಿನಿಧಿಯಾಗಿದ್ದವನು. ಚುನಾವಣಾ ರಾಜಕೀಯದಿಂದ ಹಿಂದೆ ಸರಿಯುವ ವಯಸ್ಸು ನನ್ನದಲ್ಲ. ನಾನು ಈ ಚುನಾವಣೆಯಲ್ಲಿ ಸ್ಪರ್ಧಿಸದಿದ್ದರೆ ಮತ್ತೆ ಚುನಾವಣಾ ರಾಜಕೀಯದಲ್ಲಿ ಇರಲು ಸಾಧ್ಯವಾಗದು ಎಂದು ತಿಳಿಸಿದರು.

ಭವಾನಿ ರೇವಣ್ಣ ಕಾರು ಚಾಲಕ ಎಸ್‌ಐಟಿ ವಶಕ್ಕೆ

ಚಿಕ್ಕಮಗಳೂರು: ಭವಾನಿ ರೇವಣ್ಣ ಅವರ ಕಾರು ಚಾಲಕನನ್ನು ಎಸ್‌ಐಟಿ ಅಧಿಕಾರಿಗಳು ಚಿಕ್ಕಮಗಳೂರಿನಲ್ಲಿ ವಶಕ್ಕೆ ಪಡೆದಿದ್ದಾರೆ. ಕಾರು ಚಾಲಕ ಅಜಿತ್ ಎಂಬಾತನನ್ನು ಶುಕ್ರವಾರ ರಾತ್ರಿ ವಶಕ್ಕೆ ಪಡೆದಿದ್ದಾರೆ. ಚಿಕ್ಕಮಗಳೂರಿನ ಕಲ್ಯಾಣ

ನಗರದಲ್ಲಿ ವಶಕ್ಕೆ ಪಡೆದಿದ್ದು, ಆತನಿಂದ ಅಗತ್ಯ ಮಾಹಿತಿಯನ್ನು ಅಧಿಕಾರಿಗಳು ಕಲೆಹಾಕುತ್ತಿದ್ದಾರೆ.

ಪ್ರಜ್ವಲ್ ರೇವಣ್ಣ ಅವರನ್ನು 6 ದಿನಗಳ ಕಾಲ ಎಸ್ ಐಡಿ ಕಸ್ಟಡಿಗೆ ನೀಡಿದ ಬೆನ್ನಲ್ಲೇ ಸಂತ್ರಸ್ತೆ ಕಿಡ್ನಾಪ್ ಪ್ರಕರಣದಲ್ಲಿ ಭವಾನಿ ರೇವಣ್ಣ ಅವರನ್ನು ಬಂಧಿಸಲು ಎಸ್‌ಐಟಿ ಅಧಿಕಾರಿಗಳು ಮುಂದಾಗಿದ್ದಾರೆ. ಹೀಗಾಗಿ ಚಾಲಕನನ್ನು ವಶಕ್ಕೆ ಪಡೆದು ಭವಾನಿ ರೇವಣ್ಣ ಬಗ್ಗೆ ಮಾಹಿತಿ ಕಲೆ ಹಾಕುತ್ತಿದ್ದಾರೆ. ಅಜಿತ್ ನಾಲ್ಕೈದು ದಿನದ ಹಿಂದೆ ಚಿಕ್ಕಮಗಳೂರಿನಲ್ಲಿರುವ ತಮ್ಮ ಅತ್ತೆ ಮನೆಗೆ ಬಂದಿದ್ದ ಎನ್ನಲಾಗಿದೆ. ಕೆ.ಆರ್.ನಗರ ಸಂತ್ರಸ್ತೆ ಕಿಡ್ನಾಪ್ ಪ್ರಕರಣದಲ್ಲಿ ಭವಾನಿ ರೇವಣ್ಣ ಅವರು ಸಲ್ಲಿಸಿದ್ದ ನಿರೀಕ್ಷಣಾ ಜಾಮೀನು ಅರ್ಜಿ ವಜಾಗೊಂಡ ಹಿನ್ನೆಲೆಯಲ್ಲಿ ಅವರ ಬಂಧನಕ್ಕಾಗಿ ಎಸ್‌ಐಟಿ ಮುಂದಾಗಿದೆ. ಹೀಗಾಗಿ ಭವಾನಿ ರೇವಣ್ಣ ಅವರ ಬಗ್ಗೆ ಮಾಹಿತಿ ಕಲೆ ಹಾಕಲು ಕಾರು ಚಾಲಕನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ.

ಸಮಾಚಾರ ಸಣ್ಣದಲ್ಲ

ಸಾಲಬಾಧೆ: ರೈತ ಆತ್ಮಹತ್ಯೆ

ರಾಮನಗರ: ಸಾಲದ ಬಾಧೆಯಿಂದ ಯುವ ರೈತನೊಬ್ಬ ಆತ್ಮಹತ್ಯೆಗೆ ಶರಣಾಗಿರುವ ಘಟನೆ ಚನ್ನಪಟ್ಟಣ ತಾಲೂಕಿನ ಪಿ.ಹಳ್ಳಿ ದೊಡ್ಡಿ ಗ್ರಾಮದಲ್ಲಿ

ನಡೆದಿದೆ. ಚನ್ನಪಟ್ಟಣ ತಾಲೂಕಿನ ಪಿ.ಹಳ್ಳಿ ದೊಡ್ಡಿ ಗ್ರಾಮದ ದರ್ಶನ್ (23) ಆತ್ಮಹತ್ಯೆಗೆ ಶರಣಾದ ರೈತ. ಬಿಕಾಂ ಓದುತ್ತಿದ್ದ ಈತ ತಂದೆ ಜೊತೆ ಕೃಷಿಯಲ್ಲಿ ತೊಡಗಿಸಿಕೊಂಡಿದ್ದ ತನ್ನ ತಂದೆ ಕೃಷ್ಣ ಅವರ ಜೊತೆಗೂಡಿ ಮಾವಿನ ತೋಟಗಳನ್ನು ಗುತ್ತಿಗೆಗೆ ಪಡೆದು ಬೇಸಾಯ ಮಾಡುತ್ತಿದ್ದ ಬಿಸಿಲಿನ ತೀವ್ರತೆಯಿಂದ ಮಾವಿನ ಫಸಲು ಕೈಕೊಟ್ಟ ಪರಿಣಾಮ ಸಾಲಬಾಧೆ ಜಾಸ್ತಿಯಾಗಿ ಆತ್ಮಹತ್ಯೆ ಗೆ ಶರಣಾಗಿದ್ದಾನೆ. ಈ ಸಂಬಂಧ ಅಕ್ಕೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಿಯಂತ್ರಣ ತಪ್ಪಿದ ಬಸ್; 40 ಮಂದಿಗೆ ಗಾಯ

ಯಳಂದೂರು: ಖಾಸಗಿ ಬಸ್ ಗೆ ಅಪಘಾತವಾಗಿದ್ದು, 40ಕ್ಕೂ ಹೆಚ್ಚು ಜನರು ಗಾಯಗೊಂಡಿರುವ ಘಟನೆ ತಾಲೂಕಿನ ಬಿಳಿಗಿರಿರಂಗನ ಬೆಟ್ಟದಲ್ಲಿ ಜೂ.1ರ ಶನಿವಾರ ನಡೆದಿದೆ. ನಂಜನಗೂಡು ತಾಲೂಕಿನ ವಿವಿಧ ಗ್ರಾಮಗಳಿಂದ ದೇವರ ದರ್ಶನಕ್ಕೆ ಭಕ್ತರು ಹೋಗಿ ದರ್ಶನ ಮುಗಿಸಿಕೊಂಡು ಯಳಂದೂರು ಮಾರ್ಗವಾಗಿ ಬರುತ್ತಿದ್ದ ವೇಳೆ ಬಿಳಿಗಿರಿರಂಗನ ಬೆಟ್ಟದ ಗವಿ ಬೋರೆ ಎಂಬಲ್ಲಿ ಚಾಲಕನ ನಿಯಂತ್ರಣ ತಪ್ಪಿದ ಬಸ್ ಅಪಘಾತವಾಗಿದೆ. ಅದೃಷ್ಟವಶಾತ್ ಯಾವುದೇ ಪ್ರಾಣಪಾಯವಾಗಿಲ್ಲ. ಈ ಘಟನೆಯಲ್ಲಿ 40ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದು, ಇವರನ್ನು ಪಟ್ಟಣದ ಸಾರ್ವಜನಿಕ ಆಸ್ಪತ್ರೆ ಹಾಗೂ ಚಾಮರಾಜನಗರ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಿಸಲಾಗಿದೆ. ಈ ಬಗ್ಗೆ ಯಳಂದೂರು ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

ವಿದ್ಯುತ್ ಶಾಕ್‌ನಿಂದ ಕಾರ್ಮಿಕ ಸಾವು

ಚಿಕ್ಕಮಗಳೂರು: ಕಾಫಿತೋಟದಲ್ಲಿ ಸಿಲ್ವರ್ ಮರಗಸಿ ಮಾಡುವ ವೇಳೆ ವಿದ್ಯುತ್ ಶಾಕ್ ನಿಂದ ಮರದಲ್ಲೇ

ಕಾರ್ಮಿಕ ಸಾವನ್ನಪ್ಪಿರುವ ಘಟನೆ ನಡೆದಿದೆ. ಮೂಡಿಗೆರೆ ತಾಲೂಕು ಕುನ್ನಹಳ್ಳಿ ಗ್ರಾಮದಲ್ಲಿ ಘಟನೆ ನಡೆದಿದ್ದು, ಕಾರ್ಮಿಕ ಚಂದ್ರಪ್ಪ (45) ವಿದ್ಯುತ್ ಶಾಕ್ ನಿಂದ ಮೃತಪಟ್ಟಿದ್ದಾರೆ. ಕಾಫಿತೋಟದಲ್ಲಿ ಬೆಳೆದಿರುವ ಸಿಲ್ವರ್ ಮರಗಳು ನೇರವಾಗಿ ಬೆಳೆಯುವ ಉದ್ದೇಶದಿಂದ ಮರಗಸಿ ಮಾಡಲಾಗುತ್ತದೆ. ಚಂದ್ರಪ್ಪ ಮರಗಸಿ ಮಾಡುವ ವೇಳೆ ತೋಟದ ಮಧ್ಯೆ ಹಾದು ಹೋಗಿರುವ ವಿದ್ಯುತ್ ತಂತಿ ಮೇಲೆ ಮರದ ಕೊಂಬೆ ಸಿಲುಕಿ ವಿದ್ಯುತ್ ಪ್ರವಹಿಸಿ ಮರದಲ್ಲೇ ಮೃತಪ ಟ್ಟಿದ್ದಾನೆ. ಈ ಸಂಬಂಧ ಮೂಡಿಗೆರೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಾಯ್ಲರ್ ರಿಪೇರಿ: ಯುವಕ ಸಾವು

ಚಿಕ್ಕಮಗಳೂರು: ಬಾಯ್ಲರ್ ರಿಪೇರಿ ಮಾಡುತ್ತಿದ್ದ ವೇಳೆ ಅದರಿಂದ ಹೊರಬಂದ ಭಾರೀ ಪ್ರಮಾಣದ

ಶಾಖದಿಂದ ರಿಪೇರಿ ಮಾಡುತ್ತಿದ್ದ ಯುವಕ ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ನಡೆದಿದೆ.ನಗರ ಹೊರವಲಯ ವಿದ್ಯಾ ಕಾಫಿ ಕ್ಯೂರಿಂಗ್ ನಲ್ಲಿ ಘಟನೆ ನಡೆದಿದ್ದು ಬಾಯ್ಲರ್ ರಿಪೇರಿ ಮಾಡುತ್ತಿದ್ದ ಮಡಿಕೇರಿ ಕುಶಾಲನ ಗರದ ಯುವಕ ಉದಯ್ (27) ಸ್ಥಳದಲ್ಲಿ ಮೃತಪಟ್ಟಿದ್ದಾನೆ. ಶಾಖದ ತೀವ್ರತೆಗೆ ಯುವಕನ ದೇಹ ಸುಟ್ಟು ಕರಕಲಾಗಿದೆ. ನಗರದ ಜಿಲ್ಲಾಸ್ಪತ್ರೆಗೆ ಮೃತದೇಹವನ್ನು ರವಾನಿಸಿದ್ದು ಮರಣೋತ್ತರ ಪರೀಕ್ಷೆ ಒಳಪಡಿಸಲಾಗಿದೆ. ಬಾಯ್ಲರ್ ಸರಿಪಡಿಸುವಾಗ ಏಕಾಏಕಿ ಹೊರಬಂದ 340 ಡಿಗ್ರಿ ಶಾಖ ಹೊರಬಂದ ಪರಿಣಾಮ ಘಟನೆ ನಡೆದಿದೆ. ಮಗನನ್ನು ಕಳೆದುಕೊಂಡ ತಾಯಿ ಶವಗಾರದ ಬಳಿ ಕಣ್ಣೀರು ಹಾಕುವ ದೃಶ್ಯ ಮನಕಲಕುವಂತಿತ್ತು.

ನಾಗೇಂದ್ರ ರಾಜೀನಾಮೆ: ಹಗ್ಗಜಗ್ಗಾಟ

ಯಾರನ್ನು ರಕ್ಷಿಸುವ ಪ್ರಶ್ನೆಯಿಲ್ಲ: ಸಿಎಂ

ಬೆಂಗಳೂರು: ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದಿರುವ ಅವ್ಯವಹಾರದಲ್ಲಿ ಯಾವುದೇ ಕಾರಣಕ್ಕೂ ಯಾರನ್ನು ರಕ್ಷಿಸುವ ಪ್ರಶ್ನೆಯಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಿಗಮದ ಪ್ರಕರಣಕ್ಕೆ ಸಂಬಂಧಪಟ್ಟಂತೆ ವಿಶೇಷ ತನಿಖಾ ತಂಡ ರಚನೆ ಮಾಡಲಾಗಿದೆ. ತನಿಖೆ ಚುರುಕಾಗಿ ನಡೆಯುತ್ತಿದೆ. ತಪ್ಪಿತಸ್ಥರನ್ನು ರಕ್ಷಿಸುವ ಪ್ರಶ್ನೆಯೇ ಇಲ್ಲ. ಈ ವಿಷಯದಲ್ಲಿ ಯಾರಿಗೂ ಗೊಂದಲದ ಅಗತ್ಯವಿಲ್ಲ ಎಂದು ಹೇಳಿದರು.

ಈ ಹಿಂದೆ ಬಿಜೆಪಿ ಸರಕಾರ ಅಧಿಕಾರದಲ್ಲಿದ್ದಾಗ ಸಚಿವರಾಗಿದ್ದ ಕೆ.ಎಸ್. ಈಶ್ವರಪ್ಪ ರಾಜೀನಾಮೆಗೆ ಆಗ್ರಹಿಸಲು ಕಾರಣವಿತ್ತು. ಗುತ್ತಿಗೆದಾರ ಸಂತೋಷ್ ಪ್ರಕರಣದಲ್ಲಿ ನೇರವಾಗಿ ಈಶ್ವರಪ್ಪ ಅವರ ಹೆಸರು ಬಂದಿತ್ತು. ಇಲ್ಲಿ ಮಂತ್ರಿ ಹೇಳಿದ್ದರು ಎಂದು ಅಧಿಕಾರಿ ಹೇಳಿದ್ದಾರೆ ಎಂದಿದೆ. ಯಾವ ಸಚಿವ ಎನ್ನುವ ಬಗ್ಗೆ ಸ್ಪಷ್ಟನೆಯಿಲ್ಲ, ಆದ್ದರಿಂದ ತನಿಖೆ ಮುಗಿದ ಬಳಿಕ ಕ್ರಮವಹಿಸಲಾಗುವುದು ಎಂದರು.

ನಮಗೆ ದಾಖಲೆ ಅಥವಾ ಪಾಲ್ಗೊಂಡಿರುವ ಬಗ್ಗೆ ಸುಳಿವು ಸಿಕ್ಕರೆ ನಮ್ಮ ಗೌರವ ಕಾಪಾಡಿಕೊಳ್ಳಲು ತನಿಖೆ ಮುಗಿಯುವ ತನಕ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ಮಾಡುತ್ತೇವೆ. ನಮ್ಮ ಸರಕಾರ ಪಾರದರ್ಶಕವಾಗಿ ಇರಬೇಕು. ನಿಗಮದ ಹಣ ಎಲ್ಲೆಲ್ಲಿ ಹೋಗಿದೆ ಎಂದು ಅಧಿಕಾರಿಗಳು ಬೆನ್ನು ಹತ್ತಿದ್ದಾರೆ. ಹಣವನ್ನು ಮರಳಿ ಪಡೆಯುತ್ತೇವೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಒಂದಷ್ಟು ಜನರ ಬಂಧನವಾಗಿದೆ ಎಂದು ವಿವರಿಸಿದರು.

ನಮ್ಮ ಸರಕಾರ ಪಾರದರ್ಶಕವಾಗಿರಬೇಕು. ನಿಗಮದ ಹಣ ಎಲ್ಲೆಲ್ಲಿ ಹೋಗಿದೆ ಎಂದು ಅಧಿಕಾರಿಗಳು ಬೆನ್ನುಹತ್ತಿದ್ದಾರೆ. ಹಣವನ್ನು ಮರಳಿ ಪಡೆಯುತ್ತೇವೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಒಂದಷ್ಟು ಜನರ ಬಂಧನವಾಗಿದೆ. ಹಗರಣದ ತನಿಖೆಯನ್ನು ಸಿಬಿಐಗೆ ನೀಡಬೇಕು ಎನ್ನುವ ಆಗ್ರಹವಿದೆ. ಇಂತಿಷ್ಟು ಕೋಟಿಯ ಬ್ಯಾಂಕ್ ಅವ್ಯವಹಾರ ನೇರವಾಗಿ ಸಿಬಿಐ ತನಿಖೆಗೆ ಹೋಗುತ್ತದೆ ಅದು ನಿಯಮ. ನಾವು ತನಿಖೆಗೆ ಸಹಕಾರ ನೀಡುತ್ತೇವೆ.

-ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಸಮಗ್ರ ತನಿಖೆಯಾಗಲಿ : ಡಿಕೆಶಿ

ಇನ್ನು ಇದೇ ವಿಷಯವಾಗಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರತಿಕ್ರಿಯಿಸಿ, ವಾಲ್ಮೀಕಿ ನಿಗಮದ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ನಮ್ಮ ಸರಕಾರ ಯಾರನ್ನೂ ರಕ್ಷಣೆ ಮಾಡುವುದಿಲ್ಲ. ಈ ರೀತಿಯ ಹಗರಣಗಳು ಬಿಜೆಪಿ ಕಾಲದಲ್ಲೂ ನಡೆದಿವೆ. ಇದು ಬೊಮ್ಮಾಯಿ ಅವರು ಸೇರಿದಂತೆ ಎಲ್ಲರಿಗೂ ಗೊತ್ತಿದೆ. ಆದರೂ, ಈ ಪ್ರಕರಣದಲ್ಲಿ ಯಾರೇ ತಪ್ಪಿತಸ್ಥರಿದ್ದರೂ, ಸಮಗ್ರ ತನಿಖೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಸ್ಪಷ್ಟಪಡಿಸಿದರು. ಈ ಹಿಂದೆ ಬಿಜೆಪಿ ಸರಕಾರ ಅಧಿಕಾರದಲ್ಲಿದ್ದಾಗ ಸಚಿವರಾಗಿದ್ದ ಕೆ.ಎಸ್.ಈಶ್ವರಪ್ಪ ರಾಜೀನಾಮೆಗೆ ಆಗ್ರಹಿಸಿದ್ದವರು, ಈಗ ಏಕೆ ಸುಮ್ಮನಿದ್ದೀರಿ ಎಂದು ಬಿಜೆಪಿಯವರು ಕೇಳುತ್ತಿದ್ದಾರೆ. ಆ ಪ್ರಕರಣದಲ್ಲಿ ನೇರವಾಗಿ ಈಶ್ವರಪ್ಪ ಅವರ ಹೆಸರು ಬಂದಿತ್ತು. ಅದೇ ರೀತಿ ಈ ಪ್ರಕರಣದಲ್ಲೂ ನಮಗೆ ದಾಖಲೆ ಅಥವಾ ಪಾಲ್ಗೊಂಡಿರುವ ಬಗ್ಗೆ ಸುಳಿವು ಸಿಕ್ಕರೆ ನಮ್ಮ ಗೌರವ ಕಾಪಾಡಿಕೊಳ್ಳಲು ತನಿಖೆ ಮುಗಿಯುವ ತನಕ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ಮಾಡುತ್ತೇವೆ ಎಂದು ಪರೋಕ್ಷವಾಗಿ ರಾಜೀನಾಮೆಯ ಸುಳಿವನ್ನು ನೀಡಿದ್ದಾರೆ.

ಸಿಬಿಐಗೆ ವಹಿಸೋ ತನಕ ಬಿಡಲ್ಲ: ಬಿವೈವಿ

ಬೆಂಗಳೂರು: ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದಿರುವ ಬ್ರಹ್ಮಾಂಡ ಭ್ರಷ್ಟಾಚಾರ ಪ್ರಕರಣವನ್ನು ಸಿಬಿಐಗೆ ವಹಿಸುವ ತನಕ ಹೋರಾಟವನ್ನು ಮುಂದುವರೆಸುತ್ತೇವೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಎಚ್ಚರಿಕೆ ನೀಡಿದ್ದಾರೆ.

ವಾಲ್ಮೀಕಿ ಅಭಿವೃದ್ಧಿ ನಿಗಮದ ಬ್ರಹ್ಮಾಂಡ ಭ್ರಷ್ಟಾಚಾರ ಪ್ರಕರಣವನ್ನು ದಿಕ್ಕು ತಪ್ಪಿಸಿ ಭ್ರಷ್ಟರನ್ನು ರಕ್ಷಿಸುವ ಉದ್ದೇಶದಿಂದ ವಿಶೇಷ ತನಿಖಾ ತಂಡವನ್ನು ರಚಿಸಿರುವ ಸರಕಾರ ನಿರ್ಧಾರವನ್ನು ನಾವು ಒಪ್ಪುವುದಿಲ್ಲ. ಪ್ರಕರಣದ ತನಿಖೆ ಸಿಬಿಐಗೆ ಒಪ್ಪಿಸುವವರೆಗೂ ಹೋರಾಟ ನಿಲ್ಲುವುದಿಲ್ಲ ಎಂದಿದ್ದಾರೆ.

ಕಾಂಗ್ರೆಸ್ ಸರಕಾರ ಆರೋಪಿಗಳನ್ನು ರಕ್ಷಿಸಲು ಹೊರಟಿದೆ. ಅದರ ಭಾಗವಾಗಿಯೇ ಎಸ್‌ಐಟಿ ರಚನೆ ಮಾಡಲಾಗಿದೆ. ಇದು ಕೇವಲ ಕಣ್ಣೊರೆಸುವ ತಂತ್ರವಾಗಿದೆ. ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣ ಅಂತಾ ರಾಜ್ಯ ವ್ಯಾಪ್ತಿಯಲ್ಲಿ ದುರುಪಯೋಗವಾಗಿರುವ ಹಿನ್ನೆಲೆಯಲ್ಲಿ ಇದು ದೊಡ್ಡ ಹಗರಣವಾಗಿದೆ. ಈ ಬಗ್ಗೆ ಸಿಬಿಐ ತನಿಖೆಹೊರತುಪಡಿಸಿ ಇನ್ಯಾವುದೇ ತನಿಖೆಯನ್ನು ಒಪ್ಪುವುದಿಲ್ಲ. ಸಿಬಿಐ ತನಿಖೆಯ ಬೇಡಿಕೆಗೆ ಸರ್ಕಾರ ಒಪ್ಪುವವರೆಗೂ ಆರೋಪಿತ ಸಚಿವ ಬಿ. ನಾಗೇಂದ್ರ ಅವರು ರಾಜೀನಾಮೆ ನೀಡಿ ಅವರಿಗೆ ಶಿಕ್ಷೆಯಾಗುವವರೆಗೆ ತಾರ್ಕಿಕ ಅಂತ್ಯಕ್ಕೆ ಹೋರಾಟವನ್ನು ಕೊಂಡೊಯ್ಯಲಾಗುವುದೆಂದು ಎಂದು ಸ್ಪಷ್ಟಪಡಿಸಿದ್ದಾರೆ.

- ಎಸ್‌ಐಟಿಯನ್ನು ಯಾವುದೇ ಕಾರಣಕ್ಕೂ ಒಪ್ಪುವುದಿಲ್ಲ
- ರಾಗಾ ಹೆಸರು ಎಳೆದು ತಂದ ಬಿಜೆಪಿ ನಾಯಕರು
- ರಾಗಾ, ಸೋನಿಯಾಗೂ ಅಕ್ರಮದ ಪಾಲು ಹೋಗಿದೆ : ಅಶೋಕ್

ಕರ್ನಾಟಕದಲ್ಲಿ ಆದರೆ ಗೊತ್ತಾಗುತ್ತದೆ ಅಂತಾ ತೆಲಂಗಾಣದ ಬ್ಯಾಂಕ್‌ಗಳಿಗೆ ವರ್ಗಾವಣೆ ಮಾಡಲಾಗಿದೆ. ಕಾಂಗ್ರೆಸ್‌ನ ಮಾಯಾಜಾಲದ ಸ್ವರೂಪ ಜನರ ಮುಂದೆ ಬಂದಿದೆ. ವಾಲ್ಮೀಕಿ ನಿಗಮದ ಅಧ್ಯಕ್ಷರಿಗೆ ಮಾಹಿತಿ ಇಲ್ಲ ಅಂತಾದರೆ ನಿಗಮದ ಪರಿಶೀಲನೆ ಮಾಡುವಾಗ ಕೇಳಬೇಕಿತ್ತಲ್ಲವೇ?

-ಆರ್. ಅಶೋಕ್, ಪ್ರತಿಪಕ್ಷ ನಾಯಕ

ಸೋನಿಯಾ, ರಾಹುಲ್‌ಗೂ ಪಾಲು ಹೋಗಿದೆ

ಇನ್ನು ಇದೇ ವಿಷಯವಾಗಿ ಪ್ರತಿಪಕ್ಷ ನಾಯಕ ಆರ್. ಅಶೋಕ್ ಮಾತನಾಡಿ, 187 ಕೋಟಿ ದಲಿತರ ಹಣ ಅವ್ಯವಹಾರವೇ ಒಂದು ವರ್ಷದ ಸಾಧನೆ. ವರ್ಗಾವಣೆ ಮಾಡಲು ಕರ್ನಾಟಕದಲ್ಲಿ ಯಾವುದೇ ಬ್ಯಾಂಕ್‌ಗಳಿರಲಿಲ್ಲವೇ? ದಲಿತರ ಹಣ ಐಟಿ ಕಂಪನಿಗಳಿಗೆ ಹೇಗೆ ವರ್ಗಾವಣೆ ಆಗುತ್ತದೆ? ವಾಲ್ಮೀಕಿ ನಿಗಮದ ಹಣ ಸೋನಿಯಾ ಮತ್ತು ರಾಹುಲ್ ಗಾಂಧಿಯವರೆಗೂ ಹೋಗಿದೆ. ಸಚಿವರ ರಾಜೀನಾಮೆ ಪಡೆಯಲು ಹಿಂದೇಟು ಹಾಕುತ್ತಿದೆ ಎಂದು ಆರೋಪಿಸಿದರು. ಸಿಎಂ, ಸೂಪರ್ ಸಿಎಂ ಗೊಂದಲ ದಲ್ಲಿ ಜನ ಬಡವಾಗುತ್ತಿದ್ದಾರೆ. ನಿಷ್ಠಾವಂತ ಅಧಿಕಾರಿಗಳಿಗೆ ಸಾವಿನ ಭಾಗ್ಯ ಕೊಟ್ಟ ಸರಕಾರವಿದು. ಈ ಅವ್ಯವಹಾರಕ್ಕೆ ಕಾಂಗ್ರೆಸ್ ದೆಹಲಿ ನಾಯಕರ ತಲೆದಂಡ ಆಗುತ್ತದೆ. ಕಾಂಗ್ರೆಸ್ ಸರಕಾರ ಬೇನಾಮಿ ಐಟಿ ಕಂಪನಿಗಳಿಗೆ ಟಕಾ ಟಕ್ ಅಂತ ಬೇನಾಮಿ ಹಣ ವರ್ಗಾವಣೆ ಮಾಡಿದೆ. ಕೇಸ್ ಮುಚ್ಚಿ ಹಾಕಲು ಸಿಐಡಿಗೆ ಕೊಟ್ಟಿದ್ದೀರಿ. ಬ್ಯಾಂಕ್‌ನವರು ಸಿಬಿಐಗೆ ಪತ್ರ ಬರೆದ ಕೂಡಲೇ ಎಸ್‌ಐಟಿ ಮಾಡಿದ್ದೀರಿ. ಹಾಗಾದರೆ ನಿಮಗೆ ಸಿಐಡಿ ಮೇಲೆ ನಂಬಿಕೆ ಇಲ್ಲವೇ?. ಸರ್ವರಿಗೂ ಸಮಪಾಲು ಅಂತಾ ಹಣವನ್ನು ಹಂಚಿಕೊಂಡಿ ಲ್ಲ ಅಂತಾದರೆ ಸಿಬಿಐಗೆ ಕೊಡಿ. ಸಿಎಂ ರಾಜೀನಾಮೆ ಕೊಡಬೇಕು, ಸಿಬಿಐಗೆ ವಹಿಸಬೇಕು. ಈ ಐಟಿ ಕಂಪನಿಗಳು ಎಲ್ಲವೂ ಕಾಂಗ್ರೆಸ್‌ನ ಹಿಂಬಾಲಕರದ್ದು ಎಂದು ಆರೋಪಿಸಿದರು.

ಅಯೋಧ್ಯೆಯ ಬಾಲರಾಮನ ಮೂರ್ತಿ ಕೆತ್ತಿದ ಶಿಲ್ಪಿ ಯೋಗಿರಾಜ್ ಅವರು ಉಡುಪಿಯ ಶ್ರೀಕೃಷ್ಣಮಠಕ್ಕೆ ಭೇಟಿ ನೀಡಿ ಕೃಷ್ಣ ಮುಖ್ಯಪ್ರಾಣರ ದರ್ಶನ ಪಡೆದು ಪರ್ಯಾಯ ಶ್ರೀಪಾದದ್ವಯರ ಭೇಟಿ ಮಾಡಿದರು. ಪರ್ಯಾಯ ಶ್ರೀಪಾದರು ಯೋಗಿರಾಜ್ ಅವರನ್ನು ಗೌರವಿಸಿ ಅನುಗ್ರಹ ಮಂತ್ರಾಕ್ಷತೆಯನ್ನಿಟ್ಟು ಆಶೀರ್ವದಿಸಿದರು.

ಪ್ರತಿಪಕ್ಷದವರು ಕೇಳಿದ ಮಾತ್ರಕ್ಕೆ ಸಚಿವರ ರಾಜೀನಾಮೆ ಸಲ್ಲಿಸಬೇಕಾ?

ರಾಜೀನಾಮೆ: ಸಿಎಂ ಪರಮಾಧಿಕಾರ

ಕಲಬುರಗಿ: ವಾಲ್ಮೀಕಿ ನಿಗಮದಲ್ಲಿ ನಡೆದಿದೆ ಎನ್ನಲಾದ ಹಣ ಅಕ್ರಮ ವರ್ಗಾವಣೆ ಬಗ್ಗೆ ಎಸ್‌ಎಸ್‌ಟಿ ತನಿಖೆಗೆ ಆದೇಶಿಸಲಾಗಿದೆ. ಪ್ರಾಥಮಿಕ ವರದಿ ಬರಲಿ. ಅಗತ್ಯ ಬಿದ್ದರೆ ಸಿಬಿಐಗೂ ಕೊಡೋಣ. ಪ್ರತಿಪಕ್ಷದವರು ಕೇಳಿದ ಮಾತ್ರಕ್ಕೆ ಸಚಿವರು ರಾಜೀನಾಮೆ ನೀಡಬೇಕಾ.? ಈ ಬಗ್ಗೆ ನಿರ್ಧಾರ ತೆಗೆದುಕೊಳ್ಳುವುದು ಸಿಎಂ ಅವರ ಪರಮಾಧಿಕಾರವಾಗಿದೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಯತ್ನಾಳ್ ಅವರು ಮಾತನಾಡಿದ್ದನ್ನು ಗಮನಿಸಿದ್ದೇನೆ. ಅವರ ಪಕ್ಷ ಅಧಿಕಾರದಲ್ಲಿದ್ದಾಗ ಪಿಎಸ್‌ಐ ಅಕ್ರಮ ನಡೆದಿತ್ತಲ್ಲ ಆಗ ಯಾಕೆ ಮಾತನಾಡಲಿಲ್ಲ.? ಈಗ ಇದ್ದಕ್ಕಿದ್ದಂತೆ ಪರಿಶಿಷ್ಟ ಪಂಗಡದ ಮೇಲೆ ಯಾಕೆ ಪ್ರೀತಿ ಹೆಚ್ಚಾಗಿದೆ? ಎಂದು ಪ್ರಶ್ನಿಸಿದರು.

ಬಿಜೆಪಿಯವರು ಮೊದಲು ತಮ್ಮ ಮನೆಯ ಬೆಂಕಿ ಆರಿಸಿಕೊಳ್ಳಲಿ. ಯತ್ನಾಳ್ ಹೇಳುವಂತೆ ವಿಜಯೇಂದ್ರ ಸ್ಥಾನ ಉಳಿಸಿಕೊಳ್ಳಲಿ. ಕೇಂದ್ರ ಬಿಜೆಪಿಗೆ ವರದಿ ಕಳಿಸಬೇಕಾಗುತ್ತದೆ. ಹಾಗಾಗಿ ಇವರೆಲ್ಲ ಮಾತನಾಡಿದ್ದು ವರದಿ ಕಳಿಸುತ್ತಾರೆ. ಸರಕಾರ ಸುಭದ್ರವಾಗಿದೆ. ಕೇಂದ್ರದಲ್ಲಿ ಎನ್‌ಡಿಎ ಮಿತ್ರ ಪಕ್ಷಗಳು ಅಧಿಕಾರಕ್ಕೆ ಬರಲಿವೆ. ಕರ್ನಾಟಕದಲ್ಲಿ 18 ಕ್ಕೂ ಅಧಿಕ ಸ್ಥಾನಗಳಲ್ಲಿ ಕಾಂಗ್ರೆಸ್ ಗೆಲ್ಲಲಿದೆ.

- ಪ್ರಿಯಾಂಕ್ ಖರ್ಗೆ, ಸಚಿವ

ಒಂದು ಕೋಟಿ ಕಾರನ್ನು ಮನೆಯಲ್ಲೇ ಬಿಟ್ಟು ಹೋಗಿರುವ ಭವಾನಿ

ಎಸ್‌ಐಟಿಗೆ ಸಿಗದ ಭವಾನಿ ದರ್ಶನ

ಬೆಂಗಳೂರು: ಸಂಸದ ಪ್ರಜ್ವಲ್ ರೇವಣ್ಣ ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ಸಂತ್ರಸ್ತ ಮಹಿಳೆಯನ್ನು ಅಪಹರಿಸಿದ ವಿಚಾರವಾಗಿ ವಿಚಾರಣೆಗೆ ಹಾಜರಾಗುವಂತೆ

ಅವರ ತಾಯಿ ಭವಾನಿ ರೇವಣ್ಣ ಅವರಿಗೆ ಎರಡು ಬಾರಿ ಎಸ್‌ಐಟಿ ನೋಟಿಸ್ ನೀಡಿದ್ದರೂ ವಿಚಾರಣೆಗೆ ಹಾಜರಾಗಿಲ್ಲ.

ಭವಾನಿ ರೇವಣ್ಣ ಅವರು ಬಂಧನ ಭೀತಿಯಿಂದಲೇ ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ನಿರೀಕ್ಷಣಾ ಜಾಮೀನಿಗೆ ಅರ್ಜಿ ಸಲ್ಲಿಸಿದ್ದರು. ಆದರೆ ವಿಚಾರಣೆ ನಡೆಸಿದ ನ್ಯಾಯಾಲಯ ಪ್ರಕರಣದಲ್ಲಿ ಅವರ ಹೆಸರು ಇಲ್ಲ ಎಂದ ಮೇಲೆ ಜಾಮೀನಿನ ಅಗತ್ಯವಿಲ್ಲ ಎನ್ನುವ ಕಾರಣ ನೀಡಿ ಅರ್ಜಿ ವಜಾಗೊಳಿಸಿತ್ತು. ಅವರ ಜಾಮೀನು ಅರ್ಜಿ ಶುಕ್ರವಾರ ವಜಾಗೊಂಡ ನಂತರ ನಾಪತ್ತೆಯಾಗಿದ್ದಾರೆ. ಆದ್ದರಿಂದ ಎಸ್‌ಐಟಿಗೆ ಭವಾನಿ ಅವರನ್ನು ಬಂಧಿಸಲು ಮುಂದಾಗಿದೆ.

ಆದರೆ ಸಂತ್ರಸ್ತ ಮಹಿಳೆ ಪ್ರಕರಣದಲ್ಲಿ ವಿಚಾರಣೆಗೆ ಹಾಜರಾಗುವಂತೆ ಎಸ್‌ಐಟಿ ಈಗಾಗಲೇ ಭವಾನಿ ರೇವಣ್ಣ ಅವರಿಗೆ ನೋಟಿಸ್ ಅನ್ನು ಜಾರಿಗೊಳಿಸಿತ್ತು. ಅವರು ವಿಚಾರಣೆಗೆ ಹಾಜರಾಗೇ ಇದ್ದುದರಿಂದ ಮನೆಗೆ ಆಗಮಿಸಿ ಹೇಳಿಕೆ ದಾಖಲಿಸುವುದಾಗಿ ಎಸ್‌ಐಟಿ ತಂಡ ಅವರಿಗೆ ಮಾಹಿತಿ ನೀಡಿತ್ತು. ಅದರಂತೆಯೇ ಜೂನ್ 1ರ ಶನಿವಾರ ಬೆಳಗ್ಗೆ 10ರಿಂದ ಸಂಜೆ 5ರವರೆಗೆ ವಿಚಾರಣೆಗೆ ಹಾಜರಾಗಬೇಕು ಎಂದು ತಿಳಿಸಲಾಗಿತ್ತು. ಈಗಾಗಲೇ ಎಸ್‌ಐಟಿ ತಂಡ ಹೊಳೆನರಸೀಪುರದಲ್ಲಿರುವ ಎಚ್.ಡಿ.ರೇವಣ್ಣ ಅವರ ನಿವಾಸ ಚೆನ್ನಾಂಬಿಕಾಗೆ ಆಗಮಿಸಿದ್ದರೂ ಭವಾನಿ ಕಣ್ಮರೆಯಾಗಿದ್ದಾರೆ.

ಚೆನ್ನಾಂಬಿಕಾ ನಿವಾಸದಲ್ಲಿ ತನಿಖೆಗೆ ತಾನು ಲಭ್ಯ ಇರುತ್ತೇನೆ ಎಂದು ತಿಳಿಸಿದ್ದ ಭವಾನಿ ಶನಿವಾರ ವಿಚಾರಣೆಗೆ ಹಾಜರಾಗಲಿಲ್ಲ. ವಿಚಾರಣೆಗಾಗಿ ಬಂದ ಎಸ್‌ಐಟಿ ಅಧಿಕಾರಿಗಳು ಮನೆಯ ಆವರಣದಲ್ಲೇ ಜೀಪ್‌ನಲ್ಲಿ ಕಾದು ಕುಳಿತರು. ಮನೆಯ ನೆಲಮಾಳಿಗೆ ಯಲ್ಲಿ ಭವಾನಿ ಅವರ ಒಂದು ಕೋಟಿ ರೂಪಾಯಿ ಬೆಲೆಯ ಕಾರು ನಿಂತಿದ್ದು, ಕಾರನ್ನು ಮನೆಯಲ್ಲೇ ಬಿಟ್ಟು ಭವಾನಿ ತೆರಳಿದ್ದಾರೆ. ಕೆಎ-05-ಎಎಲ್-8055 ನಂಬರ್‌ನ ಕಿಯಾ ಕಾನಿವಲ್ ಕಾರನ್ನು ಮನೆಯ ನೆಲಮಾಳಿ ಗೆಯಲ್ಲಿ ಪ್ರಜ್ವಲ್ ರೇವಣ್ಣ ಅವರ ಕಾರಿನ ಪಕ್ಕದಲ್ಲೇ ನಿಲ್ಲಿಸಲಾಗಿತ್ತು.

15 ದಿನಗಳ ಹಿಂದೆಯೇ ಮನೆ ತೊರೆದಿರುವ ಭವಾನಿ ರೇವಣ್ಣ

ಹೊಳೆನರಸೀಪುರದಲ್ಲಿರುವ ಭವಾನಿ ರೇವಣ್ಣ ನಿವಾಸ ಖಾಲಿಯಾಗಿದೆ. ಬಂಧನದ ಭೀತಿಯಿಂದ ಭವಾನಿ 15 ದಿನಗಳ ಹಿಂದೆಯೇ ಮನೆ ತೊರೆದಿದ್ದಾರೆ. ಭದ್ರತಾ ಸಿಬ್ಬಂದಿ ಹಾಗೂ ಕೆಲಸದವರು ಮಾತ್ರ ಇದ್ದಾರೆ. ಹೀಗಾಗಿ ಭವಾನಿ ಮೊಬೈಲ್ ಲೊಕೇಶನ್ ಮೇಲೆ ಎಸ್‌ಐಟಿ ಕಣ್ಣಿಟ್ಟಿದೆ. ಚಿಕಿತ್ಸೆ ನೀಡುತ್ತಿರುವ ವೈದ್ಯರನ್ನ ಸಂಪರ್ಕಿಸಲು ಯತ್ನಿಸುತ್ತಿದೆ. ಭವಾನಿ ವಿಚಾರಣೆಗೆ ಹಾಜರಾದರೆ ಎಸ್‌ಐಟಿ ವಶಕ್ಕೆ ಪಡೆಯಲಿದೆ.

ಪ್ರಜ್ವಲ್ ಕ್ಷಮೆಗೆ ಅರ್ಹನಲ್ಲ, ಕ್ಷಮಿಸುವ ಪ್ರಶ್ನೆಯೇ ಇಲ್ಲ

ಹುಬ್ಬಳ್ಳಿ: ಪ್ರಜ್ವಲ್ ರೇವಣ್ಣ ಕ್ಷಮಿಸಲಾರದಂತಹ ಅಪರಾಧ ಮಾಡಿದ್ದಾರೆ. ಹೀಗಾಗಿ ಅವರನ್ನು ಕ್ಷಮಿಸುವ ಪ್ರಶ್ನೆಯೇ ಇಲ್ಲ ಎಂದು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರಜ್ವಲ್ ರೇವಣ್ಣನನ್ನು ಎಸ್‌ಐಟಿ ಕಸ್ಟಡಿಗೆ ಕೊಟ್ಟಿದ್ದಾರೆ. ಸರಿಯಾದ ರೀತಿಯಲ್ಲಿ ತನಿಖೆ ಆಗಬೇಕು. ಇದೊಂದು ಗಂಭೀರ ಪ್ರಕರಣ. ಭಾರತದಂತಹ ದೇಶದಲ್ಲಿ ಮಹಿಳೆಯರನ್ನು ನಾವು ಗೌರವದಿಂದ ಕಾಣುತ್ತೇವೆ. ಈ ರೀತಿಯ ಘಟನೆ



ನಡೆದಿರುವುದು ಹೇಸಿಗೆ ಹುಟ್ಟಿಸುವಂತಾಗಿದೆ, ಮನಸ್ಸಿಗೆ ಕಿರಿಕಿರಿ ಆಗುತ್ತಿದೆ. ಇದನ್ನು ಅತ್ಯಂತ ಕಟ್ಟುನಿಟ್ಟಾಗಿ ತನಿಖೆಗೆ ಒಳಪಡಿಸಬೇಕು. ಈ ನಿಟ್ಟಿನಲ್ಲಿ ನ್ಯಾಯಾಂಗ ವ್ಯವಸ್ಥೆ ಸೂಕ್ತ ಕ್ರಮ ಕೈಗೊಳ್ಳಲಿದೆ ಅನ್ನೋ ಭರವಸೆ ಇದೆ. ತ್ವರಿತಗತಿಯಲ್ಲಿ ತನಿಖೆ ಮುಗಿಸಿ ಗರಿಷ್ಠ ಶಿಕ್ಷೆ ಕೊಡುವಂತಾಗಬೇಕು ಎಂದರು.

ಪ್ರಜ್ವಲ್ ರೇವಣ್ಣ ರಾಜ್ಯದ ಕ್ಷಮೆ ಕೇಳಿದ ವಿಚಾರಕ್ಕೆ ಪ್ರತಿಕ್ರಿಯೆ ನೀಡಿದ ಜೋಶಿ, ಆರೋಪಿ ಸ್ಥಾನದಲ್ಲಿದ್ದವರು ಕ್ಷಮೆ ಕೇಳಿದ ಕೂಡಲೇ ಬಿಟ್ಟುಬಿಡೋಕೆ ಆಗುತ್ತದೆಯೇ? ಯಾಕೆ ಕ್ಷಮೆ ಕೇಳಿದರು ಅಂತ ಪ್ರಜ್ವಲ್ ಉತ್ತರ ಕೊಡಲಿ. ಅವರು ಕ್ಷಮೆ ಕೇಳುವುದಿದ್ದರೆ ಸಂತ್ರಸ್ತರ ಕ್ಷಮೆ ಕೇಳಲಿ. ಪೆನ್ ಡ್ರೈವ್ ಹಂಚಿಕೆ ಇತ್ಯಾದಿಗಳನ್ನು ನೋಡಿದಾಗ ಪ್ರಜ್ವಲ್ ಕ್ಷಮೆಗೆ ಅರ್ಹರಲ್ಲ ಎಂದು ಕಿಡಿಕಾರಿದರು.

ಕಮಲ ಪ್ರಾಬಲ್ಯದ ಕ್ಷೇತ್ರದಲ್ಲಿ ಕಾಂಗ್ರೆಸ್ ವಿಜಯಿಶಾಲಿಯಾಗಲು ತಂತ್ರಗಾರಿಕೆ

ಪದವೀಧರರ ಎಲೆಕ್ಷನ್: ಕೈ-ಕಮಲ ನಡುವೆ ಫೈಟ್



ತುಮಕೂರು: ಆಗ್ನೇಯ ಶಿಕ್ಷಕರ ಕ್ಷೇತ್ರದ ಕದನದ ಕಾವು ರಂಗೇರಿದ್ದು ಹಾಲಿ ವಿಪ ಸದಸ್ಯ ಬಿಜೆಪಿ, ಜೆಡಿಎಸ್ ಪಕ್ಷದ ಮೈತ್ರಿ ಅಭ್ಯರ್ಥಿ ವೈ.ಎ. ನಾರಾಯಣಸ್ವಾಮಿ ಹಾಗೂ ಕಾಂಗ್ರೆಸ್ ಅಭ್ಯರ್ಥಿ ಡಿ.ಟಿ.ಶ್ರೀನಿವಾಸ್ ನಡುವೆ ಫೈಟ್ ಏರ್ಪಟ್ಟಿದೆ. ಬಿಜೆಪಿ ಸತತವಾಗಿ ಕ್ಷೇತ್ರವನ್ನು ಉಳಿಸಿಕೊಳ್ಳಲು ಎಲ್ಲಾ ರೀತಿಯ ಕಸರತ್ತು ನಡೆ ಸುತ್ತಿದೆ. ಕಮಲ ಪ್ರಾಬಲ್ಯದ ಕ್ಷೇತ್ರದಲ್ಲಿ ಕೈ ವಿಜಯಿಶಾಲಿಯಾಗಲು ತಂತ್ರಗಾರಿಕೆ ಎಣೆ ಯುತ್ತಿದೆ. ಚಿತ್ರದುರ್ಗ, ಕೋಲಾರ, ತುಮಕೂರು, ಚಿಕ್ಕಬಳ್ಳಾಪುರ, ದಾವಣಗೆರೆ (ಹೊನ್ನಾ ಳಿ, ಚನ್ನಗಿರಿ ತಾಲೂಕು ಹೊರತುಪಡಿಸಿ) ಐದು

ಜಿಲ್ಲೆಯನ್ನು ಒಳಗೊಂಡ ಆಗ್ನೇಯ ಶಿಕ್ಷಕರ ಕ್ಷೇತ್ರದಲ್ಲಿ ತುಮಕೂರು ಜಿಲ್ಲೆಯಲ್ಲಿ ಅತಿ ಹೆಚ್ಚು ಶಿಕ್ಷಕ ಮತದಾರರಿದ್ದಾರೆ.

ತುಮಕೂರು ಜಿಲ್ಲೆಯಲ್ಲಿ ಹೆಚ್ಚು ಮತಗಳನ್ನು ಪಡೆದ ಅಭ್ಯರ್ಥಿ ಜಯಗಳಿಸುವ ಸಾಧ್ಯತೆ ಯಿದೆ. ರಣರಂಗದಲ್ಲಿ ಜಯಗಳಿಸಲು ಪ್ರತಿ ಮತದಾರರನ್ನು ಖುದ್ದಾಗಿ ಭೇಟಿ ಮಾಡಲು ಕಲಿಗಳು ಪ್ರಯತ್ನ ನಡೆಸುತ್ತಿದ್ದಾರೆ. ಸ್ವತಂತ್ರ ಅಭ್ಯರ್ಥಿಗಳಾಗಿ ಸ್ಪರ್ಧಿಸಿರುವ ಖಾಸಗಿ ಶಾಲೆಗಳ ರೂಪ್ಸಾ ಸಂಘದ ಅಧ್ಯಕ್ಷ ಲೋಕೇಶ್ ತಾಳಿಕಟ್ಟೆ, ವಿನೋದ್ ಶಿವರಾಜ್ ಪೈಪೋಟಿ ಪೈಪೋಟಿ ನೀಡಲು ಹರಸಾಹಸ ಪಡುತ್ತಿದ್ದಾರೆ. ಆರಂಭ ದಲ್ಲಿ ಪಕ್ಷೇತರರು ಪೈಪೋಟಿ ನೀಡುವ ಲಕ್ಷಣ ಕಂಡುಬಂದಿದ್ದರು ಚುನಾವಣೆ ಸಮೀಪ ಬಂದಂ ತೆ ಪೈಪೋಟಿ ನೀಡುವಲ್ಲಿ ತ್ರಾಸ ಪಡುತ್ತಿದ್ದಾರೆ.

ಪಾರ್ಟಿ, ಗಿಫ್ಟ್ ಜೋರು: ಶಿಕ್ಷಕರ ಚುನಾವಣೆ ಮತ ಸೆಳೆಯಲು ಅಭ್ಯರ್ಥಿಗಳು ಮತದಾರರಿಗೆ ಗಿಫ್ಟ್ ನೀಡುತ್ತಿರುವುದು ಜೋರಾಗಿ ನಡೆಯು ತ್ತಿದೆ. ಮಹಿಳಾ, ಪುರುಷ ಮತದಾರರಿಗೆ ಪ್ರತಿದಿನ ಪಾರ್ಟಿ ನೀಡುವ ಮೂಲಕ ಮತ ಗಳಿಸಲು ಕಸರತ್ತು ನಡೆಸುತ್ತಿದ್ದಾರೆ.

ಜೂ.6ಕ್ಕೆ ಕಲಿಗಳ ಹಣೆಬರಹ ಪ್ರಕಟ: ಶಿಕ್ಷಕರ ಕ್ಷೇತ್ರಕ್ಕೆ ಜೂ.3 ರಂದು ಮತದಾನ ನಡೆಯಲಿದೆ. ಜೂ. 6 ರಂದು ಮತ ಎಣಿಕೆ ಕಾರ್ಯ ನಡೆಯಲಿ ದ್ದು ಅಭ್ಯರ್ಥಿಗಳ ಹಣೆ ಬರಹ ಹೊರಬೀಳಲಿದೆ.

25,308 ಮತದಾರರು: ಆಗ್ನೇಯ ಕ್ಷೇತ್ರದ ಐದು ಜಿಲ್ಲೆಗಳಲ್ಲಿ 15819 ಪುರುಷ ಮತದಾರ ಹಾಗೂ 9489 ಮಹಿಳಾ ಮತದಾರರು ಸೇರಿ ಒಟ್ಟು 25308 ಮತದಾರರಿದ್ದಾರೆ. ಚಿಕ್ಕಬಳ್ಳಾಪುರ ಜಿಲ್ಲೆ ಯಲ್ಲಿ ಕಡಿಮೆ ಮತದಾರರು ಹಾಗೂ ತುಮ ಕೂರು ಜಿಲ್ಲೆಯಲ್ಲಿ ಹೆಚ್ಚು ಮತದಾರರಿದ್ದಾರೆ.

ಜಿಲ್ಲೆ-ಪುರುಷ-ಮಹಿಳೆ-ಒಟ್ಟು ಮತದಾರರು

ತುಮಕೂರು	4964	2761	7725
ಚಿತ್ರದುರ್ಗ	3442	1471	4913
ಕೋಲಾರ	2392	2158	4550
ದಾವಣಗೆರೆ	2795	1556	4351
(ಹೊನ್ನಾಳಿ, ಚನ್ನಗಿರಿ ಹೊರತು ಪಡಿಸಿ)			
ಚಿಕ್ಕಬಳ್ಳಾಪುರ	2226	1543	3769
ಒಟ್ಟು	15819	9489	25308

ಅಭ್ಯರ್ಥಿಗಳ ನಡುವೆ ತೀವ್ರ ಹಣಾಹಣಿ

2018ರಲ್ಲಿ ಆಗ್ನೇಯ ಶಿಕ್ಷಕರ ಕ್ಷೇತ್ರಕ್ಕೆ ಬಿಜೆಪಿಯಿಂದ ಸ್ಪರ್ಧಿಸಿ 8479 ಮತ ಪಡೆದು ಜಯಗಳಿಸಿದ್ದ ಹಾಲಿ ವಿಪ ಸದಸ್ಯ ಕೋಲಾರ ಮೂಲದ ವೈ.ಎ.ನಾರಾಯಣ ಸ್ವಾಮಿ ಈ ಬಾರಿ ಬಿಜೆಪಿ, ಜೆಡಿಎಸ್ ಮೈತ್ರಿ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದಾರೆ. ಇವರ ಅವಧಿಯಲ್ಲಿನ ಅಭಿವೃದ್ಧಿ ಕಾರ್ಯಗಳು, ಶಿಕ್ಷಕರ ಸಮಸ್ಯೆಗಳಿಗೆ ಸ್ಪಂದಿಸಿರುವ ಅಂಶವನ್ನು ಆಧಾರವಾಗಿಟ್ಟು ಕೊಂಡು ಮರು ಆಯ್ಕೆಯಾಗಲು ಕಸರತ್ತು ಕೈಗೊಂಡಿದ್ದಾರೆ. 2020ರ ಆಗ್ನೇಯ ಪದವೀಧರ ಕ್ಷೇತ್ರಕ್ಕೆ ಸ್ವತಂತ್ರ ಅಭ್ಯರ್ಥಿ ಯಾಗಿ ಸ್ಪರ್ಧಿಸಿ 23,851 ಮತ ಪಡೆದು ಪರಾಭವಗೊಂಡಿದ್ದ ಬೆಂಗಳೂರು ಮೂಲದ ಡಿ.ಟಿ.ಶ್ರೀನಿವಾಸ್ ಈ ಬಾರಿ ಕಾಂಗ್ರೆಸ್ ಪಕ್ಷದಿಂದ ಕಣಕ್ಕಿಳಿದಿದ್ದು, ವಿಜಯಶಾಲಿಯಾಗಲು ತಂತ್ರಗಾರಿಕೆ ರೂಪಿಸಿದ್ದಾರೆ.

ಇಂಡಿ ಒಕ್ಕೂಟಕ್ಕೆ 295 ಸ್ಥಾನ: ಖರ್ಗೆ ವಿಶ್ವಾಸ

ದೆಹಲಿ: ಪ್ರಸಕ್ತ ಲೋಕಸಭಾ ಚುನಾವಣೆಯ 7ನೇ ಹಂತದ ಮತದಾನ ಶನಿವಾರ ಸಂಜೆ 5ಕ್ಕೆ ಅಂತ್ಯ ಗೊಳ್ಳುತ್ತಿದ್ದಂತೆಯೇ 'ಇಂಡಿಯ' ಒಕ್ಕೂಟ ಸಭೆ ನಡೆಸಿ ಚರ್ಚೆ ಮಾಡಿದೆ. 'ಇಂಡಿಯ' ಒಕ್ಕೂಟ 295 ಸ್ಥಾನ ಗೆಲ್ಲಲಿದೆ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮಹತ್ವದ ಘೋಷಣೆ ಮಾಡಿದ್ದಾರೆ.

7 ಹಂತದಲ್ಲಿ ಜನರು ಕಾಂಗ್ರೆಸ್ ಪರ ಒಲವು ತೋರಿದ್ದಾರೆ. ಆಂತರಿಕ ಸಮೀಕ್ಷೆಯಲ್ಲಿ ಕಾಂಗ್ರೆಸ್ ಪರ ಜನರ ಒಲವು ವ್ಯಕ್ತವಾಗಿದೆ. ಹೀಗಾಗಿ ಇಂಡಿಯ ಒಕ್ಕೂಟ 295 ಸ್ಥಾನ ಗೆಲ್ಲಲಿದೆ. ಇಂಡಿಯ ಒಕ್ಕೂಟವೇ ಕೇಂದ್ರದಲ್ಲಿ ಸರಕಾರ ರಚಿಸಲಿದೆ ಎಂದು ಖರ್ಗೆ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಕಾಂಗ್ರೆಸ್ 2023ರ ವಿಧಾನಸಭಾ ಚುನಾವಣೆ ಗಳಿಗಿಂತ ಈಗಿನ ಲೋಕಸಭಾ ಚುನಾವಣೆಯಲ್ಲಿ ಉತ್ತಮ ಪ್ರದರ್ಶನ ನೀಡಲಿದೆ. ಅಷ್ಟೇ ಅಲ್ಲ ಏಕಾಂಗಿಯಾಗಿ ಸ್ಥಾನಗಳನ್ನೂ ಹೆಚ್ಚಿಸಿಕೊಳ್ಳಲಿದೆ ಎಂದು 'ಫಲೋಡಿ ಸಟ್ಟಾ ಬಜಾರ್' ಹೇಳಿದೆ. ಅದರ ಅಂದಾಜಿನ ಪ್ರಕಾರ, ಕಾಂಗ್ರೆಸ್ 60ರಿಂದ 63 ಸ್ಥಾನ ಗೆಲ್ಲಲಿದೆ.

ಚಾರ್ ಸೌ ಪಾರ್ ನಿಜವಾಗಲಿದೆ: ಟುಡೇಸ್ ಚಾಣಕ್ಯ!

ದೆಹಲಿ: ಶನಿವಾರ ಸಂಜೆ 5ರ ಬಳಿಕ ಚುನಾವಣೋತ್ತರ ಸಮೀಕ್ಷೆ ಪ್ರಕಟಿಸಿದ ಹತ್ತಾರು ಸಂಸ್ಥೆಗಳಲ್ಲಿ 'ಟುಡೇಸ್ ಚಾಣಕ್ಯ' ಸಂಸ್ಥೆ ಮಾತ್ರವೇ ಬಿಜೆಪಿ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರ 'ಇಸ್ ಬಾರ್ ಚಾರ್ ಸೌ ಪಾರ್'(ಈ ಬಾರಿ 400ರ ಗಡಿ ದಾಟಿ) ಎಂಬ ಮಂತ್ರವನ್ನು ನಿಜವಾಗಲಿದೆ ಎಂದು ಹೇಳಿದೆ.

ಉಳಿದೆಲ್ಲಾ ಸಮೀಕ್ಷೆಗಳು ಗರಿಷ್ಠ 350ರಿಂದ 365 ಎಂದು ಹೇಳಿದ್ದರೆ, ಎನ್‌ಡಿಎ ಈ ಬಾರಿ ಖಂಡಿತಾ 400 ಸ್ಥಾನಗಳ ಗಡಿ ದಾಟಲಿದೆ ಎಂದೇ 'ಟುಡೇಸ್ ಚಾಣಕ್ಯ' ಚುನಾವಣೋತ್ತರ ಸಮೀಕ್ಷೆ ದೃಢವಾಗಿ ಹೇಳುತ್ತಿದೆ. ಕೆಲವು ಸಮೀಕ್ಷೆಗಳು ಬಿಹಾರ ಮತ್ತು ರಾಜಸ್ಥಾನದಲ್ಲಿ ಬಿಜೆಪಿಗೆ ಸ್ವಲ್ಪ ಹಿನ್ನಡೆಯಾಗಲಿದೆ. ಕಳೆದ ಬಾರಿಯಷ್ಟು (2019) ಸ್ಥಾನಗಳು ಬಿಜೆಪಿ ಈ ಬಾರಿ ದೊರೆಯುವುದಿಲ್ಲ ಎಂದು ಅಂದಾಜು ಮಾಡಿವೆ.

ಇದೇ ವೇಳೆ, 'ಆಕ್ಸಿಸ್ ಮೈ ಇಂಡಿಯ' ಸಮೀಕ್ಷೆ, ಕೇರಳದಲ್ಲಿ ಬಿಜೆಪಿ ಖಾತೆ ತೆರೆಯಲಿದೆ. ಶೇ,27ರಷ್ಟು ಮತ ಪ್ರಮಾಣ ಗಳಿಸಲಿದೆ. ಕೇಸರಿ ಪಕ್ಷದ ಪಾಲಿಗೆ 'ದೇವರ ಸ್ವಂತ ನಾಡಿನಲ್ಲಿ' ಇದುವೇ ದೊಡ್ಡ ಗೆಲುವು ಎನಿಸಿಕೊಳ್ಳಲಿದೆ. ಪಶ್ಚಿಮ ಬಂಗಾಳದಲ್ಲಿ ಈ ಬಾರಿ ಬಿಜೆಪಿ ಬಲ ವೃದ್ಧಿಯಾಗಲಿದೆ ಎಂದೂ ಹೇಳಿದೆ.

5 ಸಮೀಕ್ಷೆಗಳಲ್ಲಿ ಎನ್‌ಡಿಎಗೆ 365 ಸ್ಥಾನ

ದೆಹಲಿ: ಬಹುತೇಕ ಎಲ್ಲಾ ಸಂಸ್ಥೆಗಳ ಚುನಾವ 'ಣೋತ್ತರ ಸಮೀಕ್ಷೆಗಳು ಎನ್‌ಡಿಎ ಮೈತ್ರಿಕೂಟಕ್ಕೆ 350ಕ್ಕೂ ಹೆಚ್ಚು ಸ್ಥಾನ ನೀಡಿವೆ. 'ಇಂಡಿಯ' ಒಕ್ಕೂಟಕ್ಕೆ 150 ಸ್ಥಾನ ನೀಡಿವೆ. ಸಮೀಕ್ಷೆಗಳ ಪ್ರಕಾರ ಪ್ರಧಾನಿ ನರೇಂದ್ರ ಮೋದಿ ಅವರು 3ನೇ ಬಾರಿಗೆ ಅಧಿಕಾರಕ್ಕೇರುವುದು ಖಚಿತವಿದೆ.

ಒಟ್ಟು 5 ಎಕ್ಸಿಟ್ ಪೋಲ್‌ಗಳು ಎನ್‌ಡಿಎ 365 ಸ್ಥಾನಗಳನ್ನು ಪಡೆಯಲಿದೆ. ಇಂಡಿಯ ಒಕ್ಕೂಟ 142 ಸ್ಥಾನಗಳಿಗಷ್ಟೇ ತೃಪ್ತಿ ಪಡಬೇಕಿದೆ ಎಂದು ಹೇಳಿವೆ.

ಕೆಲ ರಾಜ್ಯಗಳಲ್ಲಿ ಬಿಜೆಪಿ ಅಚ್ಚರಿ ಫಲಿತಾಂಶ ತೋರಲಿದೆ ಎಂದು ಚುನಾವಣೋತ್ತರ ಸಮೀಕ್ಷೆಗಳು ಹೇಳುತ್ತಿವೆ. ಪ್ರಮುಖವಾಗಿ ಪಶ್ಚಿಮ ಬಂಗಾಳದಲ್ಲಿ ಆಡಳಿತಾರೂಢ ತೃಣಮೂಲ ಕಾಂಗ್ರೆಸ್(ಟಿಎಂಸಿ)ಗೆ ಬಿಜೆಪಿ ದೊಡ್ಡ ಆಘಾತ ನೀಡಲಿದೆ ಎಂದು 3 ಸಮೀಕ್ಷೆಗಳು ಹೇಳುತ್ತಿವೆ. 'ಜನ್ ಕಿ ಬಾತ್' ಸಮೀಕ್ಷೆ ಪ್ರಕಾರ ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಲಿದೆ. ಬಿಜೆಪಿ 21ರಿಂದ 26 ಸ್ಥಾನ ಗೆದ್ದರೆ, ಟಿಎಂಸಿ 16 ರಿಂದ 18 ಸ್ಥಾನಕ್ಕೆ ಕುಸಿಯಲಿದೆ ಎಂದಿದೆ. 2019ರ ಚುನಾವಣೆಯಲ್ಲಿ ಟಿಎಂಸಿ 22 ಸ್ಥಾನ ಗೆದ್ದಿತ್ತು. ಬಿಜೆಪಿ 18 ಸ್ಥಾನ ಪಡೆದಿತ್ತು. ಡಿ ಡೈನಮಿಕ್ಸ್ ಸಮೀಕ್ಷೆ ಪ್ರಕಾರ ಬಿಜೆಪಿ 21 ಸ್ಥಾನ ಗೆಲ್ಲಲಿದೆ ಎಂದರೆ, ಟಿಎಂಸಿ 19 ಸ್ಥಾನ ಗೆಲ್ಲಲಿದೆ ಎಂದಿದೆ. ಭಾರತ್ ಮ್ಯಾಟ್ರಿಸ್ ಸಮೀಕ್ಷೆ ಪ್ರಕಾರ ಬಿಜೆಪಿ 21ರಿಂದ 25 ಸ್ಥಾನ ಹಾಗೂ ಟಿಎಂಸಿ 16 ರಿಂದ 20 ಸ್ಥಾನ ಗೆಲ್ಲಲಿದೆ ಎಂದಿದೆ.

ಚಾರ್ ಸೌ ಪಾರ್ ಈ ಬಾರಿ ಕನಸು | 2019ಕ್ಕಿಂತ ಎನ್‌ಡಿಎ ಇನ್ನಷ್ಟು ಬಲಿಷ್ಠ
ಬಿಜೆಪಿ ಸ್ವಸಾಮರ್ಥ್ಯವೂ ಮತ್ತಷ್ಟು ವೃದ್ಧಿ | ಇಂಡಿಯ ಒಕ್ಕೂಟದ ಬಲವೂ ವಿಸ್ತಾರ

ನಮೋ 3.0 ಖಚಿತ: ಎಕ್ಸಿಟ್ ಪೋಲ್ ವಿಶ್ವಾಸ

ದೆಹಲಿ: ಇಡೀ ದೇಶವೇ ಕಾಯುತ್ತಿದ್ದ ದಿನ ಜೂ.4 ಹತ್ತಿರವಾಗುತ್ತಿದೆ. 2024ರ ಸಾರ್ವತ್ರಿಕ ಚುನಾವಣೆಯ ಫಲಿತಾಂಶ ತಿಳಿಯಲು ಇಡೀ ಭಾರತ ತವಕದಿಂದ ಕಾಯುತ್ತಿದೆ. ಭಾರತವಷ್ಟೇ ಅಲ್ಲ, ನೆರೆಯ ಪಾಕಿಸ್ತಾನ, ದೂರದ ಅಮೆರಿಕ, ಪಾರ್ಶ್ವದ ಚೀನಾ ಸೇರಿದಂತೆ ವಿಶ್ವದೆಲ್ಲೆಡೆ ಕುತೂಹಲ ಗರಿಗೆದರಿದೆ. ಭಾರತವನ್ನು ಮುಂದಿನ 5 ವರ್ಷ ಆಳುವವರು ಯಾರು? ಎಂಬುದನ್ನು ಮುಂಚಿತವಾಗಿಯೇ ತಿಳಿಯಬೇಕೆಂಬ ಕಾತರ ಎಲ್ಲೆಲ್ಲೂ!

ಮಹಾ ರಥೋತ್ಸವಕ್ಕೂ ಮುನ್ನ ಕಿರು ರಥ ಎಳೆದಂತೆ ವಿವಿಧ ಸಂಸ್ಥೆಗಳ ಚುನಾವಣೋತ್ತರ ಸಮೀಕ್ಷೆ ಶನಿವಾರ ಸಂಜೆ ಪ್ರಕಟವಾಗಿದೆ. 7ನೇ ಹಂತದ ಮತದಾನ ಪ್ರಕ್ರಿಯೆ ಕೊನೆಗೊಳ್ಳುವುದನ್ನೇ ಕಾಯುತ್ತಾ ಕ್ಷಣಗಣನೆ ನಡೆಸಿದ್ದ ಮಾಧ್ಯಮ ಹಾಗೂ ಚುನಾವಣಾ ಸಮೀಕ್ಷಾ ಸಂಸ್ಥೆಗಳು ಜಂಟಿಯಾಗಿ, ಒಂಟಿಯಾಗಿ ನಡೆಸಿದ್ದ ಚುನಾವಣೋತ್ತರ ಸಮೀಕ್ಷೆಗಳನ್ನು ಪೈಪೋಟಿಯಲ್ಲಿ ಪ್ರಕಟಗೊಳಿಸಿವೆ.

ಬಹುತೇಕ ಚುನಾವಣೋತ್ತರ ಸಮೀಕ್ಷೆಗಳ ಪ್ರಕಾರ, 3ನೇ ಬಾರಿಯೂ ನರೇಂದ್ರ ಮೋದಿ ಅವರದ್ದೇ ಆಡಳಿತ ಮುಂದುವರಿಯುವ ಸಾಧ್ಯತೆ ಕಂಡುಬಂದಿದೆ. ಬಿಜೆಪಿ ಮತ್ತು ಅದರ ಮಿತ್ರ ಪಕ್ಷಗಳು ತಮ್ಮ ಸಂಖ್ಯೆಯನ್ನು 2019ರಲ್ಲಿ ಇದ್ದುದಕ್ಕಿಂತ ಹೆಚ್ಚಿಸಿಕೊಂಡಿವೆ.

ನ್ಯೂಸ್ 18 ಮೆಗಾ ಎಕ್ಸಿಟ್ ಪೋಲ್, ಬಿಜೆಪಿ ನೇತೃತ್ವದ ಎನ್‌ಡಿಎ 2024ರ ಚುನಾವಣೆಯಲ್ಲೂ ಹೆಚ್ಚಿನ ಸ್ಥಾನ ಗಳಿಸಿ ಮರಳಿ ಅಧಿಕಾರಕ್ಕೇರಲಿದೆ ಎಂದೇ ಭವಿಷ್ಯ ನುಡಿದಿದೆ. ಮಧ್ಯಪ್ರದೇಶ, ಗುಜರಾತ್, ಅಸ್ಸಾಂ, ರಾಜಸ್ಥಾನದಲ್ಲಿ ಆಡಳಿತಾರೂಢ ಪಕ್ಷವಾಗಿರುವ ಬಿಜೆಪಿ ಕ್ಲೀನ್ ಸ್ವೀಪ್ ಮಾಡಲಿದೆ.

29 ಲೋಕಸಭಾ ಕ್ಷೇತ್ರಗಳಿರುವ ಮಧ್ಯಪ್ರದೇಶದಲ್ಲಿ ಬಿಜೆಪಿ 26ರಿಂದ 29 ಕ್ಷೇತ್ರಗಳಲ್ಲಿ ಜಯ ಸಾಧಿಸಲಿದೆ. 'ಇಂಡಿಯ' ಒಕ್ಕೂಟ 0-3 ಸ್ಥಾನ ಗೆಲ್ಲುವ ಸಂಭವವಿದೆ. 2019ರಲ್ಲಿ ಈ ರಾಜ್ಯದಲ್ಲಿ ಬಿಜೆಪಿ 28 ಕ್ಷೇತ್ರಗಳನ್ನು ಗೆದ್ದುಕೊಂಡು ಪರಾಕ್ರಮ ಮೆರೆದಿತ್ತು. ಕಾಂಗ್ರೆಸ್ 1 ಕ್ಷೇತ್ರದಲ್ಲಷ್ಟೇ ಗೆದ್ದಿತ್ತು.

ಬಿಜೆಪಿ ಈ ಬಾರಿ ಮಧ್ಯಪ್ರದೇಶದಲ್ಲಿ ಶೇ.59ರಷ್ಟು ಮತ ಗಳಿಸಲಿದೆ. ಇಂಡಿಯ ಒಕ್ಕೂಟಕ್ಕೆ ಶೇ.32ರಷ್ಟು ಮತ ಪ್ರಮಾಣ ಲಭಿಸಬಹುದು. ಅಸ್ಸಾನಲ್ಲಿಯೂ ಬಿಜೆಪಿ ಆಡಳಿತ ಪಕ್ಷ. ಈ ರಾಜ್ಯದಲ್ಲೂಎನ್‌ಡಿಎ ಕ್ಲೀನ್ ಸ್ವೀಪ್(10-13 ಸ್ಥಾನ) ಮಾಡಲಿದೆ.

ಕಾಂಗ್ರೆಸ್ ಇಂಡಿಯ ಒಕ್ಕೂಟ ಸಾಧನೆ

ಪಂಜಾಬ್‌ನಲ್ಲಿ ಕಾಂಗ್ರೆಸ್ ಅತ್ಯಧಿಕ ಸ್ಥಾನ ಗಳಿಸಲಿದೆ. ಆಮ್ ಆದ್ಮಿ ಪಕ್ಷ ಆಡಳಿತ ನಡೆಸಿರುವ ರಾಜ್ಯದಲ್ಲಿ ಆ ಪಕ್ಷಕ್ಕೆ ಕೇವಲ 0-1 ಲೋಕಸಭಾ ಸ್ಥಾನ ಗೆಲ್ಲಲಷ್ಟೇ ಸಾಧ್ಯವಾಗಲಿದೆ. ಕಾಂಗ್ರೆಸ್ 8-10 ಸ್ಥಾನ ಗೆಲ್ಲಬಹುದಾಗಿದೆ. ಬಿಜೆಪಿ 2-4 ಸ್ಥಾನಗಳ ಗಳಿಕೆ ನಿರೀಕ್ಷೆ ಇದೆ ಎಂದು ನ್ಯೂಸ್ 18 ಸಮೀಕ್ಷೆ ತಿಳಿಸಿದೆ.



ಎಎಪಿಗೆ ಹೃದಯ ಭಗ್ನ ಸಂಭವ!?

ದೆಹಲಿಯಲ್ಲಿ ಆಡಳಿತ ನಡೆಸುತ್ತಿರುವ ಆಮ್ ಆದ್ಮಿ ಪಕ್ಷ(ಎಎಪಿ)ಗೆ ದೆಹಲಿಯ ಜನತೆ 'ವಿಷ್' ಮಾಡುವ ಬದಲು 'ವಿದಾಯ' ಹೇಳುತ್ತಿರುವಂತಿದೆ. ರಾಷ್ಟ್ರ ರಾಜಧಾನಿ ಪ್ರದೇಶದಲ್ಲಿನ 7 ಲೋಕಸಭಾ ಸ್ಥಾನಗಳಲ್ಲಿ ಎಲ್ಲಾ ಸ್ಥಾನಗಳನ್ನೂ ಕಮಲ ಪಕ್ಷಕ್ಕೇ ಮತದಾರರು ನೀಡಿದಂತಿದೆ. ಬಿಜೆಪಿ ಏಳೂ ಕ್ಷೇತ್ರಗಳಲ್ಲಿ ಹಕ್ಕು ಸಾಧಿಸಿದಂತಿದೆ. ಕಾಂಗ್ರೆಸ್ ಪಕ್ಷ 0-2 ಸ್ಥಾನ ಪಡೆಯುವ ಸಂಭವವಿದೆ. ಎಎಪಿಯದು ಶೂನ್ಯ ಸಂಪಾದನೆಯಾಗಲಿದೆ ಎಂದು ನ್ಯೂಸ್ 18 ಮೆಗಾ ಸಮೀಕ್ಷೆ ತಿಳಿಸಿದೆ. ಸುಡುಬಿಸಿಲ ನಡುವೆಯೂ ದೆಹಲಿಯಲ್ಲಿ ಶೇ.54ರಷ್ಟು ಮತದಾನವಾಗಿತ್ತು.

ಈ ಬಾರಿಯ ಚುನಾವಣೆ ವಿಶಿಷ್ಟ!

2024ರ ಸಾರ್ವತ್ರಿಕ ಚುನಾವಣೆಯ ವಿಶೇಷವೆಂದರೆ 'ನೇರಾನೇರ ಪೈಪೋಟಿ'! 25ಕ್ಕೂ ಅಧಿಕ ಪಕ್ಷಗಳೆಲ್ಲಾ ಒಟ್ಟಾಗಿ ಮೈತ್ರಿ ಮಾಡಿಕೊಂಡು 2 ಬಲಿಷ್ಠ ಬಣಗಳಾಗಿ ಸ್ಪರ್ಧೆ ಮಾಡಿವೆ. ನ್ಯಾಷನಲ್ ಡೆಮಾಕ್ರೆಟಿಕ್ ಅಲಯನ್ಸ್(ಎನ್‌ಡಿಎ) ಮತ್ತು ಸಮಾನ ಮನಸ್ಕ 26 ಪಕ್ಷಗಳ ಒಕ್ಕೂಟ 'ಇಂಡಿಯ'. ಈ ಎರಡೂ ಬಣಕ್ಕೂ ಸೇರದೇ ಇದ್ದ ಪಕ್ಷಗಳು ಇದ್ದರೂ ಅವುಗಳ ಸಂಖ್ಯೆ, ಪ್ರಾತಿನಿಧ್ಯ, ಸಾಮರ್ಥ್ಯ ನಗಣ್ಯ. ಎನ್‌ಡಿಎ ಮೈತ್ರಿಕೂಟ, 'ಇಂಡಿಯ' ಒಕ್ಕೂಟ ಸೇರದ ಪಕ್ಷಗಳೆಂದರೆ ಬಹುಜನ ಸಮಾಜ ಪಕ್ಷ, ಎಐಎಂಐಎಂ ಮೊದಲಾದವು.

ಇಂಡಿಯ ಒಕ್ಕೂಟ 2-5 ಸ್ಥಾನ ಗೆಲ್ಲಬಹುದಾಗಿದೆ. 25 ಲೋಕಸಭಾ ಸ್ಥಾನಗಳಿರುವ ರಾಜಸ್ಥಾನದಲ್ಲಿ ಬಿಜೆಪಿ 18-23 ಸ್ಥಾನ ಗಳಿಸುವ ಅಂದಾಜಿದೆ. ಇಂಡಿಯ ಒಕ್ಕೂಟ 2-7 ಸ್ಥಾನ ಪಡೆಯಬಹುದು ಎಂದು ನ್ಯೂಸ್ 18 ಸಮೀಕ್ಷೆ ತಿಳಿಸಿದೆ.

40 ಲೋಕಸಭಾ ಕ್ಷೇತ್ರಗಳಿರುವ ಬಿಹಾರದಲ್ಲಿ ಎನ್‌ಡಿಎ ಮೈತ್ರಿಕೂಟ 31-34 ಸ್ಥಾನ, ಇಂಡಿಯ ಒಕ್ಕೂಟ 6-9 ಸ್ಥಾನ ಪಡೆಯುವ ಅವಕಾಶವಿದೆ. ಮತ ಗಳಿಕೆ ಪ್ರಮಾಣ ಎನ್‌ಡಿಎಗೆ ಶೇ.57, ಇಂಡಿಯ ಒಕ್ಕೂಟಕ್ಕೆ ಶೇ.35, ಇತರೆ ಶೇ.8 ಇರಲಿದೆ ಎಂದು ನ್ಯೂಸ್ 18 ಸಮೀಕ್ಷೆ ಅಂದಾಜು ಮಾಡಿದೆ.

48 ಲೋಕಸಭಾ ಸ್ಥಾನಗಳಿರುವ ಮಹಾರಾಷ್ಟ್ರದಲ್ಲಿ ಎನ್‌ಡಿಎ ಮೇಲುಗೈ ಸಾಧಿಸಲಿದೆ. ಎನ್‌ಡಿಎ 32-35, ಇಂಡಿಯ ಒಕ್ಕೂಟ 15-18 ಸ್ಥಾನ ಗೆಲ್ಲುವ ಸಂಭವವಿದೆ. ಮರಾಠ ನಾಡಲ್ಲಿ ಎನ್‌ಡಿಎ ಶೇ.48, ಇಂಡಿಯ ಶೇ.40, ಇತರೆ ಶೇ.12ರಷ್ಟು ಮತ ಗಳಿಕೆ ಇರಲಿದೆ.

ನಕ್ಸಲರ ಪ್ರಭಾವದ ನಾಡು, ಛತ್ತೀಸ್‌ಗಢ ರಾಜ್ಯದಲ್ಲಿನ 11 ಲೋಕಸಭಾ ಕ್ಷೇತ್ರಗಳಲ್ಲಿ ಎಲ್ಲವನ್ನೂ ಬಿಜೆಪಿ ತನ್ನದಾಗಿಸಿಕೊಳ್ಳುವ ಸಾಧ್ಯತೆ ಇದೆ. ಬಿಜೆಪಿ 9-11, ಕಾಂಗ್ರೆಸ್ 0-2 ಸ್ಥಾನ ಗಳಿಕೆ ಸಾಧ್ಯತೆ ಇದೆ. ಈ ರಾಜ್ಯದಲ್ಲಿ ಬಿಜೆಪಿ ಶೇ.52, ಕಾಂಗ್ರೆಸ್ ಶೇ.43, ಇತರೆ ಪಕ್ಷ ಶೇ.5ರಷ್ಟು ಮತ ಪ್ರಮಾಣ ಗಳಿಸಿರುವ ಸಾಧ್ಯತೆ ಇದೆ ಎಂದು ಸಮೀಕ್ಷೆ ತಿಳಿಸಿದೆ.

ಹರಿಯಾಣದಲ್ಲಿ ಬಿಜೆಪಿ 5-7 ಸ್ಥಾನ, ಕಾಂಗ್ರೆಸ್ 3-5 ಸ್ಥಾನ ಪಡೆಯಬಹುದು. ಉತ್ತರಾಖಂಡದಲಿ ಎಲ್ಲಾ ಸ್ಥಾನಗಳೂ ಬಿಜೆಪಿ ವಶವಾಗುವ ಸಾಧ್ಯತೆ ಇದೆ.

21 ರಾಜ್ಯಗಳಲ್ಲಿ 518 ಲೋಕಸಭಾ ಕ್ಷೇತ್ರಗಳಲ್ಲಿ ನ್ಯೂಸ್ 18 ಮೆಗಾ ಎಕ್ಸಿಟ್ ಪೋಲ್ (ಚುನಾವಣೋತ್ತರ) ಸಮೀಕ್ಷೆ ನಡೆಸಲಾಗಿದೆ. ಪ್ರತಿ ಲೋಕಸಭಾ ಕ್ಷೇತ್ರದಲ್ಲಿಯೂ 180 ಸಂದರ್ಶನಗಳಾಗಿವೆ. 11 ಪ್ರಾದೇಶಿಕ ಭಾಷೆಗಳಲ್ಲಿ ಸಂದರ್ಶನ ನಡೆಸಲಾಗಿದೆ. 7ನೇ ಹಂತದ ಮತದಾನ ವೇಳೆ ಮತಗಟ್ಟೆಯಿಂದ ಹೊರಬಂದವರನ್ನು ಮಾತನಾಡಿಸಿ ಮಾಹಿತಿ ಸಂಗ್ರಹಿಸಲಾಗಿದೆ ಎಂದು ಹೇಳಲಾಗಿದೆ.

3ನೇ ಬಾರಿಯೂ ಮೋದಿ: ತಜ್ಞರ ವಿಶ್ಲೇಷಣೆ

2024 ಲೋಕಸಭಾ ಚುನಾವಣೆ

ವಿಶ್ಲೇಷಣೆಗಾರ	ಬಿಜೆಪಿ ಸ್ಥಾನ
ಪ್ರಶಾಂತ್ ಕಿಶೋರ್	303+
ಯೋಗೇಂದ್ರ ಯಾದವ್	240-260
ಇಯಾನ್ ಬ್ರೆಮ್ಮರ್	295-315

ದೆಹಲಿ: ಪ್ರಸಕ್ತ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ನೇತೃತ್ವದ 'ನ್ಯಾಷನಲ್ ಡೆಮಾಕ್ರೆಟಿಕ್ ಅಲಯನ್ಸ್'(ಎನ್‌ಡಿಎ) ಗೆದ್ದು 3ನೇ ಬಾರಿ ಅಧಿಕಾರಕ್ಕೇರುವುದು ಖಚಿತ. ಬಿಜೆಪಿ ಮತ್ತು ಎನ್‌ಡಿಎ ಮೈತ್ರಿಕೂಟದ ಪಕ್ಷಗಳು ಕಳೆದ ಚುನಾವಣೆಗಿಂತ ಈ ಬಾರಿ ಹೆಚ್ಚು ಸ್ಥಾನ ಪಡೆಯಲಿವೆ. ಬಿಜೆಪಿಯೊಂದೇ 303 ಸ್ಥಾನ ಗೆಲ್ಲಲಿದೆ. ಪಶ್ಚಿಮ ಮತ್ತು ಉತ್ತರ ಭಾರತದಲ್ಲಿ ಎನ್‌ಡಿಎ ಗಳಿಸುವ ಸ್ಥಾನಗಳ ಸಂಖ್ಯೆಯಲ್ಲಿ ಗಮನಾರ್ಹ ಬದಲಾವಣೆ ಆಗದು ಎಂದು ಚುನಾವಣಾ ರಾಜಕಾರಣ ತಂತ್ರಗಾರ ಪ್ರಶಾಂತ್ ಕಿಶೋರ್ ಭಾರೀ ವಿಶ್ವಾಸದಿಂದ ಹೇಳಿದ್ದಾರೆ. ಕೇಸರಿ ಪಕ್ಷದ ಸ್ಥಾನಗಳ ಸಂಖ್ಯೆ 2019ರ ಲೆಕ್ಕಾಚಾರಕ್ಕೆ (303 ಸ್ಥಾನ) ಹತ್ತಿರವಾಗಬಹುದು ಅಥವಾ ಅದನ್ನೂ ದಾಟಬಹುದು. ಬಿಜೆಪಿ ಹಿಂದಿನ ಚುನಾ ವಣೆಗಿಂತ ಸ್ವಲ್ಪ ಹೆಚ್ಚಿನ ಸ್ಥಾನ ಗಳಿಸಿ ಅಧಿಕಾರಕ್ಕೆ ಮರಳಲಿದೆ. ಭಾರತದ ಪೂರ್ವ ಮತ್ತು ದಕ್ಷಿಣ ಪ್ರದೇಶಗಳಿಂದಲೇ ಕಮಲ ಪಕ್ಷ ಹೆಚ್ಚು ಬೆಂಬಲ ಗಳಿಸಲಿದೆ. ತೆಲಂಗಾಣ, ಆಂಧ್ರಪ್ರದೇಶ, ಕೇರಳ ಮತ್ತು ತಮಿಳುನಾಡು ರಾಜ್ಯಗಳಲ್ಲಿ ಬಿಜೆಪಿ ಅಸ್ತಿತ್ವ ವಿಸ್ತರಣೆಯಾಗಲಿದೆ. ಪೂರ್ವ ಮತ್ತು ದಕ್ಷಿಣದ ರಾಜ್ಯಗಳಲ್ಲಿ ಬಿಜೆಪಿ ಸ್ಥಾನ ಸಂಖ್ಯೆ ಮತ್ತು ಮತ ಹಂಚಿಕೆಯಲ್ಲಿ ಏರಿಕೆ ಕಾಣಬಹುದಾಗಿದೆ.

ಯೋಗೇಂದ್ರ ಯಾದವ್

ಬಿಜೆಪಿ ಮತ್ತೊಂದು ಸಾರ್ವತ್ರಿಕ ಚುನಾವಣೆ ಗೆಲುವು ದಾಖಲಿಸಲಿದೆ. ಬಿಜೆಪಿ 240-260 ಸ್ಥಾನ, ಅದರ ಮಿತ್ರಪಕ್ಷಗಳು 34-45 ಸ್ಥಾನಗಳನ್ನು ಗೆಲ್ಲಬಹುದು. ಎನ್‌ಡಿಎ ಒಟ್ಟು 275-305 ಸ್ಥಾನ ಗಳಿಸಬಹುದು ಎಂದು ಚುನಾವಣಾ ವಿಶ್ಲೇಷಕ ಯಾದವ್ ಹೇಳಿದ್ದಾರೆ.

ಇಯಾನ್ ಬ್ರೆಮ್ಮರ್

ಬಿಜೆಪಿ ಈ ಬಾರಿ 295-315 ಸ್ಥಾನ ಗೆಲ್ಲಬಹುದು. 2019ರ ಸಾರ್ವತ್ರಿಕ ಚುನಾವಣೆಯಲ್ಲಿ ಹಿಂದಿ ಹೃದಯದ ರಾಜ್ಯಗಳಲ್ಲಿ ಮೋದಿ ಅಲೆ ಮೇಲೆ ಸವಾರಿ ಮಾಡಿದ್ದರಿಂದ ಬಿಜೆಪಿ 303 ಲೋಕಸಭಾ ಸ್ಥಾನಗಳನ್ನು ಗೆದ್ದಿತ್ತು ಎಂದು ಅಮೆರಿಕದ ರಾಜಕೀಯ ತಜ್ಞ ಇಯಾನ್ ಬ್ರೆಮ್ಮರ್ ತಿಳಿಸಿದ್ದಾರೆ. 370 ಕ್ಷೇತ್ರಗಳಲ್ಲಿ ಗೆಲ್ಲಬೇಕೆಂದರೆ ತಮಿಳುನಾಡು, ಕೇರಳ, ಪಶ್ಚಿಮ ಬಂಗಾಳ ಮತ್ತು ತೆಲಂಗಾಣ ರಾಜ್ಯಗಳಲ್ಲಿ ಪಕ್ಷಕ್ಕೆ ಭರ್ಜರಿ ಜಯ ಸಿಗಬೇಕು ಎಂದು ಅಮೆರಿಕದ ಚುನಾವಣಾ ನಿಪುಣ ಇಯಾನ್ ಬ್ರೆಮ್ಮರ್ ಅಂದಾಜು ಮಾಡಿದ್ದಾರೆ.

3 ಲೋಕ ಕದನ: ಸಮೀಕ್ಷೆ ಹೇಗಿತ್ತು?

ದೆಹಲಿ: ಚುನಾವಣೋತ್ತರ ಸಮೀಕ್ಷೆಗಳು ಶನಿವಾರ ಸಂಜೆ ಪ್ರಕಟವಾಗಿದ್ದು, ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟ ಮರಳಿ ಅಧಿಕಾರಕ್ಕೇರುವುದು ಖಚಿತ ಎಂದೇ ಹೇಳುತ್ತಿವೆ. ಆದರೆ, ಚುನಾವಣೋತ್ತರ ಸಮೀಕ್ಷೆಗಳು ಅದೆಷ್ಟು ವಿಶ್ವಾಸಾರ್ಹ ಎಂಬುದನ್ನು ಹಿಂದಿನ ಮೂರು ಚುನಾವಣೆಗಳ ಚುನಾವಣೋತ್ತರ ಸಮೀಕ್ಷೆಗಳು ಮತ್ತು ಅಂತಿಮ ಫಲಿತಾಂಶಕ್ಕೆ ಹೋಲಿಸಿ ನೋಡಿದಾಗ ಮೂರೂ ಬಾರಿಯೂ ಚುನಾವಣೋತ್ತರ ಸಮೀಕ್ಷೆಗಳು ವಿಫಲವಾಗಿರುವುದು ಕಾಣುತ್ತದೆ.

2014ರಲ್ಲಿ ಚುನಾವಣೋತ್ತರ ಸಮೀಕ್ಷೆ ಬಿಜೆಪಿ ನೇತೃತ್ವದ ಎನ್‌ಡಿಎ 283 ಕ್ಷೇತ್ರಗಳಲ್ಲಿ ಗೆಲ್ಲುತ್ತದೆ. ಕಾಂಗ್ರೆಸ್ ನೇತೃತ್ವದ ಯುಪಿಎ 105 ಸ್ಥಾನ ಗೆಲ್ಲಬಹುದು ಎಂದು ಅಂದಾಜು ಮಾಡಿತ್ತು. ಆದರೆ, ಚುನಾವಣೋತ್ತರ ಸಮೀಕ್ಷೆಗಳು ಮೋದಿ ಅಲೆ ಅಂದಾಜು ಮಾಡುವಲ್ಲಿ ವಿಫಲವಾಗಿದ್ದವು. ಫಲಿತಾಂಶ ಪ್ರಕಟವಾದಾಗ ಎನ್‌ಡಿಎ 336 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿದರೆ, ಯುಪಿಎ 60 ಸ್ಥಾನಗಳನ್ನಷ್ಟೇ ಪಡೆದಿತ್ತು. ಬಿಜೆಪಿ 282 ಕ್ಷೇತ್ರ, ಕಾಂಗ್ರೆಸ್ 44 ಕ್ಷೇತ್ರಗಳಲ್ಲಿ ಜಯ ಸಾಧಿಸಿದ್ದವು. 2019ರಲ್ಲಿ 13 ವಿವಿಧ ಸಮೀಕ್ಷಾ ಸಂಸ್ಥೆಗಳ ಚುನಾವಣೋತ್ತರ ಸಮೀಕ್ಷೆಯ ಸರಾಸರಿ ಲೆಕ್ಕಹಾಕಿದಾಗ ಎನ್‌ಡಿಎ ಒಟ್ಟಾರೆ ಸಾಧನೆ 306 ಸ್ಥಾನ ಎಂದು ಹೇಳಿತ್ತು. ಯುಪಿಎ 120 ಕ್ಷೇತ್ರಗಳಲ್ಲಿ ಗೆಲ್ಲಬಹುದು ಎನ್ನಲಾಗಿತ್ತು. ಆದರೆ, ಫಲಿತಾಂಶ ಪ್ರಕಟವಾದಾಗ ಎನ್‌ಡಿಎ 353 ಕ್ಷೇತ್ರಗಳಲ್ಲಿ(ಬಿಜೆಪಿ ಪಾಲೇ 303), ಯುಪಿಎ 93 ಕ್ಷೇತ್ರಗಳಲ್ಲಷ್ಟೇ(ಕಾಂಗ್ರೆಸ್ 52) ಗೆಲುವು ಸಾಧಿಸಿದ್ದವು.

2009ರಲ್ಲೂ ಚುನಾವಣೋತ್ತರ ಸಮೀಕ್ಷೆಗೂ-ಫಲಿತಾಂಶಕ್ಕೂ ಭಾರೀ ವ್ಯತ್ಯಾಸವಿತ್ತು. ಆಗ ಕಾಂಗ್ರೆಸ್ ನೇತೃತ್ವದ 'ಯುಪಿಎ' ಮಿತ್ರಕೂಟ 2ನೇ ಅವಧಿಗೆ ಅಧಿಕಾರ ಹಿಡಿದಿತ್ತು. ಸಮೀಕ್ಷೆಗಳು ಯುಪಿಎಗೆ 195 ಸ್ಥಾನ, ಎನ್‌ಡಿಎಗೆ 185 ಸ್ಥಾನ ನೀಡಿದ್ದವು. ಫಲಿತಾಂಶ ಪ್ರಕಟವಾದಾಗ ಯುಪಿಎ 262 ಕ್ಷೇತ್ರ ಗೆದ್ದಿದ್ದರೆ, ಎನ್‌ಡಿಎ 158 ಕ್ಷೇತ್ರಗಳಲ್ಲಿ ಗೆಲುವು ಕಂಡಿತ್ತು. ಕಾಂಗ್ರೆಸ್ ಪಕ್ಷವೊಂದೇ 206 ಸ್ಥಾನ ಪಡೆದಿದ್ದರೆ, ಬಿಜೆಪಿ 116 ಕ್ಷೇತ್ರಗಳಲ್ಲಿ ಗೆದ್ದಿತ್ತು.

ರಿಪಬ್ಲಿಕ್ ಟಿವಿ-ಮ್ಯಾಟ್ರಿಜ್ ಸಮೀಕ್ಷೆ
ಎನ್‌ಡಿಎಗೆ 368, ಇಂಡಿಯಗೆ 125 ಸ್ಥಾನ!

ದೆಹಲಿ: ರಿಪಬ್ಲಿಕ್ ಟಿವಿ ಮ್ಯಾಟ್ರಿಜ್ ನಡೆಸಿದ ಚುನಾವಣೋತ್ತರ ಸಮೀಕ್ಷೆ ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟ ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ 368 ಸ್ಥಾನಗಳನ್ನು ಗೆಲ್ಲುವ ಸಾಧ್ಯತೆ ಇದೆ ಎಂದು ಹೇಳಿದೆ.

ಒಟ್ಟು 543 ಲೋಕಸಭಾ ಸ್ಥಾನಗಳಲ್ಲಿ ಎನ್‌ಡಿಎ 368 ಸ್ಥಾನಗಳಲ್ಲಿ ಜಯ ಸಾಧಿಸಲಿದೆ. ಇದರಲ್ಲಿ 15 ಸ್ಥಾನ ಹೆಚ್ಚಾಗಬಹುದು, ಇಲ್ಲವೇ ಕಡಿಮೆ ಆಗಬಹುದು ಎಂದು ರಿಪಬ್ಲಿಕ್ ಟಿವಿ -ಮ್ಯಾಟ್ರಿಜ್ ಸಮೀಕ್ಷೆಯಲ್ಲಿ ಹೇಳಲಾಗಿದೆ. ಇಂಡಿಯ ಒಕ್ಕೂಟ ಹೆಚ್ಚೆಂದರೆ 125 ಸ್ಥಾನಗಳನ್ನಷ್ಟೇ ಗೆಲ್ಲಲು ಸಾಧ್ಯವಾಗಲಿದೆ. ಇದರಲ್ಲಿ ಕಾಂಗ್ರೆಸ್ ಪಕ್ಷ 48 ಕ್ಷೇತ್ರಗಳಲ್ಲಷ್ಟೇ ಗೆಲ್ಲಬಹುದಾಗಿದೆ. ಈ ಸಮೀಕ್ಷೆ ಜೂ.4ರ ಫಲಿತಾಂಶದಲ್ಲಿ ನಿಜವಾದರೆ ಈ ಬಾರಿಯೂ ಕಾಂಗ್ರೆಸ್ ಪಕ್ಷಕ್ಕೆ ಅಧಿಕೃತ ಪ್ರತಿಪಕ್ಷದ ಸ್ಥಾನ ದೊರೆಯದಂತಾಗಲಿದೆ ಎಂದು ರಾಜಕೀಯ ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ದಕ್ಷಿಣ ಭಾರತ ಎಕ್ಸಿಟ್ ಪೋಲ್



ದೆಹಲಿ: ಕಳೆದ ಹಲವು ಸಾರ್ವತ್ರಿಕ ಚುನಾವಣೆಗಳಲ್ಲಿ ಕರ್ನಾಟಕದಲ್ಲಷ್ಟೇ ಸಾಧನೆ ತೋರಿದ್ದ ಭಾರತೀಯ ಜನತಾ ಪಕ್ಷ(ಬಿಜೆಪಿ), ಅದೆಷ್ಟೇ ಶ್ರಮ ಹಾಕಿದ್ದರೂ ಕರ್ನಾಟಕ ಹೊರತಾದ ದಕ್ಷಿಣ ಭಾರತದಲ್ಲಿ ಖಾತೆ ತೆರೆಯಲು ಆಗಿರಲಿಲ್ಲ. ಎಲ್‌ಡಿಎಫ್, ಯುಡಿಎಫ್ ಪ್ರಭಾವದ ಕೇರಳಕ್ಕೆ ಪ್ರವೇಶಿಸುವುದು, ಡಿಎಂಕೆ ಮತ್ತು ಎಐಎಡಿಎಂಕೆ ಬಿಗಿಮುಷ್ಟಿಯಲ್ಲಿದ್ದ ತಮಿಳುನಾಡಿನಲ್ಲಿ ಮೊಳಕೆ ಒಡೆಯುವುದು, ಆಂಧ್ರಪ್ರದೇಶ ಮತ್ತು ನೂತನ ರಾಜ್ಯ ತೆಲಂಗಾಣದಲ್ಲಿ ಖಾತೆ ತೆರೆಯುವುದು ಕೇಸರಿ ಪಕ್ಷಕ್ಕೆ ಅಸಾಧ್ಯ ಎನಿಸಿತ್ತು. ಆದರೆ, 10 ವರ್ಷಗಳ ನರೇಂದ್ರ ಮೋದಿ ಅವರ ಆಡಳಿತ ಮತ್ತು ಅಭಿವೃದ್ಧಿ ಪರ್ವ ಹಾಗೂ ಹಿಂದೂ, ಸನಾತನ ಮಂತ್ರಗಳು ಈ ಬಾರಿ ಕೆಲಸ ಮಾಡಿದಂತಿದೆ. ಕೇರಳ ಮತ್ತು ತ.ನಾಡಿನಲ್ಲಿ ಕೇಸರಿ ಧ್ವಜ ಹಾರಿಸುವಲ್ಲಿ ಬಿಜೆಪಿ ಯಶಸ್ಸು ಕಾಣಲಿದೆ ಎಂದೇ ಚುನಾವಣೋತ್ತರ ಸಮೀಕ್ಷೆಗಳು ಅಂದಾಜು ಮಾಡಿವೆ.

ನ್ಯೂಸ್ 18 ಮೆಗಾ ಎಕ್ಸಿಟ್ ಪೋಲ್ ಪ್ರಕಾರ ಕರ್ನಾಟಕದಲ್ಲಿ ಎನ್‌ಡಿಎ(ಬಿಜೆಪಿ-ಜೆಡಿಎಸ್) ಕ್ಲೀನ್ ಸ್ವೀಪ್ ಮಾಡಲಿದೆ. ಹಾಗೂ 'ಇಂಡಿಯ' ಒಕ್ಕೂಟ ತಮಿಳುನಾಡು ಮತ್ತು ಕೇರಳದಲ್ಲಿ ಅತ್ಯಧಿಕ ಸ್ಥಾನ ಗಳಿಸಲಿದೆ. ಬಿಜೆಪಿ ಈ ಬಾರಿ ತಮಿಳುನಾಡು ಮತ್ತು ಕೇರಳದಲ್ಲಿ ಖಾತೆ ತೆರೆಯಲಿದೆ. ತೆಲಂಗಾಣದಲ್ಲಿ ಈ ಬಾರಿ ಹೊಸ ಗಾಳಿ ಬೀಸಿದೆ. ಬಿಜೆಪಿ ಅತ್ಯಧಿಕ ಸ್ಥಾನ ಗಳಿಸಲಿದೆ. 17 ಲೋಕಸಭಾ ಸ್ಥಾನಗಳಿರುವ ತೆಲುಗು ರಾಜ್ಯದಲ್ಲಿ ಕೇಸರಿ ಪಕ್ಷಕ್ಕೆ 7-10 ಸ್ಥಾನಗಳು ಒಲಿಯುವ ಸಾಧ್ಯತೆ ಕಾಣಿಸುತ್ತಿದೆ. ಮಾಜಿ ಸಿಎಂ ಕೆ.ಸಿ.ಚಂದ್ರಶೇಖರ ರಾವ್ ಅವರ ಪಕ್ಷದ 'ಭಾರತ ರಾಷ್ಟ್ರ ಸಮಿತಿ'(ಬಿಆರ್‌ಎಸ್) 2-5, ಕಾಂಗ್ರೆಸ್ 5-8, ಇತರೆ 0-1 ಸ್ಥಾನ ಪಡೆಯುವ ಸಾಧ್ಯತೆ ಇದೆ. 2019ರಲ್ಲಿ ಬಿಆರ್‌ಎಸ್ 9, ಬಿಜೆಪಿ 4, ಕಾಂಗ್ರೆಸ್ 3, ಇತರೆ ಪಕ್ಷ 1 ಸ್ಥಾನ ಪಡೆದಿದ್ದವು. ಆಂಧ್ರಪ್ರದೇಶದಲ್ಲಿ ಬಿಜೆಪಿ 19-22, ವೈಎಸ್‌ಆರ್ ಕಾಂಗ್ರೆಸ್ ಪಕ್ಷ 5-8 ಗೆಲ್ಲುವ ಸಾಧ್ಯತೆ ಇದೆ ಎಂದು ನ್ಯೂಸ್ 18 ಮೆಗಾ ಸಮೀಕ್ಷೆ ಅಂದಾಜು ಮಾಡಿದೆ. ಕೇರಳದಲ್ಲಿ ಯುಡಿಎಫ್ 15-18, ಎಲ್‌ಡಿಎಫ್ 2-5, ಎನ್‌ಡಿಎ 1-3 ಸ್ಥಾನ ಗಳಿಸುವ ಸಾಧ್ಯತೆ ಇದೆ.

ತ.ನಾಡಲ್ಲಿ 'ಇಂಡಿಯ'ವೇ ಬಲಿಷ್ಟ!

39 ಲೋಕ ಕ್ಷೇತ್ರಗಳಿರುವ ತಮಿಳುನಾಡಿನಲ್ಲಿ ಡಿಎಂಕೆ ಮತ್ತು ಕಾಂಗ್ರೆಸ್ ಮೈತ್ರಿಯ 'ಇಂಡಿಯ' ಒಕ್ಕೂಟದ್ದೇ ಶಕ್ತಿ ಹೆಚ್ಚಿದೆ. ಅಣ್ಣಾ ದ್ರಾವಿಡ ಮುನ್ನೇತ್ರ ಕಳಗಂ ಪಕ್ಷದ ನಾಡಲ್ಲಿ ಅಣ್ಣಾಮಲೈ ಅಧ್ಯಕ್ಷತೆಯ ಬಿಜೆಪಿ ತಮಿಳುನಾಡು ಘಟಕ ಈ ಬಾರಿ ಖಾತೆ ತೆರೆಯುವ ಸಾಧ್ಯತೆ ಇದೆ. ಬಿಜೆಪಿ ನೇತೃತ್ವದ ಎನ್‌ಡಿಎ 0-3 ಸ್ಥಾನ ಗಳಿಕೆ ಸಂಭವವಿದೆ. ಇಂಡಿಯ ಒಕ್ಕೂಟ ಶೇ.49, ಎನ್‌ಡಿಎ ಶೇ.17, ಎಐಎಡಿಎಂಕೆ ಶೇ.20, ಇತರೆ ಪಕ್ಷಗಳು ಶೇ.14ರಷ್ಟು ಮತ ಗಳಿಕೆ ಸಾಧಿಸಲಿವೆ ಎಂದು ನ್ಯೂಸ್ 18 ಸಮೀಕ್ಷೆ ಅಂದಾಜು ಮಾಡಿದೆ.

ಅತಂತ್ರ ಲೋಕಸಭೆ; ಕೆಲವು ಸಟ್ಟಾ ಬಜಾರ್ ಲೆಕ್ಕಾಚಾರ | ಬಿಜೆಪಿ ಮ್ಯಾಜಿಕ್ ನಂಬರ್ ತಲುಪುವುದೇ ಕಷ್ಟ ಎಂದ ಫಲನ್‌ಪುರ ಸಟ್ಟಾ ಬಜಾರ್

ಮರಳಿ ಅಧಿಕಾರಕ್ಕೆ ಎನ್‌ಡಿಎ: ಹೆಚ್ಚಿನ ಸಟ್ಟಾ ಬಜಾರ್ ಭವಿಷ್ಯ

ದೆಹಲಿ: 7ನೇ ಹಂತದ ಮತದಾನ ಶನಿವಾರ ಸಂಜೆ 5ಕ್ಕೆ ಮುಗಿದು, ಚುನಾವಣೋತ್ತರ ಸಮೀಕ್ಷೆಗಳು ಪ್ರಕಟವಾಗುವುದಕ್ಕಿಂತಲೂ ಮುಂಚಿತವಾಗಿ ದೇಶದ ಪ್ರಮುಖ ಸಟ್ಟಾ ಬಜಾರ್‌ಗಳು(ಬೆಟ್ಟಿಂಗ್ ಕೇಂದ್ರ-ಬ್ರೋಕರೇಜ್ ಹೌಸ್) ತಮ್ಮದೇ ಆದ ಲೆಕ್ಕಾಚಾರದಲ್ಲಿ ಚುನಾವಣಾ ಫಲಿತಾಂಶದ ಅಂದಾಜು ಪ್ರಕಟಿಸಿವೆ. ಗಮನಾರ್ಹ ಸಂಗತಿಯೆಂದರೆ, ಯಾವುದೇ ಸಟ್ಟಾ ಬಜಾರ್ ಅಂದಾಜಿನಲ್ಲೂ ಬಿಜೆಪಿ ನೇತೃತ್ವದ ಎನ್‌ಡಿಎ 400 ಸ್ಥಾನ ದಾಟುವುದು ಕಂಡುಬಂದಿಲ್ಲ. ಕೆಲವು ಸಟ್ಟಾ ಬಜಾರ್ ಅಂಕಿ ಅಂಶಗಳು 'ಇಂಡಿಯ' ಒಕ್ಕೂಟಕ್ಕೂ ದೊಡ್ಡ ಮಟ್ಟದ ಸ್ಥಾನಗಳನ್ನು ನೀಡಿವೆ. ಇದು ಕಾಂಗ್ರೆಸ್ ಸೇರಿದಂತೆ ಇಂಡಿಯ ಒಕ್ಕೂಟಕ್ಕೆ ಸ್ವಲ್ಪ ಮಟ್ಟಿಗೆ ಖುಷಿ ಕೊಟ್ಟಿದೆ.

ಫಲೋಡಿ ಸಟ್ಟಾ ಬಜಾರ್: ದೇಶದ ಪ್ರಮುಖ ಹಾಗೂ ಅತ್ಯಂತ ಪ್ರಖ್ಯಾತ ಬೆಟ್ಟಿಂಗ್ ಕೇಂದ್ರವಾಗಿರುವ ರಾಜಸ್ಥಾನದ ಫಲೋಡಿ ಸಟ್ಟಾ ಬಜಾರ್, ಬಿಜೆಪಿ ಕನಿಷ್ಠ 270 ಸ್ಥಾನ- ಗರಿಷ್ಠ 300 ಸ್ಥಾನ ಗೆಲ್ಲುವ ನಿರೀಕ್ಷೆ ಇದೆ ಎಂದು ಹೇಳಿದೆ. ಕಾಂಗ್ರೆಸ್ 60-63 ಸ್ಥಾನಗಳಲ್ಲಿ ಗೆಲುವು ಸಾಧಿಸಲಿದೆ ಎಂದು ಅಂದಾಜು ಮಾಡಿದೆ.

ಫಲನ್‌ಪುರ ಸಟ್ಟಾ ಬಜಾರ್: ಬಿಜೆಪಿ ಮ್ಯಾಜಿಕ್ ನಂಬರ್(272 ಸ್ಥಾನ) ತಲುಪುವುದೇ ಕಷ್ಟ ಎಂದು ಫಲನ್‌ಪುರ ಸಟ್ಟಾ ಬಜಾರ್ ಹೇಳಿದೆ. ಬಿಜೆಪಿ ಕೇವಲ 247 ಸ್ಥಾನಗಳಲ್ಲಿ ಗೆಲುವು ಸಾಧಿಸಲಿದೆ. ಆದರೆ, ಎನ್‌ಡಿಎ ಒಟ್ಟಾರೆ ಗಳಿಕೆ 272 ಸ್ಥಾನ ಮುಟ್ಟಬಹುದು, ಕಾಂಗ್ರೆಸ್ ಪಕ್ಷವೊಂದೇ 112 ಸ್ಥಾನ ಗೆಲ್ಲಲಿದೆ. 'ಇಂಡಿಯ' ಒಕ್ಕೂಟ 225 ಸ್ಥಾನಗಳಲ್ಲಿ ಜಯ ಸಾಧಿಸಬಹುದು ಎಂದಿದೆ.

ಸಟ್ಟಾಬಜಾರ್	ಬಿಜೆಪಿ (ಎನ್‌ಡಿಎ)	ಕಾಂಗ್ರೆಸ್ (ಇಂಡಿ ಒಕ್ಕೂಟ)
ಫಲೋಡಿ ಸಟ್ಟಾ ಬಜಾರ್	270-300	60-63
ಫಲನ್‌ಪುರ ಸಟ್ಟಾ ಬಜಾರ್	247(272)	112 (225)
ವಿಜಯವಾಡ ಸಟ್ಟಾ ಬಜಾರ್	(300)	40-60 (200)
ಕೋಲ್ಕತ್ತ ಸಟ್ಟಾ ಬಜಾರ್	218(261)	128 (228)
ಬೆಳಗಾವಿ ಸಟ್ಟಾ ಬಜಾರ್	223(265)	120 (230)
ಕರ್ನಲ್ ಸಟ್ಟಾ ಬಜಾರ್	(263)	(231)
ಸರಾಫಾ ಸಟ್ಟಾ ಬಜಾರ್	260(283)	94(180)
ಮುಂಬೈ ಸಟ್ಟಾ ಬಜಾರ್	295-305	55-65
ಅಹಮದಾಬಾದ್ ಸಟ್ಟಾ ಬಜಾರ್	301-303	63-65

ವಿಜಯವಾಡ ಸಟ್ಟಾ ಬಜಾರ್: ದಕ್ಷಿಣದ ಭಾರತದ ಪ್ರಮುಖ ವಿಜಯವಾಡ ಸಟ್ಟಾ ಬಜಾರ್ ಕೂಡ 'ಇಂಡಿ ಒಕ್ಕೂಟ' 200ಕ್ಕಿಂತ ಅಧಿಕ ಸ್ಥಾನ ಪಡೆಯಲಿದೆ. ಕಾಂಗ್ರೆಸ್ 40-60 ಸ್ಥಾನ ಗೆಲ್ಲಲಿದೆ ಎಂದು ಹೇಳಿದೆ. ಎನ್‌ಡಿಎ 300ಕ್ಕೂ ಅಧಿಕ ಸೀಟ್ ಪಡೆಯಲಿದೆ ಎಂದು ಅಂದಾಜು ಮಾಡಿದೆ.

ಕೋಲ್ಕತ್ತ ಸಟ್ಟಾ ಬಜಾರ್: ದೇಶದ ಅತ್ಯಂತ ಪುರಾತನ ಸಟ್ಟಾ ಬಜಾರ್‌ಗಳಲ್ಲಿ ಒಂದಾಗಿರುವ ಕೋಲ್ಕತ್ತ ಸಟ್ಟಾ ಬಜಾರ್ ಎನ್‌ಡಿಎಗೆ ಬಹುಮತ ಸಿಗುವುದು ಕಷ್ಟ ಎಂದು ಹೇಳಿದೆ. ಬಿಜೆಪಿಯ 218 ಸ್ಥಾನ ಸೇರಿದಂತೆ ಎನ್‌ಡಿಎ ಗರಿಷ್ಠ 261 ಸ್ಥಾನ ಗೆಲ್ಲಲಿದೆ ಅಷ್ಟೇ. ಕಾಂಗ್ರೆಸ್ 128 ಸ್ಥಾನ ಗೆಲ್ಲಲಿದೆ, ಇಂಡಿ ಒಕ್ಕೂಟ 228 ಕ್ಷೇತ್ರಗಳಲ್ಲಿ ಗೆಲ್ಲಬಹುದು ಎಂದಿದೆ.

ಬೆಳಗಾವಿ ಸಟ್ಟಾ ಬಜಾರ್: ಕರ್ನಾಟಕದ ಬೆಳಗಾವಿ ಸಟ್ಟಾ ಬಜಾರ್‌ನಲ್ಲಿ ಎನ್‌ಡಿಎ 265 ಸೀಟ್ ಗೆಲ್ಲಬಹುದು. ಇದರಲ್ಲಿ ಬಿಜೆಪಿ ಪಾಲೇ 223 ಸ್ಥಾನಗಳಾಗಿರಲಿವೆ. ಕಾಂಗ್ರೆಸ್‌ನ 120 ಸ್ಥಾನ ಸೇರಿದಂತೆ, 'ಇಂಡಿ ಒಕ್ಕೂಟ' 230 ಸ್ಥಾನ ಗೆಲ್ಲಲಿದೆ.

ಕರ್ನಲ್ ಸಟ್ಟಾ ಬಜಾರ್: ಇಲ್ಲಿಯೂ ಬಿಜೆಪಿ ಎನ್‌ಡಿಎ ಮ್ಯಾಜಿಕ್ ನಂಬರ್ ತಲುಪುವುದು ಕಷ್ಟ ಎಂದಿದೆ. ಎನ್‌ಡಿಎ 263 ಸ್ಥಾನಗಳಲ್ಲಿ ಗೆಲುವು ಕಾಣಲಿದ್ದರೆ, ಇಂಡಿ ಒಕ್ಕೂಟ 231 ಸೀಟ್ ಗೆಲ್ಲಬಹುದು ಎಂದು ತಿಳಿಸಿದೆ.

ಇಂದೋರ್ ಸರಾಫಾ ಸಟ್ಟಾ ಬಜಾರ್: ಇಂದೋರ್ ಸರಾಫಾ ಸಟ್ಟಾ ಬಜಾರ್ ಬಿಜೆಪಿಯ 260 ಸ್ಥಾನಗಳು ಸೇರಿ ಎನ್‌ಡಿಎ 283 ಸ್ಥಾನ ಗೆಲ್ಲಬಹುದು. ಕಾಂಗ್ರೆಸ್‌ನ 94 ಸ್ಥಾನ ಸೇರಿದಂತೆ ಇಂಡಿ ಒಕ್ಕೂಟ 180 ಕ್ಷೇತ್ರಗಳಲ್ಲಿ ಗೆಲುವು ಕಾಣಬಹುದು ಎಂದಿದೆ.

ಮುಂಬೈ ಸಟ್ಟಾ ಬಜಾರ್: ಮುಂಬೈ ಸಟ್ಟಾ ಬಜಾರ್ ಬಿಜೆಪಿಗೆ ಬಹುಮತ ನೀಡಿದೆ. ಬಿಜೆಪಿ ಕನಿಷ್ಠ 295ರಿಂದ ಗರಿಷ್ಠ 305 ಸೀಟ್ ಗೆಲ್ಲಬಹುದು. ಕಾಂಗ್ರೆಸ್ 55-65 ಸೀಟ್ ಗೆಲ್ಲಬಹುದು ಎಂದು ತಿಳಿಸಿದೆ.

ಅಹಮದಾಬಾದ್ ಸಟ್ಟಾ ಬಜಾರ್: ಗುಜರಾತ್‌ನ ಅಹಮದಾಬಾದ್ ಸಟ್ಟಾ ಬಜಾರ್ ಬಿಜೆಪಿ 301-303 ಸ್ಥಾನ, ಕಾಂಗ್ರೆಸ್ 63-65 ಸ್ಥಾನಗಳನ್ನು ಗೆಲ್ಲಬಹುದು ಎಂದು ತಿಳಿಸಿದೆ.

ವಿಶ್ವದ ಪ್ರಖ್ಯಾತ ಬ್ರೋಕರೇಜ್ ಹೌಸ್‌ಗಳು ಬಿಜೆಪಿ ಗೆಲ್ಲುವ ಸ್ಥಾನಗಳನ್ನು ಅಂದಾಜು ಮಾಡಿವೆ. ಸಂಜಯ್ ಕುಮಾರ್ ಪ್ರಕಾರ ಬಿಜೆಪಿ-272 ಸ್ಥಾನ ಗೆಲ್ಲಬಹುದು. ಬ್ರೋಕರೇಜ್ ಹೌಸ್‌ಗಳಾದ ಜೆಎಂ ಫೈನಾನ್ಶಿಯಲ್ ಪ್ರಕಾರ ಬಿಜೆಪಿ-290, ಫಿಲಿಪ್ ಕ್ಯಾಪಿಟಲ್- 290, ಐಐಎಫ್‌ಎಲ್-320 ಹಾಗೂ ಬೆರ್ನಸ್ಟೀನ್-330 ಸ್ಥಾನಗಳನ್ನು ಬಿಜೆಪಿ ಗೆಲ್ಲಬಹುದು ಎಂದಿವೆ.

ಸ್ಟಾರ್ ಹೋಟೆಲಿನಲ್ಲಿ ಕೆಲಸ ಮಾಡಿದವರು ಸಿಕ್ಕಾಗ ಏನು ಮಾಡಬೇಕು?

ಇದೇ ಅಂತರಂಗ ಸುದ್ದಿ

ವಿಶ್ವೇಶ್ವರ ಭಟ್
vbhat@me.com

ಇತ್ತೀಚೆಗೆ ನಾನು ಮಲೇಷಿಯಾದ ರಾಜಧಾನಿ ಕೌಲಾಲಾಂಪುರದ 'ಫೋರ್ ಸೀಸನ್ಸ್' ಹೋಟೆಲಿನ ಜನರಲ್ ಮ್ಯಾನೇಜರ್ ಜತೆ ಮಾತಾಡುತ್ತಿದ್ದೆ. ನಮ್ಮ ಮಾತುಕತೆ ಹೋಟೆಲಿನಲ್ಲಿ ಉಳಿದುಕೊಳ್ಳುವ ಗ್ರಾಹಕರ ಮನಸ್ಥಿತಿ ಮತ್ತು ಅವರ ವರ್ತನೆಯ ಬಗ್ಗೆ ಹೊರಳಿತು. 'ಫೋರ್ ಸೀಸನ್ಸ್' ಲಕ್ಸುರಿ ಹೋಟೆಲುಗಳ ಪೈಕಿ ಪ್ರಮುಖವಾದುದು. ಸಾಮಾನ್ಯವಾಗಿ ಅಲ್ಲಿಗೆ ಲಾಟಪೂಟ ವ್ಯಕ್ತಿಗಳು ಬರುವುದಿಲ್ಲ.

ಸಮಾಜದಲ್ಲಿ ಗಣ್ಯವ್ಯಕ್ತಿಗಳೆಂದು ಕರೆಯಿಸಿಕೊಂಡವರು, ಶ್ರೀಮಂತರು, ಸಿಲೆಬ್ರಿಟಿಗಳು, ಸಿನಿಮಾ ನಟರು, ಉದ್ಯಮಿಗಳು ಆಗಮಿಸುತ್ತಾರೆ. ಅಲ್ಲಿಗೆ ಬರುವವರೆಲ್ಲ ವಿವಿಐಪಿಗಳೇ. ಯಾರನ್ನೂ ಸಾಮಾನ್ಯರು ಎಂದು ಪರಿಗಣಿಸುವಂತಿಲ್ಲ. 'ನಮ್ಮ ಹೋಟೆಲಿಗೆ ಬರುವ ವ್ಯಕ್ತಿಯ ಪರಿಚಯ ಇಲ್ಲದೇ ಹೋಗಬಹುದು. ಆದರೆ ನಮ್ಮಲ್ಲಿಗೆ ಬರುವವರೆಲ್ಲರೂ ಅತಿಗಣ್ಯ ವ್ಯಕ್ತಿಗಳೇ. ಯಾರನ್ನೂಲಘುವಾಗಿ ಪರಿಗಣಿಸುವಂತಿಲ್ಲ' ಎಂಬುದು ಆ ಹೋಟೆಲಿನ ಗೆಸ್ಟ್ ಮ್ಯಾನ್ಯುವಲ್‌ನಲ್ಲಿ ಬರೆದಿದೆ.

ಇಂಥ ಹೋಟೆಲಿಗೆ ಬರುವವರೆಲ್ಲರೂ ಅತಿಗಣ್ಯ ವ್ಯಕ್ತಿಗಳು ಎಂದ ಮೇಲೆ ಅವರ ವರ್ತನೆಯೂ ಉನ್ನತ ಸ್ತರದಲ್ಲಿದ್ದಿರಬಹುದು ಎಂದು ಭಾವಿಸುವುದು ಸಹಜ. ಬಹುತೇಕ ಸಂದರ್ಭದಲ್ಲಿ ಅದು ನಿಜ ಕೂಡ. ಆದರೆ ಶ್ರೀಮಂತರು ಅಂದರೆ ಪರಿಪೂರ್ಣರು ಎಂದುಭಾವಿಸಬೇಕಿಲ್ಲ. ಅವರಲ್ಲಿಯೂ ಸಾಕಷ್ಟು ಗುಣದೋಷಗಳಿರುತ್ತವೆ. ಆ ಹೋಟೆಲಿಗೆ ಎಲ್ಲ ಮನಸ್ಥಿತಿಯವರೂ ಉಳಿಯಲು ಬರುತ್ತಾರೆ. ಅವರ ಭಾವನೆಗಳನ್ನು ಅರಿತು ಅವರೊಂದಿಗೆ ವ್ಯವಹರಿಸುವುದು ಬಹಳ

ಮುಖ್ಯ. ಎಲ್ಲರಿಗೂ ತಾವು ಹೆಚ್ಚಿನ ಹಣವನ್ನು ತೆತ್ತು ಅಲ್ಲಿಗೆ ಬಂದಿರುತ್ತೇವೆ ಎಂಬ ಭಾವನೆ ಇರುತ್ತದೆ. ಹೀಗಾಗಿ ತಮಗೆ ವಿಶೇಷ ಸವಲತ್ತು, ಸೌಕರ್ಯ, ಗಮನ ಮತ್ತು ಮರ್ಯಾದೆ ಸಿಗಬೇಕು ಎಂದು ಅಪೇಕ್ಷಿಸುತ್ತಾರೆ. ಇವುಗಳ ಪೈಕಿ ಸ್ವಲ್ಪ ವ್ಯತ್ಯಯವಾದರೂ ಕಿರಿಕಿರಿ ಮಾಡುತ್ತಾರೆ ಅಥವಾ ಜಗಳವಾಡಲು ಹಿಂದೇಟು ಹಾಕುವುದಿಲ್ಲ.

ಸಾಮಾನ್ಯವಾಗಿ ಸ್ಟಾರ್ ಹೋಟೇಲುಗಳಲ್ಲಿ, ಗ್ರಾಹಕರು ಹೋಗುವಾಗ ಹೊತ್ತೊಯ್ಯುವ ಸಾಮಾನುಗಳನ್ನು ಇಡುವುದಿಲ್ಲ. ಆದರೆ ಕೆಲವು ಅತಿಥಿಗಳು ಹೋಟೆಲಿನ ಟವೆಲ್ಲುಗಳನ್ನು ತಮ್ಮೊಂದಿಗೆ ತೆಗೆದುಕೊಂಡು ಹೋಗುತ್ತಾರೆ. ಕೆಲವು ಹೋಟೆಲುಗಳು ಅದನ್ನು ಪುರಸ್ಕರಿಸುವುದಿಲ್ಲ. ಆದರೆ ಅತಿಥಿಗಳ ಬ್ಯಾಗ್ ಚೆಕ್ ಮಾಡಲು ಆಗುವುದಿಲ್ಲ. ಅತಿಥಿಗಳು ಹೋಟೆಲಿನಿಂದ ಹೋದ ಬಳಿಕ ಅವರು ಟವೆಲ್ ಎಗರಿಸಿದ್ದು ಗೊತ್ತಾಗುತ್ತದೆ. ಆಗ ಏನೂ ಮಾಡಲು ಆಗುವುದಿಲ್ಲ. ಕೆಲವು ಹೋಟೆಲುಗಳು ರೂಮು ಬಾಡಿಗೆ ದರ ನಿರ್ಧರಿಸುವಾಗಲೇ, ಟವೆಲ್, ಸೋಪ್, ಶಾಂಪೂ, ಟೂತ್‌ಬ್ರಷ್, ರೇಜರ್ ಮುಂತಾದವುಗಳ ಬೆಲೆಗಳನ್ನು ಸೇರಿಸಿರುತ್ತಾರೆ. ಅಂದರೆ ಅತಿಥಿಗಳು ರೂಮಿನಲ್ಲಿಟ್ಟ ಈ ವಸ್ತುಗಳನ್ನು ತೆಗೆದುಕೊಂಡು ಹೋದರೂ ತಲೆಕೆಡಿಸಿಕೊಳ್ಳುವುದಿಲ್ಲ.

ಕೆಲವು ಹೋಟೆಲುಗಳು, 'ನಮ್ಮ ರೂಮಿನಲ್ಲಿಟ್ಟ ಯಾವುದಾದರೂ ವಸ್ತುಗಳು ನಿಮಗೆ ಇಷ್ಟವಾದರೆ, ಅವು ಮಾರಾಟಕ್ಕೆ ಸಿಗುತ್ತವೆ' ಎಂದು ಬರೆದಿರುತ್ತವೆ. ಸಾಮಾನ್ಯವಾಗಿ ಇಂಥ ಸೂಚನೆಯನ್ನು ಹೋಟೆಲಿನ ಜನರಲ್ ಮ್ಯಾನೇಜರ್ ಅತಿಥಿಗಳಿಗೆ ತನ್ನ ಲೆಟರ್‌ಹೆಡ್‌ನಲ್ಲಿ ನೀಡಿರುತ್ತಾನೆ. ಅಂದರೆ ರೂಮಿನಲ್ಲಿಟ್ಟ ಯಾವುದೇ ಸಾಮಾನುಗಳನ್ನು ತೆಗೆದುಕೊಂಡು ಹೋಗಬಾರದು ಎಂಬುದನ್ನು ಸೂಚ್ಯವಾಗಿ ರವಾನಿಸಿರುತ್ತಾರೆ. ಆದರೂ ಅತಿಥಿಗಳು ತಮ್ಮ ಅಸಲಿಬುದ್ಧಿಯನ್ನು ತೋರಿಸಿರುತ್ತಾರೆ. ಇದರಲ್ಲಿ ಶ್ರೀಮಂತರು, ಅತಿ ಶ್ರೀಮಂತರು ಎಂಬ ಭೇದ-ಭಾವ ಇಲ್ಲ. ಇದು ಅವರವರ ಮನಸ್ಥಿತಿಗೆ ಸಂಬಂಧಿಸಿದ್ದು.

ನ್ಯೂಯಾರ್ಕಿನ ಪ್ರಮುಖ ಹೋಟೆಲ್ಲೊಂದು ಕೆಲ ತಿಂಗಳ ಹಿಂದೆ, ರೂಮಿನಲ್ಲಿಟ್ಟ ಟವೆಲ್ಲಿಗೆ ಎಲೆಕ್ಟ್ರಾನಿಕ್ ಟ್ಯಾಗ್ ಅಳವಡಿಸಿದ್ದಾಗಿಯೂ, ಯಾರಾದರೂ ಹೋಟೆಲ್‌ನಿಂದ ಹೊರಕ್ಕೆ ಯಾವುದೇ ಸಾಮಾನುಗಳನ್ನು ಎಗರಿಸಿಕೊಂಡು ಹೋದರೆ, ಬೀಪ್ ಸದ್ದು ಬರುವುದಾಗಿಯೂ ಘೋಷಿಸಿಕೊಂಡಿತ್ತು. ಆದರೆ ಇದಕ್ಕೆ ಅತಿಥಿಗಳಿಂದ ಮತ್ತು ಸಾರ್ವಜನಿಕರಿಂದ ಭಾರಿ ಆಕ್ರೋಶವ್ಯಕ್ತವಾಯಿತು. 'ನಿಮ್ಮ ಹೋಟೆಲಿನಲ್ಲಿ ಉಳಿದುಕೊಂಡವರಿಗೆ ಕಳ್ಳ ಎಂಬ ಹಣೆಪಟ್ಟಿ ಹಚ್ಚಬೇಡಿ. ಅಷ್ಟಕ್ಕೂ ನಿಮ್ಮ ಹೋಟೆಲಿನಲ್ಲಿ ಉಳಿದುಕೊಳ್ಳಬೇಕು ಎಂಬ ಅನಿವಾರ್ಯವೇನಿದೆ?' ಎಂದು ಸಾಮಾಜಿಕ ಜಾಲತಾಣಗಳಲ್ಲಿ ಸಾರ್ವಜನಿಕರು ತರಾಟೆಗೆತೆಗೆದುಕೊಂಡರು. ಅಲ್ಲಿಗೆ ಆ ಹೋಟೆಲ್ ಆ ನಿರ್ಧಾರವನ್ನು ಕೈಬಿಟ್ಟಿತು.

ಆದರೆ ಹೋಟೆಲ್ ಆಡಳಿತ ಮಂಡಳಿಗೆ ಅತಿಥಿಗಳ ಈ ವರ್ತನೆ ತಲೆನೋವೇ. ಆದರೆ ದೊಡ್ಡ ದೊಡ್ಡ ಹೋಟೆಲುಗಳು ಈ ವಿಷಯದ ಬಗ್ಗೆ ತಲೆಕೆಡಿಸಿಕೊಳ್ಳುವುದನ್ನು ಬಿಟ್ಟಿವೆ. ಈ ವಸ್ತುಗಳನ್ನು ಸೇರಿಸಿಯೇ ರೂಮ್ ಬಾಡಿಗೆ ತೆಗೆದುಕೊಳ್ಳುತ್ತದೆ. ಆದರೆ ಹೋಟೆಲಿನಲ್ಲಿ ಉಳಿದುಕೊಳ್ಳುವ ಎಲ್ಲ ಗ್ರಾಹಕರೂ ಹೀಗೆ ಮಾಡುವುದಿಲ್ಲ. ಆಗ ಹೋಟೆಲಿಗೆ ಲಾಭವೇ. ಈ ಕಾರಣದಿಂದ ಅದನ್ನು ಒಂದು ರಾದ್ಧಾಂತದ ವಿಷಯವಾಗಿ ಮಾಡುವುದಿಲ್ಲ.

ಭಾರತೀಯ ರೈಲಿನಲ್ಲಿ ಯಾವ ವಸ್ತುವನ್ನೂ ಎಗರಿಸಿಕೊಂಡು ಹೋಗಲು ಆಗುವುದಿಲ್ಲ. ಚೊಂಬನ್ನು ಸಹ ಸರಪಳಿ ಕಟ್ಟಿ ಇಡುತ್ತಿದ್ದರು. ಸೀಟಿನಿಂದ ಸ್ಪಾಂಜನ್ನು ಕೀಳಲು ಆಗುವುದಿಲ್ಲ. ಫ್ಯಾನ್ ಕಿತ್ತುಕೊಂಡು ಹೋಗಲು ಸಾಧ್ಯವಿಲ್ಲ. ಅದೇ ನಿಯಮವನ್ನು ಕೆಲವು ಹೋಟೆಲುಗಳು ಪಾಲಿಸುತ್ತಿವೆ. ಆದರೆ ಟವೆಲ್ ಎಗರಿಸುವ ವಿಷಯದಲ್ಲಿ 'ಫೂಲ್‌ಪ್ರೂಫ್' ವ್ಯವಸ್ಥೆಯನ್ನು ತರಲು ಸಾಧ್ಯವಾಗಿಲ್ಲ. ನೂರು-ಐನೂರು ರೂಮುಗಳಿರುವ ಹೋಟೆಲ್ ನಿಭಾಯಿಸುವುದು ಸಣ್ಣ ಕೆಲಸವಲ್ಲ. ಐನೂರು ಸಂಸಾರಗಳನ್ನು ನಿಭಾಯಿಸಿದಂತೆ. ಮಧ್ಯರಾತ್ರಿ ಫೋನ್‌ಮಾಡಿ, ಶಾವರ್‌ನಿಂದ ಹರಿದನೀರು ರೂಮಿನಲ್ಲೆಲ್ಲ ತುಂಬಿಕೊಂಡಿದೆ ಎಂದು ಹೇಳುತ್ತಾರೆ. ಇನ್ಯಾರೋ ಮೂರು ಗಂಟೆಗೆ ಫೋನ್ ಮಾಡಿ, 'ಮಜ್ಜಿಗೆ ಬೇಕಿತ್ತು. ರೂಮಿಗೆ ಕಳಿಸಿ' ಅಂತಾರೆ. ಯಾರಿಗೂ ಇಲ್ಲ ಎಂದು ಹೇಳುವಂತಿಲ್ಲ. ಒಂದುವೇಳೆ ಇಲ್ಲ ಅಂದರೆ ಅದನ್ನೇ ದೊಡ್ಡ ವಿಷಯವಾಗಿ ಮಾಡುತ್ತಾರೆ.

ಸಮಾಜದಲ್ಲಿ ಪ್ರತಿಷ್ಠಿತ ವ್ಯಕ್ತಿಗಳು ಎಂದು ಯಾರನ್ನು ಭಾವಿಸುತ್ತೇವೋ, ಅವರ ವರ್ತನೆ ಭಿನ್ನವಾಗಿರುವುದಿಲ್ಲ. ಹಾಲಿವುಡ್ ನಟರೊಬ್ಬರು, ಹೋಟೆಲಿನಲ್ಲಿ ಕುಡಿದು ಪ್ಲೇಟನ್ನು ಬಿಸಾಡಿ ರಂಪ-ರಾದ್ಧಾಂತ ಮಾಡಿದ್ದರಂತೆ. ಅತಿಗಣ್ಯರೊಬ್ಬರು ಗೋಡೆಯಲ್ಲಿ ನೇತುಹಾಕಿದ ಪೇಂಟಿಂಗ್‌ನ್ನು ಎಗರಿಸಿಕೊಂಡು ಹೋಗಿದ್ದರು. ಸಂದೇಹ ಬರದಿರಲೆಂದು ಆ ಜಾಗದಲ್ಲಿ ಬೇರೊಂದು ಪೇಂಟಿಂಗ್ ತಂದು ಇಟ್ಟಿದ್ದರು.

ಹತ್ತಾರು ವರ್ಷಗಳ ಕಾಲ ಸ್ಟಾರ್ ಹೋಟೆಲುಗಳಲ್ಲಿ ಕೆಲಸ ಮಾಡಿದವರು ಸಿಕ್ಕರೆ, ಅವರ ಬಾಯಿ ಬಿಡಿಸಿ. ನಿಮಗೆ ಹಲವು ಕತೆಗಳು ಸಿಗುತ್ತವೆ. ಕೆಲವರ ಬಗ್ಗೆ ಇರುವ ಕಲ್ಪನೆಗಳು ಬದಲಾಗುತ್ತವೆ. ಅಂಥವರ ಇನ್ನೊಂದು ಮುಖ ಗೊತ್ತಾಗುತ್ತದೆ. ನಾನಂತೂ ಈ ಅವಕಾಶವನ್ನು ಎಂದೂ ತಪ್ಪಿಸಿಕೊಳ್ಳುವುದಿಲ್ಲ.

ಅಡ್ಡ ಪರಿಣಾಮ

ಇತ್ತೀಚೆಗೆ ಖ್ಯಾತ ವಕೀಲ ಪ್ರಶಾಂತ ಭೂಷಣ ಒಂದು ಟ್ವೀಟ್ ಮಾಡಿದ್ದರು. ಕೋವಿಶೀಲ್ಡ್ ವ್ಯಾಕ್ಸಿನ್‌ನ ಸೈಡ್ ಇಫೆಕ್ಟ್ ಬಗ್ಗೆ ಮಾಧ್ಯಮಗಳಲ್ಲಿ ವರದಿಯಾದ ಹಿನ್ನೆಲೆಯಲ್ಲಿ ಅವರು ಆ ಟ್ವೀಟ್ ಮಾಡಿದ್ದರು.

'ಭಾರತದಲ್ಲಿ ಕೋವಿಶೀಲ್ಡ್ ಲಸಿಕೆಯ ಅಡ್ಡ ಪರಿಣಾಮದ ಬಗ್ಗೆ ಮಾಧ್ಯಮಗಳಲ್ಲಿ ಮೊದಲ ವರದಿ ಪ್ರಕಟವಾಗಿದೆ. ಲಸಿಕೆಯನ್ನುಹಾಕಿಸಿಕೊಳ್ಳಲು ನಾನೇಕೆ ಹಿಂದೇಟು ಹಾಕಿದ್ದೆ ಎಂಬ ಬಗ್ಗೆ ನಾನು 2021 ರಲ್ಲಿಯೇ ಲೇಖನ ಬರೆದು ನನ್ನ ಆತಂಕವನ್ನು ವ್ಯಕ್ತಪಡಿಸಿದ್ದೆ. ಆ ಸಂದರ್ಭದಲ್ಲಿ ನನ್ನ ಈ ಅಧ್ಯಯನ ಪೂರ್ಣ ಲೇಖನವನ್ನು ಪ್ರಕಟಿಸಲು ಮುಖ್ಯವಾಹಿನಿ ಪತ್ರಿಕೆಗಳು ನಿರಾಕರಿಸಿದವು.' ಎಂದು ಪ್ರಶಾಂತ ಭೂಷಣ ಟ್ವೀಟ್ ಮಾಡಿದ್ದರು.

ಅದಕ್ಕೆ ಡಾ.ವೇದು ಎನ್ನುವವರು ಹೀಗೆ ಪ್ರತಿಕ್ರಿಯಿಸಿದ್ದರು - 'ಭೂಷಣ್ ಅವರೇ, ಕಾಂಡೋಮ್ ಸೇರಿದಂತೆ ಪ್ರತಿ ಔಷಧಕ್ಕೂ ಅಡ್ಡಪರಿಣಾಮ ಎಂಬುದು ಇದ್ದೇ ಇರುತ್ತದೆ. ನಿಮ್ಮ ತಂದೆಯವರು ಅದನ್ನು ಬಳಸಿಯೂ, ನೀವು ಹುಟ್ಟಿರಬಹುದು. ಹತ್ತು ಲಕ್ಷದಲ್ಲಿ ಒಬ್ಬರಿಗೆ ಕೋವಿಶೀಲ್ಡ್ ಅಡ್ಡಪರಿಣಾಮ ತಟ್ಟಿರಬಹುದು. ಆದ್ದರಿಂದ ಜನರಲ್ಲಿ ಆತಂಕ ಸೃಷ್ಟಿಸುವ ನಿಮ್ಮ ಚಾಳಿಯನ್ನು ಬಿಟ್ಟುಬಿಡಿ. ಒಂದು ವೇಳೆ ಈ ಲಸಿಕೆಯನ್ನು ಕಾಂಗ್ರೆಸ್ ಸರಕಾರ ನೀಡಿದ್ದಿದ್ದರೆ ನೀವು ಸೊಂಟಕ್ಕೆ, ಭುಜಕ್ಕೆ ಸೇರಿದಂತೆ ಹತ್ತು ಲಸಿಕೆಗಳ ಇಂಜೆಕ್ಷನ್ ತೆಗೆದುಕೊಳ್ಳುತ್ತಿದ್ದೀರಿ.'

ಸೆಕ್ಸ್ ಮತ್ತು ಪತ್ನಿ ಮುಖ

ಟ್ವಿಟ್ಟರ್‌ನಲ್ಲಿ (ಈಗ ಎಕ್ಸ್) ಮಹಿಳೆಯೊಬ್ಬಳು, 'ಸೆಕ್ಸ್ ಮಾಡುವಾಗ ಗಂಡಸರು ತಮ್ಮ ಹೆಂಡತಿಯನ್ನು ನೋಡುತ್ತಾರಾ?' ಎಂಬ ಪ್ರಶ್ನೆಯನ್ನು ಕೇಳಿದ್ದಳು. ಇಂಥ ಪ್ರಶ್ನೆಗಳನ್ನು ಓದಿ ಯಾರೂ ಸುಮ್ಮನಿರುವುದಿಲ್ಲ. ತಲೆಗೊಬ್ಬರು ತರಲೆ ಉತ್ತರ ಅಥವಾ ಪ್ರತಿಕ್ರಿಯೆ ನೀಡುತ್ತಾರೆ. ಈ ಪ್ರಶ್ನೆಗೆ ನೂರಕ್ಕೂ ಹೆಚ್ಚು ಜನ ಪ್ರತಿಕ್ರಿಯೆ ನೀಡಿದ್ದರು. ಆದರೆ ನನಗೆ ಒಂದು ಪ್ರತಿಕ್ರಿಯೆ ಇಷ್ಟವಾಯಿತು.

ಕ್ಸೆವಿಯರ್ ಎನ್ನುವವರು ಹೀಗೆ ಬರೆದಿದ್ದರು - 'ನಾನು ಒಮ್ಮೆ ಅವಳ ಮುಖವನ್ನು ನೋಡಿದೆ. ಅವಳ ಮುಖ ಕೋಪದಲ್ಲಿ ಕುದಿಯುತ್ತಿತ್ತು. ಆಕೆ ಕಿಟಕಿಯಾಚೆಯಿಂದ ದುರುದುರು ನಮ್ಮನ್ನು ದಿಟ್ಟಿಸುತ್ತಿದ್ದಳು.'

ಕೊಡೊ ನಿಶಿಮುರಾ ಕುರಿತು



ನೀವು ಕೊಡೊ ನಿಶಿಮುರಾ ಅವರ ಹೆಸರನ್ನು ಕೇಳಿದ್ದೀರೋ, ಇಲ್ಲವೋ ಗೊತ್ತಿಲ್ಲ. ಇತ್ತೀಚೆಗೆ ನಾನು ಅವರು ಬರೆದ This Monk Wears Heels : Be Who You Are ಎಂಬ ಪುಸ್ತಕವನ್ನು ಓದುತ್ತಿದ್ದೆ. ನಿಜಕ್ಕೂ ಎಂಥವರ ಮೇಲೂ ಪರಿಣಾಮ ಬೀರುವಂಥ ಕೃತಿ. ಈ ಕೃತಿಯನ್ನು ನಿಶಿಮುರಾ ಅವರು, ತಮ್ಮ ಹೃದಯದೊಂದಿಗೆ ಯಾವತ್ತೂ ಪ್ರಾಮಾಣಿಕವಾಗಿರಲು ಹೋರಾಟ ನಡೆಸುವವರಿಗೆ (For anyone who has ever struggled to be honest with their heart) ಅರ್ಪಿಸುವುದಾಗಿ ಹೇಳಿಕೊಂಡಿದ್ದಾರೆ.

ಈ ಮೊದಲು ನಾನು ನಿಶಿಮುರಾ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಕೇಳಿದ್ದೆ. ಅವರ ವಿಚಾರದಲ್ಲಿನ ಸ್ಪಷ್ಟತೆ ಮತ್ತು ಪ್ರಾಮಾಣಿಕ ಧೋರಣೆ ಅವರನ್ನು ಇಷ್ಟಪಡುವಂತೆ ಮಾಡಿತು.

ಮೂಲತಃ ಕೊಡೊ ನಿಶಿಮುರಾ ಬೌದ್ಧಭಿಕ್ಷು. ಇಷ್ಟೇ ಆಗಿದ್ದರೆ ಅವರು ಹತ್ತರ ಜತೆ ಹನ್ನೊಂದನೆಯವರಾಗಿರುತ್ತಿದ್ದರು. ಆದರೆ ಅವರದು ಬಹುಮುಖ ಪ್ರತಿಭೆ, ಆಸಕ್ತಿ. ಅವರು ಬೌದ್ಧ ಧರ್ಮದ ಪವಿತ್ರ ಗ್ರಂಥಗಳನ್ನು, ಶಾಸನಗಳನ್ನು ಓದಬಲ್ಲರು. ಹಾಗೆಯೇ 'ಭುವನ ಸುಂದರಿ' ಸ್ಪರ್ಧೆಯಲ್ಲಿ ಭಾಗವಹಿಸುವ ಲಲನಾಮಣಿಯರಿಗೆ ಮೇಕಪ್ ಕಲಾವಿದರಾಗಿಯೂ ಕೆಲಸ ಮಾಡಬಲ್ಲರು.

ಇವರು ಮೇಕಪ್ ಮಾಡಿದ ಮೂವರು, 'ಮಿಸ್ ಯೂನಿವರ್ಸ್' ಸ್ಪರ್ಧೆಯಲ್ಲಿ ಬಹುಮಾನ ಗಳಿಸಿದ್ದು ವಿಶೇಷ. ವಿಶೇಷ ಸಂದರ್ಭಗಳಲ್ಲಿ, ಬೇರೆ ಬೇರೆ ದೇಶಗಳ ರಾಣಿಯರಿಗೆ, ಗಣ್ಯರಿಗೆ ಮೇಕಪ್ ಮಾಡಲು ಇವರಿಗೆ ಆಮಂತ್ರಣ ಬರುತ್ತದೆ. ಹೀಗಾಗಿ ಇವರು ದೇಶ-ದೇಶಗಳನ್ನು ಸದಾ ಸುತ್ತುತ್ತಲೇ ಇರುತ್ತಾರೆ. ಈ ಬೌದ್ಧಭಿಕ್ಷು ಫ್ಯಾಷನ್ ಪ್ರಿಯ. ದಿನಕ್ಕೊಂದು ರಂಗುರಂಗಿನ ಪೋಷಾಕಿನಲ್ಲಿ ಕಂಗೊಳಿಸುತ್ತಾರೆ, ಕಿವಿಗೆ ವಿವಿಧ ಓಲೆಗಳನ್ನು ಧರಿಸುತ್ತಾರೆ. ಸಿನಿಮಾ ನಟಿಯರಂತೆ ಹೈಹೀಲ್ಡ್ (ಹಿಮ್ಮಡ ಎತ್ತರಿಸಿದ) ಚಪ್ಪಲಿ ಧರಿಸಿ ಓಡಾಡುತ್ತಾರೆ.

ಒಂದು ದಿನ ಗಂಡಸಿನ ಪೋಷಾಕು ಧರಿಸಿದರೆ, ಮರುದಿನ ಹೆಂಗಸರ ದಿರಿಸಿನಲ್ಲಿ ಕಾಣಿಸಿಕೊಳ್ಳುತ್ತಾರೆ. ಇವರು ತಮ್ಮ ಡ್ರೆಸ್‌ನ್ನು ತಾವೇ ಡಿಸೈನ್ ಮಾಡಿಕೊಳ್ಳುತ್ತಾರೆ. ಇವರ ಕೇಶಾಲಂಕಾರವೂ ದಿನದಿನಕ್ಕೆ ಬದಲಾಗುತ್ತದೆ. ಒಂದು ದಿನ ಕೆಂಪುಗೂದಲಲ್ಲಿ ಕಾಣಿಸಿಕೊಂಡರೆ, ಮರುದಿನ ಬಿಳಿಗೂದಲಿನಲ್ಲಿ ಕಂಗೊಳಿಸುತ್ತಾರೆ. ಒಮ್ಮೆ ಬರೀ ಕೊರಳಲ್ಲಿ, ಮತ್ತೊಮ್ಮೆ ಕೊರಳ ತುಂಬಾ ಬಂಗಾರದ ಒಡವೆಗಳು.

ಹಾಗೆ ದಿನಕ್ಕೊಂದು ಬಣ್ಣದ ಲಿಪ್‌ಸ್ಟಿಕ್. ಇವರು ಹೀಗೇ ಎಂದು ಹೇಳುವಂತಿಲ್ಲ. ಪ್ರತಿದಿನವೂ ಭಿನ್ನವಾಗಿರಲು ಬಯಸುತ್ತಾರೆ. ಇಷ್ಟೇ ಆಗಿದ್ದರೆ ನಿಶಿಮುರಾ ಬಗ್ಗೆ ಹೆಚ್ಚು ಹೇಳುವಂಥದ್ದು ಏನೂ ಇರುತ್ತಿರಲಿಲ್ಲ. ಇವರು ತಮ್ಮನ್ನು ಸಲಿಂಗಕಾಮಿ ಎಂದು ಘೋಷಿಸಿಕೊಂಡು, ಸಲಿಂಗಿಗಳ ಹಕ್ಕುಗಳಿಗಾಗಿ ಹೋರಾಡುತ್ತಿದ್ದಾರೆ.

'ನಾನು ಸಲಿಂಗಿಯಾದರೆ ಅದು ನನ್ನ ಇಷ್ಟ. ಅದನ್ನು ತಪ್ಪು ಎಂದು ಹೇಳಲು ಯಾರಿಗೂ ಅಧಿಕಾರವಿಲ್ಲ. ಸಲಿಂಗ ಪ್ರಕೃತಿಯಷ್ಟೇ ಸಹಜ. ನಮ್ಮ ಉಸಿರಿನಷ್ಟೇ ಸತ್ಯ. ಅದಕ್ಕಾಗಿ ನಾವು ಅವಮಾನ ಅನುಭವಿಸಬೇಕಿಲ್ಲ. ಸಲಿಂಗಿ ಎಂದು ಹೇಳಿಕೊಳ್ಳಲು ಅಂಜಬೇಕಿಲ್ಲ. ಧೈರ್ಯದಿಂದ ನಾನು ಸಲಿಂಗಿ ಎಂದು ಹೇಳಿಕೊಳ್ಳಬೇಕು. ಯಾರೂ ನಿಮ್ಮ ತಲೆ ತೆಗೆಯುವುದಿಲ್ಲ. ಆದರೆ ಹೇಳಿಕೊಳ್ಳಬೇಕೋ, ಬೇಡವೋ ಎಂಬ ತೊಳಲಾಟದಲ್ಲಿ ಮಾತ್ರ ಇರಬೇಡಿ. ಹಾಗೆ ಮಾಡಿದರೆ ಅದು ನಿಮ್ಮ ಆತ್ಮಘಾತುಕತನ. ಪ್ರತಿಯೊಬ್ಬ ವ್ಯಕ್ತಿಯೂ ಅದ್ಭುತ ಮತ್ತು ಅನೂಹ್ಯ. ಅವರು ಹೀಗೇ ಇರಬೇಕು ಎಂದು ಬಯಸುವುದು ಸರಿಯಲ್ಲ' ಎಂದು ಅವರು ಘೋಷಿಸಿದರು.

ನಿಶಿಮುರಾ ತಮ್ಮನ್ನು gender gifted ಎಂದು ಬಣ್ಣಿಸಿಕೊಂಡಿದ್ದಾರೆ. ಇವರು ಹುಟ್ಟಿದ್ದು ಜಪಾನಿನ ಟೋಕಿಯೋದಲ್ಲಿ. ಓದಿದ್ದು ಡಿಸೈನಿಂಗ್ ಬಗ್ಗೆ. ಅದೂ ನ್ಯೂಯಾರ್ಕಿನ ಪಾರ್ಸನ್ಸ್ ಸ್ಕೂಲ್ ಆಫ್ ಡಿಸೈನ್‌ನಲ್ಲಿ. ಇವರ ತಂದೆ ಬೌದ್ಧಭಿಕ್ಷು. ಬೌದ್ಧ ದೇಗುಲದಲ್ಲಿ ಪೂಜಾರಿಯಾಗಿದ್ದರು. ನಿಶಿಮುರಾ ಅವರನ್ನೂ ಅದೇ ವಾತಾವರಣದಲ್ಲಿ ಬೆಳೆಸಿದರು.

ಆದರೆ ಅವರು ತಮ್ಮ ಸುತ್ತಲಿನ ಸಂಕೋಲೆಗಳನ್ನು ಬಿಡಿಸಿಕೊಂಡು, ಸಮಾಜದ ಎಲ್ಲಾ ಕಂದಾಚಾರ, ಗೊಡ್ಡು ಆಚರಣೆಗಳಿಂದ ವಿಮೋಚನೆ ಪಡೆದು ತಮ್ಮಿಷ್ಟದಂತೆ, ಆದರೆ ಬೌದ್ಧಧರ್ಮದ ಆಯಾಮದೊಳಗೆ ಹೊಸತನದ ಹಾದಿಯನ್ನು ಅರಸುವ ನಿಟ್ಟಿನಲ್ಲಿ ಸಾಗಿದ್ದಾರೆ. ಅವರ ಮಾತು, ಉಪನ್ಯಾಸಗಳಲ್ಲಿ ಹೊಸಹೊಳಹು, ದೃಷ್ಟಿಕೋನವನ್ನು ಕಾಣಬಹುದಾಗಿದೆ.

ಗುಮ್ಮನೂ ದೇವರಂತೆ ಸರ್ವಾಂತರ್ಯಾಮಿ, ಸರ್ವರೂಪಧಾರಿ

ಕೆಲವು ಗುಣಲಕ್ಷಣಗಳಲ್ಲಿ ಭಗವಂತನಿಗೂ ಗುಮ್ಮನಿಗೂ ಏಕ್‌ದಂ ಹೋಲಿಕೆ ಇದೆಯೆಂದರೆ ಒಪ್ಪಲೇಬೇಕು. ಬೇಕಿದ್ದರೆ ಹೀಗೇ ಒಮ್ಮೆ ಯೋಚಿಸಿ ನೋಡಿ. ಮೊದಲನೆಯದಾಗಿ, ಭಗವಂತ ಇದ್ದಾನೆ ಎಂದು ಎಲ್ಲರೂ ನಂಬುತ್ತಾರೆ, ಹೇಳುತ್ತಾರೆ, ಆದರೆ ನಿಜಕ್ಕೂ ಅವನನ್ನು ನೋಡಿದವರಿಲ್ಲ. ಹೇಗಿರುತ್ತಾನೆ ಎಂದು ತಿಳಿದವರಿಲ್ಲ. ಗುಮ್ಮನ ವಿಚಾರವೂ ಡಿಟ್ಟೋ. ಗುಮ್ಮ ಇದ್ದಾನೆ, ಆದರೆ ನೋಡಿದವರಿಲ್ಲ! ಎರಡನೆಯದಾಗಿ, ಭಕ್ತರ ಕರೆಗೆ ಭಗವಂತ ಹೇಗೆ ತತ್‌ಕ್ಷಣ ಒಲಿದು ಬರುತ್ತಾನೋ ಗುಮ್ಮನೂ ಅಷ್ಟೇ- ಅಮ್ಮಂದಿರು ಆರ್ಡರ್ ಮಾಡಿದಾಗ ತತ್‌ಕ್ಷಣ ಓಡೋಡಿ ಬರಬಲ್ಲ.

ತಿಳಿರು ತೋರಣ

ಶ್ರೀವತ್ಸ ಜೋಶಿ
srivathsajoshi@yahoo.com

ಅಳುವುದ್ಯಾತಕೊ ರಂಗ ಅತ್ತರಂಜಿಪ ಗುಮ್ಮ... ಅಂತೊಂದು ದಾಸರಪದ ಕೇಳಿದ್ದೀರಾ? ಪುರಂದರ ದಾಸರದೇ ರಚನೆ, ಕೊನೆಯ ಚರಣದಲ್ಲಿರುವ ಅಂಕಿತದಿಂದ ಗೊತ್ತಾಗುತ್ತದೆ. ಯುಟ್ಯೂಬ್‌ನಲ್ಲಿ ಹುಡುಕಿದರೆ ಪ್ರಚಲಿತ ಗಾಯಕ-ಗಾಯಕಿಯರು ಸುಶ್ರಾವ್ಯವಾಗಿ ಹಾಡಿರುವ ಬೇರೆಬೇರೆ ಆವೃತ್ತಿಗಳು ಸಿಗುತ್ತವೆ. ಈ ಪದ್ಯದಲ್ಲಿ ಯಶೋದೆಯು ಬಾಲಕೃಷ್ಣನನ್ನು ರಮಿಸಿ ಸಂತೈಸುತ್ತ, 'ಏಕೆ ಅಳುತ್ತಿದ್ದೀ? ನಿನ್ನ ಅಳುವಿಗೆ ಕಾರಣವೇನು?' ಎಂದು ಕೇಳುತ್ತಾಳೆ. 'ಪುಟ್ಟಿದೇಳು ದಿವಸದಲಿ ದುಷ್ಟ ಪೂತನಿಯ ಕೊಂದೆ। ಮುಟ್ಟಿ ವಿಷದ ಮೊಲೆಯುಂಡ ಕಾರಣ। ದೃಷ್ಟಿ ತಾಕಿತೆ...?' ಅಥವಾ, 'ಬಾಲಕತನದಿ ಗೋಪಾಲಕರೊಡಗೂಡಿ। ಕಾಳಿಂದಿ ಮಡುವನು ಕಲಕಿದ ಕಾರಣ। ಕಾಲು ಉಳುಕಿತೆ...?' ಅಥವಾ ಎಲ್ಲಿಯಾದರೂ 'ತುರುವ ಕಾಯಲು ಪೋಗೆ ಭರದಿ ಇಂದ್ರ ಮಳೆಗರೆಯೆ। ಬೆರಳಲಿ ಬೆಟ್ಟವನೆತ್ತಿದ ಕಾರಣ। ಬೆರಳು ಉಳುಕಿತೇ...?' ಅಂತೆಲ್ಲ ಕೃಷ್ಣನ ಅಳುವಿಗೆ ಕಾರಣವೇನಿರಬಹುದು ಎಂದು ಒಂದೊಂದಾಗಿ ಊಹೆ ಮಾಡುತ್ತಾಳೆ. ಅವಳು ಊಹಿಸಿದ ಕಾರಣಗಳೆಲ್ಲ ಕೃಷ್ಣಲೀಲೆಗಳೇ ಎಂದು ಬೇರೆ ಹೇಳಬೇಕಿಲ್ಲ. ಕೃಷ್ಣ ಸಮಸ್ತ ಜಗಕೆಲ್ಲ ಉದ್ಧಾರಕನಾದರೂ ಯಶೋದೆಯ ಪಾಲಿಗೆ ಮುದ್ದುಕಂದನೇ ತಾನೆ? ಆದ್ದರಿಂದಲೇ, ಅವನ ಕಿವಿ ಹಿಂಡುವ, 'ಅಳು ನಿಲ್ಲಿಸದಿದ್ದರೆ ಗುಮ್ಮ ಬಂದು ಹೆದರಿಸುತ್ತಾನೆ!' ಎಂದು ಹೇಳುವ ಅಧಿಕಾರ ಅವಳಿಗಿದೆ. ಮಾತ್ರವಲ್ಲ, ಆ ಅಧಿಕಾರ ಇರುವುದು ಅವಳೊಬ್ಬಳಿಗೇ.

ಬಹುಶಃ ಕೃಷ್ಣನನ್ನು ಕಂಟ್ರೋಲ್‌ನಲ್ಲಿಡುವುದಕ್ಕೆ ಯಶೋದೆ ಕಂಡುಕೊಂಡ ಸುಲಭೋಪಾಯವೆಂದರೆ ಗುಮ್ಮನನ್ನು ಕರೆಯುವುದು. 'ಸುಮ್ಮನಿರು ಸುಮ್ಮನಿರು ಬೇಡಿಕೊಂಬೆ। ಈ ಮಹಿಯೊಳತಿಶಯದ ಗುಮ್ಮ ಬಂದಿದಕೋ...' ಅಂತ ಇನ್ನೊಂದು ಕೀರ್ತನೆ ಇದೆ. ಪುರಂದರ ದಾಸರದೇ. ಇದೂ ಗುಮ್ಮನನ್ನು ಕರೆಯುವ ರೀತಿಯದೇ. ಇದರಲ್ಲಿ ಪರಮೇಶ್ವರನೇ ಗುಮ್ಮ. ಮೈಗೆಲ್ಲ ಬೂದಿ ಬಳಿದುಕೊಂಡು ಕೈಯಲ್ಲೊಂದು ಕಪೋಲವನ್ನೇ ಭಿಕ್ಷಾಪಾತ್ರೆಯಾಗಿ ಹಿಡಿದುಕೊಂಡವನನ್ನು ಗುಮ್ಮನಿಗೆ ಹೋಲಿಸಿದ್ದು ಸರಿಯೇ ಇದೆ ಬಿಡಿ. ಹೀಗೆ ಮಾತುಮಾತಿಗೂ ಯಶೋದೆಯಿಂದ ಗುಮ್ಮನಿಗೆ ಬುಲಾವ್ ಹೋಗುತ್ತಿದ್ದುದರಿಂದಲೇ ಪುಟ್ಟ ಕೃಷ್ಣ ಅವಳನ್ನು ಬೇಡಿಕೊಂಡಿದ್ದು 'ಗುಮ್ಮನ ಕರೆಯದಿರೆ ಅಮ್ಮ ನೀನು...' ಎಂದು. ಮತ್ತು ಆಕೆಗೆ ಪ್ರಾಮಿಸ್ ಮಾಡಿದ್ದು 'ಸುಮ್ಮನೆ ಇರುವೆನು ಅಮ್ಮಿಯ ಬೇಡೆನು ಮಮ್ಮು ಉಣ್ಣುತ್ತೇನೆ ಅಮ್ಮ ನಾನಿನ್ನು ಅಳುವುದಿಲ್ಲ..' ಎಂದು. ಅಷ್ಟು ಸಾಲದೆಂಬಂತೆ 'ಹೆಣ್ಣುಗಳಿರುವಲ್ಲಿ ಪೋಗಿ ಅವರ ಕಣ್ಣು ಮುಚ್ಚುವುದಿಲ್ಲ. ಚಿಣ್ಣರ ಬಡಿಯುವುದಿಲ್ಲ. ಅಣ್ಣನ ಬೈಯುವುದಿಲ್ಲ. ಬೆಣ್ಣೆಯ ಬೇಡುವುದಿಲ್ಲ. ಮಣ್ಣು ತಿನ್ನುವುದಿಲ್ಲ. ಬಾವಿಯ ಬಳಿ ಹೋಗುವುದಿಲ್ಲ. ಹಾವಿನ ಜೊತೆ ಆಡುವುದಿಲ್ಲ. ಆವಿನ ಮೊಲೆಯೂಡೆ ಕರುಗಳ ಬಿಡುವುದಿಲ್ಲ...' ಎಂದು. ಅಂದರೆ ಕೃಷ್ಣ ಆ ಎಲ್ಲ ಕಿತಾಪತಿಗಳನ್ನು ಮಾಡುತ್ತಿದ್ದಾಗ ಅದನ್ನು ನಿಲ್ಲಿಸಬೇಕಿದ್ದರೆ ಯಶೋದೆ ಗುಮ್ಮನನ್ನು ಕರೆಯಬೇಕಾಗುತ್ತಿತ್ತು. ಇನ್ನುಮುಂದೆ ಅಂಥದ್ದನ್ನೆಲ್ಲ ಮಾಡುವುದಿಲ್ಲವೆಂದು ಕೃಷ್ಣ ಗೋಗರೆಯುತ್ತಾನೆ. ಅವನ ಮಾತಿನಿಂದ ಯಶೋದೆ ಕನ್ವಿನ್ಸ್ ಆದಳೇ? ಕೃಷ್ಣ ಕೊನೆಗೆ 'ದೇವರಂತೆ ಒಂದು ಠಾವಿಲಿ ಕೂಡುವೆ...' ಎಂದು ಕೂಡ ಹೇಳುತ್ತಾನೆ. ದೇವರಂತೆ ಏನು, ಕೃಷ್ಣ ದೇವರೇ ಅಲ್ಲವೇ? ಕೃಷ್ಣನೇ ದೇವರು ಅಲ್ಲವೇ? ದಾಸರ ಇಂಗಿತ ಮತ್ತು ಆಶಯವೂ ಅದೇ. ಕೃಷ್ಣ ಲೀಲೆಗಳ ಕೊಂಡಾಟ, ಗುಣಗಾನ. ಯಶೋದೆ, ಗುಮ್ಮ ಎಲ್ಲ ನಿಮಿತ್ತ ಮಾತ್ರ. ಅಂದಹಾಗೆ ಗುಮ್ಮನ ರೆಫರೆನ್ಸನ್ನು ಪುರಂದರ ದಾಸರು ಮಾತ್ರವಲ್ಲ, ವಾದಿರಾಜರು, ಪ್ರಸನ್ನ ವೇಂಕಟದಾಸರು, ಶ್ರೀಪಾದರಾಜರು ಮುಂತಾಗಿ ಬೇರೆಯವರೂ ಮಾಡಿದ್ದಾರೆ. ಆ ಕೀರ್ತನೆಗಳು ಗುಮ್ಮನ ಕರೆಯದಿರೆಯಷ್ಟು ಪ್ರಸಿದ್ಧವಾಗಿಲ್ಲ ಅಷ್ಟೇ.

ಆದರೆ ಇಲ್ಲೊಂದು ವಿಪರ್ಯಾಸ ನೋಡಿ! ಭಗವಂತ ಸರ್ವಾಂತರ್ಯಾಮಿ, ಸರ್ವಶಕ್ತ, ಸರ್ವರೂಪಧಾರಿ ಅಂತೆಲ್ಲ ನಮ್ಮ ನಂಬಿಕೆ. ಅಣೋರಣೀಯ ಮಹತೋಮಹೀಯ ಎಂದು ನಾವು ಅವನನ್ನು ಕೊಂಡಾಡುತ್ತೇವೆ. ಅವರವರ ಭಾವಕ್ಕೆ ಅವರವರ ಭಕುತಿಗೆ ತೆರನಾಗಿ ಇರುವವನು ಎಂದು ಕೂಡ ಹೇಳುತ್ತೇವೆ. ಪರಂತು ಆ ಸರ್ವಶಕ್ತ ಭಗವಂತನನ್ನೂ ಹದ್ದುಬಸ್ತಿನಲ್ಲಿ ಇಡುವುದಕ್ಕೆ, ಹೆದರಿಸಿ ಸುಮ್ಮನಾಗಿಸುವುದಕ್ಕೆ ಯಶೋದೆ ಅವಲಂಬಿಸಿದ್ದು ಗುಮ್ಮನನ್ನು! ಆ ದೃಷ್ಟಿಯಿಂದ ನೋಡಿದರೆ ಭಗವಂತನಿಗಿಂತಲೂ ಗುಮ್ಮ ಮಿಗಿಲಾದವನೇ?

ಭಗವಂತನಿಗಿಂತ ಗುಮ್ಮ ಮೇಲು ಎಂದು ವಾದಿಸಿ ಗುಮ್ಮನನ್ನು ಅಟ್ಟಕ್ಕೇರಿಸುವುದು ಬೇಡವೇನೊ. ಆದರೂ ಕೆಲವು ಗುಣಲಕ್ಷಣಗಳಲ್ಲಿ ಭಗವಂತನಿಗೂ ಗುಮ್ಮನಿಗೂ ಏಕ್‌ದಂ ಹೋಲಿಕೆ ಇದೆಯೆಂದರೆ ನೀವೂ ಒಪ್ಪಲೇಬೇಕು. ಬೇಕಿದ್ದರೆ ಹೀಗೇ ಒಮ್ಮೆ ಯೋಚಿಸಿ ನೋಡಿ. ಮೊದಲನೆಯದಾಗಿ, ಭಗವಂತ ಇದ್ದಾನೆ ಎಂದು ಎಲ್ಲರೂ ನಂಬುತ್ತಾರೆ, ಹೇಳುತ್ತಾರೆ, ಆದರೆ ನಿಜಕ್ಕೂ ಅವನನ್ನು ನೋಡಿದವರಿಲ್ಲ. ಹೇಗಿರುತ್ತಾನೆ ಎಂದು ತಿಳಿದವರಿಲ್ಲ. ಗುಮ್ಮನ ವಿಚಾರವೂ ಡಿಟ್ಟೋ. ಗುಮ್ಮ ಇದ್ದಾನೆ, ಆದರೆ ನೋಡಿದವರಿಲ್ಲ! ಎರಡನೆಯದಾಗಿ, ಭಕ್ತರ ಕರೆಗೆ ಭಗವಂತ ಹೇಗೆ ತತ್‌ಕ್ಷಣ ಒಲಿದು ಬರುತ್ತಾನೋ ಗುಮ್ಮನೂ ಅಷ್ಟೇ- ಅಮ್ಮಂದಿರು ಆರ್ಡರ್ ಮಾಡಿದಾಗ ತತ್‌ಕ್ಷಣ ಓಡೋಡಿ ಬರಬಲ್ಲ. ಬಂದೇಬಿಟ್ಟ ಎಂದು ಚಿಕ್ಕ ಮಕ್ಕಳು ನಂಬುವಂತೆ ಮಾಡಬಲ್ಲ. ಮೂರನೆಯದಾಗಿ, ಭಗವಂತ ಮತ್ತು ಗುಮ್ಮ ಇಬ್ಬರದೂ ಪವರ್‌ಫುಲ್ ವ್ಯಕ್ತಿತ್ವ, ಆದರೂ ಏಕವಚನದಿಂದ ಕರೆಸಿಕೊಳ್ಳುವಷ್ಟು ಸಲುಗೆ. ಇನ್ನೂ ಒಂದು ಹೋಲಿಕೆಯೆಂದರೆ, ಭಗವಂತನನ್ನು ನಾವು ಬೇರೆಬೇರೆ ಹೆಸರುಗಳಿಂದ ಕರೆಯುವಂತೆ ಗುಮ್ಮನನ್ನೂ ಪ್ರಪಂಚದ ಬೇರೆಬೇರೆ ಜನಸಮುದಾಯಗಳಲ್ಲಿ ಬೇರೆಬೇರೆ ಹೆಸರಿನಿಂದ ಕರೆಯುತ್ತಾರೆ. ದೇವನೊಬ್ಬ ನಾಮ ಹಲವು ಇದ್ದಂತೆಯೇ ಗುಮ್ಮನೊಬ್ಬ ನಾಮ ಹಲವು.

ಗುಮ್ಮನ ಜಗದ್ವ್ಯಾಪಿತನದ ಬಗ್ಗೆ ನನಗೆ ಕುತೂಹಲ ಹುಟ್ಟಿದ್ದು ಒಂದು ವಿಚಿತ್ರ ಸಂದರ್ಭದಲ್ಲಿ, ಡಾ. ಅರಳುಮಲ್ಲಿಗೆ ಪಾರ್ಥಸಾರಥಿಯವರ ಒಂದು ಪ್ರವಚನ ಕೇಳುವಾಗ. ಕೆಲ ವರ್ಷಗಳ ಹಿಂದೆ ಅಮೆರಿಕದ ವಿವಿಧೆಡೆಗಳಲ್ಲಿ ಭಾಗವತ ಸಪ್ತಾಹ ಉಪನ್ಯಾಸಗಳನ್ನು ಕೊಡುತ್ತ ಅವರು ವಾಷಿಂಗ್ಟನ್‌ಗೂ ಬಂದಿದ್ದರು. ಅರಳು ಹುರಿದಂತೆ ಅವರ ಮಾತುಗಳನ್ನು ಕೇಳುವ ಅವಕಾಶ ನಮಗೆಲ್ಲ ಸಿಕ್ಕಿತ್ತು. ಒಂದು ದಿನ ಪ್ರವಚನದಲ್ಲಿ ಅವರು ಒಂದು ಹೃದಯಸ್ಪರ್ಶಿಯಾದ ಮಾತನ್ನು ಹೇಳಿದ್ದರು: 'ಜಗತ್ತಿನಲ್ಲಿ ಪ್ರತಿಯೊಬ್ಬ ತಾಯಿಯೂ ತನ್ನ ಮಗುವಿನಲ್ಲಿ (ಹೆಣ್ಣಿರಲಿ ಗಂಡಿರಲಿ) ಒಂದಲ್ಲ ಒಂದು ಕ್ಷಣದಲ್ಲಿ ಕೃಷ್ಣನನ್ನು ಕಾಣುತ್ತಾಳೆ!' ಇದು ಮೇಲ್ನೋಟಕ್ಕೆ ಮಾತಿನ ಚಂದಕ್ಕೆಂದು ಹೇಳಿದ್ದೆನಿಸಬಹುದು, ಆದರೆ ತಾಯಿಯೆನಿಸಿಕೊಂಡ ಯಾರೇ ಆದರೂ ಇದನ್ನು ಖಂಡಿತ ಒಪ್ಪುತ್ತಾರೆ. ಮಾತ್ರವಲ್ಲ ಪುಳಕಿತರಾಗುತ್ತಾರೆ. ಇಲ್ಲಿ ಕೃಷ್ಣ ಎಂದರೆ ಭಗವಂತ ಎಂದು ವಿಶಾಲ ಅರ್ಥಮಾಡಿಕೊಂಡರೆ ಜಗತ್ತಿನಲ್ಲಿ ಎಲ್ಲ ಅಮ್ಮಂದಿರದೂ ಅದೇ ಅನುಭವ. ಮಕ್ಕಳೆಂದರೆ ದೇವರು. ಪ್ರವಚನ ಕೇಳುತ್ತ ನನ್ನ ಮನಸ್ಸಿಗೆ ಹೊಳೆದದ್ದಿದು: ಸರಿ, ಪ್ರತಿಯೊಬ್ಬ ತಾಯಿಯೂ ತನ್ನ ಮಗುವಿನಲ್ಲಿ ಕೃಷ್ಣನನ್ನು ಕಾಣುತ್ತಾಳೆ; ಅಂದರೆ, ಮಗು ಕೃಷ್ಣನಂತೆಯೇ ಊಹಿಸಲಸದಳವಾಗಿ ಮತ್ತು ಸಹಿಸಲಸಾಧ್ಯವಾಗಿ ಪೋಕರಿ ಮಾಡುತ್ತಿದ್ದರೆ ಗುಮ್ಮನನ್ನೇ ಕರೆಯುತ್ತಾಳೆ. ಅಂದಮೇಲೆ ಜಗತ್ತಿನಲ್ಲಿ ಎಲ್ಲ ಅಮ್ಮಂದಿರಿಗೂ ಗುಮ್ಮ ಗೊತ್ತಿರುತ್ತಾನೆ ಅಂತಾಯ್ತು!

ಹೇಗಿರುತ್ತಾನೆ ಆ ಗ್ಲೋಬಲ್ ಗುಮ್ಮ? ನೀವು ನಂಬುತ್ತೀರೋ ಇಲ್ಲವೋ ಗುಮ್ಮ ಎಂಬ ಕಲ್ಪನೆ ಜಗತ್ತಿನ ಎಲ್ಲ ಕಡೆಯೂ ಇದೆ. ಚಿಕ್ಕಮಕ್ಕಳು ದೊಡ್ಡವರ ಮಾತು ಕೇಳೋದಿಲ್ಲ, ಸರಿಯಾಗಿ ಊಟ ಮಾಡೋದಿಲ್ಲ, ಆಡಲಿಕ್ಕೆ ಹೋದರೆ ಕತ್ತಲಾದ ಮೇಲೂ ಮನೆಗೆ ಬರೋದಿಲ್ಲ, ರಾತ್ರಿ ಸಮಯಕ್ಕೆ ಸರಿಯಾಗಿ ನಿದ್ದೆ ಮಾಡೋದಿಲ್ಲ ಮುಂತಾದ ಎಲ್ಲ ಸಮಸ್ಯೆಗಳಿಗೂ ರಾಮಬಾಣವಾಗಿ ಅಮ್ಮಂದಿರಿಗೆ ಗುಮ್ಮ ನೆರವಾಗಿದ್ದಾನೆ. ಹೆಸರು, ಸ್ವರೂಪ, ಇತ್ಯಾದಿ ಬೇರೆಬೇರೆ ಇರಬಹುದು ಎನ್ನುವುದನ್ನು ಬಿಟ್ಟರೆ ಗುಮ್ಮ ನಿಜವಾಗಿಯೂ ಗ್ಲೋಬಲ್ ಸಿಟಿಜನ್. ಗುಮ್ಮನ ಬೆನ್ನೇರಿ ಪ್ರಪಂಚ ಪರ್ಯಟನೆ ಮಾಡಿದರೆ ನಮಗಿದು ಗೊತ್ತಾಗುತ್ತದೆ. ಗುಮ್ಮನ ವಿಶ್ವರೂಪದರ್ಶನ ಆಗುತ್ತದೆ.

ನಮ್ಮ ಕನ್ನಡನಾಡಿನಲ್ಲಿ ಆರೇಳು ಶತಮಾನಗಳ ಹಿಂದೆಯೇ ದಾಸಸಾಹಿತ್ಯದಲ್ಲಿ ಗುಮ್ಮನನ್ನು ಗುರುತಿಸಲಾಗಿದೆಯೆಂದು ನೋಡಿದೆವು. ಅದೇ ಗುಮ್ಮ ಈಗಿನ 21ನೆಯ ಶತಮಾನದ ಕನ್ನಡ ಚಿತ್ರಗೀತೆಗಳಲ್ಲೂ ಕಾಣಿಸಿಕೊಳ್ಳುತ್ತಾನೆಂದರೆ ಆತ ಅದೆಷ್ಟು ಸಾರ್ವಕಾಲಿಕ! ಕನ್ನಡದ ಮಟ್ಟಿಗೆ ಇನ್ನೊಂದು ಸ್ವಾರಸ್ಯವೆಂದರೆ ಬರೀ ಚಿಕ್ಕ ಮಕ್ಕಳನ್ನು ಹೆದರಿಸುವವನಷ್ಟೇ ಗುಮ್ಮ ಅಲ್ಲ. ಅಜ್ಞಾತವಾಗಿದ್ದು ಹೆದರಿಕೆ ಹುಟ್ಟಿಸುವ ಯಾವುದನ್ನೇ ಆದರೂ ನಾವು ಗುಮ್ಮ ಎನ್ನುತ್ತೇವೆ. ಶಾಲಾ-ಕಾಲೇಜು ಮಕ್ಕಳಿಗೆ ಪರೀಕ್ಷೆಯೆಂಬ ಗುಮ್ಮ. ಅಧಿಕಾರಿಗಳಿಗೆ ವರ್ಗಾವಣೆಯ ಗುಮ್ಮ. ವ್ಯಾಪಾರಿಗಳಿಗೆ ಜಿಎಸ್‌ಟಿ ಗುಮ್ಮ. ರಾಜ್ಯ ಬಿಜೆಪಿಗೆ ಪಕ್ಷಾಂತರದ ಗುಮ್ಮ. ಕಾಂಗ್ರೆಸ್ ನಾಯಕರ ನಿದ್ದೆಗೆಡಿಸುತ್ತಿರುವ ತೃತೀಯರಂಗವೆಂಬ ಗುಮ್ಮ. ಕರೋನಾ ವೈರಾಣುವಂತೂ ಬಹುದೊಡ್ಡ ಗುಮ್ಮ ಎನಿಸಿತ್ತು. ಆಮೇಲೀಗ ಕೊವಿಡೋ-ಸೋಮ್ನಿಯಾ ಎಂಬ ನಿದ್ರಾಹೀನತೆ ಮತ್ತಿತರ ಕಾಯಿಲೆಗಳ ಗುಮ್ಮ. ಕನ್ನಡಿಗರ ಮೋಸ್ಟ್ ಫೇವರಿಟ್ ಅಂದರೆ ಆರ್‌ಸಿಬಿ ತಂಡಕ್ಕೆ ಈ ಸಲವೂ ಕಪ್ ನಮ್ದಲ್ಲ ಎಂಬ ಸೋಲೇ ಗುಮ್ಮ. ಇರಲಿ, ಆ ಎಲ್ಲ ಗುಮ್ಮಗಳನ್ನು ಬಿಟ್ಹಾಕಿ ನಮ್ಮ ಇಂದಿನ ಟಾಪಿಕ್ ಗುಮ್ಮನನ್ನಷ್ಟೇ ಹಿಡಿದುಕೊಳ್ಳೋಣ. ಕರ್ನಾಟಕದ ಕೆಲವೆಡೆ ಈತ 'ಗೊಗ್ಗಯ್ಯ' ಎಂಬ ಹೆಸರಿನಿಂದಲೂ ಗುರುತಿಸಿಕೊಳ್ಳುತ್ತಾನೆ. 'ಜೋಗಿ'ಯನ್ನೂ ಗುಮ್ಮನಿಗೆ ಸಮಾನಾರ್ಥಕವಾಗಿ ಬಳಸಿರುವುದು ಕಾಣುತ್ತದೆ. 'ಇವನ ಪಿಡಿದುಕೊಂಡು ಹೋಗೆಲೋ ಜೋಗಿ ಇವ ನಮ್ಮ ಮಾತು ಕೇಳದೆ ಪುಂಡನಾದ...' ಎಂಬ ಕೀರ್ತನೆಯನ್ನು ನೆನಪಿಸಿಕೊಳ್ಳಿ. ತಮಿಳುನಾಡಿನಲ್ಲಿ ಗುಮ್ಮನನ್ನು 'ಪೂಚ್ಚಾಂಡಿ' ಎನ್ನುತ್ತಾರಂತೆ. ತೆಲುಗಿನಲ್ಲಿ ಅವನು 'ಬೂಚಿವಾಡು' ಆಗಿದ್ದಾನೆ. ಮಲಯಾಳಂನಲ್ಲಿ 'ಕೊಕ್ಕಾಯಿ'. ಕೊಂಕಣಿ ಮತ್ತು ನಮ್ಮ ಚಿತ್ಪಾವನಿಯಲ್ಲಿ 'ಘೊಂಗೊ'. ಇವರೆಲ್ಲ ಕನ್ನಡದ ಗೊಗ್ಗಯ್ಯನ ದಾಯಾದಿಗಳಿರಬೇಕು.

ಉತ್ತರ ಭಾರತದಲ್ಲಿ ಚಿಕ್ಕಮಕ್ಕಳನ್ನು 'ನೋಡು, ಅಳು ನಿಲ್ಲಿಸದಿದ್ದರೆ ನಿನ್ನನ್ನು ಬೋರಿಬಾಬಾ ಎತ್ತಿಕೊಂಡು ಹೋಗ್ತಾನೆ!' ಎಂದು ಗದರಿಸುತ್ತಾರಂತೆ. ಬೋರಿ ಎಂದರೆ ಗೋಣಿಚೀಲ. ಶ್ರೀಲಂಕಾದಲ್ಲಿಯೂ ಗೋಣಿ ಬಿಲ್ಲ ಎಂದೇ ಗುಮ್ಮನ ಹೆಸರು. ಒಟ್ಟಾರೆಯಾಗಿ 'ಗೋಣಿಚೀಲ ಹಿಡಕೊಂಡು ಅಡ್ಡಾಡುವ ಕುರೂಪಿ ಮುದುಕ' - ಇದು ಮುಕ್ಕಾಲುಪಾಲು ಜಗತ್ತಿನಲ್ಲಿ ಗುಮ್ಮನ ಚಹರೆ. ರಚ್ಚೆ-ರಂಪಮಾಡುವ ಮಕ್ಕಳನ್ನು ಗೋಣಿಚೀಲದಲ್ಲಿ ಹಾಕಿಕೊಂಡು ಹೋಗ್ತಾನೆ ಎಂಬ ನಂಬಿಕೆ. ಆಮೇಲೆ ಅವರನ್ನು ಏನು ಮಾಡುತ್ತಾನೆನ್ನುವುದು ಪ್ರಾದೇಶಿಕವಾಗಿ ವ್ಯತ್ಯಾಸವಾಗುತ್ತದೆ. ಕೊಂದು ತಿನ್ನಬಹುದು, ಎಲ್ಲೋ ಅಜ್ಞಾತಸ್ಥಳದಲ್ಲಿ ಅಡಗಿಸಿಡಬಹುದು, ಅಥವಾ ಅಸ್ಸಾಂನವರು ನಂಬುವಂತೆ ಹೊತ್ತೊಯ್ದ ಮಕ್ಕಳ ಕಿವಿಗಳನ್ನಷ್ಟೇ ತಿಂದು ಖುಷಿಪಡಬಹುದು (ಅಸ್ಸಾಮೀ ಭಾಷೆಯಲ್ಲಿ ಗುಮ್ಮನನ್ನು 'ಕಾನ್‌ಖೋವಾ' ಎನ್ನುತ್ತಾರಂತೆ). ಅಂತೂ ಮಕ್ಕಳಿಗೆ ಇಷ್ಟ ಆಗುವಂಥದ್ದನ್ನು ಖಂಡಿತ ಮಾಡುವುದಿಲ್ಲ. ಮೊದಲೇ ನೈಟ್‌ಡ್ಯೂಟಿಯವ, ಕಗ್ಗತ್ತಲಲ್ಲಿ ಏನು ಮಾಡುತ್ತಾನೆಂದು ನೋಡಿದವರಾರು?

ಸ್ಪೈನ್, ಪೋರ್ಚುಗಲ್, ಬ್ರಝಿಲ್ ಮುಂತಾದ ಸ್ಪಾನಿಷ್ ದೇಶಗಳಲ್ಲಿ ಗುಮ್ಮನನ್ನು 'ಹೊಂಬ್ರೆ-ಡೆಲ್-ಸಾಕೊ' ಎನ್ನುತ್ತಾರೆ. ಗೋಣಿಚೀಲ ಹಿಡಿದುಕೊಂಡ ಮನುಷ್ಯ ಎಂಬರ್ಥದಲ್ಲಿ. ಕ್ರಿಸ್ಮಸ್ ತಾತ ಸಾಂತಾಕ್ಲಾಸ್ ಸಹ ಗೋಣಿಚೀಲ ಹಿಡಿದುಕೊಂಡು ಬರುವ ಮುದುಕನೇ. ಆದರೆ ಅವನ ಜೋಳಿಗೆಯ ತುಂಬ ಮಕ್ಕಳಿಗೆ ಕೊಡಲಿಕ್ಕೆ ಉಡುಗೊರೆಗಳು. ಗುಮ್ಮ ಹಾಗಲ್ಲ, ಅವನದು ಖಾಲಿ ಗೋಣಿಚೀಲ. ಹಠಮಾರಿ ಮಕ್ಕಳನ್ನು ತುಂಬಿಸಿಕೊಂಡು ಹೋಗಲಿಕ್ಕೆ! ಸ್ಪಾನಿಷ್ ಜನಪದ ಕಥೆಗಳ ಪ್ರಕಾರ ನಾಲ್ಕೈದು ಶತಮಾನಗಳ ಹಿಂದೆ 'ಹೊಂಬ್ರೆ-ಡೆಲ್-ಸಾಕೊ'ಗಳು ನಿಜವಾಗಿಯೂ ಊರೂರುಗಳಲ್ಲಿ ತಿರುಗಾಡಿಕೊಂಡು ಇರುತ್ತಿದ್ದರಂತೆ. ಅನಾಥ ಮಕ್ಕಳನ್ನು ಎತ್ತಿಕೊಂಡು ಅನಾಥಾಶ್ರಮಗಳಿಗೆ ತಲುಪಿಸುವುದು ಅವರ ಕಾಯಕ. ಗೋಣಿಯಲ್ಲಿ ತುಂಬಿಸಿ ಒಯ್ಯುತ್ತಿದ್ದುದರಿಂದ ಕೆಲವು ಮಕ್ಕಳು ಸತ್ತೇಹೋಗುತ್ತಿದ್ದವೋ ಏನೋ. ಯೂರೋಪ್, ಏಷ್ಯಾ, ಆಫ್ರಿಕಾ ಖಂಡಗಳ ಹೆಚ್ಚಿನೆಲ್ಲ ದೇಶಗಳಲ್ಲೂ ಆಯಾ ಪ್ರದೇಶಗಳ ಭಾಷೆಯಲ್ಲಿ 'ಗೋಣಿಚೀಲ ಹಿಡಿದ ಮನುಷ್ಯ' ಎಂಬ ಅರ್ಥ ಬರುವ ಪದ ಬಳಕೆಯಾಗುವುದು ಗುಮ್ಮ ಎಂಬ ಕಲ್ಪನೆಗೇ; ಚಿಕ್ಕ ಮಕ್ಕಳನ್ನು ಹೆದರಿಸುವುದಕ್ಕೇ.

ಕೊಲಂಬಿಯಾ, ಮೆಕ್ಸಿಕೊ, ಅರ್ಜೆಂಟಿನಾ, ಚಿಲಿ, ಎಲ್ ಸಾಲ್ವಡಾರ್ ಮುಂತಾದ ಲ್ಯಾಟಿನ್ ಅಮೆರಿಕ ಮತ್ತು ದಕ್ಷಿಣ ಅಮೆರಿಕದ ಭಾಗಗಳಲ್ಲಿ 'ಎಲ್-ಕೊಕೋ' ಹೆಸರಿನಿಂದ ಗುಮ್ಮನನ್ನು ಗುರುತಿಸುತ್ತಾರೆ. ಅಲ್ಲಿನ ಜೋಗುಳದ ಹಾಡುಗಳಲ್ಲೂ ಎಲ್-ಕೊಕೊ ಬರುತ್ತಾನಂತೆ. 'ಮಲಗು ಮಲಗೆನ್ನ ಮರಿಯೇ ಬಣ್ಣದ ನವಿಲಿನ ಗರಿಯೇ...' ಎಂದು ನಾವು ಹಾಡಿದಂತೆ ಅವರು ಬಹುಶಃ 'ನಿದ್ದೆ ಮಾಡ್ಲಿಲ್ಲಾದ್ರೆ ಎಲ್-ಕೊಕೊ ಎತ್ಕೊಂಡ್ಹೋಗ್ತಾನೆ ತಿಳಿಯೇ!' ಎಂದು ಜೋಗುಳ ಹಾಡುತ್ತಾರೆ. ಕೊಕೊ ಎಂದರೆ ಕಂದುಬಣ್ಣದ ಕೂದಲುಳ್ಳ ವಿಕಾರರೂಪಿ ಮನುಷ್ಯ. ದೆವ್ವ ಎಂದರೂ ಸರಿಯೇ. ನಿಮಗೆ ಆಶ್ಚರ್ಯವಾಗಬಹುದು, ತೆಂಗಿನಕಾಯಿಗೆ ಕೊಕೋನಟ್ ಎಂಬ ಪದ ಬಂದಿರೋದು ಅದರಿಂದಲೇ! ಕಂದು ಕೂದಲು, ಮೂರು ಕಣ್ಣುಗಳುಳ್ಳದ್ದು ಇದೆಂಥದಪ್ಪಾ ವಿಚಿತ್ರ ಫಲ ಎಂದು ಪೋರ್ಚುಗೀಸ್ ನಾವಿಕರು ಅಚ್ಚರಿಗೊಂಡು ಅದನ್ನು ಕೊಕೊನಟ್ ಎಂದರಂತೆ. ಲ್ಯಾಟಿನ್ ಅಮೆರಿಕ ದೇಶಗಳಲ್ಲಿ ಎಲ್-ಕೊಕೊ ಬಗ್ಗೆ ಎಷ್ಟು ಹೆದರಿಸುತ್ತಾರೆಂದರೆ ಮಕ್ಕಳು ಮಲಗುವ ಮಂಚದಡಿಯಲ್ಲೇ ಅವನು ಅಡಗಿರುತ್ತಾನೆ, ತಂಟೆ ಮಾಡಿದರೆ ಎತ್ತಿಕೊಂಡು ಹೋಗ್ತಾನೆ ಎನ್ನುತ್ತಾರೆ. ಮಕ್ಕಳು ಗಪ್‌ಚುಪ್ ಆಗಿ ನಿದ್ದೆಗೆ ಜಾರುತ್ತವೆ. ಕೆಲವರು ಎಲ್-ಕೊಕೋನನ್ನು ಬೆಟ್ಟದ ಮೇಲೆ ಗುಹೆಯಲ್ಲಿ ಮಲಗಿರುವ ವಿಕಾರ ಜೀವಿ, ಮೊರದಗಲದ ಒಂದೇ ಕಿವಿಯಿಂದ ಮಕ್ಕಳ ಕಲರವವನ್ನು ಆಲಿಸುತ್ತಲೇ ಇರುತ್ತಾನೆ, ಅವೇನಾದರೂ ರಂಪಾಟ ಮಾಡಿದರೆ ಎಚ್ಚೆತ್ತುಕೊಳ್ಳುತ್ತಾನೆ, ಸದ್ದಿಲ್ಲದೆ ಎದ್ದುಬಂದು ಅಂಥ ಮಕ್ಕಳನ್ನೆತ್ತಿ ಗೋಣಿಚೀಲದಲ್ಲಿ ತುಂಬಿಸಿಕೊಂಡು ಹೋಗುತ್ತಾನೆ, ತನ್ನ ಗುಹೆಯ ಕತ್ತಲಲ್ಲಿ ಆ ಮಕ್ಕಳನ್ನು ಒಂದೋ ಇಡಿಇಡಿಯಾಗಿ ನುಂಗುತ್ತಾನೆ. ಇಲ್ಲವೇ ಕೋರೆ ದಾಡೆಗಳಿಂದ ಸಿಗಿದು ಜಗಿದು ಗುಳುಂ ಮಾಡುತ್ತಾನೆ. ಮಕ್ಕಳು ಎಲ್ಲಿ ಹೋದುವು ಏನಾದುವು ಎಂದು ಯಾರಿಗೂ ಗೊತ್ತಾಗುವುದಿಲ್ಲ... ಅಂತೆಲ್ಲ ಇನ್ನಷ್ಟು ಬಣ್ಣ ಹಚ್ಚಿ ರಂಜಿಸುತ್ತಾರೆ. ದಂಷ್ಟ್ರಾಕರಾಲಾನಿ ಭಯಾನಕಾನಿ... ಎಂದು ಗೀತೆಯಲ್ಲಿ ವಿಶ್ವರೂಪದರ್ಶನ ಶ್ಲೋಕದ ಸಾಲು ನನಗಿಲ್ಲಿ ನೆನಪಾಗುತ್ತಿದೆ. ಗುಮ್ಮನ ಬಗ್ಗೆ ಅಂತಹ ಭಯಾನಕ ಚಿತ್ರಣದ ಉದ್ದೇಶ ಒಂದೇ- ಮಕ್ಕಳಿಗೆ ಒಂದಿಷ್ಟಾದರೂ ಹೆದರಿಕೆ ಇರಲಿ ಎಂಬುದು.

ಅಲ್ಲಿಂದ ಉತ್ತರ ಅಮೆರಿಕಕ್ಕೆ ಬಂದರೆ ಗುಮ್ಮನ ಹೆಸರು 'ಬೂಗಿಮ್ಯಾನ್' ಎಂದಾಗುತ್ತದೆ. ಅವನೂ ಅಷ್ಟೇ, ವಿಕಾರರೂಪಿ ನಿಶಾಚರಿ. ಮನೆಯ ಹೊರಗೆ ಕಿಟಕಿಯ ಬಳಿ ಘರಘರ ಸದ್ದು ಮಾಡಬಹುದು. ಹಸಿರು ಹೊಗೆಯಾಗಿ ಕಾಣಿಸಿಕೊಳ್ಳಬಹುದು. ಕತ್ತಲಲ್ಲಿ ಕಣ್ಣುಗಳನ್ನು ಫಳಫಳ ಬಿಟ್ಟುಕೊಂಡು ಓಡಾಡುತ್ತಿರಬಹುದು. ಡಿನ್ನರ್ ಟೈಮ್‌ನಲ್ಲಿ ವಠಾರದಲ್ಲಿ ಅತ್ತಿಂದಿತ್ತ ಸುತ್ತುತ್ತಿರಲು ಅವನಿಗೆ ಹೆತ್ತವರೆಲ್ಲರ ಅನುಮತಿ ಇರುತ್ತದೆ. ಯಾರ ಮನೆಯಲ್ಲಿ ಮಗು ರಚ್ಚೆ-ರಂಪ ಮಾಡುತ್ತದೆಯೋ ಅಲ್ಲಿಂದ ರಿಮೋಟ್ ಕಂಟ್ರೋಲ್ ಸಿಗ್ನಲ್ ಹೋಗುತ್ತದೆ ಬೂಗಿಮ್ಯಾನ್‌ನಿಗೆ. ಅವನು ಆ ಮನೆಗೆ ಬರಬೇಕಂತಲೂ ಇಲ್ಲ, ನಿಜವಾಗಿಯಾದರೆ ಬರುವುದೂ ಇಲ್ಲ. ಆದರೆ ಅಷ್ಟರಲ್ಲಿ ಮಗು ಹಠ ನಿಲ್ಲಿಸಿ ಹಾಯಾಗಿ ಮಲಗಿರುತ್ತದೆ! ಅಮೆರಿಕದಲ್ಲಿ ಬೂಗಿಮ್ಯಾನ್ ಇದ್ದಂತೆ ಇಟಲಿ, ರೊಮಾನಿಯಾ, ಗ್ರೀಸ್, ಈಜಿಪ್ಟ್ ಮೊದಲಾದ ಮೆಡಿಟರೇನಿಯನ್ ದೇಶಗಳಲ್ಲಿ 'ಬಾಬೌ' ಅಥವಾ 'ಬೊವ್‌ಬೌ', ಜರ್ಮನಿಯಲ್ಲಿ 'ಬುಝ್‌ಮ್ಯಾನ್', ಡೆನ್ಮಾರ್ಕ್‌ನಲ್ಲಿ 'ಬುಸೆಮಾಂಡನ್', ನೆದರ್‌ಲ್ಯಾಂಡ್ಸ್‌ನಲ್ಲಿ 'ಬೋಮ್ಯಾನ್' ಇರುತ್ತಾನೆ. ಗುಮ್ಮನೊಬ್ಬ ನಾಮ ಹಲವು ಎಂದಿದ್ದೇಕಂತ ಈಗ ತಿಳಿಯಿತಲ್ಲ?

ಆದರೂ ಒಂದು ಮಾತು. ಸುಮಾರು ಆರೇಳು ವರ್ಷ ಪ್ರಾಯವಾದಾಗ ಮಗುವಿಗೆ ಗುಮ್ಮನ ಹೆದರಿಕೆ ಇಲ್ಲವಾಗುತ್ತದೆ. ಗುಮ್ಮ ಇಲ್ಲ ಏನೂ ಇಲ್ಲ ಅಮ್ಮ ಸುಮ್ಮನೆ ರೈಲು ಬಿಡೋದು ಎಂದು ಮಗುವಿಗೆ ಮನವರಿಕೆಯಾಗುತ್ತದೆ. ಪುರಂದರ ದಾಸರು ಅದನ್ನೇ 'ಗುಮ್ಮನೆಲ್ಲಿಹ ತೋರಮ್ಮ ಸುಮ್ಮನಂಜಿಸಬೇಡಮ್ಮ...' ಎಂಬ ಇನ್ನೊಂದು ಕೀರ್ತನೆಯಲ್ಲಿ ಚಂದವಾಗಿ ಬಣ್ಣಿಸಿದ್ದಾರೆ. ಅದರಲ್ಲಿ ಕೃಷ್ಣ ಯಶೋದೆಗೇ ಚಾಲೆಂಜ್ ಹಾಕುತ್ತಾನೆ. ಮೂರು ಲೋಕವೆಲ್ಲ ಸುತ್ತಾಡಿ ಬಂದೆ, ಗುಮ್ಮ ಎಲ್ಲೂ ಇಲ್ಲ, ಸೊಲ್ಲುಸೊಲ್ಲಿಗೆ ನೀ ಬೆದರಿಸಬೇಡಮ್ಮ ಸುಮ್ಮಸುಮ್ಮನೆ ಎನ್ನ ಹೆದರಿಸಬೇಡಮ್ಮ ಎನ್ನುತ್ತಾನೆ. ನಾವಾದರೂ ಅಷ್ಟೇ, ಚಿಕ್ಕವರಿದ್ದಾಗ ಗುಮ್ಮನಿಗೆ ಹೆದರಿದವರು ಆಮೇಲೆ ಗುಮ್ಮ ಅಲ್ಲ ಅವನಜ್ಜ ಬಂದರೂ ಹೆದರೋದಿಲ್ಲ ಅಂತೇವೆ. ಮತ್ತೆ ನಮ್ಮ ಮಕ್ಕಳನ್ನು ಹೆದರಿಸಲಿಕ್ಕೆ ನಮಗೆ ಗುಮ್ಮನೇ ಬೇಕಾಗುತ್ತಾನೆ. ಹೀಗೆ ತಲೆತಲಾಂತರಗಳಲ್ಲೂ ಅಸ್ತಿತ್ವವಿರುವ ಗುಮ್ಮ ಮಹಾಶಯ ಚಿರಂಜೀವಿ ಅಷ್ಟೇಅಲ್ಲ, ಆದಿಯಾಗಲೀ ಅಂತ್ಯವಾಗಲೀ ಇಲ್ಲದವನು. ಥೇಟ್ ಭಗವಂತನಂತೆಯೇ.

ತುರ್ತುಸ್ಥಿತಿ, ಗರ್ವಹರಣ, ನಿರೀಕ್ಷೆಗಳು ಮತ್ತು ನಿರಸನ



ವಿದ್ಯಮಾನ

ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ
vveditoped@gmail.com

1977ನ ಚುನಾವಣೆ, ಸ್ವಾತಂತ್ರ್ಯದ ನಂತರದ ಸತತ 30 ವರ್ಷಗಳ ಕಾಂಗ್ರೆಸ್ ಆಡಳಿತಕ್ಕೆ ಭಾರತದ ಮತದಾರ ಮೊದಲ ಸಲ ಬ್ರೇಕ್ ಹಾಕಿದ ಐತಿಹಾಸಿಕ ಚುನಾವಣೆ. ನೇಗಿಲು ಹೊತ್ತ ರೈತನ ಚಿಹ್ನೆಯ ನೆನಪು ಎಷ್ಟು ಜನರಿಗಿದೆಯೋ ಗೊತ್ತಿಲ್ಲ. ನನಗಂತೂ ನೆನಪಿದೆ, ಆ ಕಾಲದಲ್ಲಿ ಕಾಂಗ್ರೆಸ್‌ನ ಚಿಹ್ನೆಯ ನಂತರ ಹೆಚ್ಚಾಗಿ ಭಾರತದ ಜನಮನದಲ್ಲಿದ್ದ ಚಿಹ್ನೆ ಎಂದರೆ ಅದು 'ನೇಗಿಲು ಹೊತ್ತ ರೈತ' ಮಾತ್ರ. ಮತದಾರ ಮೊರಾರ್ಜಿ ದೇಸಾಯಿಯವರ ನೇತೃತ್ವದ ಜನತಾ ಪಕ್ಷವನ್ನು ಕೇಂದ್ರದಲ್ಲಿ ಅಧಿಕಾರಕ್ಕೆ ತಂದು ಭಾರತೀಯ ರಾಜಕಾರಣದಲ್ಲಿ ಏಕಚಕ್ರಾಧಿಪತಿಯಂತೆ ಸೋಲಿಲ್ಲದೇ ಮೆರೆಯುತ್ತಿದ್ದ ಕಾಂಗ್ರೆಸ್ ಪಕ್ಷವನ್ನು ಮೊದಲ ಬಾರಿ ಅಧಿಕಾರದಿಂದ ಕೆಳಗಿಳಿಸಿದ ಚುನಾವಣೆಯಾಗಿತ್ತು ಅದು. ಭಾರತದಲ್ಲಿ ವಿರೋಧಪಕ್ಷಗಳು ಇವೆ ಮತ್ತು ಅವು ಒಟ್ಟಾದರೆ ಏನು ಚಮತ್ಕಾರ ಮಾಡಬಹುದು ಎನ್ನುವುದನ್ನು ತೋರಿಸಿಕೊಟ್ಟ ಅದ್ಭುತವಾದ ಚುನಾವಣೆಯಾಗಿತ್ತು ಅದು. ತುರ್ತುಪರಿಸ್ಥಿತಿಯ ಕರಾಳ ಪರಿಣಾಮಗಳನ್ನು ಅನುಭವಿಸಿದ್ದ ಜನ, ಆಡಳಿತಾರೂಢ ಕಾಂಗ್ರೆಸ್‌ಗೆ ಮೊದಲ ಬಾರಿ ಮರ್ಮಾಘಾತ ನೀಡಿ ನೆಹರು -ಗಾಂಧಿ ಕುಟುಂಬ ರಾಜಕಾರಣದ ಗರ್ವಹರಣ ಮಾಡಿದ್ದ ಕಾರಣಕ್ಕೆ ಮತ್ತು ಪ್ರಥಮಬಾರಿಗೆ ಕಾಂಗ್ರೆಸ್ಸೇತರ ಸರಕಾರದ ಸ್ಥಾಪನೆಯಾದ್ದರಿಂದ 1977 ರದ್ದು ಭಾರತದ ರಾಜಕಾರಣದಲ್ಲಿ ಸದಾ ನೆನಪಿನಲ್ಲಿ ಉಳಿಯುವ ಚುನಾವಣೆಯಾಗಿದೆ. ಆದರೆ, ಅನೇಕ ಪಕ್ಷಗಳು ಕೂಡಿ ರಚಿಸಿದ್ದ ಜನತಾ ಪರಿವಾರದ ಸಮ್ಮಿಶ್ರ ಕೂಟವನ್ನು 1977 ರಲ್ಲಿ ಅತ್ಯಂತ ಮಹತ್ವಾಕಾಂಕ್ಷೆಯಿಂದ ಜನ ಆಧರಿಸಿದ್ದರು ಆದರೆ ಅದು ವಿಫಲವಾದಾಗ 'ಊದುವುದನ್ನು ಕೊಟ್ಟು ಬಾರಿಸುವುದನ್ನು ತಂದ ಹಾಗಾಯಿತಲ್ಲ' ಎಂದು ಭಾರೀ ನಿರಸನವೂ ಆಯಿತು.

ಹಾಗೆ ನೋಡಿದರೆ, 1973 ರಿಂದಲೇ ಭಾರತದಾದ್ಯಂತ ಕಾಂಗ್ರೆಸ್ ವಿರುದ್ಧ ಅದರಲ್ಲೂ ಇಂದಿರಾ ಗಾಧಿಯವರ ವಿರುದ್ಧ ದೊಡ್ಡ ಪ್ರಮಾಣದ ರಾಜಕೀಯ ಧೃವೀಕರಣ ಶುರುವಾಗಿಬಿಟ್ಟಿತ್ತು. ಸಮಾಜವಾದಿ ಚಿಂತನೆಯ ನಾಯಕ ಜಯಪ್ರಕಾಶ್ ನಾರಾಯಣ್ ಅವರ ಬೆಂಬಲದಿಂದ ಬಿಹಾರದಲ್ಲಿ ವಿದ್ಯಾರ್ಥಿಗಳ ಪ್ರತಿಭಟನೆಯಿಂದ ಶುರುವಾದ ಈ ಕಸರತ್ತು ಎಲ್ಲ ಇಂದಿರಾ ವಿರೋಧಿ ಶಕ್ತಿಗಳು ಕೈಜೋಡಿಸುವಂತೆ ಮಾಡಿತ್ತು. ಜಯಪ್ರಕಾಶ್ ನಾರಾಯಣ್ ಅವರಂತೂ ಇದು ಎರಡನೇ ಸ್ವಾತಂತ್ರ್ಯ ಹೋರಾಟ ಎಂಬಂತೆ ಬಿಂಬಿಸಲು ಯಶಸ್ವಿಯಾಗಿ ದೇಶಾದ್ಯಂತ ಪ್ರಚಂಡ ಜನ ಬೆಂಬಲ ಗಳಿಸಿಬಿಟ್ಟಿದ್ದರು. ಈ ಎಲ್ಲಾ ಬೆಳವಣಿಗೆಗಳಿಂದ ಪ್ರಧಾನಿ ಇಂದಿರಾಗಾಂಧಿ ತಬ್ಬಿಬ್ಬಾಗಿ ಹೋಗಿದ್ದರು. ಜೊತೆಗೆ, 1971ರ ಲೋಕಸಭೆ ಚುನಾವಣೆಯಲ್ಲಿ ರಾಯಬರೇಲಿಯಿಂದ ಇಂದಿರಾ ವಿರುದ್ಧ ಸೋತಿದ್ದ ರಾಜ್ ನಾರಾಯಣ್ ಎನ್ನುವವರು ಇಂದಿರಾಗಾಂಧಿ ವಿರುದ್ಧ ಚುನಾವಣೆಯಲ್ಲಿನ ಅಕ್ರಮ ಮತ್ತು ಪ್ರಜಾಪ್ರತಿನಿಧಿ ಕಾಯಿದೆಯ ಉಲ್ಲಂಘನೆಯ ಆರೋಪ ಹೊರಿಸಿ ನೇರವಾಗಿ ಅಲಹಾಬಾದ್ ಉಚ್ಚ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿದ್ದರು. ಮುಂದೆ ಶ್ರೀಮತಿ ಗಾಂಧಿಯವರು ಚುನಾವಣಾ ಅವ್ಯವಹಾರಗಳಲ್ಲಿ ತಪ್ಪಿತಸ್ಥರೆಂದು ನಿರ್ಧರಿಸಿ 12 ಜೂನ್ 1975 ರಂದು 6 ವರ್ಷಗಳ ಕಾಲ ಸಾರ್ವಜನಿಕ ಹುದ್ದೆಯನ್ನು ಅಲಂಕರಿಸಲು ಇಂದಿರಾ ಅವರನ್ನು ಅನರ್ಹಗೊಳಿಸಿದ ಐತಿಹಾಸಿಕ ತೀರ್ಪನ್ನು ಘನ ನ್ಯಾಯಾಲಯ ನೀಡೇಬಿಟ್ಟಿತು. ಅನ್ಯಮಾರ್ಗಗಳಿಲ್ಲದೇ ತಾವು ರಾಜೀನಾಮೆ ನೀಡುವುದೆಂದು ಆ ಸಂದರ್ಭದಲ್ಲಿ ಯೋಚಿಸುತ್ತಿದ್ದ ಇಂದಿರಾ ಗಾಂಧಿಯವರಿಗೆ ಅಧಿಕಾರದಲ್ಲಿ ಮುಂದುವರೆಯಲು ತುರ್ತುಪರಿಸ್ಥಿತಿಯ ಘೋಷಣೆಯ ಆಯ್ಕೆಯನ್ನು ಅಂದಿನ ಪಶ್ಚಿಮ ಬಂಗಾಲದ ಮುಖ್ಯಮಂತ್ರಿಯಾಗಿದ್ದ ಸಿದ್ಧಾರ್ಥ ಶಂಕರ್ ರೇ ಅವರು ಸೂಚಿಸಿದರು. ಈ ಪ್ರತಿಕೂಲ ಸಂದರ್ಭದಲ್ಲಿ ಚುನಾವಣೆಯಾದರೆ 30 ವರ್ಷಗಳಿಂದ ಅಧಿಕಾರಕ್ಕಾಗಿ ಕಾದು ಕುಳಿತಿರುವ ವಿರೋಧ ಪಕ್ಷಗಳು ಮೇಲುಗೈ ಸಾಧಿಸುವುದು ಖಚಿತ ಎಂದು ಭಾವಿಸಿದ ಇಂದಿರಾ ಗಾಂಧಿಯವರು ಆಂತರಿಕ ಭದ್ರತೆಯ ನೆಪವೊಡ್ಡಿ ತಮ್ಮ ವಿರುದ್ಧ ತೀರ್ಪು ಬಂದ 13 ದಿನದ ಒಳಗೆ ಅಂದರೆ, ಜೂನ್ 25, 1975 ರ ರಾತ್ರಿ ದೇಶದಲ್ಲಿ ಸಂವಿಧಾನದ ಪರಿಚ್ಛೇದ 352 (1)ರ ಅಡಿಯಲ್ಲಿ ತುರ್ತುಪರಿಸ್ಥಿತಿಯನ್ನು ಘೋಷಿಸಿಬಿಟ್ಟರು ಮತ್ತು ಎರಡು ಸಲ ಅದನ್ನು ವಿಸ್ತರಿಸಿದರು ಕೂಡಾ. ಹಾಗಾಗಿ 1975ರಲ್ಲಿ ನಡೆಯಬೇಕಾಗಿದ್ದ ಚುನಾವಣೆಯನ್ನು ಎರಡು ವರ್ಷಗಳಿಗೆ ಮುಂದೂಡಿದಂತಾಯಿತು. ಈ ನಿರ್ಧಾರದಿಂದ ಕಾಂಗ್ರೆಸ್ ಪಕ್ಷ ಪ್ರಜಾಪ್ರಭುತ್ವ ವಿರೋಧಿ ಎನ್ನುವ ಶಾಶ್ವತವಾದ ಕಳಂಕ ಹೊರುವಂತಾಯಿತು.

ದೇಶದಲ್ಲಿ ತುರ್ತುಪರಿಸ್ಥಿತಿ ಇದ್ದ 21 ತಿಂಗಳ ಅವಧಿಯಲ್ಲಿ ಕೇವಲ ಇಂದಿರಾಗಾಂಧಿಯವರ ನಿರ್ದೇಶನದಿಂದ ದೇಶ ನಡೆಯುತ್ತಿತ್ತು. ನಾಗರಿಕರ ಎಲ್ಲ ಮೂಲಭೂತ ಹಕ್ಕುಗಳನ್ನು ಮತ್ತು ಸ್ವಾತಂತ್ರ್ಯಗಳನ್ನು ಮೊಟಕುಗೊಳಿಸಲಾಗಿತ್ತು. ಯಾವುದೇ ಆರೋಪವಿಲ್ಲದೆ ಜನರನ್ನು ಬಂಧಿಸಲಾಗುತ್ತಿತ್ತು, ಮಾಧ್ಯಮವನ್ನು ಸೆನ್ಸಾರ್ ಮಾಡಲಾಯಿತು. ಆರ್‌ಎಸ್‌ಎಸ್ ಅನ್ನು ಈ ಸಮಯದಲ್ಲಿ ನಿಷೇಧಿಸಲಾಗಿತ್ತು. ಹೆಚ್ಚಿನ ವಿರೋಧ ಪಕ್ಷದ ನಾಯಕರನ್ನು ಬಂಧಿಸಿ ಜೈಲಿನಲ್ಲಿಡಲಾಗಿತ್ತು. ಜೆ ಪಿ ನಾರಾಯಣ್, ಮೊರಾರ್ಜಿ ದೇಸಾಯಿ, ಚರಣ್‌ಸಿಂಗ್, ವಾಜಪೇಯಿ, ಎಲ್.ಕೆ. ಅಡ್ವಾಣಿ, ರಾಜ್‌ನಾರಾಯಣ್, ಜೀವತ್ರಾಂ ಕೃಪಲಾನಿ, ಅಷ್ಟೇ ಏಕೆ ನಮ್ಮವರೇ ಆದ ರಾಮಕೃಷ್ಣ ಹೆಗಡೆಯವರು ಮತ್ತು ಇನ್ನೂ ಅನೇಕ ನಾಯಕರು ಬೆಂಗಳೂರಿನ ಸೆಂಟ್ರಲ್ ಜೈಲಿನಲ್ಲಿ 19 ತಿಂಗಳುಗಳ ಕಾಲ ಸೆರೆಮನೆ ವಾಸವನ್ನು ಅನುಭವಿಸಬೇಕಾಯಿತು. ಆಶ್ಚರ್ಯವೆಂದರೆ, ಇಂದಿರಾ ಅವರ ತುರ್ತುಪರಿಸ್ಥಿತಿ ಹೇರಿಕೆಯ ನಿರ್ಧಾರವನ್ನು ದೇಶಕ್ಕೆ ದೇಶವೇ ವಿರೋಧಿಸಿರಲಿಲ್ಲ. ಅವರ ಈ ನಿರ್ಧಾರ ಸಮಾಜದ ಹಲವಾರು ವರ್ಗಗಳಿಂದ ಬೆಂಬಲವನ್ನೂ ಪಡೆದುಕೊಂಡಿತ್ತು. ಸಮಾಜಸುಧಾರಕರಾದ ವಿನೋಬಾ ಭಾವೆ, ಕೈಗಾರಿಕೋದ್ಯಮಿ ಜೆ.ಆರ್.ಡಿ.ಟಾಟಾ, ಬರಹಗಾರ ಖುಷವಂತ್ ಸಿಂಗ್ ಮತ್ತು ಇಂದಿರಾ ಗಾಂಧಿಯವರ ಆತ್ಮೀಯರಾಗಿದ್ದ ಒಡಿಶಾದ ಮುಖ್ಯಮಂತ್ರಿಯಾಗಿದ್ದ ನಂದಿನಿ ಸತ್ಪತಿ ಮುಂತಾದವರು ಈ ಉಪಕ್ರಮಕ್ಕೆ ಪ್ರಾರಂಭದಲ್ಲಿ ತಮ್ಮ ಬೆಂಬಲ ವ್ಯಕ್ತಪಡಿಸಿದ್ದರು. ನಂತರ, ತುರ್ತುಪರಿಸ್ಥಿತಿ ಹೇರಿಕೆಯ ಹಿಂದಿನ ಉದ್ದೇಶದ ಮತ್ತು ಕಾಂಗ್ರೆಸ್ ರಾಜಕೀಯ ಲಾಭಕ್ಕಾಗಿ ಮಾತ್ರ ಬಳಸಿಕೊಳ್ಳುತ್ತಿದೆ ಎನ್ನುವುದರ ಅರಿವಾಗಿ ಜೆ. ಆರ್.ಡಿ.ಟಾಟಾ ಮತ್ತು ಸತ್ಪತಿ ತುರ್ತುಪರಿಸ್ಥಿತಿಯ ಹೇರಿಕೆಯ ಮತ್ತು ಅದರ ದುರ್ಬಳಕೆಯ ಬಗ್ಗೆ ವಿಷಾದ ವ್ಯಕ್ತಪಡಿಸಿದರು.

ಸುದೀರ್ಘ ಜೈಲುವಾಸದಿಂದ ವಿರೋಧ ಪಕ್ಷದ ಪ್ರಮುಖರೆಲ್ಲ ಮಾನಸಿಕವಾಗಿ ಕುಗ್ಗಿಹೋಗಿರುತ್ತಾರೆ ಮತ್ತು ಅವರಿಗೆ ಮೊದಲಿನಂತೆ ತನ್ನ ವಿರುದ್ಧ ಸಂಘಟಿತ ಹೋರಾಟ ಮಾಡಲು ಈಗ ಸಾಧ್ಯವಾಗಲಿಕ್ಕಿಲ್ಲ ಎಂದು ಇಂದಿರಾ ಗಾಂಧಿ ಭಾವಿಸಿದರು. ಈ ಸಂದರ್ಭದಲ್ಲಿ ಚುನಾವಣೆ ನಡೆದರೆ ತಮಗೆ ಲೋಕಸಭೆಯಲ್ಲಿ 300ಕ್ಕೂ ಹೆಚ್ಚು ಸ್ಥಾನ ದೊರಕುವುದು ಖಚಿತ ಎಂಬ ಗುಪ್ತಚರ ಮಾಹಿತಿಯೂ ಅವರಿಗೆ ದೊರಕಿತ್ತು. ಹಾಗಾಗಿ 1977ರಲ್ಲಿ ಇಂದಿರಾ ಗಾಂಧಿಯವರು ಚುನಾವಣೆಯನ್ನು ಘೋಷಿಸುವ ನಿರ್ಧಾರಕ್ಕೆ ಬಂದರು. ಈ ಬಾರಿಯ ಚುನಾವಣೆಯನ್ನು ಗೆಲ್ಲುವುದು ಮೊದಲಿನ ಚುನಾವಣೆಗಳಂತೆ ಸುಲಭ ಸಾಧ್ಯವಲ್ಲ ಎಂದು ಅವರ ಒಳಮನಸ್ಸು ಹೇಳುತ್ತಿದ್ದರೂ ಈ ಮಟ್ಟದ ಸೋಲನ್ನು ಕಾಣುತ್ತೇನೆ ಎಂದು ಕನಸಿನಲ್ಲಿಯೂ ಇಂದಿರಾ ಕಲ್ಪಿಸಿರಲಿಕ್ಕಿಲ್ಲ ಎಂದು ಕಾಣುತ್ತದೆ. ಜನತಾ ಪಕ್ಷದ ನೇತೃತ್ವದಲ್ಲಿ ಇಂದಿರಾ ವಿರೋಧಿಗಳೆಲ್ಲ ಒಟ್ಟುಗೂಡಿ ಅಭೂತಪೂರ್ವ ಗೆಲುವನ್ನು ಕಂಡರು. ಇತ್ತ ಕಾಂಗ್ರೆಸ್ ನೇತೃತ್ವದ ಕೂಟ ನಿರೀಕ್ಷೆಯಂತೆ ಸೋತು ನೆಲ ಕಚ್ಚಿತು. 352 ಸ್ಥಾನಗಳನ್ನು ಹೊಂದಿದ್ದ ಕಾಂಗ್ರೆಸ್ ಈ ಚುನಾವಣೆಯಲ್ಲಿ 152 ಸ್ಥಾನಗಳಿಗೆ ಕುಸಿಯಿತು. 86 ಸ್ಥಾನಗಳನ್ನು ಹೊಂದಿದ್ದ ಜನತಾ ಪರಿವಾರ 295 ಸ್ಥಾನಗಳನ್ನು ಗೆದ್ದು ಅದರ ನಾಯಕ ಮೊರಾರ್ಜಿ ದೇಸಾಯಿ ಅವರು ಪ್ರಧಾನಮಂತ್ರಿ ಆದರು.

ಚುನಾವಣಾ ಪ್ರಚಾರದಲ್ಲಿ ಭರವಸೆ ನೀಡಿದಂತೆ ಭ್ರಷ್ಟಾಚಾರದ ಆರೋಪದ ಮೇಲೆ ಜನತಾ ಸರಕಾರ ಇಂದಿರಾ ಗಾಂಧಿಯವರ ಬಂಧನಕ್ಕೆ ಆದೇಶಿಸಿತು. ನಾಟಕೀಯವಾಗಿ ಬಂಧಿಸಿದ ತಾಸಿನೊಳಗೆ ಅವರ ಬಿಡುಗಡೆಯೂ ಆಯಿತು. ಆದರೆ, ಆಡಳಿತಾರೂಢ ಜನತಾ ಪಕ್ಷ ಅನುಸರಿಸಿದ ಈ ಇಂದಿರಾ ಬಂಧನದ ರಾಜಕೀಯ ಪ್ರಮಾದ ಮುಂದಿನ ಚುನಾವಣೆಯಲ್ಲಿ ಅವರಿಗೇ ತಿರುಗುಬಾಣವಾಯಿತು. ಎರಡು ವರ್ಷಗಳ ಹಿಂದಷ್ಟೇ ಇಂದಿರಾ ಗಾಂಧಿಯವರ ನಿರಂಕುಶ ವರ್ತನೆಯಿಂದ ಬೇಸತ್ತಿದ್ದ ದೇಶದ ಜನತೆ ಅವರ ಮೇಲೆ ಅನುಕಂಪ ತೋರುವಂತಾಗಲು ಕಾರಣವಾಯಿತು. ಹಾಗಾಗಿ, ಆಡಳಿತ ಪಕ್ಷದಲ್ಲಿ ತಾಂಡವವಾಡುತ್ತಿದ್ದ ಅಂತಃಕಲಹವನ್ನು ಮತ್ತು ದೇಶದಲ್ಲಿ ತಮ್ಮ ಪರವಾಗಿದ್ದ ಅನುಕಂಪವನ್ನು ಬಳಸಿಕೊಳ್ಳುವಲ್ಲಿ ಇಂದಿರಾ ಸಫಲರಾದರು. ಜೈಲಿನಿಂದ ಹೊರಬಂದವರೇ ತಮ್ಮ ಆಕರ್ಷಕ ಧ್ವನಿಯಲ್ಲಿ ದೇಶದೆಲ್ಲೆಡೆ ಭಾಷಣ ನೀಡಲು ಪ್ರಾರಂಭಿಸಿದರು. ತಮ್ಮ ಭಾಷಣಗಳಲ್ಲಿ ತುರ್ತುಪರಿಸ್ಥಿತಿಯನ್ನು ಹೇರಬೇಕಾದ ಅನಿವಾರ್ಯತೆ ಮತ್ತು ಆ ಸಂದರ್ಭದಲ್ಲಿ ಆಗಿರಬಹುದಾದ ತಪ್ಪುಗಳಿಗಾಗಿ ಜನರಲ್ಲಿ ಪರೋಕ್ಷವಾಗಿ ಕ್ಷಮೆಯಾಚಿಸಿದರು. ನಂತರ, ಒಳಜಗಳದಿಂದ ಮೊರಾರ್ಜಿ ದೇಸಾಯಿಯವರು 1979ರ ಜೂನ್‌ನಲ್ಲಿ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡುವಂತಾಯಿತು ಮತ್ತು ಕಾಂಗ್ರೆಸ್ಸಿನ ಬಾಹ್ಯ ಬೆಂಬಲದಿಂದ ಚರಣ್‌ಸಿಂಗ್ ಅವರು ಪ್ರಧಾನಮಂತ್ರಿಯಾಗಿ ಹೊಸ ಸರಕಾರವನ್ನು ರಚಿಸಿದರು. ಆದರೆ, ಸರಕಾರ ರಚಿಸಿ ಇನ್ನೂ ಆರು ತಿಂಗಳು ತುಂಬುವುದರೊಳಗೆ ನೀಡಿದ್ದ ಬೆಂಬಲವನ್ನು ಕಾಂಗ್ರೆಸ್ ಹಿಂತೆಗೆದುಕೊಂಡು ಸರಕಾರ ಬೀಳುವಂತಾಯಿತು. ನಂತರ ನಡೆದ ಚುನಾವಣೆಯಲ್ಲಿ, ಕಾಂಗ್ರೆಸ್ ಪ್ರಚಂಡ ಬಹುಮತದಿಂದ ಅಧಿಕಾರ ಗದ್ದುಗೆ ಏರಿ ಕಾಂಗ್ರೆಸ್ ಮತ್ತು ಇಂದಿರಾ ಗಾಂಧಿಯವರು ಭಾರತಕ್ಕೆ ಅನಿವಾರ್ಯ ಎನ್ನುವುದನ್ನು ಸಾಬೀತುಪಡಿಸಿತು ಮತ್ತು ಕಾಂಗ್ರೆಸ್ ವಿರೋಧಿ ಪಕ್ಷಗಳ ಪ್ರಯಾಣ ಎಲ್ಲಿಂದ ಶುರುವಾಗಿತ್ತೋ ಅಲ್ಲಿಗೇ ಬಂದು ನಿಂತಿತು.

ಮುಂದೆ, ರಾಜೀವಗಾಂಧಿಯವರ ಮೇಲೆ ಬೋಫೋರ್ಸ್ ಹಗರಣದ ಆರೋಪ ಬಂದಾಗ ಅದನ್ನೇ ಅಸ್ತ್ರವಾಗಿಸಿಕೊಂಡು ವಿ.ಪಿ.ಸಿಂಗ್ ನೇತೃತ್ವದಲ್ಲಿ ರಚಿಸಿದ ಜನತಾ ಪರಿವಾರದ ಸಮ್ಮಿಶ್ರ ಸರಕಾರದ ಕಥೆಯೂ 1977 ರ ಮೊರಾರ್ಜಿ ದೇಸಾಯಿಯವರ ಸರಕಾರಕ್ಕೆ ಭಿನ್ನವಾಗಿರಲಿಲ್ಲ. ವಿ ಪಿ ಸಿಂಗ್ ಮತ್ತು ಚಂದ್ರಶೇಖರ್ ಸೇರಿ ಆಡಳಿತವನ್ನು ಎರಡು ವರ್ಷ ಪೂರ್ಣಮಾಡಲಾಗದೆ ಆ ಸರಕಾರ ಅಲ್ಪಾಯುಷ್ಯವನ್ನು ಮಾತ್ರ ಬಾಳಿತು. ಮತ್ತೊಂದು ಪ್ರಯತ್ನದಲ್ಲಿ ನಮ್ಮ ದೇವೇಗೌಡರು ಮತ್ತು ಐ.ಕೆ.ಗುಜ್ರಾಲ್ ಅವರ ಸರಕಾರವೂ ಎರಡು ವರ್ಷ ಕೂಡಾ ದಾಟಲಿಲ್ಲ. ಅಪವಾದ ಎನ್ನುವಂತೆ ವಾಜಪೇಯಿಯವರಿಗೆ ಮಾತ್ರ ತಮ್ಮ ಸಮ್ಮಿಶ್ರ ಸರಕಾವನ್ನು ಪೂರ್ಣಾವಧಿ ನಿಭಾಯಿಸಲು ಸಾಧ್ಯವಾಗಿತ್ತು (ಬಹಳ ಕಷ್ಟದಿಂದ). ಅಂತೂ, ಸಮ್ಮಿಶ್ರ ಸರಕಾರಗಳ ಹಣೆಬರಹವೇ ಇಷ್ಟು ಎಂಬಂತಾಗಿ ಹೋಯಿತು. ಹೆಚ್ಚು ಸಂವೇದನಾಶೀಲವಾಗಿರುವುದರಿಂದ ಸಮ್ಮಿಶ್ರ ರಾಜಕೀಯವು ಭಾರತೀಯ ಒಕ್ಕೂಟ ವ್ಯವಸ್ಥೆಯನ್ನು ಬಲಪಡಿಸುತ್ತದೆ, ಏಕೆಂದರೆ ಅದು ಪ್ರಾದೇಶಿಕ ಭಾವನೆಗಳಿಗೆ ಸ್ಪಂದಿಸುತ್ತದೆ, ಒಂದೇ ಪಕ್ಷದ ಪ್ರಾಬಲ್ಯವನ್ನು ಮತ್ತು ಅದರ ನಿರಂಕುಶ ಆಡಳಿತದ ಸಾಧ್ಯತೆಗಳನ್ನು ಮತ್ತು ಒಂದು ಕುಟುಂಬದ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುತ್ತದೆ ಹಾಗೂ ಸಮ್ಮಿಶ್ರ ಸರಕಾರಗಳಲ್ಲಿ ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಸಮಷ್ಟೀ ಭಾವ ಇರುತ್ತದೆ ಎನ್ನುವ ನಿರೀಕ್ಷೆಯಿಂದ ಒಂದೆರಡು ಸಲ ಭಾರತದ ಮತದಾರ ಸಮ್ಮಿಶ್ರ ರಾಜಕೀಯವನ್ನು ಪ್ರೋತ್ಸಾಹ ಮಾಡಿದ್ದಿದೆ. ಆದರೆ, ಮೊರಾರ್ಜಿ ದೇಸಾಯಿ ಅವರ ನೇತೃತ್ವದ ಪ್ರಥಮ ಸಮ್ಮಿಶ್ರ ಸರಕಾರದಿಂದ ಹಿಡಿದು ಮುಂದೆ ಬಂದ ಸಮ್ಮಿಶ್ರ ಸರಕಾರಗಳ ಮೇಲಿದ್ದ ಜನರ ನಿರೀಕ್ಷೆ ಹುಸಿಯಾಯಿತು. ಸಮ್ಮಿಶ್ರ ವ್ಯವಸ್ಥೆಯ ಸದಸ್ಯರ ನಡುವಿನ ಭಿನ್ನಾಭಿಪ್ರಾಯ, ಅಧಿಕಾರ ಮೇಲ್ಮೆಗಾಗಿನ ಒಳಜಗಳ ಸರಕಾರದ ಪತನಕ್ಕೇ ಕಾರಣವಾಗಿ ದೇಶ ಅಸ್ಥಿರತೆಯತ್ತ ಸಾಗುವುದರಲ್ಲಿರುತ್ತಿತ್ತು. ಸಮ್ಮಿಶ್ರ ಸರಕಾರಗಳ ನಾಯಕನಾದವನಿಗೆ ಸ್ವಂತ ನಿರ್ಧಾರ ತೆಗೆದುಕೊಳ್ಳಲಾಗುತ್ತಿರಲಿಲ್ಲ, ಯಾವುದೇ ಪ್ರಮುಖ ನಿರ್ಧಾರ ತೆಗೆದುಕೊಳ್ಳುವ ಮೊದಲು ಪಾಲುದಾರ ಪಕ್ಷಗಳೊಂದಿಗೆ ಸಮಾಲೋಚನೆ ಮಾಡಲೇಬೇಕಾಗುತ್ತಿತ್ತು, ಸಮ್ಮಿಶ್ರ ಪಾಲುದಾರ ಪಕ್ಷಗಳ ಸಮನ್ವಯ ಸಮಿತಿಯು 'ಸೂಪರ್-ಕ್ಯಾಬಿನೆಟ್'ನಂತೆ ಕಾರ್ಯನಿರ್ವಹಿಸುತ್ತಿತ್ತು, ಸಮ್ಮಿಶ್ರ ಸರಕಾರದ ಸಣ್ಣಪುಟ್ಟ ಪಕ್ಷಗಳೂ 'ಕಿಂಗ್ ಮೇಕರ್' ಪಾತ್ರ ವಹಿಸುತ್ತಿದ್ದವು ಮತ್ತು ಅವರು ಸಂಸತ್ತಿನಲ್ಲಿನ ತನಗಿರುವ ಸ್ಥಾನಕ್ಕಿಂತ ಹೆಚ್ಚಿನ ಪಾಲನ್ನು ಬಯಸುತ್ತಾ ಅದು ಸಿಗದಿದ್ದಾಗ ಸರಕಾರವನ್ನು 'ಬ್ಲಾಕ್ ಮೇಲ್' ಮಾಡುವುದು, ನಾಯಕರು ರಾಷ್ಟ್ರೀಯ ಸ್ತರದ ನಿರ್ಧಾರಗಳನ್ನು ಕೈಗೊಳ್ಳಬೇಕಾದಾಗ ಅಡೆತಡೆ ಉಂಟುಮಾಡಿ ಪ್ರಾದೇಶಿಕ ಸಂಗತಿಗಳಿಗೆ ಮಾತ್ರ ಪ್ರಾಮುಖ್ಯ ಸಿಗುವಂತಾಗುವುದು ಮುಂತಾದ ಎಲ್ಲ ಸಂಗತಿಗಳನ್ನೆಲ್ಲಾ ಪರಾಮರ್ಷಿಸಿ, 'ಹಳೇ ಗಂಡನ ಪಾದವೇ ಗತಿ' ಎನ್ನುವ ಮಾತಿನಂತೆ ಮತದಾರ ಸಮ್ಮಿಶ್ರ ಚಿಂತನೆಯಿಂದ ದೂರ ಸರಿದು ಮತ್ತೆ ಪ್ರಬಲವಾಗಿರುವ ಒಂದಲ್ಲಾ ಒಂದು ರಾಷ್ಟ್ರೀಯ ಪಕ್ಷಕ್ಕೆ ಮಣೆಹಾಕಿರುವುದನ್ನು ನಾವು ನೋಡಿದ್ದೇವೆ. ಸಮ್ಮಿಶ್ರ ಸರಕಾರಗಳ ಆಡಳಿತದಿಂದ ದೇಶಕ್ಕಾದ ಒಳಿತುಕೆಡುಕುಗಳ ಪೂರ್ವಾನುಭವದಿಂದ ಪ್ರಬುದ್ಧನಾದಂತೆ ಕಂಡ ಭಾರತದ ಮತದಾರ, ಕಳೆದ ಎರಡು ದಶಕದಲ್ಲಿ ಸತತ ಎರಡು ಅವಧಿಗೆ ಕಾಂಗ್ರೆಸ್ ನೇತೃತ್ವದ ಯುಪಿಎಗೂ ಮತ್ತು ಮುಂದಿನ ಎರಡು ಅವಧಿಗೆ ಬಿಜೆಪಿ ನೇತೃತ್ವದ ಎನ್‌ಡಿಎಗೂ ನಿಚ್ಚಳ ಬಹುಮತ ನೀಡುವ ಮೂಲಕ ರಾಷ್ಟ್ರರಾಜಕೀಯದಲ್ಲಿ ಸ್ಥಿರತೆ ಮತ್ತು ವಿಶ್ವಾಸಾರ್ಹತೆಗೆ ಪ್ರಾಶಸ್ತ್ಯ ನೀಡಿದಂತೆ ಕಾಣುತ್ತದೆ.

ಈ ಬಾರಿಯೂ ಮತದಾರನ ಮುಂದೆ ಎರಡು ಆಯ್ಕೆಗಳು ಇತ್ತು. 28 ಪಕ್ಷಗಳಿಂದ ಕೂಡಿದ ಮತ್ತು ಯಾವ ಪಕ್ಷಕ್ಕೂ ಸ್ವಂತ 50 ಸ್ಥಾನಗಳನ್ನೂ ಗೆಲ್ಲುವ ಭರವಸೆ ಇಲ್ಲದ ಮತ್ತು ಎಲ್ಲರೂ ಒಪ್ಪುವ ಒಂದು ಪ್ರಬಲ ರಾಷ್ಟ್ರೀಯ ಪಕ್ಷದ ನೇತೃತ್ವರಹಿತ ಐಎನ್‌ಡಿಐಎ ಮೈತ್ರಿಕೂಟ ಒಂದು ಕಡೆಯಾದರೆ, ಹೆಚ್ಚೂ ಕಡಿಮೆ ಅಷ್ಟೇ ಸಂಖ್ಯೆಯ ಪಕ್ಷಗಳಿಂದ ಕೂಡಿದ ಆದರೆ ಸ್ವಂತವಾಗಿ ಸರಳ ಬಹುಮತವನ್ನು ಪಡೆಯುತ್ತೇವೆ ಎನ್ನುವ ಬಿಜೆಪಿ ಪಕ್ಷದ ನೇತೃತ್ವ ಇರುವ ಎನ್‌ಡಿಎ ಮೈತ್ರಿಕೂಟ ಇನ್ನೊಂದು ಕಡೆ. ಮತದಾರನ ಮನದಲ್ಲಿ ಈ ಬಾರಿ ಏನಿತ್ತು ಎಂದು ತಿಳಿಯಲು ಕೆಲವು ದಿನ ಕಾಯಲೇಬೇಕಾಗಿದೆ.

(ಲೇಖಕರು: ಪ್ರಚಲಿತ ವಿದ್ಯಮಾನಗಳ ವಿಶ್ಲೇಷಕರು)

ಭಾರತೀಯ ಕಾನೂನುಗಳು ನಮ್ಮ ಸಂಸ್ಕೃತಿಯನ್ನಾಧರಿಸಿ ರಚಿತವಾಗಬೇಕು!

ಅಭಿಮತ

ಡಾ. ಜಗದೀಶ ಮಾನೆ
vveditoped@gmail.com

ಯುವ 'ಚಿಂತನಕೂಟ' ಎನ್ನುವ ಸಮಾನಮನಸ್ಕರರ ವೇದಿಕೆಯೊಂದು ಧಾರವಾಡದಲ್ಲಿದೆ. ಈ ವೇದಿಕೆಯ ಸದಸ್ಯರೆಲ್ಲರೂ ತಿಂಗಳಿಗೊಮ್ಮೆ ಸೇರಿ ಪ್ರಚಲಿತ ಘಟನೆಗಳ ಬಗ್ಗೆ ಚರ್ಚಿಸಿ ಸಂವಾದ ನಡೆಸುತ್ತಾರೆ. ಅವರು ಎರಡು ದಶಕಗಳಿಂದ ಈ ಚಟುವಟಿಕೆಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಕಳೆದ ತಿಂಗಳು ಚರ್ಚೆಗೆ ಆಯ್ಕೆ ಮಾಡಿಕೊಂಡ ವಿಷಯ 'ಭಾರತೀಯ ಕಾನೂನು' ಈ ಕುರಿತು ಅಧ್ಯಾಪಕರು ಹಾಗೂ ಚಿಂತಕರಾದ ಡಾ.ವಿಷ್ಣುದತ್ತ ನರಹರಿ ಅವರು ವಿಷಯವನ್ನು ಮಂಡಿಸಿದರು. ಬಳಿಕ ಸುಧೀರ್ಘ ಚರ್ಚೆಗಳು ನಡೆದವು. ಕೊನೆಯಲ್ಲಿ ಉಳಿದ ಒಂದಿಷ್ಟು ಪ್ರಶ್ನೆ ಮತ್ತು ಗೊಂದಲಗಳನ್ನು ಡಾ. ಅರುಣಕುಮಾರ್ ಅವರು ಸರಿಪಡಿಸುವ ಪ್ರಯತ್ನ ಮಾಡಿದರು. ಅಲ್ಲಿ ನಾವು ಕಾನೂನಿನ ತಜ್ಞರನ್ನು ಕರೆಸಿದ್ದು ಭಾರತೀಯ ಕಾನೂನಿನಲ್ಲಿರುವ ಗೊಂದಲಗಳ ನಿವಾರಣೆಗೆ ಏನಾದರೂ ಮಾರ್ಗ ಸೂಚಿಸಬಹುದೆಂದು. ಆದರೆ ಅಲ್ಲಿ ಮಾತನಾಡುವವರ ಧಾಟಿಯನ್ನು ನೋಡಿದರೆ ಸರಕಾರವನ್ನು ಸಮರ್ಥಿಸುವವಂತಿದ್ದವು.

ಇದು ಪ್ರತಿಯೊಬ್ಬ ಭಾರತೀಯನಲ್ಲಿರುವ ಸಮಸ್ಯೆ ಎಂದರೆ ತಪ್ಪಾಗಲಾರದು. ಯಾಕೆ ಹೀಗಾಗುತ್ತದೆ? ವಾಸ್ತವದಲ್ಲಿ ಭಾರತೀಯ ಕಾನೂನು ಹಿಂಬಡಿಗನ ಹಾವಿನಂತೆ, ಎರಡೂ ಕಡೆ ತಲೆ ಇದ್ದಂತೆ ಕಾಣುತ್ತದೆ. ನಮ್ಮ ಕಾನೂನಿನಲ್ಲಿ ಸಾಕಷ್ಟು ದೋಷಗಳಿರುವುದು ಎದ್ದುಕಾಣುತ್ತದೆ. ಅದರಲ್ಲೂ ವಿಳಂಬ ನೀತಿ ಹೆಚ್ಚಿದೆ. ನೂರು ಅಪರಾಧಿಗಳು ಬಿಡುಗಡೆಯಾದರೂ ತೊಂದರೆ ಇಲ್ಲ, ಕೋಪ ನಿರಪರಾಧಿಗೆ ಶಿಕ್ಷೆ ಆಗಬಾರದು ಎಂಬುದು ಕಾನೂನಿನ ಆದರ್ಶವಾಗಿದೆ. ಆದರೆ ಈ ದೇಶದಲ್ಲಿ ನೂರಾರು ಅಪರಾಧಿಗಳು ತಪ್ಪಿಸಿಕೊಂಡು ಕೊನೆಗೊಬ್ಬ ನಿರಪರಾಧಿ ಸಿಕ್ಕಿಬೀಳುವ ಪ್ರಸಂಗಗಳೇ ಹೆಚ್ಚಾಗಿ ನಡೆಯುತ್ತದೆ. ಇದು ಕೇಳಲು ಹಾಸ್ಯಾಸ್ಪದ ಎನಿಸಿದರೂ ವಾಸ್ತವ ಸತ್ಯ. ನಮ್ಮ ಜನರಿಗೆ ಕಾನೂನಿನ ಬಗ್ಗೆ ಭಯ ಇದೆ, ಆದರೆ ಗೌರವ ಇಲ್ಲ, ಭಾರತದಲ್ಲಿ ಕಾನೂನಿನ ಸದುಪಯೋಗಕ್ಕಿಂತ ದುರುಪಯೋಗಗಳೇ ಹೆಚ್ಚಾಗಿ ಆಗುತ್ತವೆ. ಈ ರೀತಿ ನೂರಾರು ಪ್ರಶ್ನೆಗಳಿವೆ, ಎಲ್ಲ ಕಾರಣಗಳೇನು? ಅಂತ ನೋಡಿದರೆ ಸಾಕಷ್ಟು ಅಂಶಗಳು ನಮಗೆ ಗೊತ್ತಾಗುತ್ತವೆ. ನಮ್ಮ ದೇಶದ ಸಂವಿಧಾನ ಹಾಗೂ ಕಾನೂನುಗಳೇ ನಮ್ಮ ಸಂಸ್ಕೃತಿಯನ್ನಾಧರಿಸಿ ಇಲ್ಲವೇ ಇಲ್ಲ! ಆದ್ದರಿಂದ ಈ ದೇಶದ ಕಾನೂನುಗಳಿಗೂ ಜನರ ಜೀವನಕ್ಕೂ ಹೊಂದಾಣಿಕೆ ಆಗುತ್ತಿಲ್ಲ. ನಮ್ಮ ಹೊಸ ಕಾನೂನುಗಳು ವಸಾಹತು ಪ್ರಭಾವದಿಂದ ರಚಿತವಾಗಿವೆ. ಅವುಗಳನ್ನೇ ಸಣ್ಣ ಪುಟ್ಟ ಬದಲಾವಣೆಯೊಂದಿಗೆ ನಾವು ಅಳವಡಿಸಿಕೊಂಡಿದ್ದೇವೆ. ಹಾಗಾಗಿ ಅಡ್ಡದಾರಿ ಮತ್ತು ಪರಿಣಾಮಗಳು ಜಾಸ್ತಿ ಆಗುತ್ತಿವೆ.

ಪ್ರತಿಯೊಂದು ಸಮಾಜವು ಯಾವುದೋ ಒಂದು ಸಂಸ್ಕೃತಿಕ ನೆಲೆಯಲ್ಲಿ ಸಂಘಟಿತವಾಗಿ ಅದರಲ್ಲಿ ಸಾಕಷ್ಟು ತಿದ್ದುಪಡಿಗಳಾಗುತ್ತಾ ಬಂದಿರುತ್ತವೆ. ಸಾಂಸ್ಕೃತಿಕ ಪರಂಪರೆ ಅಥವಾ ಸಂಪ್ರದಾಯವೂ ಪ್ರತಿ ಸಮಾಜವನ್ನು ತಿದ್ದುತ್ತಿರುತ್ತದೆ. ಹಾಗಾಗಿ ಒಂದು ಸಮಾಜಕ್ಕೆ ಅಥವಾ ಸಂಸ್ಕೃತಿಗೆ ಸಂಬಂಧಪಟ್ಟ ನೀತಿ-ನಿಯಮಾವಳಿ ಆಯಾ ಸಮಾಜ ಅಥವಾ ಸಂಸ್ಕೃತಿಯನ್ನಾಧರಿಸಿಯೇ ಇರಬೇಕು. ಭಾರತೀಯರಿಗೆ ಹಾಗೂ ಮೂಲ ನಂಬಿಕೆಯಲ್ಲೇ ಭಿನ್ನತೆ ಇರುವಂತಹ ಸಂದರ್ಭದಲ್ಲಿ ಅವರ ಕಾನೂನುಗಳು ನಮಗೆ ಸಂಪೂರ್ಣ ನ್ಯಾಯವನ್ನು ನೀಡಲು ಹೇಗೆ ಸಾಧ್ಯವಿಲ್ಲ, ಕಾರಣ, ಪಾಶ್ಚಿಮಾತ್ಯರು ರಿಲಿಜನ್ನ ಕಥೆ ನಂಬಿದವರು. ರಿಲಿಜನ್ ಎನ್ನುವುದು ಸತ್ಯ-ಸುಳ್ಳುಗಳ ಜಿಜ್ಞಾಸೆಯ ಮೇಲೆ ನಿಂತಿರುವಂತದ್ದು. ಹಾಗಾಗಿ ಅವರ ಕಾನೂನುಗಳಿಗೂ ಸತ್ಯ ಅಥವಾ ಸುಳ್ಳು ಎನ್ನುವುದೇ ನಿರ್ಣಾಯಕವಾಗುತ್ತದೆ. ಮತ್ತು ಅದನ್ನು ನಂಬಿದವರಿಗೆ ಅದೇ ನ್ಯಾಯ. ಭಾರತೀಯ ಸಂಸ್ಕೃತಿಯಲ್ಲಿ ರಿಲಿಜನ್ನೇ ಇಲ್ಲ. ಹಾಗಾಗಿ ಇಲ್ಲಿ ಸತ್ಯ ಸುಳ್ಳು ಎನ್ನುವುದು ಸಂಸ್ಕೃತಿಯ ಜಿಜ್ಞಾಸೆ ಅಲ್ಲ, ಮೇಲಾಗಿ ಅದನ್ನು ಶೋಧಿಸಿಯೇ ತೀರಬೇಕೆಂಬ ಛಲ ಯಾರಿಗೂ ಇಲ್ಲ. ಉದಾ: ನಾವು ಇಂದು ನಮ್ಮೆದುರಿಗೆ ಹಲವು ವೈಚಿತ್ರ್ಯಗಳನ್ನು ಕಾಣುತ್ತೇವೆ ಸುಳ್ಳುಗಾರರು- ಸತ್ಯವಂತರು, ನಂಬಿಕೆಯ-ಅಪನಂಬಿಕೆ, ಕೆಟ್ಟವರು-ಒಳ್ಳೆಯವರು, ನೈತಿಕ-ಅನೈತಿಕತೆ ಹೀಗೆ ಇತ್ಯಾದಿ. ಪ್ರಾಮಾಣಿಕರು ಎಂದುಕೊಂಡವರು ಸಹ ಮೋಸಮಾಡುತ್ತಾರೆ. ಹೀಗಿರುವಾಗ ಸತ್ಯ ಯಾವುದು ಸುಳ್ಳು ಯಾವುದು ಎಂದು ಖಚಿತವಾಗಿ ಹೇಳಲಾಗದ ಪರಿಸ್ಥಿತಿ ಇದೆ. ಈ ಹಂತದಲ್ಲಿ ಪಾಶ್ಚಾತ್ಯರು ತೋರಿಸುವಂತಹ ಪ್ರತಿಕ್ರಿಯೆ ಬೇರೆ ಭಾರತೀಯರು ತೋರಿಸುವುದೇ ಬೇರೆ.

ಈ ಸಂದರ್ಭದಲ್ಲಿ ಪಾಶ್ಚಾತ್ಯರು ಬಹಳಷ್ಟು ಗಂಭೀರರಾಗಿ ಸತ್ಯ ಸುಳ್ಳಿನ ಸಂಶೋಧನೆಗಾಗಿ 'ಗಾಡ್'ನ್ನು ತರುತ್ತಾರೆ. ಫಿಲಾಸಫಿ ಮಧ್ಯೆ ಎಳೆಯುತ್ತಾರೆ. ಮನುಷ್ಯನ ಎಥಿಕ್ಸ್ ಹಾಗೂ ಮಾರಲ್ಸ್‌ಗಳನ್ನು ಪ್ರಶ್ನಿಸುತ್ತಾರೆ. ಅವರು ಇಷ್ಟು ಕಷ್ಟಪಟ್ಟು ಕಂಡುಹಿಡಿದ ಸತ್ಯ ಭಾರತೀಯರಿಗೆ ಅರ್ಥವೇ ಆಗುವುದಿಲ್ಲ, ಏಕೆಂದರೆ ಇವರಿಗೆ ಅದು ಅನುಭವದ ಸಂಗತಿಯೇ ಅಲ್ಲ. ಪಾಶ್ಚಾತ್ಯರು ಒಂದು ಸಮಸ್ಯೆಗೆ ಉತ್ತರ ಕಂಡುಕೊಳ್ಳುವುದಕ್ಕೂ ನಾವು ಕಂಡುಕೊಳ್ಳುವುದಕ್ಕೂ ತುಂಬಾನೇ ವ್ಯತ್ಯಾಸವಿದೆ. ಸತ್ಯ-ಸುಳ್ಳಿಗೆ ಸಂಬಂಧಪಟ್ಟ ಮೇಲಿನ ಸಂದರ್ಭದಲ್ಲಿ ಭಾರತೀಯರು ಗ್ರಹಿಸುವ ರೀತಿಯೇ ಬೇರೆ ಆಗುತ್ತದೆ. ಭಾರತೀಯರು ದೃಷ್ಟಾಂತದ ಮೂಲಕ ಕಥೆಯ ಮೂಲವನ್ನು ಗ್ರಹಿಸುತ್ತಾರೆ. ಉದಾಹರಣೆಗೆ 'ಒಂದು ಊರಿನಲ್ಲಿ ಸತ್ಯ ಮತ್ತು ಸುಳ್ಳು ಎಂಬ ಇಬ್ಬರು ಸ್ನೇಹಿತರಿದ್ದರಂತೆ. ಸತ್ಯನನ್ನು ಜನ ಹೊಗಳುತ್ತಿದ್ದರು, ಏಕೆಂದರೆ ಆತ ನೋಡಲು ಚಂದವಾಗಿದ್ದ. ಅದಕ್ಕಾಗಿ ಸುಳ್ಳನಿಗೆ ಸತ್ಯನ ಕುರಿತು ಅಸೂಯೆ ಇತ್ತು. ಆದರೂ ಇಬ್ಬರು ಅನ್ಯೋನ್ಯ ಸ್ನೇಹಿತರಾಗಿದ್ದರು. ಒಂದು ದಿನ ಈರ್ವರೂ ನದಿಗೆ ಈಜಲು ಹೋಗುತ್ತಾರೆ. ಈಜಿ ಈಜಿ ಸುಸ್ತಾಯಿತು. ಸುಳ್ಳ ಮೊದಲು ದಡಕ್ಕೆ ಬಂದ. ಥಟ್ಟನೆ ಆತನಿಗೆ ಸತ್ಯನ ಬಟ್ಟೆ ಕಾಣಿಸಿತು. ತಡ ಮಾಡದೇ ಅದನ್ನು ಹಾಕಿಕೊಂಡು ಹೋಗಿಬಿಟ್ಟ. ಸತ್ಯ ಬಂದು ನೋಡುತ್ತಾನೆ, ಅಲ್ಲಿ ಬಟ್ಟೆ ಇರಲಿಲ್ಲ. ಹಾಗೇ ಹೋಗುವಂತಿಲ್ಲ; ಅನಿವಾರ್ಯವಾಗಿ ಸುಳ್ಳನ ಬಟ್ಟೆ ಹಾಕಿಕೊಂಡು ಹೋಗುತ್ತಾನೆ. ಈ ಬಟ್ಟೆ ಬದಲಿಸಿಕೊಂಡ ಸತ್ಯ ಮತ್ತು ಸುಳ್ಳರೇ ನಮ್ಮ ಸುತ್ತಲೂ ಇದ್ದಾರೆ. ಹಾಗಾಗಿಯೇ ನಮಗೆ ನಿತ್ಯ ಗೊಂದಲ.' ಹೀಗೆ ಕಥೆ ಹೇಳುವ ಮೂಲಕ ಈ ಗೊಂದಲಗಳನ್ನು ಸಹಜವಾಗಿಯೇ ಸ್ವೀಕರಿಸುತ್ತೇವೆ.

ಪಶ್ಚಿಮಾತ್ಯರು ಪ್ರತಿಯೊಂದು ಕೂಡ ನಾರ್ಮೆಟಿವ್ ಆಗಿ ವಿಭಜಿಸುತ್ತಾರೆ. ಅವರ ಕಾನೂನು ಕೂಡ ಹಾಗೆಯೇ. ಸತ್ಯವಾಗಿರಬೇಕು ಇಲ್ಲಂದ್ರೆ ಸುಳ್ಳಾಗಿರಬೇಕು. ಎರಡೇ ಸಾಧ್ಯತೆಗಳು. ಆದರೆ ನಮ್ಮ ಸಂಸ್ಕೃತಿಯಲ್ಲಿ ಎರಡನ್ನೂ ಮೀರಿದ ಮೂರನೇ ಸಾಧ್ಯತೆಯನ್ನೂ ಊಹಿಸುತ್ತೇವೆ. ಅನೇಕ ಸಲ ಈ ಮೂರನೇ ಸಾಧ್ಯತೆಯೇ ನಿಜವಾಗುತ್ತದೆ. ವಿವಾಹವಾಗಿ ಒಂದು ವರ್ಷದಲ್ಲಿ ಗಂಡ-ಹೆಂಡತಿ ವಿಚ್ಛೇದನಕ್ಕಾಗಿ ನ್ಯಾಯಾಲಯಕ್ಕೆ ಬಂದಿದ್ದಾರೆ. ಗಂಡು ತನಗೆ ಸಾಧ್ಯವಾದಷ್ಟು ಸಮರ್ಥನೆಯ ಕಾರಣಗಳನ್ನು ಸಿದ್ಧಪಡಿಸುತ್ತಾನೆ. ಅಂತೆಯೇ ಹೆಣ್ಣು ಕೂಡಾ ತನ್ನ ಮೇಲೆ ಹೆಚ್ಚು ಅನುಕಂಪ ಬರುವಂತಹ ಕಾರಣಗಳನ್ನು ಸೃಷ್ಟಿಸುತ್ತಾಳೆ. ಏಕೆಂದರೆ ಇವೆಲ್ಲ ಸತ್ಯವನ್ನು ಸಾಬೀತು ಮಾಡುವ ಪ್ರಯತ್ನಗಳು. ಕಾನೂನಿಗೆ ಯಾವುದು ಹೆಚ್ಚು ಸತ್ಯ ಎನಿಸುತ್ತದೆಯೋ ಆ ಕಡೆ ನ್ಯಾಯ ನೀಡುತ್ತದೆ. ಸತ್ಯ ಮತ್ತು ಸುಳ್ಳಿನ ಹೊರತಾಗಿಯೂ ಇನ್ನೊಂದು ಸಾಧ್ಯತೆಯನ್ನು ಅಥವಾ ವಾಸ್ತವವನ್ನು ಗ್ರಹಿಸುವ ನಮ್ಮ ಸಂಸ್ಕೃತಿಗೆ ಇಂಥ ಕಾನೂನುಗಳು ತೊಡಕನ್ನೇ ಉಂಟುಮಾಡುತ್ತವೆ.

ಭಾರತದಲ್ಲಿ ನೂರಾರು ವರ್ಷಗಳ ಹಿಂದೆ ಇದ್ದ ಪಂಚಾಯಿತಿ ವ್ಯವಹಾರ ಪದ್ಧತಿಯನ್ನು ನೋಡಿದರೆ ಇದು ಸ್ಪಷ್ಟವಾಗುತ್ತದೆ. ಯಾವುದೋ ಒಂದು ಪ್ರಕರಣ ಒಂದೊಮ್ಮೆ ಪಂಚಾಯಿತಿ ಕಟ್ಟೆಗೆ ಬಂದರೆ ಏನಾಗುತ್ತಿತ್ತು? ಅವರು ಸತ್ಯ, ಸುಳ್ಳಿಗೆ ಪ್ರಾಮುಖ್ಯ ನೀಡುತ್ತಿರಲಿಲ್ಲ, ಪರಿಸ್ಥಿತಿಯ ಗಂಭೀರತೆಯನ್ನು ಮೊದಲು ಊಹಿಸುತ್ತಿದ್ದರು. 'ಹಳೆಯದನ್ನೆಲ್ಲ ಮರೆಯಿರಿ, ಆಗಿದ್ದು ಆಗಿ ಹೋಯಿತು. ಅಮೂಲ್ಯವಾದ ಜೀವನವನ್ನು ಹಾಳು ಮಾಡಿಕೊಳ್ಳಬೇಡಿ,' ಚೆನ್ನಾಗಿ ಬದುಕು ಸಾಗಿಸಲು ಇಬ್ಬರಿಗೂ ಸಲಹೆ ನೀಡಿ ಕಳುಹಿಸುತ್ತಿದ್ದರು. ಈ ರೀತಿಯ ಗ್ರಹಿಕೆ ಒಂದು ಪರಂಪರೆ ಅಥವಾ ಸಂಸ್ಕೃತಿಯಿಂದ ಬಂದಿರುವಂತಹದ್ದು. ಹಾಗಾಗಿ ಇಂತಹ ಗ್ರಹಿಕೆ ಆಧಾರದ ಮೇಲೆ ಕಾನೂನುಗಳು ರಚಿತವಾಗಬೇಕು. ಕ್ರಿಶ್ಚಿಯಾನಿಟಿ ಹುಟ್ಟಿದ್ದೇ ರೋಮಿನಲ್ಲಿ. ರೋಮಿನಂತೆ ಅಥವಾ ಭಾರತದಂತೆ ಕ್ರಿಶ್ಚಿಯಾನಿಟಿಗೆ ಪರಂಪರೆ ಅಥವಾ ಸಾಂಸ್ಕೃತಿಕ ಹಿನ್ನೆಲೆ ಇಲ್ಲ. ಅವರು ಕಟ್ಟಿಕೊಂಡ ರಿಲಿಜನ್‌ನ ಕಥೆಯೇ ಅವರಿಗೆ ಬಂಡವಾಳ. ಹಾಗೂ ಈ ಕಥೆಗೆ ಮಿತಿ ಇದೆ. ಆದ್ದರಿಂದ ರೀಜನ್‌ಗೆ ಸಂಬಂಧಪಟ್ಟ ಎಲ್ಲ ಸಾಮಾಜಿಕ ವ್ಯವಸ್ಥೆಯಲ್ಲಿ ಈ ಮಿತಿ ಗುರುತಿಸಬಹುದಾಗಿದೆ. ಹಾಗಾಗಿ ನಮ್ಮ ದೇಶದ ಕಾನೂನುಗಳಲ್ಲಿ ಕಂಡುಬರುವುದು ಈ ರಿಲಿಜನ್ನಿನ ಮಿತಿ. ರಿಲಿಜನ್ನೇ ಇಲ್ಲದ ದೇಶದಲ್ಲಿ ಅದು ಅಶಾಂತಿಗೆ ಕಾರಣವಾಗುತ್ತವೆ. ಕಾನೂನು ಎನ್ನುವುದು ಮನುಷ್ಯರು ಮನುಷ್ಯರಿಗಾಗಿಯೇ ಮಾಡಿರುವಂತಹದ್ದು. ಏಕೆಂದರೆ ಮನುಷ್ಯ ಸಕಲ ಜೀವಿಗಳಲ್ಲಿ ಅತ್ಯಂತ ಬುದ್ಧಿವಂತ! ಈತನನ್ನು ಬೇರಾವ ರೀತಿಯಲ್ಲೂ ನಿಯಂತ್ರಿಸಲು ಸಾಧ್ಯವಿಲ್ಲ. ಈ ಪ್ರಪಂಚದಲ್ಲಿ ಬೇರೆ ಬೇರೆ ಸಂಸ್ಕೃತಿಗಳ ಮನುಷ್ಯರ ಆಚಾರ, ವಿಚಾರ, ನಂಬಿಕೆ, ಆಚರಣೆ ಬೇರೆ ಬೇರೆ ಇರುತ್ತವೆ. ಕಾನೂನು ಮನಸ್ಸಗೆ ಸ್ವಾತಂತ್ರ್ಯವನ್ನು ನಿಯಂತ್ರಣದಲ್ಲಿ ಇಡಬೇಕೇ ವಿನಹ ಮೊಟಕುಗೊಳಿಸಬಾರದು. ಅಥವಾ ತಾರತಮ್ಯ ಮಾಡಬಾರದು. ಹಾಗಿದ್ದಾಗ ಕಾನೂನುಗಳು ಆಯಾ ಸಂಸ್ಕೃತಿಗೆ ಸಂಬಂಧಪಟ್ಟಂತೆ ರಚಿತವಾಗಬೇಕೇ ವಿನಾ ವಿಶ್ವಕ್ಕೆಲ್ಲ ಒಂದು ಕಾನೂನು ಎಂದರೆ ನ್ಯಾಯವಲ್ಲ. ಯುರೋಪ್ಯರು ಪ್ರಗತಿಯ ರೂವಾರಿಗಳು ಹಾಗೂ ನಮಗೆ ಮಾದರಿ ಎಂದು ಒಪ್ಪಿಕೊಂಡಿದ್ದರಿಂದ ಅವರದ್ದೆಲ್ಲವನ್ನೂ ಸಾರಾಸಗಟಾಗಿ ಸ್ವೀಕರಿಸಿಬಿಟ್ಟಿದ್ದೇವೆ. ನಮ್ಮ ದೇಹ ಪ್ರಕೃತಿಗೆ ಒಗ್ಗುವಂತಹದ್ದನ್ನು ಮಾತ್ರ ಅಳವಡಿಸಿಕೊಂಡಿದ್ದರೆ ಈ ಅನಾಹುತ ಖಂಡಿತ ಆಗುತ್ತಿರಲಿಲ್ಲ. ಈಗ ನಮ್ಮ ದೇಶದಲ್ಲಿ ಬುದ್ಧಿವಂತರು ಮಾತ್ರ ಕಾನೂನಿನ ಸದುಪಯೋಗ ಮತ್ತು ದುರುಪಯೋಗ ಪಡೆದುಕೊಳ್ಳುವ ಸಂದರ್ಭ ಎದುರಾದಂತೆ ಕಾಣುತ್ತದೆ. ಭಾರತೀಯ ಕಾನೂನು ಪ್ರಪಂಚದಲ್ಲಿ 'ಹಿಂದೂ ಲಾ' ಮಾತ್ರ ಹೆಚ್ಚೂ ಕಡಿಮೆ ಎಲ್ಲ ಭಾರತೀಯರಿಗೆ ಅರ್ಥವಾಗುತ್ತದೆ. ಹಾಗೂ ಅದರ ಕುರಿತು ಸ್ವಲ್ಪಮಟ್ಟಿನ ಮೆಚ್ಚುಗೆ ಇದೆ. ಯಾಕೆಂದರೆ 'ಹಿಂದೂ ಲಾ' ಭಾರತೀಯರ ಅನುಭವ. ಅದಕ್ಕಿಂತ ಮುಖ್ಯವಾಗಿ ಭಾರತೀಯ ಪರಂಪರೆಯಲ್ಲಿ ಇದ್ದ ಕಾನೂನಿನ ಪರಿಷ್ಕೃತ ಪಾಠ್ಯವಿದು. ಉಳಿದ ಕಾನೂನುಗಳಲ್ಲೂ ಈ ಪರಿಷ್ಕರಣೆ ಅಗತ್ಯವಿದೆ. ಇದು ಯಾರೋ ಪ್ರಜ್ಞಾಪೂರ್ವಕವಾಗಿ ಮಾಡಿದ ತಪ್ಪಲ್ಲ, ನಮ್ಮ ತಿಳುವಳಿಕೆಯೊಂದಿಗೆ ಬಂದಂತಹದ್ದು. ಆದರೆ ಈ ತಿಳಿವಳಿಕೆಯೇ ತಪ್ಪಾಗಿದೆ ಎಂಬುದನ್ನು ಅರಿತುಕೊಳ್ಳಬೇಕಾಗಿದೆ. ಹೀಗೆ ಸಾಕಷ್ಟು ಬದಲಾವಣೆ ನಮ್ಮ ಸಂವಿಧಾನ ಮತ್ತು ಕಾನೂನುಗಳಲ್ಲಿ ಆಗಬೇಕಿದೆ.

(ಲೇಖಕರು: ರಾಜ್ಯಶಾಸ್ತ್ರ ಅಧ್ಯಾಪಕರು)

ಸದಾಶಿವನಿಗೆ ಚಾರ್‌ಸೌ ಧ್ಯಾನ

ಸಿನಿಗನ್ನಡ

ತುಂಟರಗಾಳಿ

ಹರಿ ಪರಾಕ್
vveditoped@gmail.com

ಕರ್ನಾಟಕದಲ್ಲಿ ಚಿತ್ರಮಂದಿರಗಳು ಮುಚ್ಚೋದು ಹೊಸ ಸುದ್ದಿ ಏನಲ್ಲ. ಕರೋನಾ ನಂತರ ಶುರು ಆದ ಈ ಸಮಸ್ಯೆ ಈಗ ಇನ್ನಷ್ಟು ಉಲ್ಬಣವಾಗುತ್ತಿದೆ. ಇದು ಕೇವಲ ಕರ್ನಾಟಕದ ಸಮಸ್ಯೆ ಅಲ್ಲ, ಸಿನಿಮಾ ಕ್ರೇಜ್ ಸಿಕ್ಕಾಪಟ್ಟೆ ಇರೋ ತಮಿಳು ನಾಡಿನಲ್ಲೂ 150ಕ್ಕೂ ಹೆಚ್ಚು ಚಿತ್ರಮಂದಿರಗಳು ಮುಚ್ಚುತ್ತಿವೆಯಂತೆ. ನಮ್ಮಲ್ಲಿಯೂ ಕೂಡ ಇನ್ನೇನು ಹಲವು ಚಿತ್ರಮಂದಿರಗಳು ಕೌಂಟರ್ ಕ್ಲೋಸ್ ಮಾಡುವ ಮಾತನ್ನಾಡುತ್ತಿವೆ. ಸ್ಟಾರ್ ಸಿನಿಮಾಗಳೂ ಕಾಸು ಮಾಡದೆ, ಗಲ್ಲಾ ಪೆಟ್ಟಿಗೆ ತುಂಬುತ್ತಿಲ್ಲ ಎಂದು ಮೊದಲೇ ಸಂಕಷ್ಟದಲ್ಲಿದ್ದ ಈ ಚಿತ್ರಮಂದಿರಗಳು ಗಲ್ಲದ ಮೇಲೆ ಕೈ ಇಟ್ಟು ಕೂತಿವೆ. ಅಂದಹಾಗೆ ಇವೆಲ್ಲ ಕೇವಲ ಸಿಂಗಲ್ ಸ್ಕ್ರೀನ್ ಥಿಯೇಟರ್‌ಗಳ ಸಮಸ್ಯೆ. ಇನ್ನೋವೇಟಿವ್ ಮಲ್ಟಿಪ್ಲೆಕ್ಸ್‌ಗಳು ಹೇಗೋ ಬಚಾವಾಗಲು ಹಲವು ಇನ್ನೋವೇಟಿವ್ ದಾರಿಗಳನ್ನು ಹುಡುಕಿಕೊಳ್ಳುತ್ತವೆ. ಆದ್ರೆ ಸಿಂಗಲ್ ಸ್ಕ್ರೀನ್‌ಗಳ ಕತೆ ಹಾಗಿಲ್ಲ. ಹಾಗಾಗಿ ಜನ ಒಂದು ಕಡೆ ಮಿಂಗಲ್ ಆಗೋಕೆ ಸಾಧ್ಯ ಇಲ್ಲ ಎನ್ನುವಂಥ ಕರೋನಾ ಟೈಮಲ್ಲೇ ಸಿಂಗಲ್ ಥಿಯೇಟರ್‌ಗಳು ವಿರಹ ವೇದನೆಯಿಂದ ನರಳುವ ಸಿಂಗಲ್‌ಗಳಂತೆ ಆಗಿದ್ದವು. ಈಗಂತೂ ಅವುಗಳ ಕಷ್ಟ ಗಗನಕ್ಕೇರಿದೆ. ಹಲವು ಚಿತ್ರಮಂದಿರಗಳ ಮಾಲೀಕರು ತಮ್ಮ ಲೈಸೆನ್ಸ್ ರಿನ್ಯೂ ಮಾಡೋಕೆ ಅರ್ಜಿಯನ್ನೂ ಹಾಕಿಲ್ಲವಂತೆ. ಇಷ್ಟುದಿನ ತಮ್ಮ ಮರ್ಜಿ ಎನ್ನುವಂತೆ ಟಿಕೆಟ್ ದರವನ್ನು ಹೆಚ್ಚಿಸುತ್ತಿದ್ದ ಚಿತ್ರಮಂದಿರಗಳ ಮಾಲೀಕರು ಕರೋನಾ ಕಾಲದಲ್ಲಿ ಸರಕಾರದ ಫಿಫ್ಟಿ ಫಿಫ್ಟಿ ನೀತಿಯಿಂದಾಗಿ ಮೊದಲ ಲಾಕ್‌ಡೌನ್‌ನಲ್ಲೇ ಒಂದಿಷ್ಟು ಕಂಗೆಟ್ಟಿದ್ದರು. ಈಗ ಫಿಫ್ಟಿ ಫಿಫ್ಟಿ ಇರಲಿ, ಚಿತ್ರಮಂದಿರಗಳಲ್ಲಿ ಶೋ ಗಳೇ ಇಲ್ಲದೆ ಅವರ ಪರಿಸ್ಥಿತಿ ಇನ್ನಷ್ಟು ಶೋಚನೀಯವಾಗಿದೆ. ಅಡ್ವಾನ್ಸ್ ಬುಕ್ಕಿಂಗ್ ಮಾಡಿಕೊಂಡು ಸೀಟುಗಳನ್ನ ಬ್ಲಾಕ್ ಮಾಡಿಕೊಳ್ಳುತ್ತಿದ್ದ, ದೊಡ್ಡ ಸಿನಿಮಾಗಳು ಬಿಡುಗಡೆಯಾದಾಗ ಬ್ಲ್ಯಾಕ್ ಟಿಕೆಟ್ ಮಾರುತ್ತಿದ್ದ ಚಿತ್ರಮಂದಿರಗಳೇ ಈಗ ಬ್ಲಾಕ್ ಆಗುವ ಭಯದಲ್ಲಿವೆ. ಹಾಗಾಗಿ ಚಿತ್ರಮಂದಿರ ತುಂಬಿದೆ ಎಂಬ ಬೋರ್ಡ್ ನೋಡಬೇಕಾಗಿದ್ದ ಹಲವು ಕಡೆ ಇನ್ನುಮುಂದೆ ಚಿತ್ರಮಂದಿರ ಮುಚ್ಚಿದೆ ಎಂಬ ಬೋರ್ಡ್ ತಗಲಾಕಿದರೆ ಅಚ್ಚರಿಯಿಲ್ಲ.

ಲೂಸ್ ಟಾಕ್ ನರೇಂದ್ರ ಮೋದಿ

- **ಏನ್ ಸಾರ್ ಏನಿದು, ನಿಮ್ಮ ಧ್ಯಾನ ತುಂಬಾ ಸೌಂಡ್ ಮಾಡ್ತಾ ಇದೆಯಲ್ಲ?**

-ರೀ, ಸೈಲೆಂಟ್ ಆಗಿ ಧ್ಯಾನ ಮಾಡ್ತಾ ಇದ್ದೀನಿ. ಅದನ್ನೂ ಸೌಂಡ್ ಅಂತೀರಲ್ಲ

- **ಥೂ, ಹಂಗಲ್ಲ ಸರ್, ಧ್ಯಾನ ಮಾಡೋದ್ ಮಾಡ್ತಿದ್ದೀರ. ಅಲ್ಲೂ ಕ್ಯಾಮರಾಮನ್ ಯಾಕೆ ಅಂತ ಎಲ್ಲರೂ ಟ್ರೋಲ್ ಮಾಡ್ತಾ ಇದ್ದಾರೆ?**

-ಅಯ್ಯೋ, ಹೌದಲ್ಲ, ಸುತ್ತ ಅಷ್ಟ್ ಕ್ಯಾಮರಾಮನ್ ಇದ್ರೂ ಇದು ನಂಗೆ 'ಫ್ಲ್ಯಾಷ್' ಆಗ್ಲಿಲ್ಲ ನೋಡಿ

- **ಸರಿ, ಧ್ಯಾನದ ನಡುವೆ ಉಪಾಹಾರ, ಪಾನೀಯ ಸಮಾರಾಧನೆ ಹೇಗೆ ನಡೀತಾ ಇದೆ**

-ಏನು? ಉಪಾಹಾರ, ಪಾನೀಯ ಧ್ಯಾನದ ಮಧ್ಯಾನ? ಅದೂ ಮಟ ಮಟ ಮಧ್ಯಾಹ್ನ.. ನೋ.. ವೇ ಚಾನ್ಸೇ ಇಲ್ಲ

- **ಹೋಗ್ಲಿ, ನಿಮ್ಮ ಈ ಧ್ಯಾನದ ಉದ್ದೇಶ ಏನು?**

-ಆ? ಧ್ಯಾನ್‌ಚಂದ್ ಅವಾರ್ಡ್ ತಗೊಳ್ಳೋದು..ಹೋಗ್ರೀ ಹೋಗ್ರೀ ಡಿಸ್ಟರ್ಬ್ ಮಾಡ್ಬೇಡಿ

- **ಅಂದಹಾಗೆ, ಈ ಸಲ ನಿಮಗೆ ಚಾರ್‌ಸೌ ಪಾರ್ ಸೀಟು ಸಿಗುತ್ತಂತೆ?**

-ಏನೋ ಜೋಷ್‌ನಲ್ಲಿ ಹೇಳಿದೆ. ಅದನ್ನೇ ಹಿಡ್ಕೊಂಡ್ ಕೂತಿದ್ದೀರಲ್ಲ. ಅದೇನೋ ಅಂತಾರಲ್ಲ, ಸದಾಶಿವನಿಗೆ ಬರೀ ಚಾರ್‌ಸೌ ಧ್ಯಾನ.

(ಕಾಲ್ಪನಿಕ ಸಂದರ್ಶನ)

ನೆಟ್ ಪಿಕ್ಸ್

ಖೇಮು ಹುಟ್ಟಾ ಕುರುಡ. ಆದ್ರೆ ಜೊತೆಗೆ ಹುಟ್ಟಾ ಕುಡುಕ. ಊರಲ್ಲಿರೋ ಎಲ್ಲಾ ಬಾರುಗಳು, ಪಬ್ಬುಗಳು ಅವನಿಗೆ ಚೆನ್ನಾಗಿ ಗೊತ್ತಿದ್ದವು. ಕುರುಡನಾದ್ರೂ ಹೋದ ಕಡೆಯಲ್ಲೆಲ್ಲಾ ಹುಡುಗಿಯರನ್ನ ಪಟಾಯಿಸಿ ಪ್ಲೇ ಬಾಯ್ ಎನಿಸಿಕೊಂಡಿದ್ದ. ಹೀಗಿದ್ದ ಖೇಮು ಒಂದಿನ ಒಂದು ಹೊಸ ಪಬ್ಬಿಗೆ ಹೋದ. ಖೇಮುಗೆ ಒಂದು ಸ್ಪೆಷಲ್ ಕಲೆ ಇತ್ತು. ಏನಂದ್ರೆ, ಅಲ್ಲಿ ಕುಡಿಯುವಾಗ ತಿನ್ನೋಕೆ ಅಂತ ಫುಡ್ ತರಿಸುವಾಗ ಅವನು ಆ ಡಿಷ್‌ನಲ್ಲಿ ಅದ್ದಿ ತೆಗೆದ ಸ್ಪೂನ್ ಅನ್ನು ಮೂಸಿ ನೋಡಿ ಅದು ಯಾವ ಡಿಶ್ ಎಂದು ಕಂಡುಹಿಡಿದು ಆರ್ಡರ್ ಮಾಡುತ್ತಿದ್ದ. ಅಂದು ಕೂಡಾ ಒಂದು ಹೊಸ ಪಬ್ಬಿಗೆ ಹೋಗಿದ್ದರಿಂದ ವೈಟರ್‌ನ ಕರೆದು, ಡ್ರಿಂಕ್ಸ್ ಹೇಳಿದ. ಸೈಡ್ ಡಿಶ್ ಏನು ಕೊಡ್ಲಿ ಅಂತ ಅವನು ಕೇಳಿದಾಗ, ಖೇಮು ಹೇಳಿದ, ನೀವು ತಯಾರಿಸಿದ ಡಿಶ್‌ನಲ್ಲಿ ಇಟ್ಟಿರೋ ಸ್ಪೂನ್ ತಗೊಂಡ್ ಬಾ. ಸ್ಮೆಲ್ ನೋಡಿ ಹೇಳ್ತೀನಿ ಅಂದ. ವೈಟರ್‌ಗೆ ಆಶ್ಚರ್ಯ ಆದ್ರೂ,. ಸರಿ ಅಂತ ಒಳಗೆ ಹೋಗಿ ಒಂದು ಸ್ಪೂನ್ ತಗೊಂಡ್ ಬಂದು ಕೊಟ್ಟ. ಖೇಮು ಅದನ್ನು ಮೂಸಿ ನೋಡಿ, ಸರಿ ಈ ಚೈನೀಸ್ ಶೆಜ್ವಾನ್ ಫ್ರೈಡ್ ಚಿಕನ್ ಚೆನ್ನಾಗಿರುತ್ತೆ, ಒಂದ್ ಪ್ಲೇಟ್ ತಗೊಂಡ್ ಬಾ ಅಂದ. ವೈಟರ್‌ಗೆ ಆಶ್ಚರ್ಯ ಆಯ್ತು. ಸರಿ ಒಂದು ಪ್ಲೇಟ್ ಅದೇ ಚಿಕನ್ ತಂದುಕೊಟ್ಟ. ಖೇಮು ಮುಂದಿನ ಬಾರಿ ಇನ್ನೊಂದು ಡಿಷ್ ಆರ್ಡರ್ ಮಾಡುವಾಗ ಮತ್ತೆ ಸ್ಪೂನ್ ತಗೊಂಡ್ ಬಾ ಅಂದ. ಈ ಬಾರಿ ಅವನನ್ನು ಆಟ ಆಡಿಸಬೇಕು ಅಂತ ಡಿಸೈಡ್ ಮಾಡಿದ ವೈಟರ್, ಅಡುಗೆ ಮನೆಯಲ್ಲಿ ಕೆಲಸ ಮಾಡುತ್ತಿದ್ದ ತನ್ನ ಹೆಂಡತಿಯನ್ನು ಕರೆದು, ಈ ಸ್ಪೂನ್ ಅನ್ನು ನಿನ್ನ ಬಾಯಲ್ಲಿ ಒಂದು ಸಲ ಚೀಪಿ, ಆಮೇಲೆ ಅದನ್ನು ನಿನ್ನ ಲಿಪ್‌ಸ್ಟಿಕ್‌ಗೆ ಒರೆಸಿ ಕೊಡು ಅಂದ. ಹೆಂಡಿ ಯಾಕೆ ಅಂದ್ಲು. ಸುಮ್ನೆ ಹೇಳಿದಷ್ಟು ಮಾಡು ಅಂತ ಮಾಡಿಸಿ ಆ ಸ್ಪೂನ್ ಅನ್ನು ತಗೊಂಡ್ ಬಂದು ಖೇಮುಗೆ ಕೊಟ್ಟ. ಖೇಮು ಅದನ್ನು ಮೂಸಿ ನೋಡಿ ಹೇಳಿದ ಓ, ಲಿಂಡಾ ಈವಾಗ ನಿಮ್ ಹೋಟ್ಲಲ್ಲಿ ಕೆಲ್ಸ ಮಾಡ್ತಾ ಇದ್ದಾಳಾ?

ಲೈನ್ ಮ್ಯಾನ್

- **ನಮ್ಮವರಿಗೆ ಸಚಿವ ಸ್ಥಾನ ಕೊಡದಿದ್ರೆ, ವಿಧಾನಸೌಧಕ್ಕೆ ಮುತ್ತಿಗೆ ಹಾಕ್ತೀವಿ- ಸ್ವಾಮೀಜಿ**

-ಇವ್ರದ್ದೇನು ಮುತ್ತಿಗೆ ಮಠನಾ?

- **ಇಂದಿನ ಸರಕಾರಗಳಲ್ಲಿ ಮಿನಿಸ್ಟರ್ ಆಗೋಕೆ ಬರೀ ಸಜ್ಜನ ಆಗಿದ್ರೆ ಆಗಲ್ಲ**

-ಅವ್ರ್, ಯಾವ್ ಜನ ಅನ್ನೋದೂ ಮುಖ್ಯ ಆಗುತ್ತೆ.

- **ನಗರದ ಹೊರವಲಯದಲ್ಲಿ ಸೈಟ್ ತಗೊಂಡೋರು ಆಗಾಗ ಹೋಗಿ ನೋಡ್ಕಂಡ್ ಬರೋದು**

-ಸೈಟ್ ಸೀಯಿಂಗ್

- **ಯಾರನ್ನಾದ್ರೂ ಪರೀಕ್ಷೆ ಮಾಡಬೇಕು ಅಂತ ಅವರಿಗೆ ಸಚಿವ ಸ್ಥಾನ ಕೊಟ್ರೆ ಅದು**

-ಸಂಪುಟಕ್ಕಿಟ್ಟ ಚಿನ್ನ

- **ಕುಡುಕರ ಕಷ್ಟ**

-ಕುಡಿದು ಸ್ವಲ್ಪ ಜಾಸ್ತಿ ಮಾತಾಡಿದ್ರೆ, ಫುಲ್ ಟೈಟ್ ಆಗಿ ಸಿಕ್ಕಾಪಟ್ಟೆ ಮಾತಾಡ್ತಿದ್ದಾನೆ ಅಂತಾರೆ. ಹಂಗಂತ, ಇವ್ರ ಸಾವಾಸನೇ ಬೇಡ ಅಂತ ಸುಮ್ನೆ ಸೈಲೆಂಟ್ ಆಗಿ ಕೂತ್ಕೊಂಡ್ರೆ, ಅಣ್ಣ ಫುಲ್ ಚಿತ್ತಾಗವ್ನೆ, ಮಾತೇ ಬರ್ತಿಲ್ಲ ಅಂತಾರೆ.

- **ಸದ್ಯದ ಪರಿಸ್ಥಿತಿಯಲ್ಲಿ ದೇಶದ ಪ್ರಜೆಗಳು ಕುಡಿಯೋ ಅಭ್ಯಾಸ ಕಡಿಮೆ ಮಾಡೋದು ಹೇಗೆ?**

-ಏನಿಲ್ಲ, ಬೇಜಾರಾದಾಗೆಲ್ಲ ಕುಡಿಯೋದ್ ಬಿಟ್ಟು, ಬರೀ ಖುಷಿ ಆದಾಗ್ ಮಾತ್ರ ಕುಡಿಯೋ ಅಭ್ಯಾಸ ಮಾಡಿಕೊಂಡ್ರೆ ಸಾಕು.

- **ಫೇಕ್ ಫೇಸ್ ಬುಕ್ ಅಕೌಂಟಿಂದ ಮೆಸೆಂಜರ್‌ಗೆ ಬಂದು, ಫೋನ್ ಪೇ, ಗೂಗಲ್ ಪೇ ಇದ್ಯಾ ಅಂತ ಕೇಳಿದ್ರೆ ಏನ್ ಮಾಡಬೇಕು?**

-ಇದೆ, ಬರೀ ಇನ್‌ಕಮಿಂಗ್ ಅಷ್ಟೇ, ಔಟ್‌ಗೋಯಿಂಗ್ ಇಲ್ಲ ಅನ್ಬೇಕು

- **ಇನ್ನೊಬ್ರನ್ನ ಕನ್ ಫ್ಯೂಸ್ ಮಾಡೋದು ಹೇಗೆ?**

-ಒಂದ್ ಟೀ ಸ್ಪೂನ್, ಕಾಫಿ ಪುಡಿ ಹಾಕಿ

ರಾಜಕೀಯ ರಹಸ್ಯ

ಎಕ್ಸ್ ಸಿಎಂಗಳಾದ ಮೇಲೂ ಅವರಿಗೆ ಝೆಡ್ ಸೆಕ್ಯುರಿಟಿ ಕೊಟ್ರೂ, ನಮ್ ಜನ ವೈ ಅಂತ ಕೇಳಲ್ಲ.

- **ಬಾಲಿವುಡ್ ಖಾನ್‌ಗಳು ಇನ್ನೊಬ್ಬರಿಗೆ ಹೇಳೋ ಕಿವಿ ಮಾತನ್ನ ಏನಂತಾರೆ?**

-ಕಾನ್ ಕೀ ಬಾತ್

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393959/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:9, Issue: 159

ತ್ರಿಶೂಲದಿಂದ ಹೊಡೆದಾಟ: ಮೂವರಿಗೆ ಗಂಭೀರ ಗಾಯ

ಚಾಮರಾಜನಗರ: ಪೂಜೆ ಹಾಗೂ ದೀಕ್ಷೆ ಕೊಡುವ ವಿಚಾರಕ್ಕೆ ಅರ್ಚಕರ ಗುಂಪಿನಲ್ಲಿ ಗಲಾಟೆ ನಡೆದಿದೆ. ಈ ಗಲಾಟೆಯಲ್ಲಿ ಮೂವರು ಗಂಭೀರವಾಗಿ ಗಾಯಗೊಂಡಿದ್ದಾರೆ. ಈ ಘಟನೆ ಪ್ರಸಿದ್ಧ ಯಾತ್ರಸ್ಥಳವಾದ ಕೊಳ್ಳೇಗಾಲ ತಾಲೂಕಿನ

ಚಿಕ್ಕಲ್ಲೂರಿನಲ್ಲಿ ನಡೆದಿದೆ. ಗಾಯಾಳುಗಳನ್ನು ಚಿಕ್ಕಲೂರು ದೇವಸ್ಥಾನದ ಅರ್ಚಕರಾದ ಶಂಕರಪ್ಪ (65), ಶಿವಕುಮಾರ ಸ್ವಾಮಿ (40) ಹಾಗೂ ನಂಜುಂಡ ಸ್ವಾಮಿ (32) ಎಂದು ಗುರುತಿಸಲಾಗಿದ್ದು, ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು, ಚಿಕಿತ್ಸೆ ಮುಂದುವರಿದಿದೆ. ಸಿದ್ದಪ್ಪಾಜಿ ದೇವರ ಗುಡ್ಡ ದೀಕ್ಷೆ ಪಡೆಯಲು ನೂರಾರು ಮಂದಿ ಭಕ್ತರು ದೇವಸ್ಥಾನಕ್ಕೆ ಬಂದಿದ್ದರು. ಈ ವೇಳೆ ದೀಕ್ಷೆ ಕೊಡಲು ಒಂದು ಗುಂಪು ದೇಗುಲದ ಹೊರಗೆ ತಯಾರಿ ಮಾಡಿಕೊಳ್ಳುತ್ತಿತ್ತು. ಈ ಸಮಯದಲ್ಲಿ ಮತ್ತೊಂದು ಗುಂಪು ದೀಕ್ಷೆ ನಾವು ಕೊಡುತ್ತೇವೆ ಎಂದು ತಡೆ ಒಡ್ಡಿದ್ದಾರೆ. ಹೀಗಾಗಿ ನಂಜುಂಡಸ್ವಾಮಿ ಮತ್ತು ಶಂಕರಪ್ಪನ ಗುಂಪಿನ ನಡುವೆ ಮಾತಿಗೆ ಮಾತು ಬೆಳೆದು ಹೊಡೆದಾಡಿಕೊಂಡಿದ್ದಾರೆ. ನಡೆದ ಗಲಾಟೆಯಲ್ಲಿ ಬೆತ್ತ ಮತ್ತು ತ್ರಿಶೂಲಗಳನ್ನು ಹಲ್ಲೆಗೆ ಆಯುಧವಾಗಿ ಬಳಸಿಕೊಂಡಿದ್ದು, ವ್ಯಕ್ತಿಯೊಬ್ಬರ ತೊಡೆ ಮೂಳೆ ಮತ್ತು ಇಬ್ಬರ ತಲೆಗೆ ತೀವ್ರ ಪೆಟ್ಟು ಬಿದ್ದಿತ್ತು.

ಪ್ರಸಾದ ಸೇವಿಸಿ 80ಕ್ಕೂ ಹೆಚ್ಚು ಮಂದಿ ಅಸ್ವಸ್ಥ

ಬೆಳಗಾವಿ: ಚಿಕ್ಕೋಡಿ ತಾಲೂಕಿನ ಕೆರೂರು ಗ್ರಾಮದಲ್ಲಿ ನಡೆದ ಜಾತ್ರೆಯಲ್ಲಿ ಪ್ರಸಾದ ಸೇವನೆ ಮಾಡಿ 80ಕ್ಕೂಹೆಚ್ಚು ಮಂದಿ ಅಸ್ವಸ್ಥರಾಗಿರುವ ಘಟನೆ ನಡೆದಿದೆ. ಗ್ರಾಮ ಜಾತ್ರೆಯಲ್ಲಿ ಪ್ರಸಾದ ರೂಪದಲ್ಲಿ ಸಾವಿರಕ್ಕೂ ಹೆಚ್ಚು

ಗ್ರಾಮಸ್ಥರು ಊಟ ಮಾಡಿದ್ದಾರೆ. ಉಳಿದ ಅಡುಗೆಯನ್ನು ರಾತ್ರಿ ಹೊತ್ತಿಗೆ ನೂರಕ್ಕೂ ಹೆಚ್ಚು ಜನರು ಸೇವನೆ ಮಾಡಿದ್ದು, ಈ ಹಲವರಿಗೆ ಗೆ ಫುಡ್ ಪಾಯಿಸನ್ ಆಗಿ 20ಕ್ಕೂ ಹೆಚ್ಚು ಮಂದಿಯಲ್ಲಿ ವಾಂತಿ-ಭೇದಿ ಕಾಣಿಸಿಕೊಂಡಿದೆ.

ಆರೋಗ್ಯದಲ್ಲಿ ಏರುಪೇರಾದಾಗ ಗ್ರಾಮಸ್ಥರು ಚಿಕ್ಕೋಡಿ ಹಾಗೂ ಯಕ್ಸಂಬಾ ಸರಕಾರಿ ಆಸ್ಪತ್ರೆಗಳಿಗೆ ತೆರಳಿ ಚಿಕಿತ್ಸೆ ಪಡೆದಿದ್ದಾರೆ. ಆಸ್ಪತ್ರೆಗೆ ದಾಖಲಾಗಿದ್ದ ಸುಮಾರು 80 ಮಂದಿ ಭಕ್ತರಲ್ಲಿ 60 ಮಂದಿ ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದು, 20 ಮಂದಿಗೆ ಚಿಕಿತ್ಸೆ ಮುಂದುವರೆದಿದೆ ಎಂದು ತಿಳಿದುಬಂದಿದೆ, ಈ ನಡುವೆ ಆರೋಗ್ಯ ಇಲಾಖೆಯ ತಂಡ ಗ್ರಾಮಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆದಿದೆ. ಹೆಚ್ಚುವರಿ ಜಿಲ್ಲಾ ಆರೋಗ್ಯಾಧಿಕಾರಿ ಮಾತನಾಡಿ ಎಲ್ಲಾ ರೋಗಿಗಳು ಸುರಕ್ಷಿತವಾಗಿದ್ದು, ವೈದ್ಯಕೀಯ ಚಿಕಿತ್ಸೆಗೆ ಸಕಾರಾತ್ಮಕವಾಗಿ ಸ್ಪಂದಿಸುತ್ತಿದ್ದಾರೆ ಎಂದು ಹೇಳಿದರು.

ಚುನಾವಣೆ ಪಾವಿತ್ರ್ಯ ನಾಶಕ್ಕೆ ಕಡಿವಾಣ ಹಾಕಿ

ಶಿವಮೊಗ್ಗ: ವಿಧಾನಪರಿಷತ್‌ನ ಪದವೀಧರ ಕ್ಷೇತ್ರದ ಚುನಾವಣೆಯ ಪಾವಿತ್ರ್ಯತೆ ಹಾಳುಮಾಡುತ್ತಿರುವ ದುಷ್ಟ ಪರಂಪರೆಗೆ ಕಡಿವಾಣ ಹಾಕಲೇಬೇಕಿದೆ ಎಂದು ಕಾಂಗ್ರೆಸ್ ಅಭ್ಯರ್ಥಿ ಆಯನೂರು ಮಂಜುನಾಥ್ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಬಿಜೆಪಿಯ ಅಭ್ಯರ್ಥಿ ವಿದ್ಯಾವಂತರ ಮತಗಳನ್ನು ಖರೀದಿಸುತ್ತಿದ್ದಾರೆ. ಹಣ ಮತ್ತು ಹೆಂಡದ ವ್ಯವಸ್ಥೆ ನಿರಂತರವಾಗಿ ಮಾಡುತ್ತಿದ್ದಾರೆ. ವಿದ್ಯಾವಂತರ ಕ್ಷೇತ್ರವನ್ನು ಅಪಕೀರ್ತಿಗೊಳಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಕಳೆದ 40 ವರ್ಷಗಳಿಂದ ನಾನು ಹಲವು ಚುನಾವಣೆಗಳನ್ನು ಮಾಡಿದ್ದೇನೆ. ಆದರೆ, ಈ ಬಾರಿಯ ಚುನಾವಣೆ ಇಷ್ಟೊಂದು ಹೀನವಾಗಿರುವುದು ನಾನು ಕಂಡಿರಲಿಲ್ಲ ಎಂದರು. ವೈದ್ಯಕೀಯ ಕ್ಷೇತ್ರವನ್ನು ಉದ್ಯಮವನ್ನಾಗಿ ಮಾಡುತ್ತೇನೆ ಎಂದು ಬಿಜೆಪಿ ಅಭ್ಯರ್ಥಿ ಕರಪತ್ರದಲ್ಲಿಯೇ ಹಾಕಿಕೊಂಡಿದ್ದಾರೆ. ಇದರ ಹಿಂದಿನ ಸತ್ಯವನ್ನು ಮತದಾರರೇ ಊಹಿಸಬೇಕಾಗುತ್ತದೆ. ಕೊರೊನಾ ಸಂದರ್ಭದಲಿ ಅವರು ಎಂತಹ ಫಲಾನುಭವಿಗಳು ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರ . ನಾನು ಮತಕ್ಕೆ ಮೌಲ್ಯ ಕೊಡುವೆ ಎಂದು ತಿಳಿಸಿದರು.

ಭ್ರೂಣಹತ್ಯೆ ಪ್ರಕರಣದಲ್ಲಿ ಮತ್ತೆ ಇಬ್ಬರ ಬಂಧನ

ಮಹಾಲಿಂಗಪುರ: ಪಟ್ಟಣದಲ್ಲಿ ನಡೆದ ಭ್ರೂಣಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮೃತರಾದ ಸೋನಾಲಿ ಕಮದ್ ಅವರ ತಂದೆ ಸಂಜಯ ಗೌಳಿ ಹಾಗೂ ತಾಯಿ ಸಂಗೀತಾ ಗೌಳಿ ಅವರನ್ನು ಬಂಧಿಸಲಾಗಿದೆ. ಈವರೆಗೆ ಒಟ್ಟು ಐವರ

ಬಂಧನವಾಗಿದೆ.

ಭ್ರೂಣಹತ್ಯೆ ನಡೆಯುತ್ತಿದ್ದ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿದ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಶಶಿಧರ ಕೋಸುಂಬೆ ಸುದ್ದಿಗಾರರ ಜತೆ ಮಾತನಾಡಿ, ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡು, ಮೂರು ದಿನಗಳಲ್ಲಿ ಅಧಿಕಾರಿಗಳಿಂದ ವರದಿ ತರಿಸಿಕೊಳ್ಳಲಾಗುವುದು. ತಪ್ಪಿತಸ್ಥರ ವಿರುದ್ಧ ಕ್ರಮಕ್ಕೆ ಶಿಫಾರಸು ಮಾಡಲಾಗುವುದು' ಎಂದರು. ಭ್ರೂಣ ಹತ್ಯೆಯು ವ್ಯವಸ್ಥಿತ ಯೋಜನಾಬದ್ಧ ಹೇಯ ಕೃತ್ಯ. 2019 ಮತ್ತು 2022ರಲ್ಲಿ ಇಲ್ಲಿ ಭ್ರೂಣಹತ್ಯೆ ನಡೆದಿದ್ದು ಬೆಳಕಿಗೆ ಬಂದಿತ್ತು. ಮತ್ತೆ ನಡೆದಿರುವುದಕ್ಕೆ ಅಧಿಕಾರಿಗಳ ಸಹಕಾರ ಇರುವುದರ ಬಗ್ಗೆ ಅನುಮಾನವಿದೆ. ಇಂತಹ ಪ್ರಕರಣದಲ್ಲಿ ತ್ವರಿತಗತಿಯಲ್ಲಿ ಶಿಕ್ಷೆ ಕೊಡಿಸುವ ನಿಟ್ಟಿನಲ್ಲಿ ಸರಕಾರದ ಮಟ್ಟದಲ್ಲಿ ಪತ್ರ ವ್ಯವಹಾರವನ್ನು ಮಾಡಲು ಆಯೋಗ ಸಿದ್ಧವಿದೆ ಎಂದರು.

ಪುರಸಭೆ ಕಾರ್ಯಾಲಯ, ಸವಣೂರ.
ಶಿಗ್ಗಾಂವ ರಸ್ತೆ, ಸವಣೂರ–581118, ಜಿ। ಹಾವೇರಿ ದೂ: 08378 241623
http://savanurtown.mrc.gov.in Email- itstaff_ulb_savanur@yahoo.co.in
ಕ್ರಸಂ/ಪುಸಸ/ತಾವಿ/15ನೇಹ/ಟೆಪ್ರ/ವಹಿ/2024–25 ದಿನಾಂಕ:–01–06–2024
(ಇ–ಪ್ರೊಕ್ಯೂರಮೆಂಟ್ ಮೂಲಕ ಅಲ್ಪಾವಧಿ ಟೆಂಡರ್ ಪ್ರಕಟಣೆ)
ಸನ್ 2022–23ನೇ ಸಾಲಿನ 15ನೇ ಹಣಕಾಸು ಯೋಜನೆಯ ನಿರ್ಬಂಧಿತ ಹಾಗೂ ಮುಕ್ತ ಅನುದಾನದ ಉಳಿತಾಯ ಮೊತ್ತದಲ್ಲಿ ಹಾಗೂ ಸನ್ 2023–24ನೇ ಸಾಲಿನ ಎಸ್.ಎಫ್.ಸಿ. ಕುಡಿಯುವ ನೀರಿನ ಯೋಜನೆಯಡಿ ಕುಡಿಯುವ ನೀರಿನ ಸಮಸ್ಯೆ ಪರಿಹರಿಸಲು 2, 3 & 4ನೇ ಕಂತುಗಳ ಅನುದಾನದಲ್ಲಿ ಒಟ್ಟು 05 ಕಾಮಗಾರಿಗಳನ್ನು ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದ್ಯಾದೇಶ 2000 ಪ್ರಕಾರ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಐಟಂವಾರ ಟೆಂಡರಗಳನ್ನು ಇ–ಪ್ರೋಕ್ಯೂರ್‌ಮೆಂಟ್ ಮುಖಾಂತರ ಕರ್ನಾಟಕ ಸ್ಟ್ಯಾಂಡರ್ಡ ಟೆಂಡರ ಡಾಕ್ಯುಮೆಂಟ್ಸ್ **KW-1** ರಂತೆ ಆಹ್ವಾನಿಸಲಾಗಿದೆ. ಇ–ಪ್ರೋಕ್ಯೂರ್‌ಮೆಂಟ್ ಟೆಂಡರನಲ್ಲಿ ಬಾಗವಹಿಸಲು ಇಚ್ಛಿಸುವ ಗುತ್ತಿಗೆದಾರರು ಕಾಮಗಾರಿಗಳ ವಿವರ, ಇ.ಎಂ.ಡಿ. ಟೆಂಡರ್ ಫಾರ್ಮ ಫೀ ಮತ್ತು ಗುತ್ತಿಗೆದಾರರ ದರ್ಜೆಗಳ ಬಗ್ಗೆ ಹಾಗೂ ಇತರೆ ಯಾವುದೇ ಹೆಚ್ಚಿನ ಮಾಹಿತಿ ಬೇಕಾದಲ್ಲಿ **https://kppp.karnataka.gov.in** ನ ಇ–ಪ್ರೋಕ್ಯೂರ್‌ಮೆಂಟ್ ವೆಬ್‌ಸೈಟ್‌ನಲ್ಲಿ ತಿಳಿದುಕೊಳ್ಳಬಹುದು ಹಾಗೂ ಕಛೇರಿ ವೇಳೆಯಲ್ಲಿ ಪುರಸಭೆಯ ತಾಂತ್ರಿಕ ವಿಭಾಗದಲ್ಲಿ ಕೇಳಿ ತಿಳಿದುಕೊಳ್ಳಬಹುದು ಟೆಂಡರಗಳ ವಿವರಗಳು ಈ ಕೆಳಗಿನಂತಿವೆ.
ಕಾಮಗಾರಿಗಳ ವಿವರ:
1) **INDENT18022 – 1.12** ಲಕ್ಷಗಳು,
2) **INDENT18025 – 6.50** ಲಕ್ಷಗಳು,
3) **INDENT18026 –5.13** ಲಕ್ಷಗಳು.
ಪರಿಶಿಷ್ಟ ಜಾತಿ ಗುತ್ತಿಗೆದಾರರಿಗೆ ಮಿಸಲಿಟ್ಟ ಕಾಮಗಾರಿ:
4) **INDENT18024 – 2.00** ಲಕ್ಷಗಳು.
ಪರಿಶಿಷ್ಟ ಪಂಗಡ ಗುತ್ತಿಗೆದಾರರಿಗೆ ಮಿಸಲಿಟ್ಟ ಕಾಮಗಾರಿ:
5) **INDENT18023**–1.00 ಲಕ್ಷಗಳು.
1) ಇ–ಪ್ರೋಕ್ಯೂರ್‌ಮೆಂಟ್ ಮುಖಾಂತರ ಆನಲೈನ್‌ನಲ್ಲಿ ಅರ್ಜಿ ಸಲ್ಲಿಸಿ ದರವಾರು ಸಲ್ಲಿಸಲು ಕೊನೆಯ ದಿನಾಂಕ: 10–06–2024 ಸಂಜೆ 4.00 ಘಂಟೆವರೆಗೆ.
2) ಇ–ಪ್ರೋಕ್ಯೂರ್‌ಮೆಂಟ್ ಮುಖಾಂತರ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 11–06–2024 ಸಂಜೆ 5.00 ಘಂಟೆ ನಂತರ ಆನಲೈನ್ ಮೂಲಕ.
ಸಹಿ/– ಮುಖ್ಯಾಧಿಕಾರಿಗಳು ಪುರಸಭೆ ಸವಣೂರ
ಸಹಿ/– ಆಡಳಿತಾಧಿಕಾರಿಗಳು ಪುರಸಭೆ ಸವಣೂರ

ಲೋಕಾಯುಕ್ತ ದಾಳಿ; ಪುರಸಭೆ ಸಿಬ್ಬಂದಿ ಬಂಧನ

ಬಾದಾಮಿ: ಲಂಚ ಪಡೆಯುತ್ತಿದ್ದ ಇಲ್ಲಿನ ಪುರಸಭೆ ಬಿಲ್ ಕಲೆಕ್ಟರ್ ಲಕ್ಷ್ಮಣ ಶಿಕ್ಕಲಗಾರ ಎಂಬಾತನನ್ನು ಬಾಗಲಕೋಟೆ ಲೋಕಾಯುಕ್ತ ಅಧಿಕಾರಿಗಳು ಶನಿವಾರ ಬಂಧಿಸಿದ್ದಾರೆ. ಪ್ರಸನ್ನ ಹಕ್ಕಾಪಕ್ಕಿ ಎಂಬುವರಿಗೆ ಪ್ಲಾಟ್ ಉತಾರ ಕೊಡಲು ಲಕ್ಷ್ಮಣ 3,000 ಲಂಚ ಕೇಳಿದ್ದರು. ಈ ಕುರಿತು ಪ್ರಸನ್ನ ಅವರು ಲೋಕಾಯುಕ್ತ ಕಚೇರಿಗೆ ದೂರು ನೀಡಿದ್ದರು. ಶನಿವಾರ ಲಂಚ ಪಡೆಯುತ್ತಿದ್ದ ವೇಳೆ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿದರು. ಬಾಗಲಕೋಟೆ ಲೋಕಾಯುಕ್ತ ಅಧೀಕ್ಷಕ ಸತೀಶ ಚಿಟಗುಬ್ಬಿ ಮಾರ್ಗದರ್ಶನದಲ್ಲಿ ಉಪ ಅಧೀಕ್ಷಕ ಸಿದ್ದೇಶ್ವರ ಮತ್ತು ಇನ್ಸ್‌ಪೆಕ್ಟರ್ ಎಂ.ಎಚ್. ಬಿದರಿ ಕಾರ್ಯಾಚಾರಣೆಯಲ್ಲಿ ಪಾಲ್ಗೊಂಡಿದ್ದರು.

ಒಬಿಸಿಗೆ ಮಣೆ, ಮಾ ನಾಗರಾಜ್, ಸುಮಲತಾ, ರವಿಕುಮಾರ್‌ಗೆ ವರಿಷ್ಠರ ಕೃಪೆ

ಪರಿಷತ್ ಟಿಕೆಟ್: ಬಿಜೆಪಿಯಲ್ಲಿ ಅಯೋಮಯ !

ಶಿವಕುಮಾರ್ ಬೆಳ್ಳಿತಟ್ಟೆ ಬೆಂಗಳೂರು

ವಿಧಾನಸಭೆಯಿಂದ ವಿಧಾನಪರಿಷತ್ತಿಗೆ ನಡೆಯುವ ಚುನಾವಣೆಗೆ ಮೂವರು ಅಭ್ಯರ್ಥಿಗಳ ಆಯ್ಕೆ ವಿಚಾರ ಬಿಜೆಪಿಯಲ್ಲಿ ಭಾರೀ ಕುತೂಹಲ ಸೃಷ್ಟಿಸಿದೆ.

ಯಾರನ್ನು ಕಣಕ್ಕಿಳಿಸಬಹುದು. ಯಾರಿಗೆಲ್ಲಾ ಅವಕಾಶ ನೀಡಬಹುದು ಎಂದು ಪಕ್ಷದ ರಾಜ್ಯ ನಾಯಕರು ದೆಹಲಿಯಲ್ಲಿರುವ ಹೈಕಮಾಂಡ್ ಗೆ ಶಿಫಾರಸು ಮಾಡಿದ್ದಾರೆ. ಆದರೆ ಅಲ್ಲಿಂದ ಯಾವ ಅಭ್ಯರ್ಥಿ ಹೆಸರು ಅಖೈರಾಗಿ ಬರಲಿದೆ ಎನ್ನುವುದು ಕುತೂಹಲ ಕೆರಳಿಸಿದೆ. ಅದು ಎಷ್ಟರ ಮಟ್ಟಿಗೆ ಎಂದರೆ ಪಕ್ಷದ ರಾಜ್ಯಾಧ್ಯಕ್ಷರಿಗೇ ಇದರ ಬಗ್ಗೆ ನಿಖರತೆ ಇದ್ದಂತೆ ಇಲ್ಲ ಎನ್ನಲಾಗಿದೆ. ಏಕೆಂದರೆ, ಇತಿಹಾಸಗಳನ್ನು ಗಮನಿಸಿದರೆ, ರಾಜ್ಯ ನಾಯಕರು ಮುಖಂಡರ ಹೆಸರು ಶಿಫಾರಸು ಮಾಡಿದರೆ, ಕೇಂದ್ರದಿಂದ ಅಚ್ಚರಿಯ ಅಭ್ಯರ್ಥಿಗಳ ಪಟ್ಟಿ ಬರುತ್ತಿತ್ತು. ಹೀಗಾಗಿ ಪರಿಷತ್ ಚುನಾವಣೆಗೆ ಬಿಜೆಪಿಯಿಂದ ಯಾರೆಲ್ಲಾ ಅಭ್ಯರ್ಥಿಯಾಗುತ್ತಾರೆ ಎನ್ನುವುದು ಪಕ್ಷದೊಳಗೆ ಬರೀ ಗೊಂದಲ ಮಾತ್ರವಲ್ಲ, ಆಯೋಮಯ ಎನ್ನುವ ವಾತಾವರಣ ಸೃಷ್ಟಿಸಿದೆ.

ಇಷ್ಟಾದರೂ ಅನೇಕರ ಹೆಸರುಗಳು ಒಪ್ಪಿಗೆಯಾಗುವ ಸಾಧ್ಯತೆ ಇದೆ ಎಂದು ಹೇಳಲಾಗುತ್ತಿದ್ದು, ಇತ್ತೀಚೆಗೆ ಬಿಜೆಪಿ ಸೇರಿದ ಸುಮಲತಾ ಅಂಬರೀಷ್, ಬಿಜೆಪಿ ಉಪಾಧ್ಯಕ್ಷ ಮೈಸೂರಿನ ರಾಜೇಂದ್ರ ಅರಸ್, ಕೆಪಿಎಸ್‌ಸಿ ಮಾಜಿ ಸದಸ್ಯರೂ ಆಗಿರುವ ಪಕ್ಷದ ಮಾಜಿ ಉಪಾಧ್ಯಕ್ಷ ನಾಗರಾಜ್ ಹಾಗೂ ಪರಿಷತ್ ಮುಖ್ಯ ಸಚೇತಕ ರವಿಕುಮಾರ್ ಅವರ ಹೆಸರು ಮಂಚೂಣಿಯಲ್ಲಿದೆ. ಇವರಲ್ಲಿ ಎಲ್ಲರೂ ಹಿಂದುಳಿದ ವರ್ಗಗಳಿಗೆ ಸೇರಿದವರಾಗಿದ್ದು, ಅವರಲ್ಲಿ ಸುಮಾಲತಾ ಹಾಗೂ ನಾಗರಾಜ್ ಅವರ ಆಯ್ಕೆ ಸಾಧ್ಯತೆ ಹೆಚ್ಚಾಗಿದ್ದು, ಉಳಿದವರ ಆಯ್ಕೆ ಬಗ್ಗೆ ಯಾರಿಗೂ ಸ್ಪಷ್ಟತೆ ಇಲ್ಲ ಎಂದು ತಿಳಿದುಬಂದಿದೆ. ಆದರೆ ನಾಮಪತ್ರ ಸಲ್ಲಿಸಲು ಸೋಮವಾರ ಮಧ್ಯಾಹ್ನ 3 ಗಂಟೆ ಕೊನೆಯಾಗಿದ್ದು, ಭಾನುವಾರ ಸಂಜೆ ವೇಳೆಗೆ ಅಭ್ಯರ್ಥಿಗಳ ಪಟ್ಟಿ ಅಖೈರುಗೊಂಡು ಬೆಂಗಳೂರು ಬಿಜೆಪಿ ಕಚೇರಿ ತಲುಪಲಿದೆ ಎಂದು ಪಕ್ಷದ ಉನ್ನತ ಮೂಲಗಳು ತಿಳಿಸಿವೆ.

ಸುಮಲತಾಗೆ ಒಳೇಟಿನ ಭೀತಿ

ಟಿಕೆಟ್ ಸಾಧ್ಯತೆ ಇರುವವರ ಪೈಕಿ ಸುಮಲತಾ ಮೊದಲಿಗರಾಗಿದ್ದಾರೆ. ಮಂಡ್ಯ ಲೋಕಸಭೆಯಿಂದ ಸ್ಪರ್ಧಿಸುವ ಸಲುವಾಗಿ ಬಿಜೆಪಿ ಸೇರಿದ್ದರು. ಆದರೆ ಬಿಜೆಪಿ-ಜೆಡಿಎಸ್ ದೋಸ್ತಿ ಪರಿಣಾಮ ಆ ಕ್ಷೇತ್ರದ ಸ್ಪರ್ಧೆಯಿಂದ ಹಿಂದೆ ಸರಿದು ಜೆಡಿಎಸ್ ನ ಕುಮಾರಸ್ವಾಮಿ ಅವರಿಗೆ ಬಿಟ್ಟುಕೊಟ್ಟಿದ್ದರು. ಹೀಗಾಗಿ ಅವರಿಗೆ ಅವಕಾಶ ನೀಡಲು ಟಿಕೆಟ್ ನೀಡುವ ಸಾಧ್ಯತೆ ಹೆಚ್ಚಾಗಿದೆ. ಆದರೆ ಚುನಾವಣೆಯಲ್ಲಿ ಅವರು ಜೆಡಿಎಸ್ ಪರ ಪ್ರಚಾರ ಮಾಡದ ಕಾರಣ ಕುಮಾರಸ್ವಾಮಿ ಅವರೇನಾದರೂ ಮುನಿದರೆ ಟಿಕೆಟ್ ಕೈ ತಪ್ಪಬಹುದು ಎಂದು ಹೇಳಲಾಗಿದೆ.

13ಕ್ಕೆ ಮತ್ತೆ ಚುನಾವಣೆ

ಪರಿಷತ್ತಿನ 11 ಸದಸ್ಯರು ಜೂನ್ 17ರಂದು ನಿವೃತ್ತಿಯಾಗುತ್ತಿದ್ದು, ಇವರಲ್ಲಿ 7 ಮಂದಿ ಬಿಜೆಪಿ ಸದಸ್ಯರು, 3 ಕಾಂಗ್ರೆಸ್ ಹಾಗೂ 1 ಜೆಡಿಎಸ್ ಸದಸ್ಯರಿದ್ದಾರೆ. ಆದರೆ ಪ್ರಸ್ತುತ ಇರುವ ಶಾಸಕ ಬಲದ ಆಧಾರದ ಮೇಲೆ ಬಿಜೆಪಿ 3 ಸದಸ್ಯರನ್ನು ಆಯ್ಕೆ ಮಾಡಿ ಮೇಲ್ಮನೆಗೆ ಕಳುಹಿಸಬಹುದಾಗಿದೆ. ಆ 3 ಸ್ಥಾನಗಳಿಗೆ ಯಾರನ್ನು ಆಯ್ಕೆ ಮಾಡಬೇಕೆನ್ನುವುದೇ ಪಕ್ಷದ ಮುಂದಿರುವ ದೊಡ್ಡ ಸವಾಲು. ಹೀಗಾಗಿ ಲೋಕಸಭೆ ಬೆನ್ನಲ್ಲೇ ರಾಜ್ಯದಲ್ಲಿ ಜೂನ್ 13ರಂದು ವಿಧಾನಸಭೆಯಿಂದ ಪರಿಷತ್ತಿಗೆ ಚುನಾವಣೆ ನಡೆಯಲಿದೆ. ಅಂದೇ ಫಲಿತಾಂಶವೂ ಪ್ರಕಟವಾಗಲಿದೆ.

ಯಾರಿಗೆ ಟಿಕೆಟ್, ಯಾರ ಕೃಪೆ

ಹೊಸ ಆಕಾಂಕ್ಷಿಗಳ ಪೈಕಿ ಮೈಸೂರಿನ ರಾಜೇಂದ್ರ ಅವರ ಹೆಸರು ರಾಜ್ಯದಿಂದ ಶಿಫಾರಸ್ಸಾಗಿದೆ. ಅರಸು ಸಮುದಾಯಕ್ಕೆ ಸೇರಿದ ಇವರು ಮೈಸೂರಿನಲ್ಲಿ ಪಕ್ಷದ ಕಚೇರಿಗೆ ಸಾಕಷ್ಟು ಕಾಣಿಕೆ ಸಲ್ಲಿಸಿದ್ದಾರೆಯಲ್ಲದೆ, ಪಕ್ಷದ ರಾಜ್ಯಾಧ್ಯಕ್ಷರಿಗೂ ಆಪ್ತರು ಎನ್ನಲಾಗಿದೆ. ಆದರೆ ಇವರನ್ನು ದಿಲ್ಲಿ ನಾಯಕರು ಎಷ್ಟರ ಮಟ್ಟಿಗೆ ಒಪ್ಪಿಕೊಳ್ಳುತ್ತಾರೆ ಎಂದು ಹೇಳಲಾಗದು. ಇನ್ನು ಕೆಪಿಎಸ್ ಸಿ ಮಾಜಿ ಸದಸ್ಯರಾದ ನಾಗರಾಜ್, ಕುರುಬ ಸಮಾಜಕ್ಕೆ ಸೇರಿದವರಾಗಿದ್ದು ಇವರಿಗೆ ಪಕ್ಷದ ದಿಲ್ಲಿ ನಾಯಕ ಸಂತೋಷ್ ಅವರ ಕೃಪೆ ಇದೆ ಎನ್ನಲಾಗಿದೆ. ಹೀಗಾಗಿ ಇವರಿಗೆ ಟಿಕೆಟ್ ಲಭಿಸುವ ಸಾಧ್ಯತೆ ಹೆಚ್ಚಾಗಿದೆ ಎಂದು ಹೇಳಲಾಗಿದೆ. ಇವರ ಆಯ್ಕೆ ಮೂಲಕ ಹೊರ ಹೋಗಿರುವ ಈಶ್ವರಪ್ಪ ಹಾಗೂ ಪರಿಷತ್ ನಿಂದ ನಿವೃತ್ತಿಯಾಗಿರುವ ವಿಧಾನಪರಿಷತ್ ಸದಸ್ಯ ರುಘುನಾಥ್ ರಾವ್ ಮಲ್ಕಾಪುರೆ ಅವರ ಬದಲಿಗೆ ಅವಕಾಶ ನೀಡುವ ಉದ್ದೇಶವಿದೆ ಎಂದು ಹೇಳಲಾಗಿದೆ. ಉಳಿದಂತೆ ರವಿಕುಮಾರ್ ಅವರ ಪುನಾರಾಯ್ಕೆಗೆ ರಾಜ್ಯ ನಾಯಕರು ಅಸಕ್ತಿ ಅಷ್ಟಾಗಿ ತೋರಿಸದಿದ್ದರೂ ಇವರ ಬೆನ್ನಿಗೆ ಆರ್‌ಎಸ್‌ಎಸ್ ನಾಯಕರಿದ್ದು, ಇವರ ಒತ್ತಡದ ತೀವ್ರತೆ ರವಿಕುಮಾರ್ ಟಿಕೆಟ್ ನಿರ್ಧರಿಸಲಿದೆ ಎಂದು ಹೇಳಲಾಗಿದೆ. ಇದರ ಮಧ್ಯೆ, ಸಿ.ಟಿ.ರವಿ ಆಗಲಿ, ಲೋಕಸಭೆ ಟಿಕೆಟ್ ಕೈ ತಪ್ಪಿದೆ ಆಕಾಂಕ್ಷಿಗಳಾಗಲಿ ದಿಲ್ಲಿ ನಾಯಕರ ಪಟ್ಟಿಯಲ್ಲಿ ಇರುವ ಸಾಧ್ಯತೆ ತುಂಬಾ ಕಡಿಮೆ ಎನ್ನಲಾಗಿದೆ.

ಪುರಸಭೆ ಕಾರ್ಯಾಲಯ ಸೇಡಂ
ಸ್ಟೇಟ್ ಬ್ಯಾಂಕ್ ಇಂಡಿಯಾ ಸಮೀಪ, ಸೇಡಂ–585222, ಜಿ. ಕಲಬುರಗಿ
WebSite: www.sedamtown.mrc.gov.in Phone: 08441-277912-276932
NO:TMC-SEDAM/SFC-15thFC/23-24 Date: 31.05.2024
:: ಅಲ್ಪಾವಧಿ ಟೆಂಡರ ಪ್ರಕಟಣೆ ::
ಮುಖ್ಯಾಧಿಕಾರಿಗಳು ಪುರಸಭೆ ಸೇಡಂ ಇವರಿಂದ SFC CAP 7.25%, 15th FC Savings, 15th FC For The Year 2023-24, ಅನುದಾನದಡಿಯಲ್ಲಿ ವಿವಿದ ಅಭಿವೃದ್ಧಿ ಕಾಮಗಾರಿಗಳು ಟೆಂಡರ ಕರ್ನಾಟಕ ಪಾರದರ್ಶಕ ನಿಯಮದಂತೆ (ಕೆ.ಟಿ.ಪಿ.ಪಿ–2000) ರನ್ವಯ ಟೆಂಡರ ಕರೆಯಲಾಗಿದ್ದು, ಜಿ.ಎಸ್.ಟಿ ನೊಂದಾಯಿತ ನವಿಕರಿಸಿದ ಆಸಕ್ತಿಯುಳ್ಳ ನೊಂದಾಯಿತ ಅರ್ಹ ಗುತ್ತಿಗೆದಾರರು ತಮ್ಮ ಮೂಲ ಪ್ರಮಾಣ ಪತ್ರದ ಪ್ರತಿ ಹಾಗೂ ಇತರೆ ಸೂಕ್ತ ದಾಖಲಾತಿಗಳೊಂದಿಗೆ http://kppp.karnataka.gov.in ಅನ್‌ಲೈನ್‌ನಲ್ಲಿ ಸಲ್ಲಿಸಲು ಕೊನೆಯ ದಿನಾಂಕ: **17.06.2024** ರ (ಪ್ರತಿ ಟೆಂಡರಗೆ ಇ–ಪ್ರೊಕ್ಯೂರಮೆಂಟ್ ಪೋರ್ಟಲನಲ್ಲಿ ನಿಗದಿಪಡಿಸಿದ ಸಮಯದೊಳಗಾಗಿ ಟೆಂಡರ ಅರ್ಜಿ ಸಲ್ಲಿಸತಕ್ಕದ್ದು)
01) ಕಾಮಗಾರಿ/ಸರಕು/ಸೇವೆಯ ವಿವರ: 1. DMA/2023-24/OW/WORK_INDENT9379/CALL-3 Others, 2. DMA/2023-24/RD/WORK_INDENT8746/CALL-3 Others, 3. DMA/2023-24/OW/WORK_INDENT4553/CALL-2 Others, 4. DMA/2023-24/OW/WORK_INDENT14422/CALL-2 Others, 5. DMA/2023-24/OW/WORK_INDENT14421/CALL-2 Others, 6. DMA/2023-24/OW/WORK_INDENT14001/CALL-2 Others, 7. DMA/2023-24/OW/WORK_INDENT4540/CALL-4 Others, 8. DMA/2024-25/WS/WORK_INDENT17876 Others, 9. DMA/2024-25/WS/WORK_INDENT17877-Others, 10. DMA/2023-24/WS/WORK_INDENT16555/CALL-2 Others, 11. DMA/2023-24/EL/WORK_INDENT16570 Others, 12. DMA/2023-24/TB/WORK_INDENT14002/CALL-2 SC-Category, 13. DMA/2023-24/OW/WORK_INDENT13647/CALL-2 SC-Category, 14. DMA/2023-24/OW/WORK_INDENT13646/CALL-2 SC-Category, 15. DMA/2023-24/WS/WORK_INDENT16557/CALL-2 SC-Category, 16. DMA/2024-25/OW/WORK_INDENT17108 Others
02) ಅನುದಾನದ ವಿವರ: SFC CAP 7.25%, 15th FC Savings, 15th FC For The Year 2023-24, 03) ಕಾಮಗಾರಿ/ಸರಕು/ಸೇವೆಯ ಅಂದಾಜು ಮೊತ್ತ: **ಕನಿಷ್ಠ ರೂ. 0.53 ಲಕ್ಷ ರಿಂದ ರೂ. 79.00 ಲಕ್ಷ** 04) ಗುತ್ತಿಗೆದಾರರ/ಉತ್ಪಾದಕರು/ಅಧಿಕೃತ ಸರಬರಾಜುದಾರರ ಅರ್ಹತೆ ವಿವರ : ನೊಂದಾಯಿತ ಅರ್ಹ ಗುತ್ತಿಗೆದಾರರು, 05) ಕಾಮಗಾರಿ/ಸರಕು/ಸೇವೆಯ ಟೆಂಡರ ಮೊತ್ತದ ವಿವರ: **ಕನಿಷ್ಠ ರೂ. 0.53 ಲಕ್ಷ ರಿಂದ ರೂ. 79.00 ಲಕ್ಷ,** 06) ಟೆಂಡರ ಫಾರಂಗಾಗಿ ಆನ್‌ಲೈನ್ ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: **17.06.2024 ಸಾಯಂಕಾಲ 17.00 ಗಂಟೆಗೆ,** 07) ಟೆಂಡರ ತೆರೆಯುವ ದಿನಾಂಕ: ತಾಂತ್ರಿಕ ಬಿಡ್ **19.06.2024 ಬೆಳಗ್ಗೆ 11.00 ಗಂಟೆಗೆ,** ಆರ್ಥಿಕ ಬಿಡ್ : **21.06.2024 ಬೆಳಗ್ಗೆ 11.00 ಗಂಟೆಗೆ,** 08) ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ವಿಳಾಸ, ಕಛೇರಿಯ ವಿಳಾಸ, ದೂರವಾಣಿ ಸಂಖ್ಯೆ: ಪುರಸಭೆ ಕಾರ್ಯಾಲಯ ಸೇಡಂ– **9611688976**
ಸಹಿ/– ಮುಖ್ಯಾಧಿಕಾರಿ ಪುರಸಭೆ ಸೇಡಂ
ವಾ.ಸಾ.ಸಂ.ಇ/ಕಲಬುರಗಿ/44/ಕೆ.ಎಸ್.ಎಂ.ಸಿ.&ಎ/2024–25

... ಇನ್ನೊಂದೇ ದಿನ ಬಾಕಿ

← ಮೊದಲಪುಟದಿಂದ

ಭಾನುವಾರ ಮಧ್ಯಾಹ್ನದ ವೇಳೆಗೆ ಬಿಜೆಪಿ ಅಭ್ಯರ್ಥಿಗಳ ಪಟ್ಟಿ ಪ್ರಕಟಿಸುವ ಸಾಧ್ಯತೆಯಿದ್ದು, ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ ಬಳಿಕ ಅಭ್ಯರ್ಥಿಗಳನ್ನು ಬಹಿರಂಗಪಡಿಸಲಿದೆ. ಇನ್ನು ಜೆಡಿಎಸ್ ಸೋಮವಾರ ಬೆಳಗ್ಗೆ ನಡೆಯುವ ಶಾಸಕಾಂಗ ಪಕ್ಷದ ಸಭೆಯ ಬಳಿಕ ಹೆಸರು ಪ್ರಕಟಿಸಲಿದೆ ಎನ್ನಲಾಗಿದೆ.

ಬಿಜೆಪಿಯ ಮೂವರು ಬಹುತೇಕ ಖಚಿತ: ಬಿಜೆಪಿ ಪಾಲಿಗಿರುವ ಮೂರು ಸ್ಥಾನಗಳಿಗೆ 30ಕ್ಕೂ ಹೆಚ್ಚು ಆಕಾಂಕ್ಷಿಗಳಿದ್ದಾರೆ. ಅದ ರಲ್ಲಿ ಸೋತಿರುವ, ಅಸಮಾಧಾನಿತ ನಾಯಕರ ಸಂಖ್ಯೆಯೇ ಹೆಚ್ಚಾಗಿರುವು ದರಿಂದ ಯಾರಿಗೆ ಟಿಕೆಟ್ ಸಿಗಲಿದೆ ಎನ್ನುವ ಕುತೂಹಲ ಅನೇಕರಲ್ಲಿದೆ. ರಾಜ್ಯ ಬಿಜೆಪಿಯಿಂದ ಶಿಫಾರಸ್ಸಾಗಿರುವ ಪಟ್ಟಿಯನ್ನು ಮೀರಿ, ಸಂಸದೆ ಸುಮಲತಾ ಅಂಬರೀಶ್, ರವಿಕುಮಾರ್ ಹಾಗೂ ಮಾ.ನಾಗರಾಜ್ ಅವರಿಗೆ ಟಿಕೆಟ್ ಸಿಗುವುದು ಬಹುತೇಕ ಖಚಿತ ಎಂದು ಮೂಲಗಳು ತಿಳಿಸಿವೆ.

ನಾಳೆ ಜೆಡಿಎಸ್ ಶಾಸಕಾಂಗ ಸಭೆ

ಜೆಡಿಎಸ್‌ನ ಏಕೈಕ ಸ್ಥಾನಕ್ಕೆ ಯಾರನ್ನು ಆಯ್ಕೆ ಮಾಡಬೇಕು ಎನ್ನುವ ಬಗ್ಗೆ ಚರ್ಚಿಸಲು ಸೋಮವಾರ ಜೆಡಿಎಸ್ ಶಾಸಕಾಂಗ ಪಕ್ಷದ ಸಭೆ ಕರೆಯಲು ತೀರ್ಮಾನಿಸಲಾಗಿದೆ. ವಿಧಾನಸೌಧದಲ್ಲಿರುವ ಪಕ್ಷದ ಕಚೇರಿಯಲ್ಲಿ ಸೋಮವಾರ ಬೆಳಗ್ಗೆ 10.30ಕ್ಕೆ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ, ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ನೇತೃತ್ವದಲ್ಲಿ ಈ ಸಭೆ ಜರುಗಲಿದೆ. ನಾಮಪತ್ರ ಸಲ್ಲಿಸಲು ಸೋಮವಾರವೇ ಕೊನೆಯ ದಿನವಾಗಿರುವುದರಿಂದ, ಶಾಸಕಾಂಗ ಪಕ್ಷದ ಸದಸ್ಯರ ಅಭಿಪ್ರಾಯ ಹಾಗೂ ಒಪ್ಪಿಗೆ ಪಡೆದು ಪ್ರಕಟಿಸಲು ಜೆಡಿಎಸ್ ಈ ನಡೆ ಅನುಸರಿಸುತ್ತಿದೆ ಎಂದು ಮೂಲಗಳು ತಿಳಿಸಿವೆ. ಮೂರು ಬಾರಿ ವಿಧಾನಸಭಾ ಚುನಾವಣೆಯಲ್ಲಿ ಸೋಲನುಭವಿಸಿರುವ ಯಶವಂತಪುರ ಕ್ಷೇತ್ರದ ಟಿ.ಎನ್.ಜವರಾಯಿಗೌಡ ಅವರು ಅಭ್ಯರ್ಥಿಯಾಗುವುದು ಬಹುತೇಕ ನಿಶ್ಚಿತವಾಗಿದ್ದು, ಪಕ್ಷದ ಅಭ್ಯರ್ಥಿ ನಾಮಪತ್ರ ಸಲ್ಲಿಸುವ ವೇಳೆ ನಾಯಕರು ಹಾಗೂ ಶಾಸಕರು ಉಪಸ್ಥಿತರಿರಲಿದ್ದಾರೆ. ಅಭ್ಯರ್ಥಿಯ ನಾಮಪತ್ರಕ್ಕೆ ಸೂಚಕರಾಗಿ ಶಾಸಕರು ಸಹಿ ಹಾಕಬೇಕಾಗಿರುವುದರಿಂದ ಶಾಸಕಾಂಗ ಪಕ್ಷದ ಸಭೆ ಕರೆಯಲಾಗಿದೆ. ಒಂದು ವೇಳೆ ಕಾಂಗ್ರೆಸ್ ಹೆಚ್ಚುವರಿ ಅಭ್ಯರ್ಥಿಯನ್ನು ಕಣಕ್ಕಿಳಿಸಿದರೆ, ಮತದಾನ ನಡೆಯಬೇಕಾಗುತ್ತದೆ. ಆ ಹಂತದಲ್ಲಿ ಮೈತ್ರಿ ಪಕ್ಷ ಬಿಜೆಪಿಯ ಸಹಾಯ ಹಾಗೂ ಇನ್ನುಳಿದ ವಿಷಯಗಳ ಬಗ್ಗೆ ಚರ್ಚೆ ನಡೆಯುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಜಮಖಂಡಿ
ಸಂಖ್ಯೆ:ಕೃ.ಉ.ಮಾ.ಸ.(ಜ):ಅಭಿವೃದ್ಧಿ/58/2024–25 ದಿನಾಂಕ: 31–05–2024
: ಅಲ್ಪಾವಧಿ ಸಂಕ್ಷಿಪ್ತ ಇ–ಟೆಂಡರ ಪ್ರಕಟಣೆ 2 ನೇ ಕರೆ :
RIDF-29ರ ಯೋಜನೆಯಡಿಯಲ್ಲಿ ಮಂಜೂರಾದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಜಮಖಂಡಿಯ ಉಪ ಮಾರುಕಟ್ಟೆ ಸಾವಳಗಿ ಪ್ರಾಂಗಣದಲ್ಲಿ ಕಂಪೌಂಡಗೋಡೆ ನಿರ್ಮಾಣದ ಕಾಮಗಾರಿಯನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಕಾಯ್ದೆ 1999 & ನಿಯಮ–2000 ಹಾಗೂ ತತ್ಸಂಬಂಧವಾಗಿ ಹೊರಡಿಸಿರುವ ಸರ್ಕಾರದ ಆದೇಶ ಸುತ್ತೋಲೆಗಳಂತೆ ಇ–ಟೆಂಡರ್ ವೆಬ್‌ಸೈಟ್ http://Kppp.karnataka.gov.in ರಲ್ಲಿ ಸ್ಪರ್ಧಾತ್ಮಕ ಐಟಂವಾರು ಟೆಂಡರಗಳನ್ನು Standard Tender Documents KW-3 (with Latest amendments) ಷರತ್ತುಗಳನ್ವಯ ದ್ವಿ–ಲಕೋಟೆ ಪದ್ಧತಿಯಂತೆ ಟೆಂಡರ ಆಹ್ವಾನಿಸಲಾಗಿದೆ.

ಅ ನಂ	ಕಾಮಗಾರಿಯ ಹೆಸರು	ಟೆಂಡರಿಗಿಟ್ಟ ಮೊತ್ತ ರೂ.	ಇ.ಎಂ.ಡಿ. ಮೊತ್ತ ರೂ.	ಟೆಂಡರ್ ಪ್ರೋಸೆಸಿಂಗ್	ಕಾಮಗಾರಿ ಅವಧಿ	ಗುತ್ತಿಗೆದಾರರ ದರ್ಜೆ
1	RIDF-29ರ ಯೋಜನೆಯಡಿ ಯಲ್ಲಿ ಮಂಜೂರಾದ ಕೃಉಮಾಸ, ಜಮಖಂಡಿಯ ಉಪ ಮಾರುಕಟ್ಟೆ ಸಾವಳಗಿ ಪ್ರಾಂಗಣಕ್ಕೆ ಕಂಪೌಂಡ್ ಗೋಡೆ ನಿರ್ಮಾಣ ಕಾಮಗಾರಿ	96,55,791.00 (Including GST)	1,93,200–00	ಇ–ಪೋರ್ಟಲ್ ನಿಯಮಾವಳಿ ಪ್ರಕಾರ	90 ದಿನಗಳು (ಮಳೆಗಾಲ ಹೊರತು ಪಡಿಸಿ)	As Per KPPP KW-3. Eligible Contractor

ಇ–ಸಂಗ್ರಹಣಾ ಪ್ರೋಸೆಸಿಂಗ್ ಶುಲ್ಕ ಹಾಗೂ ಇ,ಎಂ,ಡಿ. ಮೊತ್ತವನ್ನು ಇ–ಸಂಗ್ರಹಣೆಗಳ ಪೋರ್ಟಲ್ ಹೊಂದಿರುವ ಕರ್ನಾಟಕ ಸರ್ಕಾರ ಸೆಂಟ್ರಲ್ ಪೋಲಿಂಗ್ ಅಕೌಂಟಿನಲ್ಲಿ ಟೆಂಡರ್ ಡಾಕ್ಯುಮೆಂಟ್‌ನಲ್ಲಿ ತಿಳಿಸಿರುವ ಯಾವುದಾದರೊಂದು ಮಾದರಿಯಲ್ಲಿ ಸಂದಾಯ ಮಾಡುವುದು.
ಕಾಮಗಾರಿಯ ದಿನಾಂಕಗಳು :–1)ಟೆಂಡರ ಪೂರ್ವಭಾವಿ ಸಭೆ ದಿನಾಂಕ:– 05–06–2024 ರಂದು ಮುಂಜಾನೆ–12–30 ಘಂಟೆಗೆ, 2)ಭರ್ತಿ ಮಾಡಿದ ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: 10–06–2024 ರಂದು ಸಾಯಂಕಾಲ 5–30 ಗಂಟೆಗೆ. 3)ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 12–06–2024 ರಂದು ಮುಂಜಾನೆ 12–30 ಗಂಟೆಗೆ. 4)ಆರ್ಥಿಕ ಬಿಡ್ ತೆರೆಯುವ ದಿನಾಂಕ: 15–06–2024 ರಂದು ಮುಂಜಾನೆ 11–30 ಗಂಟೆಗೆ. 4) ಟೆಂಡರ್ ತೆರೆಯುವ ಸ್ಥಳ : ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಜಮಖಂಡಿ
ಟೆಂಡರ್ ಷರತ್ತುಗಳು ಹಾಗೂ ನಿಬಂಧನೆಗಳಿಗಾಗಿ ರಜಾದಿನಗಳನ್ನು ಹೊರತುಪಡಿಸಿ, ಈ ಕಾರ್ಯಾಲಯದ ಕಚೇರಿ ವೇಳೆಯಲ್ಲಿ ಅಥವಾ ಮೇಲೆ ಸೂಚಿಸಿದ ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿದೆ. ಅಥವಾ ಹೆಚ್ಚಿನ ವಿವರ ಮಾಹಿತಿಗಾಗಿ ಕರ್ನಾಟಕ ಸರ್ಕಾರದ ಟೆಂಡರ್ ಸಹಾಯವಾಣಿ ಸಂಖ್ಯೆ: 080–2550126, 080–25501227 ಹಾಗೂ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಜಮಖಂಡಿ ಇವರಿಂದ ಪಡೆಯಬಹುದಾಗಿದೆ. ಟೆಂಡರ್‌ಗಳನ್ನು ಯಾವುದೇ ಕಾರಣ ನೀಡದೆ ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಸಮಿತಿಯು ಕಾಯ್ದಿಸಿಕೊಂಡಿರುತ್ತದೆ.
ಸಹಿ/–(ಎ.ಎಮ್ ಮುಲ್ಲಾ) ಕಾರ್ಯದರ್ಶಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಜಮಖಂಡಿ.
ಸಹಿ/–(ಎಸ್.ಎಸ್ ಮಕ್ಕೋಜಿ) ಆಡಳಿತಾಧಿಕಾರಿಗಳು. ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಜಮಖಂಡಿ.
DIPR/BGK/RO-NO-08/KSMCA/2024-25

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಅಭಿಯಂತರರವರ ಕಛೇರಿ
ನಂ.1 ತುಂಗಭದ್ರಾ ಜಲಾಶಯ ವಿಭಾಗ ಮುನಿರಾಬಾದ್
Mail ID-trdmrb@gmail.com Phone No: 08539-270306
EE/KNNL No.1 TRD/VNC Moder-IFB/3237 Date: 11.03.2024
EE/KNNL No.1 TRD/VNC Moder-IFB/Call-2/517 To 518 Date: 28.05.2024
ಟೆಂಡರ್ ಪ್ರಕಟಣೆ 2ನೇ ಕರೆ
(Only through kppp-procurement portal) (Two Cover)
OPEN COMPETITIVE BIDDING (OCB)
(AS PER ADB'S SINGLE STAGE TWO ENVELOPE BIDDING PROCEDURE)
ಈ ವಿಭಾಗದ ವ್ಯಾಪ್ತಿಗೆ ಒಳಪಡುವ ಮುಖ್ಯ ಕಾಮಗಾರಿ ಉಪ ವಿಭಾಗ, ಮುನಿರಾಬಾದ್ ವ್ಯಾಪ್ತಿಯಲ್ಲಿ ಬರುವ ಲೆಕ್ಕ ಶೀರ್ಷಿಕೆ **4701** ಎ.ಡಿ.ಬಿ ಅಡಿಯಲ್ಲಿನ ಒಟ್ಟು **05** ಕಾಮಗಾರಿಗಳನ್ನು ಇ– ಪ್ರಕ್ಯೂರಮೆಂಟ್ ಪೋರ್ಟಾಲ್‌ನಲ್ಲಿ ನೊಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಕಾಮಗಾರಿಯ **Item Rate Basis** ಟೆಂಡರ್‌ನ್ನು **"ಎ.ಡಿ.ಬಿ ದ್ವಿಲಕೊಟೆಯ"** ನಿಯಾಮಾವಳಿಗಳಂತೆ ವ್ಯವಸ್ಥಾಪಕ ನಿರ್ದೇಶಕರು ಕನೀನಿನಿ ಬೆಂಗಳೂರು ಇವರ ಪರವಾಗಿ ಕರೆಯಲಾಗಿದೆ. ಸದರಿ ಕಾಮಗಾರಿಯ ಅಂದಾಜು ಮೊತ್ತ **ರೂ. 20.00 ರಿಂದ 75.00 ಲಕ್ಷಗಳು** ಇರುತ್ತವೆ. **ದಿನಾಂಕ: 11.06.2024** ರಂದು ಬೆಳಿಗ್ಗೆ 11.00 ಗಂಟೆಗೆ ಮುಖ್ಯ ಇಂಜಿನೀಯರ್ ಕನೀನಿನಿ, ನೀರಾವರಿ ಕೇಂದ್ರ ವಲಯ ಮುನಿರಾಬಾದ್ ಕಛೇರಿಯಲ್ಲಿ ಪ್ರೀಬಿಡ್ ಸಭೆಯನ್ನು ನಿಗಧಿಪಡಿಸಲಾಗಿದೆ ಹಾಗೂ ಇ–ಪ್ರಕ್ಯೂರಮೆಂಟ್ ಮುಖಾಂತರ ಅರ್ಜಿಯನ್ನು ಸಲ್ಲಿಸಲು ಕೊನೆಯ **ದಿನಾಂಕ: 27.06.2024, ಸಂಜೆ 04.00 ಗಂಟೆಗೆ ಮತ್ತು ದಿನಾಂಕ: 29.06.2024** ಸಾಯಂಕಾಲ 04.30 ಗಂಟೆಗೆ ತಾಂತ್ರಿಕ ಬಿಡ್‌ನ್ನು ತೆರೆಯಲಾಗುವುದು. ಸದರಿ ಕಾಮಗಾರಿಯ ವಿವರಗಳನ್ನು **https://kppp.karnataka.gov.in/** ಅಂತರ್ಜಾಲದಲ್ಲಿ ಪಡೆಯಬಹುದು. ಮತ್ತು ಹೆಚ್ಚಿನ ವಿವರಗಳು ಬೇಕಾದಲ್ಲಿ ಟಜ ಕಛೇರಿಯ ದೂರವಾಣಿ ಸಂ: 08539–270306 ಹಾಗೂ **e-mail: trdmrb@gmail.com** ಗೆ ಸಂಪರ್ಕಿಸಲು ಹಾಗೂ ಕೆಲಸದ ದಿನಗಳಲ್ಲಿ ಕಛೇರಿ ವೇಳೆಯಲ್ಲಿ ಪಡೆಯಬಹುದು.
ಸಹಿ/– ಕಾರ್ಯಪಾಲಕ ಅಭಿಯಂತರರು,
ಕನೀನಿನಿ,ನಂ.1 ತುಂಗಭದ್ರಾ ಜಲಾಶಯ ವಿಭಾಗ, ಮುನಿರಾಬಾದ್.
ಡಿಐಪಿಆರ್/ಕೊಪ್ಪಳ/25/ಕೆಎಸ್‌ಎಂಸಿಎ/2024–25

ಮಾನವ ಸರಪಳಿ ನಿರ್ಮಿಸಿ ಬೃಹತ್ ಪ್ರತಿಭಟನೆ

ಹಸಿರು ಪ್ರತಿಷ್ಠಾನ ಹೋರಾಟಕ್ಕೆ ಕಿಡಿ

ಸಂವಿಧಾನ ಕಲ್ಯಾಣ ಕರ್ನಾಟಕಕ್ಕೆ ನೀಡುವ ವಿಶೇಷ ಸ್ಥಾನಮಾನವಾದ 371(ಜೆ) ಕಲಂಗೆ ವಿರೋಧ ವ್ಯಕ್ತಪಡಿಸಿ ಹಸಿರು ಪ್ರತಿಷ್ಠಾನ ಬೆಂಗಳೂರಿನಲ್ಲಿ ಹಮ್ಮಿಕೊಂಡಿದ್ದ ಹೋರಾಟದ ವಿರುದ್ಧ ಪ್ರತ್ಯುತ್ತರವಾಗಿ ಕಲಬುರಗಿಯಲ್ಲಿ ಕಲ್ಯಾಣ ಕರ್ನಾಟಕ ಹೋರಾಟ ಸಮಿತಿಯಿಂದ ಮಾನವ ಸರಪಳಿ ರಚಿಸಿ ಪ್ರತಿಭಟನೆ ನಡೆಸಿತು.

ಕಲಬುರಗಿ: ಸಂವಿಧಾನ ಕಲ್ಯಾಣ ಕರ್ನಾ ಟಕಕ್ಕೆ ನೀಡುವ ವಿಶೇಷ ಸ್ಥಾನಮಾನವಾದ 371(ಜೆ) ಕಲಂಗೆ ವಿರೋಧ ವ್ಯಕ್ತಪಡಿಸಿ ಹಸಿರು ಪ್ರತಿಷ್ಠಾನ ಬೆಂಗಳೂರಿನಲ್ಲಿ ಹಮ್ಮಿಕೊಂಡಿದ್ದ ಹೋರಾಟದ ವಿರುದ್ಧ ಪ್ರತ್ಯುತ್ತರ ವಾಗಿ ಕಲಬುರಗಿಯಲ್ಲಿ ಸಾವಿರಾರು ಜನಸಾ ಮಾನ್ಯರು ಶನಿವಾರ ಕಲ್ಯಾಣ ಕರ್ನಾಟಕ ಹೋರಾಟ ಸಮಿತಿ ಯಿಂದ ನಗರದ ಸರ್ದಾರ್ ವಲ್ಲಭ ಭಾಯಿ ಪಟೇಲ್ ವೃತ್ತದಲ್ಲಿ ಮಾನವ ಸರಪಳಿ ರಚಿಸಿ ಪ್ರತಿಭಟನೆ ನಡೆಸಿ ಜಿಲ್ಲಾಡಳಿತದ ಮೂಲಕ ರಾಜ್ಯಪಾ ಲರಿಗೆ ಮನವಿ ಸಲ್ಲಿಸಲಾಯಿತು.

ಬೆಂಗಳೂರಲ್ಲಿ ಹಸಿರು ಪ್ರತಿಷ್ಠಾನ 371(ಜೆ) ಕಲಂ ಅನ್ನು ವಿರೋಧಿಸಿ ನಡೆಸಿದ ಹೋರಾಟವನ್ನು ಖಂಡಿಸಿ ನಡೆದ ಪ್ರತಿಭಟನೆ ಯಲ್ಲಿ ವಿದ್ಯಾರ್ಥಿಗಳು ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿಯ ಮುಖಂಡರು, ಆಯಾ ಕ್ಷೇತ್ರದ ಗಣ್ಯರು, ಸಾಹಿತಿಗಳು ಹಾಗೂ ಕನ್ನಡಪರ, ಜನಪರ, ದಲಿತ, ಹಿಂದುಳಿದ, ಅಲ್ಪ ಸಂಖ್ಯಾತರ, ರೈತ ಕಾರ್ಮಿಕ, ವಿದ್ಯಾರ್ಥಿ ಪರ, ಕೈಗಾರಿಕಾ, ವಾಣಿಜ್ಯ ಸಂಸ್ಥೆ,ಸಂಘ ಸಂಸ್ಥೆಗಳ ಮುಖ್ಯಸ್ಥರು ಸೇರಿ ಸಾವಿರಾರು ಜನರು ಭಾಗವಹಿಸಿದ್ದರು. ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ ಸಂವಿಧಾ ನದ ವಿಶೇಷ ಸ್ಥಾನಮಾನ ಜಾರಿಯಾದ ನಂತರ ಕರ್ನಾಟಕ ರಾಜ್ಯದ ಬಹಳಷ್ಟು ಹುದ್ದೆ ಗಳು ಕಲ್ಯಾಣ ಕರ್ನಾಟಕದವರೇ ಕಬಳಿಸುತ್ತಿದ್ದಾರೆ. ಶೈಕ್ಷಣಿಕ ಕ್ಷೇತ್ರದಲ್ಲಿಯೂ ಕಲ್ಯಾಣ ದವರೇ ಮೇಲುಗೈ ಸಾಧಿಸುತ್ತಿದ್ದಾರೆ. ಇದ ರಿಂದ ರಾಜ್ಯದ 24 ಜಿಲ್ಲೆಗಳಿಗೆ ಅನ್ಯಾಯ ವಾಗುತ್ತಿದೆ ಎಂಬ ಸುಳ್ಳು ಅಪಪ್ರಚಾರ ಮಾಡುವ ಮುಖಾಂತರ 24 ಜಿಲ್ಲೆಯ ಜನರಿಗೆ ತಪ್ಪು ಸಂದೇಶ ನೀಡುವ ಸಂವಿಧಾನ ವಿರೋಧಿ ಕೃತ್ಯ ನಡೆಸುವ ಮುಖಾಂತರ ಬೆಂಗಳೂರಿನಲ್ಲಿ 371ನೇ(ಜೆ) ಕಲಂ ವಿರುದ್ಧ ಹೋರಾಟ ಹಮ್ಮಿಕೊಂಡಿರುವುದು ಖಂಡನೀಯ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಅಭಿವೃದ್ಧಿಯನ್ನು ನೋಡಲಿ

ಸಂವಿಧಾನದ ಆರ್ಟಿಕಲ್ 371(ಜೆ) ವಿಚಾರಕ್ಕೆ ಸಂಬಂ ಧಿಸಿದಂತೆ ಕೆಲವರು ಅಪಸ್ವರ ಎತ್ತಿದ್ದಾರೆ. ಈ ಹಿಂದಿನ ಬಿಜೆಪಿ ಸರಕಾರದಲ್ಲಿ ಆದ ಕೆಲ ಗೊಂದಲಗಳನ್ನು ನಾವು ಸರಿಪಡಿಸಿದ್ದೇವೆ. ಕಲ್ಯಾಣ ಕರ್ನಾಟಕ ಭಾಗಕ್ಕೆ ಆದ ಐತಿಹಾಸಿಕ ಅನ್ಯಾಯ ಹಾಗೂ ಪ್ರಾದೇಶಿಕ ಅಸಮತೋ ಲನ ಸರಿಪಡಿಸುವ ಉದ್ದೇಶದಿಂದ ಸಂವಿಧಾನಕ್ಕೆ ತಿದ್ದು ಪಡಿ ತಂದು ಆರ್ಟಿಕಲ್ 371(ಜೆ) ಸೇರಿಸಲಾಗಿದೆ. ಹಾಗಾಗಿ, ಇದನ್ನು ವಿರೋಧಿಸುವವರು ನಮ್ಮ ಭಾಗದ ಅಭಿವೃದ್ಧಿಯನ್ನು ರಾಜ್ಯದ ಇತರೆ ಭಾಗದೊಂದಿಗೆ ಹೋಲಿಕೆ ಮಾಡಿ ನೋಡಲಿ. ಈ ಬಗ್ಗೆ ನಾನು ಈಗಾಗಲೇ ಕಾನೂನು ಸಚಿವರೊಂದಿಗೆ ಚರ್ಚೆ ನಡೆಸಿದ್ದೇನೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಹಸಿರು ಪ್ರತಿಷ್ಠಾನ ಸಂಘಟನೆ 371(ಜೆ) ಕಲಂ ವಿರುದ್ಧ ಇಪ್ಪತ್ನಾಲ್ಕು ಜಿಲ್ಲೆಗಳ ಜನರಿಗೆ ಸುಳ್ಳು ಸುದ್ದಿ ಹುಟ್ಟಿಸಿ ಕಲ್ಯಾಣ ಕರ್ನಾಟಕದ ಸಂವಿಧಾನ ಬದ್ಧ ಹಕ್ಕಿನ ಮೂಲ ಉದ್ದೇಶ ಗಾಳಿಗೆ ತೋರಿ ತಪ್ಪು ಸಂದೇಶ ಪ್ರಚಾರ ಮಾಡುತಿದ್ದಾರೆ. ಕಲ್ಯಾಣ ಕರ್ನಾಟಕದ ಅಸ್ತಿತ್ವದ ಪ್ರಶ್ನೆಯಾಗಿದ್ದು, ಸಂವಿಧಾನ ನೀಡಿರುವ ಹಕ್ಕನ್ನು ಚ್ಯುತಿಗೊಳಿಸುವ ಹುನ್ನಾರ ನಡೆದಿದೆ. ಯಾರು ಸಂವಿಧಾನ ವಿರೋಧ ಮಾಡುತ್ತಾರೋ ಅವರು ದೇಶದ್ರೋಹಿಗಳಾಗಿದ್ದಾರೆ.

- ಲಕ್ಷ್ಮಣ ದಸ್ತಿ, ಅಧ್ಯಕ್ಷ, ಕಲ್ಯಾಣ ಕರ್ನಾಟಕ ಹೋರಾಟ ಸಮಿತಿ

ನಾನವನಲ್ಲ

← ಮೊದಲಪುಟದಿಂದ

ಪ್ ನ್ ಡ್ರೈ ವ್ ಮೂಲಕ ಸಿಕ್ಕಿರುವ ವಿಡಿಯೊಗಳು ಇಷ್ಟರ ಮಟ್ಟಿಗೆ ಸದ್ದು ಮಾಡುತ್ತೆ ಎಂದು ಗೊತ್ತಿರಲಿಲ್ಲ. ಆದರೆ ನನ್ನ ವಿರುದ್ಧ ಮಾಡಿರುವ ಷಡ್ಯಂತ್ರಕ್ಕೆ ಸಹಜವಾಗಿಯೇ ಆತಂಕಕ್ಕೆ ಒಳಗಾಗಿದ್ದೆ. ಈ ಹಿಂದೆ ನಾನು ಸಾಮಾಜಿಕ ಜಾಲತಾಣದಲ್ಲಿ ಮೆಸೇಜ್ ಹಾಕಿದ್ದ ವೇಳೆ ತಪ್ಪು ಮಾಡಿಲ್ಲ ಎಂಬ ಕಾರಣಕ್ಕೆ ಏಳು ದಿನಗಳ ಕಾಲ ಸಮಯ ಕೇಳಿದ್ದೆ. ಆದರೆ, ಇದೊಂದು ಕ್ರಿಮಿನಲ್ ಪಿತೂರಿ. ನನ್ನನ್ನು ಪ್ರಕರಣದಲ್ಲಿ ಸಿಲುಕಿಸಲೆಂದೇ ನಾನಾ ರೀತಿಯಲ್ಲಿ ಒತ್ತಡ ತಂದು ದೊಡ್ಡಮಟ್ಟದಲ್ಲಿ ಸುದ್ದಿ ಮಾಡಲಾಗಿದೆ ಎಂದು ಪ್ರಜ್ವಲ್ ಹೇಳಿಕೆ ನೀಡಿದ್ದಾರೆ.

ಪ್ರಜ್ವಲ್ ಪೊಲೀಸ್ ಕಸ್ಟಡಿ ವಿಸ್ತರಣೆ?

ಹೊಳೆನರಸೀಪುರ ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ಪ್ರಜ್ವಲ್ ರೇವಣ್ಣರನ್ನು ಪೊಲೀಸ್ ಕಸ್ಟಡಿಗೆ ಪಡೆಯಲಾಗಿದ್ದು, ಅಪರಾಧ ಸಂಖ್ಯೆ 107 ಸಂಬಂಧಿಸಿದಂತೆ ಮಾತ್ರ ವಿಚಾರಣೆ ನಡೆಸಲಾಗುತ್ತಿದೆ. ಇದಲ್ಲದೆ ಸಿಐಡಿ ಸೈಬರ್ ಠಾಣೆಯಲ್ಲಿ ಎರಡು ಅತ್ಯಾಚಾರ ಪ್ರಕರಣಗಳು ದಾಖಲಾಗಿವೆ. ಮೂರು ಎಫ್‌ಐಆರ್‌ಗಳಿಗೆ ಪ್ರತ್ಯೇಕ ತನಿಖಾಧಿಕಾರಿ ನೇಮಕ ಮಾಡಲಾಗಿದೆ. ಹೀಗಾಗಿ ಹೊಳೆನರಸೀಪುರ ಪ್ರಕರಣ ಕಸ್ಟಡಿ ಮುಗಿದ ಬಳಿಕ ಸಿಐಡಿ ಸೈಬರ್ ಠಾಣೆಯ ಎಫ್ ಐಆರ್ ಮೇರೆಗೆ ಬಂಧಿಸಲಾಗುತ್ತದೆ. ಸಿಐಡಿಯ ಎರಡೂ ಎಫ್ ಐಆರ್‌ಗಳಲ್ಲಿ ಪ್ರತ್ಯೇಕವಾಗಿ ಪ್ರಜ್ವಲ್ ಕಸ್ಟಡಿಗೆ ಪಡೆಯಲು ಎಸ್ ಐಟಿ ನಿರ್ಧಾರ ಮಾಡಿದೆ. ಹೀಗಾಗಿ 10 ರಿಂದ 15 ದಿನ ಪ್ರಜ್ವಲ್ ಪೊಲೀಸ್ ಕಸ್ಟಡಿಯಲ್ಲೇ ಇರುವ ಸಾಧ್ಯತೆ ಇದೆ. ಹೀಗಾಗಿ 6 ದಿನಕ್ಕೇ ಪ್ರಜ್ವಲ್ ವಿಚಾರಣೆ ಮುಗಿಯುವುದಿಲ್ಲ ಎನ್ನಲಾಗಿದೆ.

ಕನ್ನಡಿಗ ಮನುಗೆ ಚಿನ್ನದ ಪದಕ

ತೈವಾನ್: ಇಲ್ಲಿ ನಡೆಯುತ್ತಿರುವ ತೈವಾನ್ ಓಪನ್ ಕೂಟದ ಪುರುಷರ ಜಾವೆಲಿನ್ ಥ್ರೋ ಸ್ಪರ್ಧೆಯಲ್ಲಿ ಕನ್ನಡಿಗ ಡಿ.ಪಿ. ಮನು ಅವರು 81.58 ಮೀಟರ್ ಸಾಧನೆಯೊಂದಿಗೆ ಚಿನ್ನ ಪಡೆದುಕೊಂಡಿದ್ದಾರೆ. ಏಷ್ಯನ್ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನ ಬೆಳ್ಳಿ ವಿಜೇತ ಮನು, ಆರು ಪ್ರಯತ್ನಗಳ ಪೈಕಿ ಕೊನೆಯ ಯತ್ನದಲ್ಲಿ ಅತ್ಯುತ್ತಮ ಎಸೆತವನ್ನು ದಾಖಲಿಸಿದ ಅವರು, ಫೈನಲ್‌ನಲ್ಲಿ 78.32 ಮೀಟರ್ ಎಸೆತದೊಂದಿಗೆ ಅಭಿಯಾನ ಆರಂಭಿಸಿದರು. ಎರಡನೇ ಪ್ರಯತ್ನದಲ್ಲಿ 76.80 ಮೀ ದೂರ ಎಸೆದರು. ಮೂರನೇ ಮತ್ತು ಐದನೇ ಪ್ರಯತ್ನದಲ್ಲಿ ಕ್ರಮವಾಗಿ 80.59 ಮೀ ಮತ್ತು 81.52 ಮೀ ಎಸೆದು ಪ್ರಯತ್ನವನ್ನು ಸುಧಾರಿಸಿದರು. ನಾಲ್ಕನೇ ಯತ್ನದಲ್ಲಿ ಫೌಲ್ ಆಗಿದ್ದು, ಮನು ಅವರ ವೈಯಕ್ತಿಕ ಶ್ರೇಷ್ಠ ಪ್ರದರ್ಶನವು 84.35 ಮೀಟರ್ ಆಗಿದೆ. ಈ ಹಿಂದೆ ಅವರು ಕಳೆದ ತಿಂಗಳು ಭುವನೇಶ್ವರದಲ್ಲಿ ನಡೆದ ಫೆಡರೇಷನ್ ಕಪ್‌ನಲ್ಲಿ ಋತುವಿನ ಅತ್ಯುತ್ತಮ ಪ್ರಯತ್ನದೊಂದಿಗೆ (82.06 ಮೀ) ಅವರು ಬೆಳ್ಳಿ ಗೆದ್ದಿದ್ದರು. ಅಲ್ಲಿ ವಿಶ್ವ ಚಾಂಪಿಯನ್ ನೀರಜ್ ಚೋಪ್ರಾ ಚಿನ್ನ ಗೆದ್ದಿದ್ದರು.



ಒಲಿಂಪಿಕ್ಸ್‌ಗಿಲ್ಲ ಅರ್ಹತೆ

ಕಳೆದ ವರ್ಷ ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ ಆರನೇ ಸ್ಥಾನ ಪಡೆದಿದ್ದ ಮನು ಅವರಿಗೆ ಪ್ಯಾರಿಸ್ ಒಲಿಂಪಿಕ್ಸ್ ಕೋಟಾ ಲಭಿಸಿಲ್ಲ. ಒಲಿಂಪಿಕ್ಸ್ ಅರ್ಹತಾ ಮಟ್ಟ (85.50 ಮೀ) ತಲುಪಲು ಅವರಿಗೆ ಸಾಧ್ಯವಾಗಿಲ್ಲ. ಹಾಲಿ ಚಾಂಪಿಯನ್ ಚೋಪ್ರಾ ಮತ್ತು ಒಡಿಶಾದ ಕಿಶೋರ್ ಜೇನಾ ಒಲಿಂಪಿಕ್ಸ್‌ಗೆ ಈಗಾಗಲೇ ಅರ್ಹತೆ ಪಡೆದಿದ್ದಾರೆ. ಮಹಿಳೆಯರ 100 ಮೀಟರ್ ಹರ್ಡಲ್ಸ್ ಸ್ಪರ್ಧೆಯಲ್ಲಿ ತಮಿಳುನಾಡಿನ ನಿತ್ಯಾ ರಾಮರಾಜ್ (13.23 ಸೆಕೆಂಡ್) ಎರಡನೇ ಸ್ಥಾನ ಪಡೆದರು.

ಮುಂದೊಮದು ದಿನ ಅಮೆರಿಕದಲ್ಲಿ ಕ್ರಿಕೆಟ್ ಆಡುತ್ತೇನೆ, ವಿಶ್ವಕಪ್‌ನಲ್ಲಿ ಭಾಗವಹಿಸುತ್ತೇನೆ ಎಂದು ಯೋಚಿಸಿರಲಿಲ್ಲ. ಅದು ನಿಜವಾಗಿದೆ. ಕ್ರಿಕೆಟ್ ಅಮೆರಿಕದ ಮೇಲೆ ಹೇಗೆ ಪ್ರಭಾವ ಬೀರುತ್ತಿದೆ ಎಂಬುದನ್ನು ತೋರಿಸುತ್ತದೆ.

- ವಿರಾಟ್ ಕೊಹ್ಲಿ, ಕ್ರಿಕೆಟಿಗ

ಭುವನೇಶ್ವರ್: ಹಳಿ ತಪ್ಪಿದ ಗೂಡ್ಸ್ ರೈಲು

ಭುವನೇಶ್ವರ: ಇಲ್ಲಿನ ಪೂರ್ವ ಕರಾವಳಿ ರೈಲ್ವೆಯ ಸಂಬಲ್‌ಪುರ ವಿಭಾಗದ ಕಾಂತಾಬಾಂಜಿ ನಿಲ್ದಾಣದ ಬಳಿ ಗೂಡ್ಸ್ ರೈಲಿನ ನಾಲ್ಕು ಬೋಗಿಗಳು ಹಳಿ ತಪ್ಪಿದ್ದು, ಹಲವು ರೈಲುಗಳ ಸಂಚಾರಕ್ಕೆ ಅಡ್ಡಯಾಗಿದೆ ಎಂದು ವರದಿಯಾಗಿದೆ.



ಶುಕ್ರವಾರ ರಾತ್ರಿ 10.50ರ ಸುಮಾರಿಗೆ ಈ ಘಟನೆ ನಡೆದಿದ್ದು, ಎರಡೂ ಹಳಿಗಳಲ್ಲಿ ರೈಲು ಸಂಚಾರಕ್ಕೆ ಅಡ್ಡಿ ಉಂಟಾಗಿತ್ತು. ವಿಷಯ ತಿಳಿದ ಅಧಿಕಾರಗಳು ಎಚ್ಚೆತ್ತಕೊಮಡಿದ್ದು, ಶನಿವಾರ ಬೆಳಗ್ಗೆ ಹಳಿಗಳನ್ನು ಸರಿಪಡಿಸಿದ್ದಾರೆ ಎಂದು ಅಧಿಕಾರಿಗಳು ತಳಿಸಿದ್ದಾರೆ. ಘಟನೆಯಲ್ಲಿ ಯಾರಿಗೂ ಗಾಯಗಳಾಗಿಲ್ಲ. ಹಿರಿಯ ರೈಲ್ವೆ ಅಧಿಕಾರಿಗಳು ಸ್ಥಳದಲ್ಲಿದ್ದು ಈ ಬಗ್ಗೆ ತನಿಖೆ ನಡೆಸುತ್ತಿದ್ದಾರೆ. ಘಟನೆ ಹಿನ್ನೆಲೆಯಲ್ಲಿ ಪೂರ್ವ ಕರಾವಳಿ ರೈಲ್ವೆ ವಲಯ ರಾಯ್ಪುರ-ತಿತ್ಲಗಢ್ ಎಕ್ಸ್‌ಪ್ರೆಸ್ ಮತ್ತು ಜುನಗಡ್ -ರಾಯಪುರ ಎಕ್ಸ್‌ಪ್ರೆಸ್ ಅನ್ನು ಶನಿವಾರ ರದ್ದುಗೊಳಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಸಾಧನೆಗೆ ಕ್ರೀಡಾ ಸ್ಫೂರ್ತಿ ಪ್ರಮುಖ

ಬೆಂಗಳೂರು: ಯಾವುದೇ ಕೆಲಸದಲ್ಲಿ ಸಾಧನೆ ಮಾಡಲು ಕ್ರೀಡಾಸ್ಫೂರ್ತಿಯೇ ಪ್ರಮುಖವಾದುದು ಅಂತಾರಾಷ್ಟ್ರೀಯ ಕಬಡ್ಡಿ ಆಟಗಾರ ಸುಕೇಶ್ ಹೆಗ್ಡೆ ಹೇಳಿದ್ದಾರೆ. ಬೆಂಗಳೂರಿನ ಸೌಂದರ್ಯ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ ಅಂಡ್ ಸೈನ್ಸ್ ಆಯೋಜಿಸಿದ್ದ 30 ಕ್ಕೂ ಹೆಚ್ಚು ಕಾಲೇಜುಗಳನ್ನು ಒಳಗೊಂಡ ಸಂಪ್ರವೇಗ 2.0' ಉದ್ಘಾಟಿಸಿ ಪ್ರಶಸ್ತಿ ವಿತರಿಸಿ ಮಾತನಾಡಿದ ಅವರು, ಕ್ರೀಡೆ ಮನುಷ್ಯನ ಸರ್ವತೋಮುಖ ಬೆಳವಣಿಗೆಗೆ ಸಾಕ್ಷಿಯಾಗಲಿದ್ದು, ಕ್ರೀಡೆ ಜೀವ ನದ ಪಾಠ ಕಲಿಸುತ್ತದೆ ಎಂದರು. ಶಿಕ್ಷಣ ಸಂಸ್ಥೆ ಯ ಸಿಇಒ ಕೀರ್ತನ್ ಕುಮಾರ್ ಮಾತನಾಡಿ, ವಿದ್ಯಾರ್ಥಿ ಸಮುದಾಯದ ಪಠ್ಯೇತರ ಚಟುವಟಿಕೆಗಳನ್ನು ಬೆಂಬಲಿಸಲು ಸಿಮ್ಸ್ ಸಾಧ್ಯವಿರುವ ಎಲ್ಲ ನೆರವು ನೀಡಲಿದೆ. ಏಕೆಂದರೆ ವಿದ್ಯಾರ್ಥಿಗಳ ಅಭಿವ್ಯಕ್ತಿ ಮತ್ತು ಒಟ್ಟಾರೆ ಅಭಿವೃದ್ಧಿಯು ಉತ್ತಮ ಸಮಾಜಕ್ಕೆ ಪ್ರಮುಖವಾಗಿದೆ ಎಂದರು. ಚಿತ್ರ ನಿರ್ದೇಶಕ ಸಿಂಪಲ್ ಸುನಿ ಮಾತನಾಡಿ, ಕಾಲೇಜು ದಿನಗಳು ತಮ್ಮನ್ನು ಸೃಜನಶೀಲ ನಿರ್ದೇಶಕರಾಗಿ ಬೆಳೆಯಲು ಸಹಾಯ ಮಾಡಿತು. ವಿದ್ಯಾ ರ್ಥಿಗಳ ಜೀವನವೇ ಒಂದು ಪ್ರತ್ಯೇಕ ಲೋಕ ಎಂದರು.

ಅಣ್ಣಾಮಲೈ ಸೋಲುವ ಸಾಧ್ಯತೆ: ಸಮೀಕ್ಷೆ

ದೆಹಲಿ: ಈ ಬಾರಿಯ ಚುನಾವಣೆಯ ಮತದಾನೋತ್ತರ ಸಮೀಕ್ಷೆ ಬಹಿರಂಗವಾಗಿದ್ದು, ಅದರಲ್ಲಿ ತಮಿಳುನಾಡು ಬಿಜೆಪಿ ಅಧ್ಯಕ್ಷ ಅಣ್ಣಾಮಲೈ ಸೋಲುವ ಸಾಧ್ಯತೆ ಇದೆ ಎಂಬ ವರದಿ ಬಹಿರಂಗವಾಗಿದೆ. ಅಣ್ಣಾಮಲೈ ಎದುರಾ ಳಿಗಾಗಿ ಡಿಎಂಕೆ ಯಿಂದ ನಗರದ ಮಾಜಿ ಮೇಯರ್ ಪಿ ಗಣಪತಿ ರಾಜ್‌ಕುಮಾರ್ ಸ್ಪರ್ಧಿಸಿದ್ದರೆ, ಎಐಎಡಿಎಂಕೆ ಯಿಂದ ಸಿಂಗೈ ಜಿ ರಾಮಚಂದ್ರನ್ ಸ್ಪರ್ಧಿಸಿದ್ದಾರೆ. ಆ್ಯಕ್ಸಿಸ್ ಮೈ ಇಂಡಿಯಾದ ಮತದಾನೋತ್ತರ ಸಮೀಕ್ಷೆಯ ಪ್ರಕಾರ ಕೊಯಂಬತ್ತೂರಿನಲ್ಲಿ ಐಎನ್‌ಡಿಐಎ ಮೈತ್ರಿಕೂಟದ ಅಭ್ಯರ್ಥಿ (ಡಿಎಂಕೆ ಅಭ್ಯರ್ಥಿ) ಗೆಲುವು ಸಾಧಿಸಲಿದ್ದಾರೆ. ಚುನಾವಣೋತ್ತರ ಸಮೀಕ್ಷೆಗಳ ಬಗ್ಗೆ ಅಣ್ಣಾಮಲೈ ಪ್ರತಿಕ್ರಿಯೆ ನೀಡಿದ್ದು, ಚುನಾವಣೋತ್ತರ ಸಮೀಕ್ಷೆಗಳ ಭವಿಷ್ಯವನ್ನು ತಿರಸ್ಕರಿಸಿದ್ದು, ಜೂ.04 ರಂದು ನಾವು ನಿಮಗೆ ಅಚ್ಚರಿಯ ಫಲಿತಾಂಶ ನೀಡಲು ಬಯಸುತ್ತೇವೆ ಎಂದು ಹೇಳಿದ್ದಾರೆ. ಈ ಪ್ರದೇಶದಲ್ಲಿ ಪ್ರಧಾನಿ ನರೇಂದ್ರ ಮೋದಿ ಮೆಗಾ ರೋಡ್ ಶೋ ನಡೆಸಿ ಅಬ್ಬರದ ಪ್ರಚಾರ ನಡೆಸಿದ್ದರು.



ಇನ್ನುಂದೆ ಟಿ20 ವಿಶ್ವಕಪ್ ಫೀವರ್ | ಅಮೆರಿಕದಲ್ಲಿಂದು ಅದ್ದೂರಿ ಚಾಲನೆ

ಇಂದಿನಿಂದ ಚುಟುಕು ವಿಶ್ವಕಪ್

ದೆಹಲಿ: ಐಪಿಎಲ್ ಮುಗಿದು ವಾರವಷ್ಟೇ ಕಳೆದಿದ್ದು, ಈಗಾಗಲೇ ವಿಶ್ವಕಪ್ ಶುರುವಾಗಲಿದೆ. 2023ರಲ್ಲಿ ಏಕದಿನ ವಿಶ್ವಕಪ್ ನಂತರ ಈ ಬಾರಿ ಟಿ20 ವಿಶ್ವಕಪ್ ನಡೆಯಲಿದ್ದು, ಎಲ್ಲರಲ್ಲೂ ಹೊಸ ಹುಮ್ಮಸ್ಸು ಮೂಡಿಸಿದೆ. 20 ತಂಡಗಳ ನಡುವೆ ನಡೆಯಲಿರುವ ಈ ಟೂರ್ನಿಯನ್ನು ಗೆದ್ದವರು ಚುಟುಕು ಮಾದರಿಯ ವೀರರು ಎನ್ನಿಸಿಕೊಳ್ಳಲಿದ್ದಾರೆ. ಹೀಗಾಗಿ ವಿಶ್ವಕಪ್‌ನಲ್ಲಿ ಭಾರೀ ಪೈಪೋಟಿ ನಡೆಯಲಿದೆ. ಈ ಬಾರಿ ವಿಶ್ವಕಪ್ ವಿಶಿಷ್ಟ ಸ್ವರೂಪ ಹೊಂದಿದ್ದು, ಕುತೂಹಲ ಮೂಡಿಸಿದೆ.

ವಿಶ್ವಕಪ್ ಹಿನ್ನೆಲೆ: ಐಸಿಸಿ ಟಿ20 ವಿಶ್ವಕಪ್ ಅನ್ನು 2007 ರಲ್ಲಿ ಪ್ರಾರಂಭಿಸಲಾಗಿತ್ತು. 2007 ರಲ್ಲಿ, ದಕ್ಷಿಣ ಆಫ್ರಿಕಾದಲ್ಲಿ ಉದ್ಘಾಟಿಸಲಾಯಿತು. ಆಫ್ರಿಕಾ ನಂತರದ ಪಂದ್ಯಾವಳಿ ಪಾಕಿಸ್ತಾನ, ಇಂಗ್ಲೆಂಡ್, ವೆಸ್ಟ್‌ಇಂಡೀಸ್ ಮತ್ತು ಆಸ್ಟ್ರೇಲಿಯಾದೊಂದಿಗೆ ವಿಸ್ತರಣೆ ಮತ್ತು ಜಾಗತಿಕ ಆಸಕ್ತಿಯನ್ನು ಕಂಡವು. ವೆಸ್ಟ್‌ಇಂಡೀಸ್ ಎರಡು ಬಾರಿ ಗೆದ್ದ ಏಕೈಕ ತಂಡವಾಗಿದೆ. ಪ್ರಾರಂಭದಿಂದ ಇದೀಗ 9ನೇ ಬಾರಿಗೆ ಟೂರ್ನಿ ನಡೆಯಲಿದ್ದು, ಮೊದಲ ಬಾರಿಗೆ ಭಾರತವೇ ಗೆದ್ದಿತ್ತು.

ಜನಪ್ರಿಯ ಟೂರ್ನಿ: ಟಿ20 ವಿಶ್ವಕಪ್ ಅತ್ಯಂತ ಜನಪ್ರಿಯ ಅಂತಾರಾಷ್ಟ್ರೀಯ ಕ್ರಿಕೆಟ್ ಪಂದ್ಯಾವಳಿಗಳಲ್ಲಿ ಒಂದಾಗಿದ್ದು, ಪ್ರಪಂಚದ ರಾಷ್ಟ್ರೀಯ ತಂಡಗಳಿಂದ ಪಾಲ್ಗೊಳ್ಳುತ್ತಿವೆ. ಟಿ20ವಿಶ್ವ ಚಾಂಪಿಯನ್‌ಗಳ ಪ್ರತಿಷ್ಠಿತ ಪ್ರಶಸ್ತಿಗಾಗಿ ಸ್ಪರ್ಧಿಸುತ್ತಿರುವ ರಾಷ್ಟ್ರೀಯ ತಂಡಗಳು. ಈ ಕ್ರಿಕೆಟ್ ಪಂದ್ಯಾವಳಿಯನ್ನು ಅಂತಾರಾಷ್ಟ್ರೀಯ ಕ್ರಿಕೆಟ್ ಮಂಡ(ಐಸಿಸಿ) ಆಯೋಜಿಸಿದೆ. ಈ ಪಂದ್ಯಾವಳಿಯು ತನ್ನ ವಿದ್ಯುನ್ಮಾನ ಪಂದ್ಯಗಳು ಮತ್ತು ತೀವ್ರ ಪೈಪೋಟಿಯಿಂದ ವಿಶ್ವಾದ್ಯಂತ ಪ್ರೇಕ್ಷಕರ ಮನಸೆಳೆಯುತ್ತಿದೆ.

ವಿಶ್ವಕಪ್ ಸ್ವರೂಪ: ಇದು ವಿಶಿಷ್ಟವಾಗಿ ಗುಂಪು ಹಂತಗಳೊಂದಿಗೆ ಒಂದು ಸ್ವರೂಪವನ್ನು ಅನುಸರಿಸುತ್ತದೆ. ವಿಜೇತರನ್ನು ನಿರ್ಧರಿಸಲು ನಾಕೌಟ್ ಸುತ್ತುಗಳು ಮತ್ತು ಚಾಂಪಿಯನ್‌ಶಿಪ್ ಪಂದ್ಯವನ್ನು ಅನುಸರಿ ಸುತ್ತದೆ. ಭಾಗವಹಿಸುವ 20 ತಂಡಗಳನ್ನು 4 ಗುಂಪುಗಳಾಗಿ ವಿಂಗಡಿಸಲಾಗಿದ್ದು, ಎಲ್ಲಾ ತಂಡಗಳು ರೌಂಡ್-ರಾಬಿನ್ ಸ್ವರೂಪದಲ್ಲಿ ಪರಸ್ಪರ ಸ್ಪರ್ಧಿಸುತ್ತವೆ. ಅಗ್ರ ತಂಡಗಳು ಸೆಮಿಫೈನಲ್ ಮತ್ತು ಫೈನಲ್ ಪಂದ್ಯದತ್ತ ಹೆಜ್ಜೆ ಹಾಕುತ್ತವೆ.

ಭಾಗವಹಿಸುವ ತಂಡಗಳು: ಈ ಬಾರಿ ಟಿ20 ವಿಶ್ವಕಪ್ ಪಂದ್ಯಾವಳಿಯು ಪ್ರಪಂಚದಾದ್ಯಂತದ ವಿವಿಧ 20 ದೇಶದ ತಂಡಗಳನ್ನು ಒಳಗೊಂಡಿದೆ. ಭಾರತ, ಆಸ್ಟ್ರೇಲಿಯಾ, ಇಂಗ್ಲೆಂಡ್, ಪಾಕಿಸ್ತಾನ, ದಕ್ಷಿಣ ಆಫ್ರಿಕಾ, ನ್ಯೂಜಿಲೆಂಡ್, ಶ್ರೀಲಂಕಾ ಮತ್ತು ವೆಸ್ಟ್ ಇಂಡೀಸ್‌ನಂತಹ ಕ್ರಿಕೆಟ್ ಶಕ್ತಿಶಾಲಿ ರಾಷ್ಟ್ರಗಳು ಸೇರಿದಂತೆ ಬಹುತೇಕ ಐಸಿಸಿ ಸದಸ್ಯ ರಾಷ್ಟ್ರಗಳು ಪಂದ್ಯಾವಳಿಯಲ್ಲಿ ಭಾಗವಹಿಸುತ್ತವೆ. ಇದಲ್ಲದೆ, ಸಹವರ್ತಿ ಮತ್ತು ಅಂಗಸಂಸ್ಥೆ ಸದಸ್ಯ ರಾಷ್ಟ್ರಗಳು ಐಸಿಸಿ ಟಿ20 ವಿಶ್ವಕಪ್‌ಗೆ ಅರ್ಹತೆ ಪಡೆಯುವ ಅವಕಾಶವನ್ನು ಹೊಂದಿವೆ.

ಭಾರತದ ವೇಳಾಪಟ್ಟಿ

- ಜೂನ್ 5 ರಂದು ಭಾರತ VS ಐರ್ಲೆಂಡ್ (ನ್ಯೂಯಾರ್ಕ್)
- ಭಾರತ VS ಪಾಕಿಸ್ತಾನ ಜೂನ್ 9 ರಂದು (ನ್ಯೂಯಾರ್ಕ್)
- ಭಾರತ VS USA ಜೂನ್ 12 ರಂದು (ನ್ಯೂಯಾರ್ಕ್)
- ಜೂನ್ 15 ರಂದು ಭಾರತ VS ಕೆನಡಾ (ಫ್ಲೋರಿಡಾ)

ಆತಿಥ್ಯ

ಐಸಿಸಿ ಟಿ20 ವಿಶ್ವಕಪ್ ಆತಿಥ್ಯವನ್ನು ವಿವಿಧ ದೇಶಗಳು ನಿಭಾಯಿಸುತ್ತವೆ. ಆದರೆ ಈ ಬಾರಿ ಇದು ವೆಸ್ಟ್ ಇಂಡೀಸ್ ಮತ್ತು ಅಮೆರಿಕದಲ್ಲಿ ನಡೆಯಲಿದೆ. ಐಸಿಸಿಯಿಂದ ಹರಾಜು ಪ್ರಕ್ರಿಯೆಯ ಮೂಲಕ ಆತಿಥೇಯ ರಾಷ್ಟ್ರವನ್ನು ಆಯ್ಕೆ ಮಾಡಲಾಗುತ್ತದೆ. ಈ ವರ್ಷ, ವೆಸ್ಟ್ ಇಂಡೀಸ್ ಮತ್ತು ಯುಎಸ್‌ಎ ಬಿಡ್ಡಿಂಗ್ ಗೆದ್ದು ಐಸಿಸಿ ಟಿ 20 ವಿಶ್ವಕಪ್ ಆತಿಥ್ಯ ವಹಿಸುವ ಅವಕಾಶವನ್ನು ಪಡೆದುಕೊಂಡವು. ಪಂದ್ಯಾವಳಿಯನ್ನು ಆಯೋಜಿಸುವ ಮೂಲಕ, ಆತಿಥೇಯ ರಾಷ್ಟ್ರವು ತನ್ನ ಕ್ರಿಕೆಟ್ ಮೂಲಸೌಕರ್ಯ, ಆತಿಥ್ಯ ಮತ್ತು ಆಟದ ಮೇಲಿನ ಉತ್ಸಾಹವನ್ನು ವಿಶ್ವದ ಪ್ರೇಕ್ಷಕರಿಗೆ ಪ್ರದರ್ಶಿಸಲು ಅವಕಾಶವನ್ನು ಪಡೆಯುತ್ತದೆ.

ಅದ್ದೂರಿ ಚಾಲನೆ

ಈ ಬಾರಿ ವಿಶ್ವಕಪ್‌ಗೆ ಅದ್ದೂರಿ ಚಾಲನೆ ಸಿಗಲಿದ್ದು, ಅಮೆರಿಕದಲ್ಲಿ ಉದ್ಘಾಟನಾ ಸಮಾರಂಭ ನಡೆಯಲಿದೆ. ವಿಶ್ವಕಪ್‌ಗೆ ಅಮೆರಿಕದ ಡಲಾಸ್ ಚಾಲನೆ ನಿಡಲಿದ್ದು, ಮೊದಲ ಪಂದ್ಯಕ್ಕೂ ಮುನ್ನ ಅಭರೀ ಕಾರ್ಯಕ್ರಮ ನಡೆಯಲಿದೆ. ಕಾರ್ಯಕ್ರಮದಲ್ಲಿ ವಿವಿಧ ಸ್ಟಾರ್‌ಗಳು ಪ್ರದರ್ಶನ ನೀಡಲಿದ್ದಾರೆ ಎನ್ನಲಾಗಿದೆ.

ಅಮೆರಿಕ, ಕೆನಡಾ ಮೊದಲ ಪಂದ್ಯ

ವಿಶ್ವಕಪ್‌ಗೆ ಅಮೆರಿಕ ಆತಿಥ್ಯ ವಹಿಸಲಿದ್ದು, ಮೊದಲ ಪಂದ್ಯದಲ್ಲಿ ಕೆನಡಾವನ್ನು ಎದುರಿಸಲಿದೆ. ಪ್ರತಿಷ್ಠಿತ ಐಸಿಸಿ ವಿಶ್ವಕಪ್‌ನಲ್ಲಿ ಮೊದಲ ಬಾರಿಗೆ ಆಡುತ್ತಿರುವ ಅಮೆರಿಕ ಹೊಸ ಹುಮ್ಮಸ್ಸಿನಲ್ಲಿದೆ. ಈ ಮೊದಲೂ ಆಡಿರುವ ಕೆನಡಾಗೂ ಉತ್ತಮ ಸವಾಲಾಗಿದೆ. ಈ ಪಮದ್ಯವು ಅಮೆರಿಕದ ದಲ್ಲಾಸ್‌ನಲ್ಲಿ ಸಂಜೆ 6 ಗಂಟೆಗೆ ಆರಂಬವಾಗಲಿದೆ. ಇನ್ನು ಎರಡನೇ ಪಂದ್ಯವು ವೆಸ್ಟ್ ಇಂಡೀಸ್‌ನಲ್ಲಿ ನಡೆಯಲಿದ್ದು, ವಿಂಡೀಸ್ ಹಾಗೂ ಪಪುವಾ ತಂಡಗಳು ಸೆಣಸಾಡಲಿವೆ. ಈ ಪಂದ್ಯವು ಸಂಜೆ 8 ಗಂಟೆಗೆ ಪ್ರಾರಂಭವಾಗಲಿವೆ.

ಸೂಪರ್ - 8

ದಿನಾಂಕ	ಪಂದ್ಯಗಳು	ಸ್ಥಳ
ಜೂನ್ 19	ಅ2 VS ಈ1	ಆಂಟಿಗುವಾ ಮತ್ತು ಬಾರ್ಬುಡಾ
ಜೂನ್ 19	ಆ1 VS ಇ2	ಸೇಂಟ್ ಲೂಸಿಯಾ
ಜೂನ್ 20	ಇ1 VS ಅ1	ಬಾರ್ಬಡೋಸ್
ಜೂನ್ 20	ಆ2 VS ಈ2	ಆಂಟಿಗುವಾ ಮತ್ತು ಬಾರ್ಬುಡಾ
ಜೂನ್ 21	ಆ1 VS ಈ1	ಸೇಂಟ್ ಲೂಸಿಯಾ
ಜೂನ್ 21	ಅ2 VS ಇ2	ಬಾರ್ಬಡೋಸ್
ಜೂನ್ 22	ಅ1 VS ಈ2	ಆಂಟಿಗುವಾ ಮತ್ತು ಬಾರ್ಬುಡಾ
ಜೂನ್ 22	ಇ1 VS ಆ2	ಸೇಂಟ್ ವಿನ್ಸೆಂಟ್ ಮತ್ತು ಗ್ರೆನಡೈನ್ಸ್
ಜೂನ್ 23	ಅ2 VS ಆ1	ಬಾರ್ಬಡೋಸ್
ಜೂನ್ 23	ಇ2 VS ಈ1	ಆಂಟಿಗುವಾ ಮತ್ತು ಬಾರ್ಬುಡಾ
ಜೂನ್ 24	ಆ2 VS ಅ1	ಸೇಂಟ್ ಲೂಸಿಯಾ
ಜೂನ್ 24	ಇ1 VS ಈ2	ಸೇಂಟ್ ವಿನ್ಸೆಂಟ್ ಮತ್ತು ಗ್ರೆನಡೈನ್ಸ್

ನಾಕ್‌ಔಟ್‌ಗಳು

ಜೂನ್ 26	ಸೆಮಿಫೈನಲ್ - 1	ಗಯಾನಾ
ಜೂನ್ 27	ಸೆಮಿಫೈನಲ್ - 2	ಟ್ರಿನಿಡಾಡ್ ಮತ್ತು ಟೊಬಾಗೊ
ಜೂನ್ 29	ಫೈನಲ್ ಪಂದ್ಯ	ಬಾರ್ಬಡೋಸ್

ಟಿ20 ವಿಶ್ವಕಪ್ 2024 ರ ಸಂಪೂರ್ಣ ವೇಳಾಪಟ್ಟಿ

ಲೀಗ್ ಹಂತದ ಪಂದ್ಯಗಳ ವೇಳಾಪಟ್ಟಿ

ದಿನಾಂಕ	ಪಂದ್ಯಗಳು	ಸ್ಥಳ
ಜೂ. 2	ಯುಎಸ್‌ಎ vs ಕೆನಡಾ	ಡಲ್ಲಾಸ್
ಜೂ. 2	ವೆಸ್ಟ್ ಇಂಡೀಸ್ vs ಪಪುವಾ ನ್ಯೂಗಿನಿಯಾ	ಗಯಾನಾ
ಜೂ. 2	ನಮೀಬಿಯಾ vs ಒಮಾನ್	ಬಾರ್ಬಡೋಸ್
ಜೂ. 3	ಶ್ರೀಲಂಕಾ vs ಸೌತ್ ಆಫ್ರಿಕಾ	ನ್ಯೂಯಾರ್ಕ್
ಜೂ. 4	ಅಫ್ಘಾನಿಸ್ತಾನ್ vs ಉಗಾಂಡ	ಗಯಾನಾ
ಜೂ. 4	ಇಂಗ್ಲೆಂಡ್ vs ಸ್ಕಾಟ್ಲೆಂಡ್	ಬಾರ್ಬಡೋಸ್
ಜೂ. 5	ಭಾರತ vs ಐರ್ಲೆಂಡ್	ನ್ಯೂಯಾರ್ಕ್
ಜೂ. 5	ಪಪುವಾ ನ್ಯೂಗಿನಿಯಾ vs ಉಗಾಂಡ	ಗಯಾನಾ
ಜೂ. 5	ಆಸ್ಟ್ರೇಲಿಯಾ vs ಒಮಾನ್	ಬಾರ್ಬಡೋಸ್
ಜೂ. 6	ಯುಎಸ್‌ಎ vs ಪಾಕಿಸ್ತಾನ	ಡಲ್ಲಾಸ್
ಜೂ. 6	ನಮೀಬಿಯಾ vs ಸ್ಕಾಟ್ಲೆಂಡ್	ಬಾರ್ಬಡೋಸ್
ಜೂ. 7	ಕೆನಡಾ vs ಐರ್ಲೆಂಡ್	ನ್ಯೂಯಾರ್ಕ್
ಜೂ. 7	ನ್ಯೂಝಿಲೆಂಡ್ ಡಐ ಅಫ್ಘಾನಿಸ್ತಾನ್	ಗಯಾನಾ
ಜೂ. 7	ಶ್ರೀಲಂಕಾ vs ಬಾಂಗ್ಲಾದೇಶ್	ಡಲ್ಲಾಸ್
ಜೂ. 8	ನೆದರ್‌ಲ್ಯಾಂಡ್ಸ್ vs ಸೌತ್ ಆಫ್ರಿಕಾ	ನ್ಯೂಯಾರ್ಕ್
ಜೂ. 8	ಆಸ್ಟ್ರೇಲಿಯಾ vs ಇಂಗ್ಲೆಂಡ್	ಬಾರ್ಬಡೋಸ್
ಜೂ. 8	ವೆಸ್ಟ್ ಇಂಡೀಸ್ vs ಉಗಾಂಡ	ಗಯಾನಾ
ಜೂ. 9	ಭಾರತ vs ಪಾಕಿಸ್ತಾನ್	ನ್ಯೂಯಾರ್ಕ್
ಜೂ. 9	ಒಮಾನ್ vs ಸ್ಕಾಟ್ಲೆಂಡ್	ಆಂಟಿಗುವಾ ಮತ್ತು ಬಾರ್ಬುಡಾ
ಜೂ. 10	ಸೌತ್ ಆಫ್ರಿಕಾ vs ಬಾಂಗ್ಲಾದೇಶ್	ನ್ಯೂಯಾರ್ಕ್
ಜೂ. 11	ಪಾಕಿಸ್ತಾನ vs ಕೆನಡಾ	ನ್ಯೂಯಾರ್ಕ್
ಜೂ. 11	ಶ್ರೀಲಂಕಾ vs ನೇಪಾಳ	ಲಾಡರ್‌ಹಿಲ್
ಜೂ. 11	ಆಸ್ಟ್ರೇಲಿಯಾ vs ನಮೀಬಿಯಾ	ಆಂಟಿಗುವಾ ಮತ್ತು ಬಾರ್ಬುಡಾ
ಜೂ. 12	ಯುಎಸ್‌ಎ vs ಭಾರತ	ನ್ಯೂಯಾರ್ಕ್
ಜೂ. 12	ವೆಸ್ಟ್ ಇಂಡೀಸ್ vs ನ್ಯೂಝಿಲೆಂಡ್	ಟ್ರಿನಿಡಾಡ್ ಮತ್ತು ಟೊಬಾಗೊ
ಜೂ. 13	ಇಂಗ್ಲೆಂಡ್ vs ಒಮಾನ್	ಆಂಟಿಗುವಾ ಮತ್ತು ಬಾರ್ಬುಡಾ
ಜೂ. 13	ಬಾಂಗ್ಲಾದೇಶ್ vs ನೆದರ್ಲೆಂಡ್ಸ್	ಸೇಂಟ್ ವಿನ್ಸೆಂಟ್ ಮತ್ತು ಗ್ರೆನಡೈನ್ಸ್
ಜೂ. 13	ಅಫ್ಘಾನಿಸ್ತಾನ್ vs ಪಪುವಾ ನ್ಯೂಗಿನಿಯಾ	ಟ್ರಿನಿಡಾಡ್ ಮತ್ತು ಟೊಬಾಗೊ
ಜೂ. 14	ಯುಎಸ್‌ಎ vs ಐರ್ಲೆಂಡ್	ಲಾಡರ್‌ಹಿಲ್
ಜೂ. 14	ಸೌತ್ ಆಫ್ರಿಕಾ vs ನೇಪಾಳ	ಸೇಂಟ್ ವಿನ್ಸೆಂಟ್ ಮತ್ತು ಗ್ರೆನಡೈನ್ಸ್
ಜೂ. 14	ನ್ಯೂಝಿಲೆಂಡ್ vs ಉಗಾಂಡ	ಟ್ರಿನಿಡಾಡ್ ಮತ್ತು ಟೊಬಾಗೊ
ಜೂ. 15	ಭಾರತ vs ಕೆನಡಾ	ಲಾಡರ್‌ಹಿಲ್
ಜೂ. 15	ನಮೀಬಿಯಾ vs ಇಂಗ್ಲೆಂಡ್	ಆಂಟಿಗುವಾ ಮತ್ತು ಬಾರ್ಬುಡಾ
ಜೂ. 15	ಆಸ್ಟ್ರೇಲಿಯಾ vs ಸ್ಕಾಟ್ಲೆಂಡ್	ಸೇಂಟ್ ಲೂಸಿಯಾ
ಜೂ. 16	ಪಾಕಿಸ್ತಾನ್ vs ಐರ್ಲೆಂಡ್	ಲಾಡರ್‌ಹಿಲ್
ಜೂ. 16	ಬಾಂಗ್ಲಾದೇಶ vs ನೇಪಾಳ	ಸೇಂಟ್ ವಿನ್ಸೆಂಟ್ ಮತ್ತು ಗ್ರೆನಡೈನ್ಸ್
ಜೂ. 16	ಶ್ರೀಲಂಕಾ vs ನೆದರ್ಲ್ಯಾಂಡ್ಸ್	ಸೇಂಟ್ ಲೂಸಿಯಾ
ಜೂ. 17	ನ್ಯೂಝಿಲೆಂಡ್ vs ಪಪುವಾ ನ್ಯೂಗಿನಿಯಾ	ಟ್ರಿನಿಡಾಡ್ ಮತ್ತು ಟೊಬಾಗೊ
ಜೂ. 17	ವೆಸ್ಟ್ ಇಂಡೀಸ್ vs ಅಫ್ಘಾನಿಸ್ತಾನ್	ಸೇಂಟ್ ಲೂಸಿಯಾ

ದೌರ್ಜನ್ಯ ಆರೋಪ: ಡಿಐಜಿ ವಜಾ

ದೆಹಲಿ: ಅತಿದೊಡ್ಡ ಅರೆಸೇನಾ ಪಡೆಯ ಕೆಲವು ಮಹಿಳಾ ಸಿಬ್ಬಂದಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿರುವ ಆರೋಪ ಹೊತ್ತಿರುವ ಸಿಆರ್‌ಪಿಎಫ್ ಡಿಐಜಿಯನ್ನು ಕೇಂದ್ರ ಸರಕಾರ ಸೇವೆಯಿಂದ ವಜಾಗೊಳಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಾಷ್ಟ್ರಪತಿಗಳ ಕಚೇರಿಯಿಂದ ಮೇ 30 ರಂದು ಡೆಪ್ಯುಟಿ ಇನ್‌ಸ್ಪೆಕ್ಟರ್ ಜನರಲ್ ಮತ್ತು ಕೇಂದ್ರ ಮೀಸಲು ಪೊಲೀಸ್ ಪಡೆಯ ಮಾಜಿ ಕ್ರೀಡಾ ಅಧಿಕಾರಿ ಖಾಜನ್ ಸಿಂಗ್ ಅವರನ್ನು ಸೇವೆಯಿಂದ ವಜಾಗೊಳಿಸಿ ಆದೇಶ ಹೊರಡಿಸಲಾಗಿದೆ. ಗೃಹ ಸಚಿವಾಲಯ ಮತ್ತು ಕೇಂದ್ರ ಲೋಕ ಸೇವಾ ಆಯೋಗ ಅನುಮೋದಿಸಿದ ಎರಡು ಶೋಕಾಸ್ ನೋಟಿಸ್‌ಗಳನ್ನು ಸಿಆರ್‌ಪಿಎಫ್ ಡಿಐಜಿಗೆ ನೀಡಿದ ನಂತರ ವಜಾಗೊಳಿಸುವ ಅಂತಿಮ ಆದೇಶ ಬಂದಿದೆ. ಈ ಹಿಂದೆ ಮುಂಬೈನಲ್ಲಿ ನಿಯೋಜಿಸಲಾಗಿದ್ದ ಸಿಂಗ್ ಅವರು ತಮ್ಮ ವಿರುದ್ಧದ ಲೈಂಗಿಕ ಕಿರುಕುಳದ ಆರೋಪಗಳನ್ನು ನಿರಾಕರಿಸಿದ್ದರು. ಅವು ಸಂಪೂರ್ಣ ಸುಳ್ಳು ಮತ್ತು ಅವರ ಇಮೇಜ್ ಹಾಳುಮಾಡಲು ಮಾಡಲಾಗಿದೆ ಎಂದು ಹೇಳಿದ್ದರು. ಸಿಆರ್‌ಪಿಎಫ್ ನಡೆಸಿದ ತನಿಖೆಯ ನಂತರ ಲೈಂಗಿಕ ಕಿರುಕುಳ ಆರೋಪಗಳಲ್ಲಿ ಸಿಂಗ್ ತಪ್ಪಿತಸ್ಥ ಎಂದು ಕಂಡುಬಂದ ನಂತರ ಗೃಹ ಸಚಿವಾಲಯವು ಯುಪಿಎಸ್ಸಿಯ ಶಿಫಾರಸುಗಳನ್ನು ಅಂಗೀಕರಿಸಿದ ನಂತರ ಅವರ ವಿರುದ್ಧ ಶೋಕಾಸ್ ನೋಟಿಸ್‌ಗಳನ್ನು ನೀಡಲಾಗಿತ್ತು. ಸಿಆರ್‌ಪಿಎಫ್ ಪ್ರಧಾನ ಕಚೇರಿಯು, ಈ ಹಿಂದೆ ಆಂತರಿಕ ಸಮಿತಿ ಸಿದ್ಧಪಡಿಸಿದ್ದ ತನಿಖಾ ವರದಿಯನ್ನು ಸ್ವೀಕರಿಸಿತ್ತು ಮತ್ತು ಶಿಸ್ತು ಕ್ರಮಕ್ಕಾಗಿ ಯುಪಿಎಸ್ಸಿ ಮತ್ತು ಗೃಹ ಸಚಿವಾಲಯಕ್ಕೆ ರವಾನಿಸಿತ್ತು.

ಕೇಜ್ರಿಗೆ ತಪ್ಪದ ಸೆರೆವಾಸ | ಅಂಬ್ಯುಲೆನ್ಸ್ ಕಳುಹಿಸಿದ ಬಿಜೆಪಿ ನಾಯಕ

ಸಿಎಂ ಕೇಜ್ರಿವಾಲ್ ವಿಚಾರಣೆ ಜೂನ್ 5ಕ್ಕೆ

ದೆಹಲಿ: ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರ ಮಧ್ಯಂತರ ಜಾಮೀನು ವಿಚಾರಣೆಯು ರೋಸ್ ಅವೆನ್ಯೂ ನ್ಯಾಯಾಲಯದಲ್ಲಿ ಪೂರ್ಣ ಗೊಂಡಿದ್ದು, ಜೂನ್ 5ಕ್ಕೆ ಮಧ್ಯಂತರ ಜಾಮೀನು ಕುರಿತು ನ್ಯಾಯಾಲಯ ತೀರ್ಪು ನೀಡಲಿದೆ. ಈ ಹಿನ್ನಲೆಯಲ್ಲಿ ಜಾಮೀನು ಅವಧಿ ಮುಗಿಸಿರುವ ಕೇಜ್ರಿ ಮತ್ತೆ ಜೈಲಿಗೆ ಶರಣಾಗಬೇಕಿದೆ. ಅನಾರೋಗ್ಯ ಮತ್ತು ವೈದ್ಯಕೀಯ ಪರೀಕ್ಷೆಯನ್ನು ಉಲ್ಲೇಖಿಸಿ ಕೇಜ್ರಿವಾಲ್ ಅವರು 7 ದಿನಗಳ ಮಧ್ಯಂ ತರ ಜಾಮೀನು ಕೋರಿದ್ದರು. ಈ ಹಿಂದೆ ಇದೇ ವಿಷ ಯದಲ್ಲಿ ದೆಹಲಿ ಮುಖ್ಯಮಂತ್ರಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಜೂನ್ 2 ರಂದು ಸ್ವತಃ ಶರಣಾಗುವುದಾಗಿ ತಪ್ಪುದಾರಿಗೆಳೆಯುವ ಹೇಳಿಕೆ ನೀಡಿದ್ದಾರೆ ಎಂದು ಜಾರಿ ನಿರ್ದೇಶನಾಲಯ (ಇಡಿ) ಪರವಾಗಿ ನ್ಯಾಯಾಲಯಕ್ಕೆ ತಿಳಿಸಲಾಯಿತು. ಈ ಕುರಿತು ಕೇಜ್ರಿವಾಲ್ ಪರ ವಕೀಲ ಎನ್. ಹರಿಹರನ್ ಅವರು ಈ ಹೇಳಿಕೆ ಬಗ್ಗೆ ತಿಳಿದಿಲ್ಲ ಎಂದು ಹೇಳಿದರು.

ಬಿಜೆಪಿ ನಾಯಕನಿಂದ ಅಂಬುಲೆನ್ಸ್

ವೈದ್ಯಕೀಯ ಕಾರಣಗಳಿಂದ ಜಾಮೀನು ಅವಧಿ ವಿಸ್ತರಣೆ ಕೋರಿರುವ ದೆಹಲಿ ಮುಖ್ಯ ಮಂತ್ರಿ ಅರವಿಂದ ಕೇಜ್ರಿವಾಲ್ ಅವರನ್ನು ವೈದ್ಯಕೀಯ ಪರೀಕ್ಷೆಗೆ ಆಸ್ಪತ್ರೆಗೆ ಕರೆದೊ ಯ್ಯಲು ಬಿಜೆಪಿ ನಾಯಕ ವಿಜಯ್ ಗೋಯಲ್ ಅವರು ಆಂಬುಲೆನ್ಸ್ ಕಳುಹಿಸಿದ್ದಾರೆ. ಮುಖ್ಯಮಂತ್ರಿ ಅವರ ಅಧಿಕೃತ ನಿವಾಸಕ್ಕೆ ಹೋಗುವ ಮಾರ್ಗ ಮಧ್ಯೆ ಆಂಬುಲೆನ್ಸ್ ಮತ್ತು ವಿಜಯ್ ಗೋಯಲ್ ಅವರನ್ನು ಪೊಲೀಸರು ತಡೆದಿದ್ದಾರೆ. ಜನರ ಸಹಾನು ಭೂತಿ ಗಳಿಸಲು ಕೇಜ್ರಿವಾಲ್ ಅವರು ಆರೋಗ್ಯ ಸಮಸ್ಯೆಗಳನ್ನು ಮುಂದಿಟ್ಟುಕೊಂಡು ನಾಟಕ ಮಾಡುತ್ತಿದ್ದಾರೆ ಎಂದು ಆರೋಪಿಸಿದ ಗೋಯಲ್, ಈ ಆಂಬುಲೆನ್ಸ್ ಕೇಜ್ರಿವಾಲ್ ಅವರನ್ನು ಯಾವುದೇ ಆಸ್ಪತ್ರೆಗೆ ಬೇಕಾದರೂ ಕರೆದೊಯ್ಯುತ್ತದೆ. ಅಲ್ಲಿ ಅವರ ಎಲ್ಲಾ ವೈದ್ಯಕೀಯ ಪರೀಕ್ಷೆಗಳನ್ನು ಎರಡು ಗಂಟೆಗಳಲ್ಲಿ ಮಾಡಬಹುದು ಎಂದು ಸುದ್ದಿಗಾರರಿಗೆ ತಿಳಿಸಿದ್ದಾರೆ.

ರಾಜಧಾನಿಯಲ್ಲಿ ಉಲ್ಬಣಗೊಂಡ ನೀರಿನ ಬಿಕ್ಕಟ್ಟು | ಕೇಂದ್ರಕ್ಕೆ ಅತಿಶಿ ಪತ್ರ

ದೆಹಲಿಗೆ ಹರಿಯಾಣ ನೀರು: ವಿಚಾರಣೆ ನಾಳೆ

ದೆಹಲಿ: ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ನೀರಿನ ಬಿಕ್ಕಟ್ಟು ತೀವ್ರವಾಗುತ್ತಿದ್ದು, ಹೆಚ್ಚುವರಿ ನೀರು ಬಿಡುಗಡೆ ಮಾಡಲು ಪಕ್ಕದ ಹರಿಯಾಣ ರಾಜ್ಯಕ್ಕೆ ನಿರ್ದೇಶನ ನೀಡುವಂತೆ ಕೋರಿ ದೆಹಲಿಯ ಎಎಪಿ ಸರಕಾರ ಸಲ್ಲಿಸಿದ್ದ ಅರ್ಜಿ ಕುರಿತು ಸುಪ್ರೀಂ ಕೋರ್ಟ್, ಸೋಮವಾರ ವಿಚಾರಣೆ ನಡೆಸಲಿದೆ.

ಸುಪ್ರೀಂ ಕೋರ್ಟ್‌ನ ನ್ಯಾ.ಪಿ.ಕೆ. ಮಿಶ್ರಾ ಮತ್ತು ಕೆ.ವಿ. ವಿಶ್ವನಾಥನ್ ಅವರ ಪೀಠವು ಅರ್ಜಿ ವಿಚಾರಣೆ ನಡೆಸುವ ಸಾಧ್ಯತೆ ಇದೆ ಎಂದು ವರದಿಯಾಗಿದೆ. ಬಿಸಿಗಾಳಿಯ ಪರಿಣಾಮ ದೆಹಲಿಯಲ್ಲಿ ನೀರಿನ ಬೇಡಿಕೆ ಗಣನೀಯ ಪ್ರಮಾಣದಲ್ಲಿ ಹೆಚ್ಚಾಗಿದೆ. ಹೀಗಾಗಿ ಒಂದು ತಿಂಗಳವರೆಗೆ ಹೆಚ್ಚುವರಿ ನೀರು ಬಿಡುಗಡೆ ಮಾಡುವಂತೆ ಹರಿಯಾಣ ಸರಕಾರಕ್ಕೆ ಸೂಚಿಸುವಂತೆ ದೆಹಲಿ ಸರಕಾರ ಕೋರಿದ್ದು, ದೇಶದ ರಾಜಧಾನಿಯ ಜನರ ನೀರಿನ ಅಗತ್ಯಗಳನ್ನು ಪೂರೈಸುವ ನಿಟ್ಟಿನಲ್ಲಿ ಕೆಲಸ ಮಾಡುವುದು ಎಲ್ಲರ ಜವಾಬ್ದಾರಿ ಆಗಿದೆ ಎಂದು ಹೇಳಿತ್ತು. ಬಿಸಿಗಾಳಿಯಿಂದಾಗಿ ನೀರಿನ ಬೇಡಿಕೆ ಹೆಚಾಗಿದ್ದು, ಜನರು ನೀರಿಗಾಗಿ ಪರದಾಟ ನಡೆಸುವ ಅನಿವಾರ್ಯತೆ ಸೃಷ್ಟಿಯಾಗಿದೆ. ಹೀಗಾಗಿ ಇದು ರಾಜಕೀಯ ನಡೆಸುವ ಸಮಯವಲ್ಲ, ಬದಲಿಗೆ ನಾವೆಲ್ಲ ಒಟ್ಟಾಗಿ ದೆಹಲಿ ಜನರ ಸಮಸ್ಯೆ ಪರಿಹರಿಸಲು ಕೈಜೋಡಿಸಬೇಕಾದ ಸಮಯ ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ವಿನಂತಿಸಿದ್ದರು.

ಕೇಂದ್ರ ಸಚಿವಾಲಯಕ್ಕೆ ಅತಿಶಿ ಪತ್ರ

ದೆಹಲಿಯ ನೀರಿನ ಬಿಕ್ಕಟ್ಟನ್ನು ಪರಿಹರಿಸಲು ಉತ್ತರ ಪ್ರದೇಶ ಅಥವಾ ಹರಿಯಾಣದಿಂದ ನೀರನ್ನು ಬಿಡುಗಡೆ ಮಾಡಿಸುವಂತೆ ಕೋರಿ ದೆಹಲಿ ಜಲ ಸಚಿವೆ ಆತಿಶಿ ಕೇಂದ್ರದ ಜಲಶಕ್ತಿ ಸಚಿವ ಗಜೇಂದ್ರ ಸಿಂಗ್ ಶೆಖಾವತ್ ಅವರಿಗೆ ಪತ್ರ ಬರೆದಿದ್ದಾರೆ. ಹರಿಯಾಣವು ಯಮುನಾ ನದಿಗೆ ಅಗತ್ಯ ಪ್ರಮಾಣದಲ್ಲಿ ನೀರು ಹರಿಸುತ್ತಿಲ್ಲ. ಇದರಿಂದಾಗಿ ಕೆಲ ದಿನಗಳಿಂದ ವಜೀರಾಬಾದ್ ಬ್ಯಾರೇಜ್‌ನಲ್ಲಿ ನೀರಿನಮಟ್ಟ ತೀವ್ರವಾಗಿ ಕುಸಿತವಾಗಿದೆ ಎಂದು ಅವರು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಅದೊಂದು ವಿದೇಶಕ್ಕೆ ಸೇರಿರುವ ಎಜೆಕೆ | ಪಾಕ್ ಸರಕಾರಿ ವಕೀಲರ ಹೇಳಿಕೆ

ಆಕ್ರಮಿತ ಕಾಶ್ಮೀರ ಪಾಕಿಸ್ತಾನಕ್ಕೆ ಸೇರಿಲ್ಲ!

ದೆಹಲಿ: ಪಾಕ್‌ಆಕ್ರಮಿತ ಕಾಶ್ಮೀರ (ಪಿಒಕೆ), ಆಜಾದ್ ಜಮ್ಮು ಕಾಶ್ಮೀರ (ಎಜೆಕೆ) ಎಂದು ಕರೆಯುವ ವಿದೇಶಿ ನೆಲ ಎಂದು ಒಪ್ಪಿಕೊಂಡಿದೆ. ಈ ಹಿಂದೆ 1999ರಲ್ಲಿ ಭಾರತದೊಂದಿಗೆ ಮಾಡಿಕೊಂಡಿದ್ದ ಶಾಂತಿ ಒಪ್ಪಂದವನ್ನು ಪಾಕಿಸ್ತಾನ ಮುರಿದಿದೆ ಎಂದು ಪಾಕಿಸ್ತಾನದ ಮಾಜಿ ಪ್ರಧಾನಿ ನವಾಜ್ ಷರೀಫ್ ಇತ್ತೀಚೆಗೆ ಒಪ್ಪಿಕೊಂಡಿದ್ದರು. ಇದೀಗ ಪಾಕ್ ಮತ್ತೊಂದು ಹೇಳಿಕೆ ನೀಡಿದ್ದು, ಚರ್ಚೆಗೆ ಕಾರಣವಾಗಿದೆ.

ಇಸ್ಲಾಮಾಬಾದ್ ಹೈಕೋರ್ಟ್‌ನಲ್ಲಿ ಕವಿ ಮತ್ತು ಪತ್ರಕರ್ತ ಅಹ್ಮದ್ ಫರ್ಹಾದ್ ಶಾ ಪಿಒಕೆಯಿಂದ ಎರಡು ವಾರಗಳಿಂದ ನಾಪತ್ತೆಯಾಗಿರುವ ಬಗ್ಗೆ ವಿಚಾರಣೆ ನಡೆಯುತ್ತಿದ್ದು, ಇದೇ ವಿಷಯದ ಬಗ್ಗೆ ವಿಚಾರಣೆ ನಿಡುವ ವೇಳೆ ಸರಕಾರಿ ವಕೀಲರೊಬ್ಬರು ಆಘಾತಕಾರಿ ಹೇಳಿಕೆಯನ್ನು ನೀಡಿದ್ದು, ಪಿಒಕೆ ವಿದೇಶಿ ಪ್ರದೇಶವಾಗಿದೆ ಎಂದು ಹೇಳಿದ್ದಾರೆ. ಬಳಿಕ ಆತ ಪೊಲೀಸರ ವಶದಲ್ಲಿರುವ ವಿಚಾರ ಬೆಳಕಿಗೆ ಬಂದಿದೆ. ಪಿಒಕೆ ತನ್ನ ಭಾಗವಲ್ಲ ಎಂದು ಪಾಕಿಸ್ತಾನ ಒಪ್ಪಿಕೊಂಡಿದ್ದು, ಈ ಹೇಳಿಕೆಯಿಂದ ಪಾಕಿಸ್ತಾನದ ಅನೇಕ ಜನರು ಆಶ್ಚರ್ಯಚಕಿತರಾಗಿದ್ದಾರೆ.

ಪಿಒಕೆ ಅಥವಾ ಕಾಶ್ಮೀರ ಸ್ವತಂತ್ರ ದೇಶ ಎಂದು ಪಾಕಿಸ್ತಾನ ಹೇಳಿಲ್ಲ. ಬದಲಿಗೆ ಪಿಒಕೆ ವಿದೇಶಿ ಪ್ರದೇಶ ಎಂದು ಹೇಳಿದೆ. ಇದರರ್ಥ ಕಾಶ್ಮೀರವು ಸ್ವತಂತ್ರವಾಗಿಲ್ಲ ಆದರೆ ಬೇರೆ ಯಾವುದೋ ದೇಶದ ಭಾಗವಾಗಿದೆ ಎಂದು ಅವರು ನಂಬುತ್ತಾರೆ. ಪರೋಕ್ಷವಾಗಿಯೂ ಸಹ, ಪಾಕಿಸ್ತಾನವು ಜಮ್ಮು ಮತ್ತು ಕಾಶ್ಮೀರವು ಭಾರತದ ಅವಿಭಾಜ್ಯ ಅಂಗವಾಗಿದೆ ಎಂದು ನಂಬುವಂತೆ ತೋರುತ್ತದೆ. ಅದು ತನ್ನ ಪ್ರದೇಶವನ್ನು ಬಲವಂತವಾಗಿ ಆಕ್ರಮಿಸಿಕೊಂಡಿದೆ. ಈಗ ಪಾಕಿಸ್ತಾನದಲ್ಲಿ, ಈ ಬಗ್ಗೆ ಜನರಲ್ಲಿ ಭಯವು ಸ್ಪಷ್ಟವಾಗಿ ಗೋಚರಿಸುತ್ತದೆ.

ವಿಚಾರಣೆಯಲ್ಲಿ ಎಜೆಕೆ ಶಬ್ದ ಬಳಿಕೆ

ಪಾಕಿಸ್ತಾನಿ ಪತ್ರಕರ್ತ ಹಮೀದ್ ಮೀರ್ ಅವರು ಹೈಕೋರ್ಟ್‌ನಲ್ಲಿ ಸರಕಾರದ ಈ ಹೇಳಿಕೆಗೆ ಆಕ್ರೋಶಗೊಂಡಿದ್ದು, ಪಾಕಿಸ್ತಾನ ಎಜೆಕೆಯನ್ನು ಅತ್ಯಂತ ನಕಾರಾತ್ಮಕ ದೃಷ್ಟಿಕೋನದಲ್ಲಿ ಪ್ರಸ್ತುತಪಡಿಸುತ್ತಿದೆ. ಅವರು ಇಸ್ಲಾಮಾಬಾದ್‌ನಿಂದ ಕವಿಯನ್ನು ಅಪಹರಿಸಿದ್ದು, ಅಪಹರಣವನ್ನು ಒಪ್ಪಿಕೊಳ್ಳಲು ಅವರಿಗೆ ನೈತಿಕ ಧೈರ್ಯವಿಲ್ಲ. ಈಗ ಅವರು ಎಜೆಕೆಯಲ್ಲಿ ಅವರ ಬಂಧನವನ್ನು ತೋರಿಸಿದ್ದಾರೆ. ಇಸ್ಲಾಮಾಬಾದ್ ಹೈಕೋರ್ಟ್‌ನಲ್ಲಿ ಎಜೆಕೆಯನ್ನು ವಿದೇಶಿ ಪ್ರದೇಶವೆಂದು ಘೋಷಿಸಿದ್ದಾರೆ. ಇದರರ್ಥ ಅವರು ಪಿಒಕೆಯಲ್ಲಿ ಆಕ್ರಮಿತ ಪಡೆಗಳ ಅಧಿಕಾರವನ್ನು ಹೊಂದಿದ್ದಾರೆ, ಆದರೆ ಪಾಕಿಸ್ತಾನಿ ನ್ಯಾಯಾಲಯಗಳಿಗೆ ಯಾವುದೇ ನ್ಯಾಯವ್ಯಾಪ್ತಿ ಇಲ್ಲ ಎಂದು ಹೇಳಿದರು.

ಸಮಾಚಾರ ಸಣ್ಣದಲ್ಲ

ಫಲಿತಾಂಶದ ಮೇಲೆ ಪ್ರಭಾವ ಬೀರಲು ಯತ್ನ

ದೆಹಲಿ: ಲೋಕಸಭೆ ಚುನಾವಣೆ ಫಲಿತಾಂಶ ಪ್ರಕಟಗೊಳ್ಳಲಿರುವಂತೆಯೇ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಸುಮಾರು 150 ಜಿಲ್ಲಾಧಿಕಾರಿಗಳೊಂದಿಗೆ ಮಾತನಾಡಿದ್ದಾರೆ. ಈ ಮೂಲಕ ಅವರ ಮೇಲೆ ಪ್ರಭಾವ ಬೀರಲು ಪ್ರಯತ್ನಿಸಿದ್ದಾರೆ. ಇದು ಬಿಜೆಪಿಯ ಹತಾಶೆಗೆ ಹಿಡಿದ ಕೈಗನ್ನಡಿಯಾಗಿದೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಆರೋಪಿಸಿದ್ದಾರೆ. ಈ ಸಂಬಂಧ ಎಕ್ಸ್‌ನಲ್ಲಿ ಪೋಸ್ಟ್ ಹಂಚಿಕೊಂಡಿರುವ ಅವರು ಜೂನ್ 4ರ ಬಳಿಕ ಪ್ರಧಾನಿ ಮೋದಿ, ಅಮಿತ್ ಶಾ ಸೇರಿದಂತೆ ಬಿಜೆಪಿ ನಿರ್ಗಮಿಸಲಿದೆ ಎಂಬುದು ಸ್ಪಷ್ಟವಾಗಿದೆ ಎಂದು ಹೇಳಿದ್ದಾರೆ. ಜನರ ಇಚ್ಛೆ ಮೇಲುಗೈ ಸಾಧಿಸಲಿದೆ. ಇಂಡಿಯಾ ಮೈತ್ರಿಕೂಟಕ್ಕೆ ಜಯ ಸಿಗಲಿದೆ. ಅಧಿಕಾರಿಗಳು ಯಾವುದೇ ಒತ್ತಡಕ್ಕೆ ಒಳಗಾಗದೆ ಸಂವಿಧಾನವನ್ನು ಎತ್ತಿಹಿಡಿಯುವ ಕೆಲಸ ಮಾಡಬೇಕೆಂದು ಎಂದು ಪೋಸ್ಟ್‌ನಲ್ಲಿ ಬರೆದುಕೊಂಡಿದ್ದಾರೆ.

ಮೋದಿ ಮೌನ ಮುರಿಯಿರಿ: ಲಂಬಾ

ದೆಹಲಿ: ಲೈಂಗಿಕ ದೌರ್ಜನ್ಯದ ಆರೋಪಿ ಪ್ರಜ್ವಲ್ ರೇವಣ್ಣ ಬಂಧನದ ಹಿನ್ನೆಲೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಮೌನವನ್ನು ಶನಿವಾರ ಪ್ರಶ್ನಿಸಿರುವ ಕಾಂಗ್ರೆಸ್, ಕಳೆದ 10 ವರ್ಷಗಳಲ್ಲಿ ಮಹಿಳೆಯರಿಗೆ ನ್ಯಾಯ ಒದಗಿಸುವಲ್ಲಿ ವಿಫಲರಾಗಿದ್ದಾರೆ ಎಂದು ಆರೋಪಿಸಿದೆ. ಪ್ರಜ್ವಲ್ ರೇವಣ್ಣ ಏಪ್ರಿಲ್ 27 ರಂದು ವಿದೇಶಕ್ಕಾಗಿ ಪರಾರಿಯಾಗಿದ್ದರು. ಇದಕ್ಕೆ ಅವಕಾಶ ನೀಡಿದ್ದಕ್ಕಾಗಿ ಮೋದಿ ವಿರುದ್ಧ ವಾಗ್ದಾಳಿ ನಡೆಸಿದ ಅಖಿಲ ಭಾರತ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಅಲ್ಕಾ ಲಂಬಾ, ಮಾಸ್ ರೇಪಿಸ್ಟ್ ಎಸ್ಕೇಪ್ ಆಗುವುದು ಮೋದಿಯ ಗ್ಯಾರಂಟಿ. ಹಾಸನದ ಸಂಸದ ರೇವಣ್ಣ ಅವರನ್ನು ರಾಜ್ಯ ಸರಕಾರ ರಚಿಸಿರುವ ಎಸ್‌ಐಟಿ ಬಂಧಿಸಿದೆ. ಎಸ್‌ಐಟಿ ರಚಿಸಿದ ಮಹಿಳಾ ಪೊಲೀಸ್ ತಂಡ ಇದನ್ನು ಮಾಡಿದೆ. ಅದಕ್ಕಾಗಿ ಕರ್ನಾಟಕ ಸರಕಾರವನ್ನು ಅಭಿನಂದಿಸುತ್ತೇವೆ ಎಂದು ಲಂಬಾ ಹೇಳಿದರು. ಎಐಸಿಸಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನರೇಂದ್ರ ಮೋದಿ ಬೇಟಿ ಬಚಾವೋ ಘೋಷಣೆಯನ್ನು ಆಗಾಗ್ಗಲೇ ಹೇಳುತ್ತಲೇ ಇದ್ದರು. ಆದರೆ, ಪ್ರಜ್ವಲ್ ರೇವಣ್ಣ ಅವರ ಬಗ್ಗೆ ಮೌನ ಮುರಿದಿರಲಿಲ್ಲ. ರೇವಣ್ಣ ಅವರನ್ನು ದೇಶಕ್ಕೆ ಕರೆತರುವಂತೆ ಮುಖ್ಯಮಂತ್ರಿ 21 ದಿನಗಳ ನಂತರ ಮತ್ತೊಮ್ಮೆ ಮೋದಿಗೆ ಪತ್ರ ಬರೆಯಬೇಕಾಯಿತು. ಪ್ರಜ್ವಲ್ ರೇವಣ್ಣ ಪ್ರಕರಣದ ಬಗ್ಗೆ ಮೋದಿ ಎಷ್ಟು ಗಂಭೀರವಾಗಿದ್ದರು ಎಂಬುದು ಇದರಿಂದ ತಿಳಿಯುತ್ತದೆ. ಸಂತ್ರಸ್ತೆಯರು ಮತ್ತು ಸಾಕ್ಷಿಗಳ ಮೇಲೆ ಒತ್ತಡ ಹೇರುವ ಸಾಧ್ಯತೆ ಇನ್ನೂ ಇದೆ. ಪ್ರಧಾನಿ ಮೋದಿ ಮೌನ ಮುರಿಯಬೇಕು ಮತ್ತು ಯಾವುದೇ ಸಾಕ್ಷ್ಯವನ್ನು ತಿರುಚುವುದಿಲ್ಲ ಮತ್ತು ನಮ್ಮ ಹೆಣ್ಣುಮಕ್ಕಳಿಗೆ ನ್ಯಾಯವನ್ನು ಖಾತರಿಪಡಿಸಲಾಗುವುದು ಎಂದು ಭರವಸೆ ನೀಡಬೇಕು ಎಂದು ಒತ್ತಾಯಿಸಿದರು.

ಅರುಣಾಚಲ, ಸಿಕ್ಕಿಂಗೆ ಇಂದು ಮತ ಎಣಿಕೆ

ಇಟಾನಗರ: ಅರುಣಾಚಲ ಪ್ರದೇಶ ಮತ್ತು ಸಿಕ್ಕಿಂ ರಾಜ್ಯಗಳ ವಿಧಾನಸಭಾ ಚುನಾವಣೆಯ ಮತ ಎಣಿಕೆ ಭಾನುವಾರ (ಜೂನ್ 2) ನಿಗದಿಯಾಗಿದೆ. ಈ ಎರಡೂ ರಾಜ್ಯಗಳಲ್ಲಿ ಲೋಕಸಭಾ ಮತ್ತು ವಿಧಾನಸಭಾ ಚುನಾವಣೆಯ ಮತದಾನ ಏಪ್ರಿಲ್ 19 ರಂದು ಏಕಕಾಲದಲ್ಲಿ ನಡೆದಿತ್ತು. 60 ಕ್ಷೇತ್ರಗಳನ್ನು ಒಳಗೊಂಡಿರುವ ಅರುಣಾಚಲ ಪ್ರದೇಶ ವಿಧಾನ ಸಭೆಯ 50 ಸ್ಥಾನಗಳಿಗೆ ಮತದಾನ ನಡೆದಿತ್ತು. ಆಡಳಿತಾರೂಢ ಬಿಜೆಪಿಯು 10 ಕ್ಷೇತ್ರಗಳನ್ನು ಅವಿರೋಧವಾಗಿ ಗೆದ್ದುಕೊಂಡಿದೆ. ವಿಧಾನಸಭಾ ಚುನಾವಣೆಯ ಮತ ಎಣಿಕೆಯು ರಾಜ್ಯದ 24 ಕೇಂದ್ರಗಳಲ್ಲಿ ಜೂನ್ 2ರಂದು ಬೆಳಿಗ್ಗೆ 6ರಿಂದ ಶುರುವಾಗಲಿದೆ. ಲೋಕಸಭಾ ಚುನಾವಣೆಯ ಮತಎಣಿಕೆ 25 ಕೇಂದ್ರಗಳಲ್ಲಿ ಜೂನ್ 4ರಂದು ನಡೆಯಲಿದೆ ಎಂದು ಅರುಣಾಚಲ ಪ್ರದೇಶದ ಮುಖ್ಯ ಚುನಾವಣಾಧಿಕಾರಿ ಪವನ್ ಕುಮಾರ್ ಸೇನ್ ತಿಳಿಸಿದರು. ಮತ ಎಣಿಕೆಗಾಗಿ ಎರಡೂ ದಿನ (ಜೂನ್ 2 ಮತ್ತು ಜೂನ್ 4 ರಂದು) ಎರಡು ಸಾವಿರಕ್ಕೂ ಅಧಿಕ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ ಎಂದು ಹೇಳಿದರು.

ವಿದೇಶ ಯಾತ್ರೆ ಮುಗಿಸಿ ಬಂದ ಜಗನ್

ಅಮರಾವತಿ: ವಿದೇಶ ಯಾತ್ರೆಗೆ ತೆರಳಿದ್ದ ಆಂಧ್ರ ಪ್ರದೇಶ ಮುಖ್ಯಮಂತ್ರಿ ವೈ.ಎಸ್. ಜಗನ್ ಮೋಹನ್ ರೆಡ್ಡಿ ಅವರು ಶನಿವಾರ ಮರಳಿದ್ದಾರೆ. ಲೋಕಸಭೆ ಮತ್ತು ವಿಧಾನಸಭೆ ಚುನಾವಣೆ ಮುಗಿದ ಬಳಿಕ ಜಗನ್ ಅವರು ಕುಟುಂಬದ ಜೊತೆ ಮೇ18ರಂದು ವಿದೇಶ ಯಾತ್ರೆಗೆ ತೆರಳಿದ್ದರು. ವಿದೇಶ ಪ್ರವಾಸ ಮುಗಿಸಿ ಜಗನ್ ಅವರು ವಿಜಯವಾಡಕ್ಕೆ ಮರಳಿದ್ದಾರೆ ಎಂದು ವೈಎಸ್‌ಆರ್‌ಸಿಪಿ ಎಕ್ಸ್ ಮಾಧ್ಯಮದಲ್ಲಿ ಹೇಳಿದೆ.

ಕೊನೆಯ ಹಂತ: ಹಲವೆಡೆ ಮುಗಿಲು, ಬಂಗಾಳದಲ್ಲಿ ಭುಗಿಲು

ಪ್ರಧಾನಿ ಮೋದಿ, ನಟಿ ಕಂಗನಾ ರಣಾವತ್, ಅಭಿಶೇಕ್ ಬ್ಯಾನರ್ಜಿ ಸೇರಿದಂತೆ ಹಲವಾರು ಘಟಾನುಘಟಿ ನಾಯಕರ ಭವಿಷ್ಯ ಭದ್ರ

ದೆಹಲಿ: 7 ನೇ ಹಾಗೂ ಕೊನೆಯ ಹಂತದ ಚುನಾವಣೆಗೆ ಶನಿವಾರದಂದು ಮತದಾನವಾಗಿದ್ದು, ಶೇ. 59.5ರಷ್ಟು ಮತ ಚಲಾವಣೆಯಾಗಿದೆ.

7 ರಾಜ್ಯ ಹಾಗೂ ಚಂಡೀಗಢಕ್ಕೆ ನಡೆದ ಚುನಾವಣೆಯಲ್ಲಿ, ಅತೀ ಕಡಿಮೆ (ಶೇ.50.9) ಮತದಾನ ಬಿಹಾರದಲ್ಲಿ ಆಗಿದ್ದು. ಹಿಮಾಚಲ ಪ್ರದೇಶದಲ್ಲಿ ಶೇ. 48.6 ರಷ್ಟಾಗಿದೆ. 7 ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶ ಚಂಡೀಗಢದ 57 ಕ್ಷೇತ್ರಗಳಿಗೆ ನಡೆದ ಚುನಾವಣೆಯಲ್ಲಿ 904 ಅಭ್ಯರ್ಥಿಗಳ ಭವಿಷ್ಯವೂ ಮತಪೆಟ್ಟಿಗೆಯಲ್ಲಿ ಅಡಗಿದೆ.

ಉತ್ತರ ಪ್ರದೇಶ ಹಾಗೂ ಪಂಜಾಬಿನ 13 ಸೀಟುಗಳು, ಪಶ್ಚಿಮ ಬಂಗಾಳದ 9, ಬಿಹಾರದಲ್ಲಿ 8, ಒಡಿಶಾದಲ್ಲಿ 6, ಹಿಮಾಚಲ ಪ್ರದೇಶದಲ್ಲಿ 4, ಜಾರ್ಖಾಂಡ್‌ನಲ್ಲಿ 3, ಛತ್ತೀಸಗಢದ ಒಂದು ಕ್ಷೇತ್ರದಲ್ಲಿ ಮತದಾನ ನಡೆಯಿತು.

ವಾರಾಣಾಸಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಜತೆಗೆ ಹಲವಾರು ಪ್ರಮುಖ ಬಿಜೆಪಿ ನಾಯಕರು ಈ ಹಂತದ ಚುನಾವಣೆಯಲ್ಲಿ ಸ್ಪರ್ಧೆಮಾಡಿದ್ದರು. ಅದರಲ್ಲಿ, ಹಿಮಾಚಲ ಪ್ರದೇಶದ ಹಮರ್‌ಪುರ್‌ನಿಂದ ಕೇಂದ್ರ ಮಂತ್ರಿ ಅನುರಾಗ್ ಠಾಕೂರ್, ಬಿಹಾರದ ಪಾಟ್ನಾಸಾಹಿಬ್‌ನಿಂದ ರವಿ ಶಂಕರ್ ಠಾಕೂರ್, ನಟಿ ಕಂಗನಾ ಕಣದಲ್ಲಿದ್ದ ಬಿಜೆಪಿ ಖ್ಯಾತನಾಮರು.

ಕಾಂಗ್ರೆಸ್‌ನ ಮನೀಶ್ ತಿವಾರಿಅವರು ಚಂಡೀಗಢದಿಂದ ಸ್ಪರ್ಧಿಸುತ್ತಿದ್ದರೆ, ಹಿಮಾಚಲ ಪ್ರದೇಶದ ಮಂಡಿ ಕ್ಷೇತ್ರದಿಂದ ವಿಕ್ರಮಾದಿತ್ಯ ಸಿಂಗ್, ವಾರಣಾಸಿಯಿಂದ ಅಜಯ್ ರೈ, ಮಮತಾ ಬ್ಯಾನರ್ಜಿ ಸೋದರಳಿಯ ಹಾಗೂ ಟಿಎಂಸಿಯ ನಾಯಕ ಅಭಿಶೇಕ್ ಬ್ಯಾನರ್ಜಿ ಡೈಮಂಡ್ ಹಾರ್ಬರ್ ಕ್ಷೇತ್ರದಿಂದ ಚುನಾವಣಾಕಣದಲ್ಲಿದ್ದಾರೆ.

ಮತದಾನದ ಅಂಕಿ ಸಂಖ್ಯೆ

ರಾಜ್ಯ	ಕ್ಷೇತ್ರಗಳ ಸಂಖ್ಯೆ	ಶೇಕಡಾವಾರು ಮತದಾನ
ಬಿಹಾರ	8	50.9
ಚಂಡೀಗಢ	1	62.8
ಹಿಮಾಚಲ ಪ್ರದೇಶ	4	67.9
ಜಾರ್ಖಾಂಡ್	3	70.0
ಒಡಿಶಾ	6	63.7
ಪಂಜಾಬ್	13	55.9
ಉತ್ತರ ಪ್ರದೇಶ	13	55.6
ಪಶ್ಚಿಮ ಬಂಗಾಳ	9	69.9

ಪ. ಬಂಗಾಳದಲ್ಲಿ ಚುನಾವಣಾ ಹಿಂಸಾಚಾರ

ಕೋಲ್ಕತ್ತಾ: ಪಶ್ಚಿಮ ಬಂಗಾಳದ ಜಾದವ್ಪುರ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಭಾಂಗಾನರ್ ಸತುಲಿಯಾ ಪ್ರದೇಶದಲ್ಲಿ ಇಂಡಿಯನ್ ಸೆಕ್ಯುಲರ್ ಫ್ರಂಟ್ ಮತ್ತು ಸಿಪಿಐ ಬೆಂಬಲಿಗರ ನಡುವೆ ಘರ್ಷಣೆಗಳು ಉಂಟಾಗಿ ಹಿಂಸಾಚಾರ ನಡೆದಿದೆ. ಈ ಘರ್ಷಣೆ ವೇಳೆ ಹಲವರಿಗೆ ಗಾಯಗಳಾಗಿದ್ದು ಪರಿಸ್ಥಿತಿ ಉಲ್ಬಣಗೊಂಡಿದೆ. ಕಿಡಿಗೇಡಿಗಳು ಬಾಂಬ್ ದಾಳಿ ನಡೆಸಿ ಮತಗಟ್ಟೆಗೆ ನುಗ್ಗಿ, ಎಲೆಕ್ಟ್ರಾನಿಕ್ ಮತಯಂತ್ರವನ್ನು (ಇವಿಎಂ) ಕೊಳಕ್ಕೆ ಎಸೆದಿದ್ದಾರೆ.

ಅಂತೆಯೇ ಡೈಮಂಡ್ ಹಾರ್ಬರ್ ಕ್ಷೇತ್ರದ ವಿವಿಧ ಭಾಗಗಳಲ್ಲಿ ಟಿಎಂಸಿ, ಐಎಸ್‌ಎಫ್ ಮತ್ತು ಬಿಜೆಪಿ ಕಾರ್ಯಕರ್ತರು ಘರ್ಷಣೆ ನಡೆಸಿದ್ದು, ಬೂತ್‌ಗಳಿಗೆ ಪೋಲಿಂಗ್ ಏಜೆಂಟ್‌ಗಳನ್ನು ಪ್ರವೇಶಿಸುವುದನ್ನು ತಡೆಯುವ ವಿಚಾರದ ಕುರಿತು ಈ ಘರ್ಷಣೆ ಏರ್ಪಟ್ಟಿದ್ದು, ಟಿಎಂಸಿ, ಐಎಸ್‌ಎಫ್ ಮತ್ತು ಬಿಜೆಪಿ ಬೆಂಬಲಿಗರ ನಡುವೆ ಘರ್ಷಣೆಗಳು ನಡೆದಿವೆ. ಎರಡೂ ಕಡೆಯಿಂದ ಕಚ್ಚಾ ಬಾಂಬ್‌ಗಳನ್ನು ಎಸೆಯಲಾಗಿದ್ದು, ಪರಸ್ಪರ ದೊಣ್ಣೆ, ಬಡಿಗೆಗಳನ್ನು ಹಿಡಿದು ಹೊಡೆದಾಡಿದ್ದಾರೆ.

ಸುದ್ದಿಗಾರರ ಮೇಲೆಯೇ ಹಲ್ಲೆ

ಅಂತೆಯೇ ಪಶ್ಚಿಮ ಬಂಗಾಳದ ಜಯನಗರ ಲೋಕಸಭಾ ಕ್ಷೇತ್ರದ ವ್ಯಾಪ್ತಿಯ ಕ್ಯಾನಿಂಗ್‌ನಲ್ಲಿ ಟಿಎಂಸಿ-ಬಿಜೆಪಿ ಘರ್ಷಣೆಯಲ್ಲಿ ಎಎನ್‌ಐ ಸುದ್ದಿ ಸಂಸ್ಥೆಯ ವರದಿಗಾರನ ಮೇಲೆ ಹಲ್ಲೆಯಾಗಿದ್ದು, ವರದಿಗಾರ ತೀವ್ರವಾಗಿ ಗಾಯಗೊಂಡಿದ್ದಾರೆ. ಈ ಪ್ರದೇಶದಲ್ಲಿ ಎರಡು ಪಕ್ಷಗಳ ನಡುವೆ ಕಲ್ಲು ತೂರಾಟ ನಡೆದಿದ್ದು, ಈ ವೇಳೆ ವರದಿಗಾರ ಬಂಟಿ ಮುಖರ್ಜಿ ತೀವ್ರವಾಗಿ ಗಾಯಗೊಂಡರು. ಅವರ ತಲೆಗೆ ಗಂಭೀರ ಪೆಟ್ಟಾಗಿದ್ದು, ಅವರನ್ನು ಚಿಕಿತ್ಸೆಗಾಗಿ ಕೋಲ್ಕತ್ತಾದ ಮೆಡಿಕಾ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಇವಿಎಂ, ವಿವಿಪಿಟಿ ಲೂಟಿ

ಜಯನಗರ ಸಂಸದೀಯ ಕ್ಷೇತ್ರದ ವ್ಯಾಪ್ತಿಗೆ ಬರುವ 129-ಕುಲ್ತಾಲಿ ವಿಧಾನಸಭಾ ಕ್ಷೇತ್ರದಲ್ಲಿ ಸ್ಥಳೀಯ ಗುಂಪೊಂದು ಇವಿಎಂ ಮತ್ತು ವಿವಿಪ್ಯಾಟ್‌ಗಳನ್ನು ಲೂಟಿ ಮಾಡಿದೆ ಎಂದು ವರದಿಗಳು ತಿಳಿಸಿವೆ. ಒಂದು ಕಂಟ್ರೋಲ್ ಯೂನಿಟ್, ಒಂದು ಬ್ಯಾಲೆಟ್ ಯೂನಿಟ್, ಮತ್ತು ಎರಡು ವಿವಿಪ್ಯಾಟ್ ಯಂತ್ರಗಳನ್ನು ಲೂಟಿ ಮಾಡಿರುವ ಕಿಡಿಗೇಡಿಗಳು. ಅವುಗಳನ್ನು ಚರಂಡಿಗೆ ಎಸೆದಿರುವುದು ಕಂಡು ಬಂದಿದೆ.

ಈ ಘಟನೆಯ ಹೊರತಾಗಿಯೂ ಸೆಕ್ಟರ್‌ನ ಎಲ್ಲ ಆರು ಬೂತ್‌ಗಳಲ್ಲಿ ಅಡೆತಡೆಗಳಿಲ್ಲದೆ ಮತದಾನ ಮುಂದುವರೆದಿದೆ. ಹೊಸ ಇವಿಎಂಗಳು ಮತ್ತು ಪೇಪರ್‌ಗಳನ್ನು ಸೆಕ್ಟರ್ ಅಧಿಕಾರಿಗೆ ನೀಡಲಾಗಿದೆ ಎಂದು ಪಶ್ಚಿಮ ಬಂಗಾಳ ಸಿಇಒ ಹೇಳಿದರು.

ಸೆಕ್ಟರ್ ಅಧಿಕಾರಿಯಿಂದ ಎಫ್‌ಐಆರ್ ದಾಖಲಾಗಿದ್ದು, ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ಕ್ಷೇತ್ರದ ವ್ಯಾಪ್ತಿಯ ಎಲ್ಲಾ ಆರು ಬೂತ್‌ಗಳಲ್ಲಿ ಮತದಾನ ಪ್ರಕ್ರಿಯೆಯು ಅಡೆತಡೆಯಿಲ್ಲದೆ ನಡೆಯುತ್ತಿದೆ ಎಂದು ತಿಳಿಸಿದ್ದಾರೆ.

92 ನೇ ವಯಸ್ಸಲ್ಲಿ ಮೊದಲ ಬಾರಿ ಮತದಾನ

ಸಾಹಿಬ್‌ಗಂಜ್: ವಿಶೇಷ ಪ್ರಕರಣವೊಂದರಲ್ಲಿ ಜಾರ್ಖಂಡ್‌ನ ಸಾಹಿಬ್‌ಗಂಜ್ ಜಿಲ್ಲೆಯ 92 ವರ್ಷದ ಅಂಗವಿಕಲ ಖಲೀಲ್ ಅನ್ಸಾರಿ ಅವರು ಶನಿವಾರ ಮೊದಲ ಬಾರಿಗೆ ಮತದಾನ ಮಾಡಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.
ರಾಜಮಹಲ್ ಲೋಕಸಭಾ ಕ್ಷೇತ್ರದ ಬದ್ಹೋರಿ ಗ್ರಾಮದ ಅನ್ಸಾರಿ ಅವರು ಮುಂದ್ರೊದ ಮತಗಟ್ಟೆ ಸಂಖ್ಯೆ 10ರಲ್ಲಿ ಹಕ್ಕು ಚಲಾಯಿಸಿದ್ದಾರೆ ಎಂದು ವರದಿಯಾಗಿದೆ. ಮತ ಚಲಾಯಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅನ್ಸಾರಿ, ನಾನು ಮೊದಲ ಬಾರಿಗೆ ಮತದಾನ ಮಾಡಿದ್ದೇನೆ. ಇದರಿಂದಾಗಿ ಸಂತೋಷವಾಗಿದ್ದೇನೆ ಎಂದು ಹರ್ಷ ವ್ಯಕ್ತಪಡಿಸಿದ್ದಾರೆ. ಅನ್ಸಾರಿಯ ಹೆಸರು ಮತದಾರರ ಪಟ್ಟಿಯಲ್ಲಿ ಇರಲಿಲ್ಲ. ಏಪ್ರಿಲ್ 5ರಂದು ಮುಂದ್ರೊದ ಮತಗಟ್ಟೆಗಳ ಪರಿಶೀಲನೆಯ ಸಂದರ್ಭದಲ್ಲಿ ಜಾರ್ಖಂಡ್ ಮುಖ್ಯ ಚುನಾವಣಾ ಅಧಿಕಾರಿ (ಸಿಇಒ) ಕೆ.ರವಿ ಕುಮಾರ್ ಅವರು ಖಲೀಲ್ ಅವರ ಹೆಸರನ್ನು ತಕ್ಷಣವೇ ಮತದಾರರ ಪಟ್ಟಿಯಲ್ಲಿ ಸೇರಿಸುವಂತೆ ಸಾಹಿಬ್‌ಗಂಜ್ ಜಿಲ್ಲಾ ಚುನಾವಣಾಧಿಕಾರಿಗೆ ನಿರ್ದೇಶನ ನೀಡಿದ್ದರು. ರಾಜ್ಯ ರಾಜಧಾನಿ ರಾಂಚಿಯಿಂದ 450 ಕಿ.ಮೀ. ದೂರ ಇರುವ ಸಾಹಿಬ್‌ಗಂಜ್ ಜಿಲ್ಲೆಯ ಮುಂದ್ರೊ ವಲಯದ ಮತಗಟ್ಟೆಗಳಿಗೆ ರವಿಕುಮಾರ್ ದಿಢೀರ್ ಭೇಟಿ ನೀಡಿದ್ದರು. ಈ ವೇಳೆ ಅವರು, ಹಿರಿಯ ನಾಗರಿಕರನ್ನು ಮತ್ತು ಅಂಗವಿಕಲ ಮತದಾರರನ್ನು ಭೇಟಿಯಾಗಿ ಮಾಹಿತಿ ಪಡೆದಿದ್ದರು. ಆಗ ಅವರು ಅನ್ಸಾರಿಯವರನ್ನು ನೀವು ಮತದಾರರ ಪಟ್ಟಿಯಲ್ಲಿ ಹೆಸರು ನೋಂದಾಯಿಸಿದ್ದೀರಾ ಎಂದು ಪ್ರಶ್ನಿಸಿದ್ದರು. ನನ್ನ ಹೆಸರು ಮತದಾರರ ಪಟ್ಟಿಯಲ್ಲಿ ಇಲ್ಲದೇ ಇರುವುದರಿಂದ ಎಂದೂ ಮತದಾನ ಮಾಡಿಯೇ ಇಲ್ಲ ಎಂದು ಖಲೀಲ್ ಉತ್ತರಿಸಿದ್ದರು. ತಕ್ಷಣವೇ ಈ ಸಂಬಂಧ ಕ್ರಮ ಕೈಗೊಳ್ಳುವಂತೆ ಸಿಇಒ ಅಧಿಕಾರಿಗಳಿಗೆ ಸೂಚಿಸಿದ್ದರು.

ಜಾರ್ಖಾಂಡ್‌ನಲ್ಲಿ ಮತದಾನ ಬಹಿಷ್ಕಾರ

ದುಂಕಾ: ಜಾರ್ಖಾಂಡ್‌ನ ದುಂಕಾ ಲೋಕಸಭಾ ಮತಕ್ಷೇತ್ರದಲ್ಲಿ ಕಲ್ಲಿದ್ದಲು ಕಲ್ಲಿದ್ದಲು ಸಂಗ್ರಹ ಘಟಕ ಸ್ಥಾಪನೆಯನ್ನು ವಿರೋಧಿಸಿ 400ಕ್ಕೂ ಹೆಚ್ಚು ಮತದಾರರು ಮತದಾನ ಬಹಿಷ್ಕಾರ ಮಾಡುವ ಮೂಲಕ ಪ್ರತಿಭಟನೆ ಮಾಡಿದ್ದಾರೆ.
ಒಟ್ಟು 426 ಮತದಾರರು ಬಗ್ದುಭಿ ಹಳ್ಳಿಯ ಮತದಾನ ಕೇಂದ್ರ 94ರಲ್ಲಿ ಮತದಾನ ಮಾಡಬೇಕಿತ್ತು. 430 ಮತದಾರರಲ್ಲಿ ಬರೀ 4 ಜನ ಅಷ್ಟೇ ಮತದಾನ ಮಾಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ದೇಶದ ಅತೀ ಎತ್ತರದ ಮತಗಟ್ಟೆಯಲ್ಲಿಯೂ ಮತದಾನ

ತಾಶೀಗಂಗ್, ಹಿಮಾಚಲ ಪ್ರದೇಶ: ಹಿಮಾಚಲ ಪ್ರದೇಶದ ತಾಶೀಗಂಗ್ ಎನ್ನುವ ಚಿಕ್ಕ ಹಳ್ಳಿಯಲ್ಲಿ ಶನಿವಾರ ಮತದಾನ ನಡೆಯಿತು. ಈ ಹಳ್ಳಿಯ ವಿಶೇಷ ಏನು ಗೊತ್ತಾ? ಇದು ಇರೋದು ಹಿಮಾಲಯದಲ್ಲಿ, ಅದೂ 15,256 ಫೀಟ್ ಎತ್ತರದಲ್ಲಿ. ಈ ಹಳ್ಳಿ ಇಡೀ ವಿಶ್ವದಲ್ಲೇ ಅತೀ ಎತ್ತರದ ಮತದಾನ ಕೇಂದ್ರ ಹೊಂದಿದ ಖ್ಯಾತಿ ಪಡೆದಿದೆ. ಈ ಹಳ್ಳಿಯೂ ಭಾರತ ಹಾಗೂ ಚೀನಾದ ಗಡಿಯ ಸಮೀಪದಲ್ಲಿದ್ದು, ಮಂಡಿ ಲೋಕಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುತ್ತದೆ. ಈ ಕ್ಷೇತ್ರದಲ್ಲಿ ಬಿಜೆಪಿಯಿಂದ ನಟಿ ಕಂಗನಾ ರನೌತ್ ಮತ್ತು ಕಾಂಗ್ರೆಸ್‌ನಿಂದ ವಿಕ್ರಮಾದಿತ್ಯ ಸಿಂಗ್ ಕಣದಲ್ಲಿದ್ದಾರೆ. ಹಾಗೇ, ಈ ಮತದಾನ ಕೇಂದ್ರದಲ್ಲಿ ಒಟ್ಟು 62 ಮತಗಳಿವೆ!

ಬಿಎಸ್ಪಿ ಅಭ್ಯರ್ಥಿ ವಿರುದ್ಧ ಪ್ರಕರಣ

ಫಿರೋಜ್ಪುರ (ಪಂಜಾಬ್): ಫಿರೋಜ್ಪುರ ಲೋಕಸಭಾ ಕ್ಷೇತ್ರದ ಬಿಎಸ್ಪಿ ಅಭ್ಯರ್ಥಿ ಸುರಿಂದರ್ ಕಾಂಬೋಜ್ ಅವರು ಮತ ಚಲಾಯಿಸುವ ವಿಡಿಯೊವನ್ನು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ಆರೋಪದಡಿ ಪ್ರಕರಣ ದಾಖಲಿಸಲಾಗಿದೆ ಎಂದು ಶನಿವಾರ ಅಧಿಕಾರಿಗಳು ತಿಳಿಸಿದ್ದಾರೆ. ಗುರು ಹರ ಸಹಾಯ್ ಜೀವಾ ರಾಯ್ ಗ್ರಾಮದ ಮತಗಟ್ಟೆಯಲ್ಲಿ ಕಾಂಬೋಜ್ ಮತದಾನ ಮಾಡುವ ವಿಡಿಯೊವನ್ನು ಅಪರಿಚಿತ ವ್ಯಕ್ತಿ ಚಿತ್ರೀಕರಿಸಿದ್ದಾನೆ. ಆ ವಿಡಿಯೊವನ್ನು ಕಾಂಬೋಜ್ ಪೋಸ್ಟ್ ಮಾಡಿಕೊಂಡಿದ್ದಾರೆ ಎಂದು ಜಿಲ್ಲಾಧಿಕಾರಿ ರಾಜೇಶ್ ಧಿಮಾನ್ ಮಾಹಿತಿ ನೀಡಿದ್ದಾರೆ. ಕಾಂಬೋಜ್ ಮತ್ತು ಅಪರಿಚಿತ ವ್ಯಕ್ತಿಯ ವಿರುದ್ಧ ಜನತಾ ಪ್ರಾತಿನಿಧ್ಯ ಕಾಯ್ದೆ 1951 ಮತ್ತು ಭಾರತೀಯ ದಂಡ ಸಂಹಿತೆಯ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ಪ್ರಕರಣವನ್ನು ದಾಖಲಿಸಲಾಗಿದೆ ಎಂದು ಹೇಳಿದ್ದಾರೆ.

ಧ್ಯಾನ ಮುಗಿಸಿದ ಪ್ರಧಾನಿ ಮೋದಿ

ಅಂತ್ಯಗೊಂಡ ನರೇಂದ್ರ ಮೋದಿ ಅವರ 45 ಗಂಟೆಗಳ ಧ್ಯಾನ

ತಮಿಳುನಾಡು: ಚುನಾವಣೆಯ ಮಧ್ಯೆ ಪ್ರಧಾನಿ ಮೋದಿ ಇಲ್ಲಿನ ಕನ್ಯಾಕುಮಾರಿಯ ವಿವೇಕಾನಂದ ರಾಕ್ ಸ್ಮಾರಕದಲ್ಲಿ ಮಾಡಿದ್ದ ತಮ್ಮ 45 ಗಂಟೆಗಳ ಸುದೀರ್ಘ ಧ್ಯಾನವನ್ನು ಶನಿವಾರ ಸಂಜೆ ಮುಕ್ತಾಯಗೊಳಿಸಿದರು. ಈ ಹಿಂದೆ ಶುಕ್ರವಾರವೇ ಆರಂಭವಾಗಿದ್ದ ಅವರ ಧ್ಯಾನವು ಮುಗಿದಿದ್ದು, ಈ ಬಳಿಕ ಮೋದಿ ತಮಿಳು ಸಂತ ಕವಿ ತಿರುವಳ್ಳುವರ್ ಅವರಿಗೆ ಪುಷ್ಪ ನಮನ ಸಲ್ಲಿಸಿದರು.

ಇಡೀ ಧ್ಯಾನದಲ್ಲಿ ಅವರು ಕೇಸರಿ ಬಟ್ಟೆ ದರಿಸಿದ್ದು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿತ್ತು. ಇದಾದ ಬಳಿಕ ಅವರು ತಮ್ಮ ಧ್ಯಾನ ಮುಕ್ತಾಯಗೊಳಿಸಿ ಬಿಳಿ ಬಟ್ಟೆಯನ್ನು ಧರಿಸಿ, ರಾಕ್ ಸ್ಮಾರಕದ ಪಕ್ಕದಲ್ಲಿರುವ 133 ಅಡಿ ಎತ್ತರದ ತಿರುವಳ್ಳುವರ್ ಪ್ರತಿಮೆಗೆ ಭೇಟಿ ನೀಡಿ, ಪುಷ್ಪ ನಮನ ಸಲ್ಲಿಸಿದರು.

ಪ್ರಧಾನಿ ಮೋದಿ, ದೋಣಿ ಮೂಲಕ ಪ್ರತಿಮೆ ಸಂಕೀರ್ಣಕ್ಕೆ ಆಗಮಿಸಿದರು ಮತ್ತು ನಂತರ ದೋಣಿ ಸೇವೆಯನ್ನು ಬಳಸಿಕೊಂಡು ದಡ ತಲುಪಿದರು. ಸೂರ್ಯೋದಯದ ವೇಳೆ ಸೂರ್ಯ ಅರ್ಘ್ಯ' ನೀಡುವ ಮೂಲಕ ಎರಡನೇ ಮತ್ತು ಅಂತಿಮ ದಿನದ ಧ್ಯಾನವನ್ನು ಆರಂಭಿಸಿದ್ದರು. ವಿವೇಕಾನಂದ ರಾಕ್ ಸ್ಮಾರಕದಲ್ಲಿ ಧ್ಯಾನದಲ್ಲಿ ನಿರತರಾಗಿದ್ದ ವೇಳೆ ಮೋದಿ ಕೇಸರಿ ಬಟ್ಟೆ ಧರಿಸಿದ್ದರು. ಕನ್ಯಾಕುಮಾರಿಯು ಸೂರ್ಯೋದಯ ಮತ್ತು ಸೂರ್ಯಾಸ್ತಕ್ಕೆ ಹೆಸರುವಾಸಿಯಾಗಿದೆ ಮತ್ತು ಸ್ಮಾರಕವು ತೀರದ ಸಮೀಪವಿರುವ ಒಂದು ಸಣ್ಣ ದ್ವೀಪದಲ್ಲಿದೆ.

ಆಯೋಗದ ಅನುಮತಿ ಅಗತ್ಯವಿಲ್ಲ

ಕನ್ಯಾಕುಮಾರಿ ಪ್ರಧಾನಿ ನರೇಂದ್ರ ಮೋದಿ ಧ್ಯಾನ ಮಾಡುತ್ತಿರುವ ಬಗ್ಗೆ ಚರ್ಚೆ ನಡೆಯುತ್ತಿರುವ ಸಂದರ್ಭದಲ್ಲಿ ತಮಿಳುನಾಡು ಬಿಜೆಪಿ ಘಟಕದ ಅಧ್ಯಕ್ಷ ಕೆ.ಅಣ್ಣಾಮಲೈ ಅವರು ಶನಿವಾರ ಅರುಣಾಚಲೇಶ್ವರ ದೇವಸ್ಥಾನದಲ್ಲಿ ಪ್ರಾರ್ಥನೆ ಸಲ್ಲಿಸಿದ್ದಾರೆ. ಈ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವಿರೋಧ ಪಕ್ಷಗಳಿಗೆ ಏನು ಮಾಡಬೇಕೆಂದು ತಿಳಿಯದೆ ಮೋದಿ ಅವರು ಧ್ಯಾನದ ಬಗ್ಗೆ ರಾಜಕೀಯ ಮಾಡುತ್ತಿವೆ' ಎಂದು ವಾಗ್ದಾಳಿ ನಡೆಸಿದರು. ಪ್ರಧಾನಿ ಮೋದಿ ಅವರು ಕನ್ಯಾಕುಮಾರಿಗೆ ಖಾಸಗಿ ಕಾರ್ಯಕ್ರಮದ ಭಾಗವಾಗಿ ಬಂದಿದ್ದಾರೆ. ಯಾವೊಬ್ಬ ಬಿಜೆಪಿ ಕಾರ್ಯಕರ್ತನು ಅಲ್ಲಿಗೆ ಹೋಗಿಲ್ಲ. ವಿವೇಕಾನಂದ ಸ್ಮಾರಕವು ಯಾರೊಬ್ಬರ ಭೇಟಿಗೂ ಮುಕ್ತವಾಗಿರುವ ಖಾಸಗಿ ಸ್ಥಳವಾಗಿದ್ದು,, ಸರಕಾರ ಮತ್ತು ಚುನಾವಣಾ ಆಯೋಗದ ಅನುಮತಿ ಪಡೆಯುವ ಅಗತ್ಯವಿಲ್ಲ' ಎಂದಿದ್ದಾರೆ.

ಈ ಬಾರಿ ಇಂಡಿಯಗೆ 295ಕ್ಕೂ ಹೆಚ್ಚು ಸ್ಥಾನ

ನಮ್ಮ ಒಗ್ಗಟ್ಟನ್ನು ಮುರಿಯುವ ಪ್ರಯತ್ನ ಮಾಡಬೇಡಿ: ಎಐಸಿಸಿ ಅಧ್ಯಕ್ಷ ಖರ್ಗೆ

ದೆಹಲಿ: ಲೋಕಸಭೆ ಚುನಾವಣೆಯ ಫಲಿತಾಂಶಕ್ಕೆ ಎಣ್ಣೇನು ಕ್ಷಣಗಣನೆ ಆರಂಭವಾಗಿದ್ದು, ಚುನಾವಣೆಯಲ್ಲಿ ಇಂಡಿಯಾ ಮೈತ್ರಿಕೂಟ ಕನಿಷ್ಠ 295 ಸ್ಥಾನಗಳನ್ನು ಗೆಲ್ಲುತ್ತದೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ದೆಹಲಿಯಲ್ಲಿ ನಡೆದ ಇಂಡಿಯಾ ಮೈತ್ರಿಕೂಟದ ಸಭೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾವು ಒಗ್ಗಟ್ಟಾಗಿದ್ದೇವೆ ಮತ್ತು ಒಗ್ಗಟ್ಟಾಗಿಯೇ ಇರುತ್ತೇವೆ. ನಮ್ಮನ್ನು ವಿಭಜಿಸಲು ಪ್ರಯತ್ನಿಸಬೇಡಿ' ಎಂದು ಬಿಜೆಪಿ ನಾಯಕರ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ಇಂಡಿಯ ಬಣದ ಸಭೆಯಲ್ಲಿ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ, ಪ್ರಿಯಾಂಕಾ ಗಾಂಧಿ, ರಾಹುಲ್ ಗಾಂಧಿ ಸೇರಿದಂತೆ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಹಾಗೂ ಎನ್ಸಿಪಿ ನಾಯಕ ಶರದ್ ಪವಾರ್, ಸಮಾಜವಾದಿ ಪಕ್ಷದ ನಾಯಕ ಅಖಿಲೇಶ್ ಯಾದವ್, ಆರ್‌ಜೆಡಿ ಪಕ್ಷದ ನಾಯಕ ತೇಜಸ್ವಿ ಯಾದವ್ ಸೇರಿದಂತೆ ಹಲವು ನಾಯಕರು ಸಭೆಯಲ್ಲಿ ಭಾಗವಹಿಸಿದ್ದು, ಒಗ್ಗಟ್ಟನ್ನು ಪ್ರದರ್ಶಿಸಿದ್ದಾರೆ. ಇದೇ ವೇಳೆ ಆರ್‌ಜೆಡಿ ಪಕ್ಷದ ನಾಯಕ ತೇಜಸ್ವಿ ಯಾದವ್ ಮಾತನಾಡಿ, ನಾವು ಒಗ್ಗಟ್ಟಿನಿಂದ ಶಕ್ತಿ ಪ್ರದರ್ಶನ ಮಾಡಿದ್ದು, ಆ ಮೂಲಕ ನಾವು 295ಕ್ಕೂ ಹೆಚ್ಚು ಸ್ಥಾನಗಳನ್ನು ಪಡೆದು ಗೆಲ್ಲಲಿದ್ದೇವೆ. ಫಲಿತಾಂಶದ ಬಳಿಕ ಪ್ರಧಾನಿ ಯಾರಾಗಬೇಕು ಎಂಬುದನ್ನು ನಿರ್ಧರಿಸುತ್ತೇವೆ. ಆದರೆ, ಮೊದಲ ಹಂತದ ಮತದಾನ ಮುಗಿಯುತ್ತಿದ್ದಂತೆಯೇ ಬಿಜೆಪಿಗರ ಚಾರ್ ಸೌ ಪಾರ್' ಚಿತ್ರ ಫ್ಲಾಪ್ ಆಯಿತು' ಎಂದು ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ವ್ಯಂಗ್ಯವಾಡಿದ್ದಾರೆ. ಲೋಕಸಭಾ ಚುನಾವಣೆಗೆ ಇಂದು ಅಂತಿಮ ಹಂತದ ಮತದಾನ ಮುಕ್ತಾಯವಾಗಿದೆ. ಜೂನ್ 4ರಂದು ಫಲಿತಾಂಶ ಪ್ರಕಟವಾಗಲಿದ್ದು, ಅದಕ್ಕೂ ಮೊದಲು ಮೈತ್ರಿಕೂಟದ ಕಾರ್ಯತಂತ್ರವನ್ನು ರೂಪಿಸುವ ಕುರಿತು ಸಭೆಯಲ್ಲಿ ಚರ್ಚಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಬಿಜೆಪಿಗೆ 220 ಸ್ಥಾನ ಬರಬಹುದು

ಇದೇ ಹೇಳಿಕೆಗೆ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಬೆಂಬಲ ನೀಡಿದ್ದು, ಎಲ್ಲೆಡೆಯಿಂದ ಲಭಿಸಿದ ಪ್ರತಿಕ್ರಿಯೆ ಆಧಾರದಲ್ಲಿ 'ಇಂಡಿಯಾ' ಮೈತ್ರಿಕೂಟ 295ಕ್ಕೂ ಅಧಿಕ ಸ್ಥಾನಗಳನ್ನು ಗಳಿಸಲಿದೆ ಎಂದು ನಾವು ನಂಬಿದ್ದೇವೆ. ಬಿಜೆಪಿ ಸುಮಾರು 220 ಸ್ಥಾನಗಳನ್ನು ಪಡೆಯಬಹುದು. ಎನ್‌ಡಿಎ ಒಟ್ಟಾರೆಯಾಗಿ 235 ಸ್ಥಾನಗಳನ್ನು ಗಳಿಸಬಹುದು. ಕೇಂದ್ರದಲ್ಲಿ ಬಲಿಷ್ಠ ಸರಕಾರ ರಚಿಸಲು 'ಇಂಡಿಯಾ' ಮೈತ್ರಿಕೂಟ ಒಗ್ಗಟ್ಟಾಗಿ ಮುನ್ನಡೆಯುತ್ತಿದೆ' ಎಂದು ಹೇಳಿದ್ದಾರೆ.

ಬಿಸಿಗಾಳಿ; 24 ಗಂಟೆಯಲ್ಲಿ 14 ಜನ ಬಲಿ

ಪಟನಾ: ದೇಶದಲ್ಲಿ ಕಂಡು ಕೇಳರಿಯದ ಪ್ರಮಾಣದಲ್ಲಿ ಉಷ್ಣಾಂಶ ಹೆಚ್ಚಾಗುತ್ತಿದೆ. ಜತೆಗೆ ಉತ್ತರ ಭಾರತದ ವಿವಿಧ ಭಾಗದಲ್ಲಿ ಬಿಸಿಗಾಳಿ ಬೀಸುತ್ತಿದ್ದು ಜನ ಜೀವನ ಅಸ್ತವ್ಯಸ್ತವಾಗಿದೆ. ಅದರಲ್ಲಿಯೂ ಬಿಹಾರದಲ್ಲಿ ಬಿಸಿಗಾಳಿಯ ಶಾಖಕ್ಕೆ ಜನ ತತ್ತರಿಸಿ ಹೋಗಿದ್ದಾರೆ. 24 ಗಂಟೆಗಳಲ್ಲಿ 10 ಮತಗಟ್ಟೆ ಸಿಬ್ಬಂದಿ ಸೇರಿ ಸುಮಾರು 14 ಮಂದಿ ಬಿಸಿಲಿನ ಶಾಖಕ್ಕೆ ಬಲಿಯಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವಿಪತ್ತು ನಿರ್ವಹಣಾ ಇಲಾಖೆ ಹೊರಡಿಸಿದ ಪ್ರಕಟಣೆಯಲ್ಲಿ ಈ ವಿವರಗಳನ್ನು ನೀಡಲಾಗಿದೆ. ಹೆಚ್ಚಿನ ಸಾವು ನೋವು ಭೋಜ್ಪುರದಲ್ಲಿ ನಡೆದಿದ್ದು, ಅಲ್ಲಿ ಚುನಾವಣಾ ಕರ್ತವ್ಯದಲ್ಲಿ ನಿರತರಾಗಿದ್ದ 5 ಮಂದಿ ಮೃತಪಟ್ಟಿದ್ದಾರೆ. ರೋಹ್ತಾಸ್‌ನಲ್ಲಿ ಮೂವರು ಚುನಾವಣಾ ಅಧಿಕಾರಿಗಳು, ಕೈಮೂರ್ ಮತ್ತು ಔರಂಗಾಬಾದ್ ಜಿಲ್ಲೆಗಳಲ್ಲಿ ತಲಾ ಒಬ್ಬರು ಜೀವ ಕಳೆದುಕೊಂಡಿದ್ದಾರೆ ಎಂದು ಮೂಲಗಳು ಮಾಹಿತಿ ನೀಡಿವೆ.

ಜತೆಗೆ ರಾಜ್ಯದ ವಿವಿಧ ಭಾಗಗಳಲ್ಲಿಯೂ ಅನೇಕರು ಬಿಸಿಲಿನ ಝಳಕ್ಕೆ ಸಾವನ್ನಪ್ಪಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದು, ಮೃತರ ಕುಟುಂಬಗಳಿಗೆ ಪರಿಹಾರ ನೀಡಲಾಗುವುದು ಎಂದು ಹೇಳಿದ್ದಾರೆ. ರಾಜ್ಯದ ಹಲವೆಡೆ ತಾಪಮಾನ 44 ಡಿಗ್ರಿ ಸೆಲ್ಸಿಯಸ್‌ಗೆ ತಲುಪಿದೆ. ಗುರುವಾರ ಬಕ್ಸಾರ್‌ನಲ್ಲಿ ಅತೀ ಹೆಚ್ಚು 47.1 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗಿತ್ತು. ಬಿಸಿಗಾಳಿ ವ್ಯಾಪಕವಾಗಿ ಬೀಸುತ್ತಿರುವ ಪರಿಣಾಮ ಎಲ್ಲ ಶಾಲೆಗಳು, ಕೋಚಿಂಗ್ ಸೆಂಟರ್‌ಗಳು ಮತ್ತು ಅಂಗನವಾಡಿಗಳಿಗೆ ಜೂನ್ 8ರ ತನಕ ರಜೆ ಸಾರಲಾಗಿದೆ.



ಪ್ರತಿಪಕ್ಷ ನಾಯಕ ತೇಜಸ್ವಿ ಯಾದವ್ ಶಾಲೆಗಳಿಗೆ ಶಿಕ್ಷಕರು ಬರಬೇಕು ಎನ್ನುವ ಸರಕಾರದ ಆದೇಶದ ವಿರುದ್ಧ ತಿರುಗಿ ಬಿದ್ದಿದ್ದಾರೆ. ಈ ಬಗ್ಗೆ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿ ಪ್ರತಿಪಕ್ಷಗಳ ಒತ್ತಡದಿಂದಾಗಿ ಸರಕಾರಿ ಶಾಲೆಗಳನ್ನು ಈಗಾಗಲೇ ಮುಚ್ಚಲಾಗಿದೆ. ಈ ತೀವ್ರ ಶಾಖದ ಅಲೆ ಎಲ್ಲೆಡೆ ವ್ಯಾಪಿಸಿರುವಾಗ ಶಿಕ್ಷಕರನ್ನು ಶಾಲೆಗಳಿಗೆ ಬರಲು ಏಕೆ ಹೇಳಲಾಗುತ್ತಿದೆ? ವಿದ್ಯಾರ್ಥಿಗಳು ಸ್ವತಃ ಶಾಲೆಯಲ್ಲಿ ಇಲ್ಲದಿದ್ದಾಗ ಶಿಕ್ಷಕರು ಏನು ಮಾಡುತ್ತಾರೆ? ಈ ಸುಡುವ ಬಿಸಿಲಿನಲ್ಲಿ ಶಿಕ್ಷಕರಿಗೂ ರಜೆ ನೀಡಬೇಕು ಎಂದು ಆಗ್ರಹಿಸಿದ್ದಾರೆ.

ನಾಗ್ಪುರದಲ್ಲಿ 56 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ

ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ದಾಖಲೆಯ 52.9 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗಿರುವ ಎರಡು ದಿನಗಳ ನಂತರ ಮಹಾರಾಷ್ಟ್ರದ ನಾಗ್ಪುರದಲ್ಲಿ ತಾಪಮಾನ 50 ಡಿಗ್ರಿ ಸೆಲ್ಸಿಯಸ್ ಮೀರಿದೆ. ಗುರುವಾರ ಇದು 56 ಡಿಗ್ರಿ ಸೆಲ್ಸಿಯಸ್ ತಲುಪಿದೆ. ಇದು ಸಾರ್ವಕಾಲಿಕ ದಾಖಲೆಯಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಮಹಾರಾಷ್ಟ್ರದ ಉತ್ತರ ಅಂಬಾಜಾರಿ ರಸ್ತೆಯ ರಾಮದಾಸ್‌ಪೇಟ್‌ನ ಪಿಡಿಕೆವಿಯಲ್ಲಿರುವ 24 ಹೆಕ್ಟೇರ್ ತೆರೆದ ಕೃಷಿ ಕ್ಷೇತ್ರದಲ್ಲಿರುವ ಹವಾಮಾನ ಕೇಂದ್ರದಲ್ಲಿ 56 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿದೆ. ಸೋನೆಗಾಂವ್‌ನ ಪ್ರಾದೇಶಿಕ ಹವಾಮಾನ ಕೇಂದ್ರದಲ್ಲಿ 54 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಿಸಿದೆ. ವಾರ್ಧಾ ರಸ್ತೆಯ ಖಾಪ್ರಿಯಲ್ಲಿರುವ ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ಕಾಟನ್ ರಿಸರ್ಚ್ ಪ್ರದೇಶದ ಹೊಲಗಳಲ್ಲಿನ ಅಂಗನವಾಡಿ ಕೇಂದ್ರವು 44 ಡಿಗ್ರಿ ಸೆಲ್ಸಿಯಸ್ ಮತ್ತು ರಾಮ್ಟೆಕ್ ಎಡಬ್ಲ್ಯೂಎಸ್ 44 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ಕಂಡು ಬಂದಿದೆ.

ಬಿಷ್ಣೋಯಿ ಗ್ಯಾಂಗ್‌ನ 4 ಜನರ ಬಂಧನ

ಬಾಲಿವುಡ್ ನಟ ಸಲ್ಮಾನ್ ಖಾನ್ ಮನೆಗೆ ಗುಂಡಿನ ದಾಳಿ ಪ್ರಕರಣ

ದೆಹಲಿ: ನಟ ಸಲ್ಮಾನ್ ಖಾನ್ ಮನೆಯ ಹೊರಗೆ ಗುಂಡಿನ ದಾಳಿ ನಡೆಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಲಾರೆನ್ಸ್ ಬಿಷ್ಣೋಯ್ ಗ್ಯಾಂಗ್‌ನ ಮತ್ತೆ ನಾಲ್ವರನ್ನು ಮುಂಬೈ ಪೊಲೀಸರು ಬಂಧಿಸಿದ್ದು, ಬಂಧಿತರನ್ನು ಧನಂಜ ಯ್ ತಾಪೇಸಿಂಗ್ ಅಲಿಯಾಸ್ ಅಜಯ್ ಕಶ್ಯ ಪ್, ಗೌರವ್ ಭಾಟಿಯಾ ಅಲಿಯಾಸ್ ನಹ್ವಿ, ವಾಸ್ಪಿ ಖಾನ್ ಅಲಿಯಾಸ್ ವಸೀಮ್ ಚಿಕ್ನಾ ಮತ್ತು ರಿಜ್ವಾನ್ ಖಾನ್ ಅಲಿಯಾಸ್ ಜಾವೇದ್ ಖಾನ್ ಎಂದು ಗುರುತಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬಂಧಿತ ಆರೋಪಿಗಳು ಜೈಲಿನಲ್ಲಿರುವ ಗ್ಯಾಂಗ್‌ಸ್ಟರ್ ಲಾರೆನ್ಸ್ ಬಿಷ್ಣೋಯ್ ಮತ್ತು ಆತನ ಸಹೋದರ ಅನ್ಮೋಲ್ ಬಿಷ್ಣೋಯ್ ಜತೆ ಸಂಪರ್ಕದಲ್ಲಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ. ಮುಂಬೈನ ಬಾಂದ್ರಾ ಪ್ರದೇಶದ ಗ್ಯಾಲಕ್ಸಿ ಅಪಾರ್ಟ್‌ಮೆಂಟ್‌ನಲ್ಲಿರುವ ಸಲ್ಮಾನ್ ಖಾನ್ ಅವರ ನಿವಾಸದ ಹೊರಗೆ ಏ.14ರಂದು ಮೋಟರ್ ಸೈಕಲ್‌ನಲ್ಲಿ ಬಂದ ಇಬ್ಬರು ವ್ಯಕ್ತಿಗಳು ಗುಂಡು ಹಾರಿಸಿ ಪರಾರಿಯಾಗಿದ್ದರು.

ಒಟ್ಟು 17 ಮಂದಿಯ ವಿರುದ್ಧ ಪ್ರಕರಣ

ಈ ಪ್ರಕರಣದಲ್ಲಿ ಬಂಧಿತನಾಗಿರುವ ಬಿಷ್ಣೋಯಿ ಗ್ಯಾಂಗ್‌ನ ಮತ್ತೊಬ್ಬ ಸದಸ್ಯ ಮೊಹಮ್ಮದ್ ರಫೀಲ್ ಚೌಧರಿ ಎಂಬಾತ ವಿಚಾರಣೆ ಸಮಯದಲ್ಲಿ ಸಿಂಗ್ ಹೆಸರು ಹೇಳಿದ್ದ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಖಾನ್ ಅವರ ನಿವಾಸದ ಸುತ್ತಲೂ ಸುತ್ತಾಡುತ್ತಿರುವಂತೆ ಚೌಧರಿ ಅವರಿಗೆ ಸೂಚಿಸಿದ್ದ ಸಿಂಗ್, ಅವರಿಗೆ ₹2-3 ಲಕ್ಷ ಪಾವತಿಸಿದ್ದರು ಎಂದು ಪೊಲೀಸರು ಹೇಳಿದ್ದಾರೆ. ಹೀಗಾಗಿ ಮತ್ತೆ ನಾಲ್ಕು ಜನರನ್ನು ಪೋಲಿಸರು ಬಂಧಿಸಿದ್ದು, ಪ್ರಕರಣ ಸಂಬಂಧ ಲಾರೆನ್ಸ್ ಬಿಷ್ಣೋಯ್, ಅನ್ಮೋಲ್ ಬಿಷ್ಣೋಯ್ ಸೇರಿದಂತೆ 17 ಮಂದಿ ಮುಂಬೈ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ.

ವಿಶ್ವವಾಣಿ
ವಿಶ್ವಾಸವೇ ವಿಶ್ವ
02.06.2024
ಭಾನುವಾರ

ವಿರಾಮ

ಇವರಿಗೆ ಈಗ 79 ವರ್ಷ. ಕಳೆದ 60 ವರ್ಷಗಳಿಂದ ಭತ್ತದ ಕೃಷಿ ಮಾಡುತ್ತಿದ್ದಾರೆ; ಸಹಜ ಕೃಷಿಯ ಪದ್ಧತಿ. ಜತೆಗೆ, ನೂರಕ್ಕೂ ಹೆಚ್ಚು ಅಪರೂಪದ ಭತ್ತದ ತಳಿಗಳನ್ನು ತಮ್ಮ ಗದ್ದೆಗಳಲ್ಲಿ ಬೆಳೆದಿದ್ದಾರೆ, ಸಂರಕ್ಷಿಸಿದ್ದಾರೆ. ಇವರೇ ಬಿ.ಕೆ.ದೇವರಾವ್. ಪಶ್ಚಿಮಘಟ್ಟಗಳ ಅಂಚಿನಲ್ಲಿರುವ, ಕಾಡಿನಿಂದ ಸುತ್ತುವರಿದಿರುವ ಮಿತ್ತಬಾಗಿಲು ಎಂಬ ಹಳ್ಳಿಯಲ್ಲಿ ವಾಸ. ತಾವೇ ಬೆಳೆದ ಭತ್ತದಿಂದ ತಯಾರಿಸಿದ ಕಜೆ ಅಕ್ಕಿ (ಕುಚ್ಚಲಕ್ಕಿ)ಯನ್ನು ಪ್ರತಿ ದಿನ ಊಟ ಮಾಡುವುದು ಪ್ರೀತಿಯ ಹವ್ಯಾಸ; ಅದಕ್ಕಾಗಿ, ತಮ್ಮ ಗದ್ದೆಗಳಲ್ಲಿ ಮಳೆ ನೀರಿನ ಸಹಾಯದಿಂದ ಭತ್ತ ಬೆಳೆಯುತ್ತಾರೆ. ತಪಸ್ಸಿನ ರೀತಿ ಕೃಷಿಯನ್ನು ಮಾಡುತ್ತಿದ್ದಾರೆ, ತಳಿ ಸಂರಕ್ಷಿಸಿದ್ದಾರೆ. ಇವರ ಜೀವನ ಪ್ರೀತಿಯನ್ನು ಕಂಡು ರಾಷ್ಟ್ರಪತಿಗಳೂ ಸನ್ಮಾನ ಮಾಡಿದ್ದಾರೆ! ಯೋಗಿಯಂತಹ ಬದುಕನ್ನು ನಡೆಸುತ್ತಿರುವ ಬಿ.ಕೆ. ದೇವರಾವ್ ಅವರ ಕುರಿತು ಈಗ ಹೊರಬಂದಿರುವ ಪುಸ್ತಕದ ಆಯ್ದ ಭಾಗ ಇಲ್ಲಿದೆ. ನಿಮ್ಮ ಪ್ರತಿಕ್ರಿಯೆಗೆ ಸ್ವಾಗತ.

ಕಾನನದ ನಡುವೆ ಬತ್ತದ ಧ್ಯಾನ

ಬರಿಗಾಲಿನಲ್ಲಿ ನಡೆದಾಡುವ ಕೃಷಿಕ ದೇವರಾವ್

» ನರೇಂದ್ರ ರೈ ದೇರ್ಲ

ಸರಳವಾಗಿ ಬದುಕುವುದನ್ನು ಮಣ್ಣೇ ಕಳಿಸಿಕೊಡುತ್ತದೆ ಎನ್ನುವುದಕ್ಕೆ ಮಿತ್ತಬಾಗಿಲು ದೇವರಾಯರೇ ಸಾಕ್ಷಿ. ಬಿಳಿ ಮಡಿ ಸರಳ ಪಂಚೆ. ತುಂಡು ಕೈಯ ಅಂಗಿ. ತಲೆಯ ಮೇಲೆ ಒಂದು ಮುಂಡಾಸು. ಕೈಗೆ ವಾಚ್ ಕಟ್ಟುವ ಕ್ರಮ ಇಲ್ಲ. ಮನೆ ಬಿಟ್ಟು ಹೊರಗಡೆ ಹೋಗುವಾಗಲಷ್ಟೇ ಚಿಕ್ಕ ಮೊಬೈಲ್. ಸಂತನಾಗಿ ಕಾಣಿಸುವ ಬಿಳಿ ಗಡ್ಡ. ಕಡಿಮೆ ತೂಕ. ಪಕ್ಕನೆ, ಪೇಜಾವರ ಸ್ವಾಮಿಗಳನ್ನು ನೋಡಿ ನೆನಪಿರುವವರಿಗೆ ಮತ್ತೆ ಆ ನೆನಪು ಮರುಕಳಿಸುವಂತಹ ಹಗುರ ದೇಹ; ಮುಖ ತುಂಬಾ ಆಧ್ಯಾತ್ಮ ವರ್ಚಸ್ಸು. ದುಡಿಯುವಾಗಲೆಲ್ಲ ಕಾವಿ ಲುಂಗಿ, ತಲೆಯ ಮೇಲೆ ಅಡಿಕೆ ಹಾಳೆಯ ಮುಟ್ಟಾಳೆ. ದೇಹಕ್ಕೆ ಮಸುಕಾದ ಅಂಗಿ – ಇದು ದೇವರಾಯರ ಸುಲಭ ಗುರುತು.

79ರ ಹರೆಯದ ದೇವರಾಯರನ್ನು ಈವರೆಗೆ ಕಠಿಣ ಕಾಯಿಲೆಗಳು ಕಾಡಿದ್ದಿಲ್ಲ. ಬದುಕುವ ಸಮಯವನ್ನೆಲ್ಲ ಅನ್ನದ ಸಮಯವನ್ನಾಗಿ ಪರಿವರ್ತಿಸಿದ ಕಾರಣಕ್ಕೆ ಹಣದ ವಿಚಾರ–ವಿಕಾರ ಭಾದಿಸಿಲ್ಲ. ಅವರ ವೇಗ –ಕ್ರಿಯಾಶೀಲತೆ ಇವೆಲ್ಲವನ್ನು ಗಮನಿಸಬೇಕಾದರೆ ಬಹುತಳಿಯ ಭತ್ತದ ಗದ್ದೆಯ ಬದುವಿನಲ್ಲೊಮ್ಮೆ ಅವರೊಂದಿಗೆ ಸುತ್ತಾಡಬೇಕು. ಅವರ ಹೆಜ್ಜೆಯ ವೇಗ, ಜೊತೆಗೆ ನೆಲದ ಮಾತು, ನಡುನಡುವೆ ಕಣ್ಣು ಮುಚ್ಚಿ ಮುಚ್ಚಿ ಮಾಡುವ ಧ್ಯಾನ, ಜೀವನ ಆಸಕ್ತಿ ಕಿರಿಯರಿಗೂ ಮಾದರಿ. ಈ ನೆಲದ ಗುರು ಭತ್ತದ ಅನುಭವಿ ದೇವರಾಯರ ಜೊತೆಗೆ ಒಂದು ದಿನವಲ್ಲ ಒಂದು ಗಂಟೆ ಮಾತನಾಡಿದರೆ, ಅಷ್ಟೇಕೆ ಸುಮ್ಮನೆ ಚಲಿಸಿದರೂ ಅವರ ಜೀವನೋತ್ಸವ ಅರಿವಾಗುತ್ತದೆ. ಅನ್ನದ ಬದುಕಿನ ಅವರ ಹೆಜ್ಜೆ ಅಪಾರ ಅನುಭವದ ಗಣಿ.

ಒಂದು ಕಾಲದಲ್ಲಿ ಅವರ ಬಂಗಾಡಿ ಬಂಗಾರ ಬಣ್ಣದ ಭತ್ತದಿಂದ ಕಂಗೊಳಿಸುತ್ತಿತ್ತು. ಆ ಕಾರಣಕ್ಕಾಗಿಯೇ 'ಬಂಗಾಡಿಗೆ ಪೋಂಡ ಬಂಜಾರ ಉಣೋಳಿ' (ಬಂಗಾಡಿಗೆ ಹೋದರೆ ಹೊಟ್ಟೆ ತುಂಬಾ ಊಟ ಮಾಡಬಹುದು) ಎಂಬ ಮಾತು ಚಾಲ್ತಿಯಲ್ಲಿತ್ತು. ಈಗ ಬಂಗಾಡಿ, ಮಿತ್ತಬಾಗಿಲು, ಕಿಲ್ಲೂರು.. ಬೇರೆಲ್ಲ ಊರುಗಳ ಹಾಗೆ ಬದಲಾಗಿವೆ. ಭತ್ತ ಬತ್ತಿದೆ. ಅಡಿಕೆಯಷ್ಟೇ ಮೇಳೈಸಿದೆ.

ಶ್ರಮ ಸಂಸ್ಕೃತಿಯ ಪ್ರತೀಕ ಮಟ್ಟಾಳೆ

ಇತ್ತೀಚೆಗೆ ದೇವರಾಯರು ರಾಷ್ಟ್ರಪತಿಗಳಿಂದ ದೇಶದ ಅತ್ಯುನ್ನತ 'ತಳಿರಕ್ಷಕ ಪ್ರಶಸ್ತಿ' ಪಡೆಯಲೋಸ್ಕರ ಬರಿಗಾಲಲ್ಲೇ ದೆಹಲಿಗೆ ಹೋಗಿದ್ದರು. ಪ್ರಶಸ್ತಿ ಪಡೆಯುವಾಗ ಅವರ ತಲೆಯಲ್ಲಿ ಇದ್ದುದು ಕರಾವಳಿಯ ದೇಶಿ ತಲೆರಕ್ಷಕ ಅಡಿಕೆ ಹಾಳೆಯ ಮುಟ್ಟಾಳೆ. ರಾಜ್ಯೋತ್ಸವ ಪ್ರಶಸ್ತಿ ಪಡೆಯುವಾಗಲೂ ಹೀಗೆಯೇ. ಈ ಮಟ್ಟಾಳೆಯು ಶ್ರಮ ಸಂಸ್ಕೃತಿಯ ಪ್ರತೀಕ. ರಾಜಧಾನಿಯಲ್ಲೂ ಅವರದ್ದು ಇದೇ ಬರಿಗಾಲ ಸರಳತೆ. 'ಇದು ನಾನು ಕೃಷಿಗಾಗಿ ಪಡೆವ ಪ್ರಶಸ್ತಿ. ಅದಕ್ಕಾಗಿ ಕರಾವಳಿ ಕೃಷಿಕರ ಲಾಂಛನ ಮುಟ್ಟಾಳೆ ಇಟ್ಟರೆ ಏನಾಗುತ್ತದೆ ಎಂದು ಯೋಚಿಸಿದೆ. ಊರಲ್ಲಿ ಹೊಸ ಮುಟ್ಟಾಳೆ ಖರೀದಿಸಿದೆ. ಪ್ರಶಸ್ತಿ ಪಡೆಯುವಾಗ ಅದನ್ನು ತಲೆಯ ಮೇಲೆ ಇಟ್ಟುಕೊಂಡೇ ವೇದಿಕೆಗೆ ನಡೆದೆ. ತಿರುಗಿ ಬರುವಾಗ ರಾಷ್ಟ್ರಪತಿ ನನ್ನ ತಲೆಯನ್ನೇ ಗಮನಿಸುತ್ತಿದ್ದರಂತೆ.'

ತಲೆಯ ಮೇಲಿನ ಮುಟ್ಟಾಳೆ ಮತ್ತು ಚಪ್ಪಲಿ ಇಲ್ಲದ ಬರಿಗಾಲು ನನಗೆ ಈ ದೇಶದ ನಿಜ ರೈತರ ರೂಪಕವಾಗಿ ಕಾಣಿಸುತ್ತದೆ. ರೈತ ಬರಿಗಾಲಲ್ಲಿ ಮಣ್ಣು ಮೆಟ್ಟಿದಷ್ಟೂ ಭೂಮಿಗೆ ಹತ್ತಿರವಾಗುತ್ತಾ ಹೋಗುತ್ತಾನೆ. ಐಷಾರಾಮಿ ಕಾರಲ್ಲಿ ಓಡಾಡುವುದು ರೈತನ ಅಂತಿಮ ಆಸೆ ಗುರಿ ಇರಬಹುದು. ಆದರೆ ಅವನು ಎಷ್ಟು ಸರಳವಾಗಿ ಬದುಕುತ್ತಾನೋ ಅಷ್ಟೊಂದು ನೆಲಕ್ಕೆ ಹತ್ತಿರವೆಂದೇ ನನ್ನ ಲೆಕ್ಕ ಮತ್ತು ಆ ದಾರಿಯಲ್ಲಿ ಕೃಷಿಯನ್ನು ತಪಸ್ಸಿನ ಹಾಗೆ ಅನುಭವಿಸುವವರು ದೇವರಾಯರು.

ನೂರಾರು ತಳಿಯನ್ನು ಏಕೆ ಉಳಿಸಬೇಕು?

ಮುಂದಿನದು ಮುಖ್ಯ ವಿಷಯ. ದೇವರಾಯರ ಭತ್ತದ ತಳಿಯುಳಿಕೆಯ ಯಶೋಗಾಥೆ. ಹಾಗೇ ನೋಡಿದ್ರೆ ನಾನು ದೇವರಾಯರಲ್ಲಿ ಕೇಳಿದ ಮೊದಲ ಪ್ರಶ್ನೆಯೇ ಅದು. 'ಇಷ್ಟೊಂದು ಬತ್ತದ ತಳಿಗಳನ್ನು ನೀವೇಕೆ ಉಳಿಸಬೇಕು? ಅದು ನಿಮ್ಮೊಬ್ಬರ ಜವಾಬ್ದಾರಿಯೇ? ಗರಿಷ್ಠ ಬೆಳೆ – ಫಸಲು ನೀಡುವ ಬೆರಳೆಣಿಕೆಯ ಸುಲಭ ಬೆಳೆಯ ತಳಿಗಳನಷ್ಟೇ ಉಳಿಸಿದರೆ ಸಾಕಲ್ಲ? ಅದರಲ್ಲೂ ಈ ದೇಶದ ಒಬ್ಬ ಸಾಮಾನ್ಯ ರೈತರಾಗಿರುವ ನೀವು, ಕೃಷಿ ವಿಶ್ವವಿದ್ಯಾನಿಲಯದ ವಿಜ್ಞಾನಿಗಳು ಮಾಡಬೇಕಾದ ಕೆಲಸವನ್ನು ನೀವೇಕೆ ಮಾಡಬೇಕು? ಪ್ರಯೋಗಾಲಯ, ಕಟ್ಟಡ, ಸಹಾಯಕರು, ಸಂಶೋಧಕರು, ಅನುದಾನ ಯಾವುದೂ ಇಲ್ಲದೆ 60 ವರ್ಷಗಳಿಂದ ಮೈಗೆಳೆದು ಕೊಂಡು ದುಡಿಯುವ ನಿಮಗೆ ಇದರಿಂದ ಸಿಗುವ ಸುಖವಾದರೂ ಏನು?'

ಈ ದೇಶದಲ್ಲಿ ಲಕ್ಷಾಂತರ ಭತ್ತದ ತಳಿಗಳಿವೆ ಎನ್ನುವುದು ನಿಜ ಸಂಗತಿ. ಪುರಿ ಜಗನ್ನಾಥನಿಗೆ ದಿನಕ್ಕೊಂದು ತಳಿಯ ಅಕ್ಕಿಯ ನೈವೇದ್ಯವನ್ನು ಸಮರ್ಪಿಸಿ ವರ್ಷ ಕಳೆದ ಮೇಲೆ ಮತ್ತೆ ಅಷ್ಟೇ ಹೊಸ ಹೊಸ ತಳಿಗಳು ಕ್ಯೂ ನಿಲ್ಲುವುದರ ಬಗ್ಗೆ ಎಲ್ಲರಿಗೂ ಗೊತ್ತಿರುವ ಸಂಗತಿ. ದೀರ್ಘಕಾಲ ಉಳಿಯದ, ಬಹು ರುಚಿ ಭತ್ತದ ತಳಿಗಳಿಗೆ ನಮ್ಮಲ್ಲಿ ಕೊರತೆ ಇಲ್ಲ. ಆದರೆ ಕೆಲವಷ್ಟೇ ದೀರ್ಘಕಾಲ ಬಾಳುವುದು, ಗರಿಷ್ಠ ಒದಗುವುದು –ಇಂಥ ತಳಿಗಳ ರಕ್ಷಣೆಯ ಬಗ್ಗೆ ಮಾತ್ರ ಯೋಚನೆ ಮಾಡಬೇಕೇ ಹೊರತು ವಿಜ್ಞಾನಿ, ಅಲ್ಲದ ವಿಜ್ಞಾನ ಕೇಂದ್ರದಲ್ಲಿ ಇಲ್ಲದ ನಿಮ್ಮಂಥ ಸಾಮಾನ್ಯ ರೈತ ಇದು ತನ್ನ ಹೊಣೆಗಾರಿಕೆ ಎಂದು ಪ್ರಯತ್ನಿಸುವ ಅಗತ್ಯವಾದರೂ ಏನು ಎನ್ನುವುದು ನನ್ನ ಉದ್ದೇಶವಾಗಿತ್ತು. 'ನೋಡಿ ಬತ್ತ ಇದ್ದರೆ ಬತ್ತುವುದಿಲ್ಲ ಎಂಬುವುದು ಒಂದು ಗಾದೆ ಮಾತು. 'ಮಿತ್ತ ಕಂಡೊಡು ನೀರ ಇತ್ತಂಡ ತೀರ್ಥ್ ಕಂಡೊಡು ನೀರ್' ಇದೊಂದು ತುಳು ಒಳ್ನುಡಿ. ಮೇಲಿನ ಗದ್ದೆಯಲ್ಲಿ ನೀರಿದ್ದರೆ ಕೆಳಗದ್ದೆಯಲ್ಲಿ ನೀರು ಆಗುತ್ತದೆಯಂತೆ ಎಂಬುವುದು ಒಂದು ತುಳುವಿನ ಪ್ರಸಿದ್ಧ ಗಾದೆ. ಈ ಗಾದೆಯ ಆಳಕ್ಕಿಳಿದರೆ ನೀರಿನ ಅದ್ರ್ರತೆ – ಸಮೃದ್ಧಿ ಸುಲಭ ಗೋಚರ. ಸಾಮಾನ್ಯವಾಗಿ ವಿಜ್ಞಾನದ ಒಂದು ಲೆಕ್ಕ – ಒಂದು ಕೆಜಿ ಭತ್ತ ಬೆಳೆಯಲು ನೂರಾರು ಲೀಟರ್ ನೀರು ಬೇಕಾಗುತ್ತದೆ ಎಂಬುದು. ಆ ಕಾರಣ ಭತ್ತದ ಕೃಷಿ ಗರಿಷ್ಠ ನೀರು ಬೇಡುವ ದುಬಾರಿ ಕೃಷಿ ಎನ್ನುವ ವಾದವು ಲೋಕದಲ್ಲಿದೆ. ಆದರೆ ಇದರ ಇನ್ನೊಂದು ಮುಖ ಪರಿಸರ – ಜಲ ಉಳಿಕೆಯೇ ಆಗಿದೆ ಎಂಬುದು ಮತ್ತು ಇದು ನಮ್ಮ ಹಿರಿಯರು ಪರಂಪರಾಗತವಾಗಿ ನಂಬಿಕೊಂಡು ಪಾರಿಸಿಕೊಂಡು ಬಂದ ವಾದ.

'ಇದೇ ಮಣ್ಣಿನಲ್ಲಿ ಆರ್ಥಿಕ ಬೆಳೆಯಾಗಿ ನಾನು ಏನೇನೋ ಬೆಳೆಸಬಹುದು. ಅದನ್ನು ಮಾರಿ ಅಕ್ಕಿ ತರಬಹುದು. ಆದರೆ ಅವೆಲ್ಲವೂ ನನ್ನ ಪಾಲಿಗೆ ಹೊರಗಿನವುಗಳೇ. ಬೇರೆಯದ್ದೇ. ಈ ಮನೋಭಾವ ಸ್ವಲ್ಪ ಅರ್ಥಹೀನದ್ದು, ಅತಿರೇಕದ್ದು ಎಂದು ನಿಮಗೆ ಅನಿಸಿದರೆ ತಪ್ಪಲ್ಲ. ಆದರೆ ನನ್ನ ಮನೋಭಾವ ಸರಿಯಾದದ್ದು ಎಂದು ನನ್ನ ಮನಸ್ಸು ಹೇಳುತ್ತದೆ. ಈ ಕಾರಣಕ್ಕಾಗಿ ಈ ವ್ಯವಸ್ಥೆ ನಾನಿರುವವರೆಗೆ ಮುಂದುವರೆಯುತ್ತದೆ.

ಮನೆಯ ಊಟ ತುಂಬಾ ಇಷ್ಟ

'ನಿಮಗೆ ಗೊತ್ತಿರಬೇಕು ನಾನು ಹೊರಗಡೆ ಹೋಗುವುದೇ ಇಲ್ಲ. ಪೇಟೆ, ಬೇರೆ ಮನೆಯ ಕಾರ್ಯಕ್ರಮ, ನಗರದ ಮದುವೆ ಇವುಗಳಲ್ಲಿ ಭಾಗವಹಿಸುವುದು ಕಡಿಮೆ. ತಡವಾಗಿಯಾದರೂ ನಾನು ಮನೆಗೆ ಬಂದು ಊಟ ಮಾಡುವೆ. ತೀರ ಅನಿವಾರ್ಯವಾದರೆ ಸ್ವಲ್ಪ ಅನ್ನ ಊಟ ಮಾಡಿ ನಿರ್ಗಮಿಸುವೆ.' ಇದು ದೇವರಾಯರ ಅನ್ನ ಪ್ರೀತಿಯ ಸೊಗಡಿನ ಮಾತು.

'ನೋಡಿ ದೇರ್ಲ, ಅವರಲ್ಲಿ ಇರುವುದು ಒಂದೇ ಜಾತಿಯ ಭತ್ತ ಅವರ ಉದ್ದೇಶ ವ್ಯಾಪಾರ. ಹಣ ಹೊಂಚುವುದು. ಶ್ರೀಮಂತರಾಗುವುದು. ಹಣದಿಂದ ಮತ್ತೆ ಮತ್ತೆ ಸುಖ ಖರೀದಿಸುವುದು. ನನ್ನಲ್ಲಿ ಒಂದಲ್ಲ, ನೂರಾರು ಜಾತಿಯ ತಳಿಗಳಿವೆ. ನನ್ನಲ್ಲಿರುವಷ್ಟು ಜಾತಿಯ ಬೀಜಗಳನ್ನು ಯಾವ ಅಂಗಡಿಯವನು ಇಟ್ಟುಕೊಂಡಿಲ್ಲ. ನನ್ನ ಆತಂಕ ಇರುವುದು ಎಲ್ಲಿ ಒಂದು ತಳಿ ಹೋಗಿಬಿಟ್ಟರೆ ಮತ್ತೆ ಹುಡುಕುದಾದರೂ ಎಲ್ಲಿಂದ ಎಂಬುವುದು. ಅವರದ್ದು ಸುಖ. ನನ್ನದು ಬದುಕು. ಅನ್ನದ ಬದುಕು!'

ಭತ್ತ ಲಾಭವೋ ಅಕ್ಕಿ ಲಾಭವೋ?

'ಭತ್ತವನ್ನು ಭತ್ತವನ್ನಾಗಿಯೇ ಮಾರುವುದು ಲಾಭವೋ, ಅಕ್ಕಿ ಮಾಡಿ ಮಾರುವುದು ಲಾಭವೋ?' ಎಂಬ ಪ್ರಶ್ನೆಯನ್ನು ಎಂಬ ಪ್ರಶ್ನೆ ಒಂದನ್ನು ಅವರಿಗೆ ಕೇಳಿದ್ದೆ. 'ಮಾರುವಷ್ಟಿದ್ದರೆ ಅಕ್ಕಿ ಮಾಡುವುದೇ ಲಾಭ. ಅದೊಂದು ರೀತಿ ಮೌಲ್ಯವರ್ಧನೆ. ನನ್ನಿಂದ ಕೆ.ಜಿ.ಗೆ 80 ರೂಪಾಯಿ ಕೊಟ್ಟು ಖರೀದಿಸುವವರಿದ್ದಾರೆ. ದನಗಳಿಗೆ ಉತ್ತಮ ತೌಡು ಸಿಗುತ್ತದೆ. ಉರುವಲಾಗಿ ಬಳಸಲು ಉಮಿ ಸಿಗುತ್ತದೆ. ಮನೆಗೆ ಬಂದು ಅಕ್ಕಿ ಖರೀದಿಸುವವರಿದ್ದಾರೆ. ಸಾವಯವ ಅಕ್ಕಿ ಅವರಿಗೂ ಒಂದು ಖುಶಿ!' ಎನ್ನುತ್ತಾರೆ ಬಿ.ಕೆ.ದೇವರಾವ್.

ಇವರಿಗೆ 79 ವರ್ಷ!

ದೇವರಾಯರಿಗೆ ಈಗ 79 ವರ್ಷ. ಮನುಷ್ಯ ಎಲ್ಲವನ್ನು ಬಿಟ್ಟು ಸನ್ಯಾಸಕ್ಕೆ ಸಿದ್ಧಗೊಳ್ಳುವ ಹೊತ್ತು. ಮೊದಲೇ ರಾಯರಿಗೆ ಧ್ಯಾನ, ಯೋಗ, ಪೂಜೆಯೆಂದರೆ ಎಲ್ಲಿಲ್ಲದ ಹಿಗ್ಗು –ನೇಮ. ಹೀಗಿರುವಾಗ ದೇವರಾಯರದ್ದೀಗ ಕೃಷಿಗೆ ಬೆನ್ನು ಹಾಕಿ ನಿವೃತ್ತಿ ಘೋಷಿಸುವ ಹೊತ್ತು. ಇಂತಹ ವಯಸ್ಸಿನಲ್ಲಿ, ಸ್ವಲ್ಪವೂ ಅಳುಕದೆಯೇ, ವಿಮುಖರಾಗದೆಯೇ, ಇನ್ನೂ ಸಾಗುವಳಿಯಲ್ಲಿ ಪ್ರೀತಿಯಿಂದ ತೊಡಗಿಕೊಂಡಿರುವ ಗುಟ್ಟೇನು ಎಂಬುವುದು ನಾನು ಮಾತ್ರವಲ್ಲ, ಇದನ್ನು ಓದುವ ನೀವೂ ಕೂಡ ಕೇಳಬಹುದಾದ ಸಹಜ ಪ್ರಶ್ನೆ. 79 ವರ್ಷದ ಅಜ್ಜನಿಗೆ ನೂರಾರು ತಳಿಯ ಬೆನ್ನಿಗೆ ಬಿದ್ದು ಕಾಪಾಡುವ ತಳಿ ತಪಸ್ಸು ಇನ್ನೂ ಬೇಕಾ? ಕೇಳಲೇಬೇಕಾದ ಪ್ರಶ್ನೆ. ಅವರ ಕಾಳಜಿ ಕೈಯಲ್ಲಿರುವ ಒಂದಷ್ಟಾದರೂ ಬೀಜಗಳು ಮುಂದಿನ ತಲೆಮಾರಿಗೆ ಉಳಿಯಬೇಕೆಂಬ ಮನಸ್ಸು. ಆದರೆ ಇದನ್ನು ಮುಂದಕ್ಕೆ ಮುಂದುವರಿಸುವವರು ಯಾರು?

ದೇವರಾಯರು ಹೇಳುತ್ತಾರೆ 'ಮಗ ಇದ್ದಾನೆ. ಮಗಳು ಇದ್ದಾಳೆ. ಅವರೇ ಆರಂಭಿಸಿದ ಬೀಜ ಬ್ಯಾಂಕ್ ಇದೆ. ಬೀಜ ಬ್ಯಾಂಕನ್ನು ಮಗ, ಸೊಸೆ ಸಮರ್ಥವಾಗಿ ನಿರ್ವಹಿಸುತ್ತಾರೆ. ಮಗ ಪರಮೇಶ್ವರ ತನ್ನ ಮನೆಯಂಗಳದಲ್ಲಿ ಕೆಲವೊಂದು ಆಯ್ದ ತಳಿಗಳನ್ನು ಪ್ಲಾಸ್ಟಿಕ್ ತೊಟ್ಟೆಗೆ ಮಣ್ಣು ತುಂಬಿಸಿ ಬೆಳೆಸಿ ಸಾಕುತ್ತಿದ್ದಾನೆ. ಆದರೆ ಇದೆಲ್ಲ ನನ್ನ ನಂತರ ಎಷ್ಟು ಸಮಯ ಎಂದು ಗೊತ್ತಿಲ್ಲ. ನಡೆದಷ್ಟು ದಿನ ನಡೆಯಲಿ.'

ದೇವರಾಯರ ಶ್ರೀಮಂತಿಕೆ ಮತ್ತು ಬಡತನ ಇರುವುದು ಇದೇ ಈ ಮೇಲಿನ ನ್ಯಾಯದಿಂದ! ನಾನು ಉಣ್ಣುವ ಅನ್ನ ನನ್ನದೇ ಆಗಬೇಕು, ಅದು ನನ್ನ ಭೂಮಿಯಲ್ಲೇ ಬೆಳೆದಿರಬೇಕು. ಅದನ್ನು ತಾನೇ ಬಿತ್ತಿರಬೇಕು, ಅದಕ್ಕೆ ತನ್ನ ಬೆವರು ತಾಗಿರಬೇಕು – ಈ ಸಿದ್ಧಾಂತ, ತರ್ಕಕ್ಕಾಗಿಯೇ ಅವರು ಜೀವ, ಜೀವನ ಸವೆಸಿದ್ದಾರೆ. ಬರೀ ಇಷ್ಟೇ ಆಗಿದ್ದರೆ ನಾನು ಅವರ ಬಗ್ಗೆ ಈ ಪುಸ್ತಕ ಬರೆಯುವ, ಬದುಕನ್ನು ದಾಖಲಿಸುವ ಅಗತ್ಯವಿರಲಿಲ್ಲ. ಅವರು ಈ ದೇಶದ ಜನ ಉಣ್ಣುವ, ಈವರೆಗೆ ಉಂಡ, ಮುಂದೆ ಉಣ್ಣುವ ನೂರಾರು ಭತ್ತದ ತಳಿ ವೈವಿಧ್ಯತೆಯನ್ನು ಸಂಗ್ರಹಿಸಿದ್ದಾರೆ.

ವಿಶ್ವವಿದ್ಯಾಲಯ ಮಾಡಬೇಕಾದ ಕೆಲಸ

ಸಾಮಾನ್ಯವಾಗಿ ಇಂಥ ಕೆಲಸ ಮಾಡುವವರನ್ನು ನಾವು ಸರಳವಾದ ಭಾಷೆಯಲ್ಲಿ ಕೃಷಿ ವಿಜ್ಞಾನಿಗಳು, ತಜ್ಞರು, ಸಂಶೋಧಕರು ಎಂದು ಕರೆಯುತ್ತೇವೆ. ಅವರು ಸಂಶೋಧನೆಗೆ ತೊಡಗುವ ಜಾಗವನ್ನು ಕೃಷಿ ವಿಶ್ವವಿದ್ಯಾನಿಲಯಗಳು ಎಂದು ಕರೆಯುತ್ತೇವೆ. ಇಂಥ ಸಂಶೋಧನೆಗೆ, ಕೃಷಿ ವಿಶ್ವವಿದ್ಯಾಲಯಗಳಿಗೆ, ತಳಿಶೋಧನೆ, ರಕ್ಷಣೆ, ವಿಸ್ತರಣೆಗೆಂದು ದೇಶವು ವಾರ್ಷಿಕ ಕೋಟಿ ಕೋಟಿ ಹಣವನ್ನು ಖರ್ಚು ಮಾಡುತ್ತದೆ. ಅಂಥ ಕೇಂದ್ರದ ಸುತ್ತ ಗೋಡೆ ಏರಿಸಿ, ಗೇಟಿನಲ್ಲಿ ಜವಾನನನ್ನು ನಿಲ್ಲಿಸಿ, ಸುತ್ತಲೂ ಸಿ.ಸಿ. ಕ್ಯಾಮರಾ ಹಾಕಿಸಿ ಇಂಥ ಅಧ್ಯಯನಾಂಗಗಳು ಹತ್ತಾರು ವರ್ಷಗಳಿಂದ ಅಳೆದು ಸುರಿಯುತ್ತಲೇ ಇವೆ. ಫಲಿತಾಂಶಗಳು, ಪರಿಣಾಮಗಳು ಭಾಗಶಃವಷ್ಟೇ ರೈತಪರವಾಗಿರುತ್ತವೆ. ಇಲ್ಲ ಎಂದಿಲ್ಲ. ಇವುಗಳಿಗೆ ಅಪವಾದಗಳೂ ಇವೆ. ಗೋಡೆ, ಬೇಲಿ ಇಳಿಸಿ ರೈತರೊಂದಿಗೇ ಬೆರೆಯುವ ಕೇಂದ್ರಗಳೂ, ವಿಜ್ಞಾನಿಗಳೂ ಅಲ್ಲಲ್ಲಿ ಇದ್ದೇ ಇದ್ದಾರೆ.

ದೂರದ ಮಿತ್ತಬಾಗಿಲಲ್ಲಿ ದೇವರಾವ್ ಮಾಡುತ್ತಿರುವುದು ಇದೇ ಕೃಷಿ ವಿ.ವಿ.ಗಳು ಮಾಡುವುದನ್ನೇ. ಬರೀ ಇವರೊಬ್ಬರಲ್ಲ, ನಮ್ಮ ದೇಶದಲ್ಲಿ ಇಂಥ ಸಾವಿರಾರು ರೈತ ವಿಜ್ಞಾನಿಗಳಿದ್ದಾರೆ. ಮಣ್ಣಿಗೆ ಬೆರೆತು, ಅಳೆದು ಸುರಿಯುತ್ತಾನೇ ಇದ್ದಾರೆ. ವಿಜ್ಞಾನ ಗೋಷ್ಠಿಗಳಲ್ಲಿ ಇವರಿಗೆ ಪಿ.ಪಿ. ಪ್ರೆಸೆಂಟೇಶನ್ ಗೊತ್ತಿಲ್ಲ. ವಿಜ್ಞಾನದ ಕೋಷ್ಟಕ ಪ್ರಮೇಯಗಳ ಅರಿವಿಲ್ಲ. ಸಾದಾ ಸೀದಾ ಉಡುಗೆಯಲ್ಲಿ ಹಿಂದಿನ ಬೆಂಚಲ್ಲಿ ಕೂರುವವರು, ತಾಂಬೂಲ ತಿನ್ನುವ ಬಾಯಲ್ಲಿ ತಾನು ಮಾಡಿದ್ದನ್ನು ವೈಜ್ಞಾನಿಕ ಪರಿಭಾಷೆಯಲ್ಲಿ ಸರಿಯಾಗಿ ಹೇಳಲಾರದೆ ಒದ್ದಾಡುವವರು, ಮುದುಡುವವರು ಇಂಥವರು. ▸▸ ನಾಲ್ಕನೇ ಪುಟಕ್ಕೆ

ದುರ್ಗಮ ಪ್ರದೇಶದಲ್ಲಿ ಕೃಷಿ ತಪಸ್ಸು

ದೇವರಾಯರು ಬದುಕುವ ಮಿತ್ತಬಾಗಿಲು ಸುತ್ತ ದುರ್ಗಮ ಕಾಡು. ಸಹ್ಯಾದ್ರಿಯ ಅಂಚಿನಲ್ಲಿರುವ, ಏರುತಗ್ಗಿನ ಪ್ರದೇಶ. ಸಾರ ಮಣ್ಣು ಕನಿಷ್ಠ. ಕಲ್ಲುಬಂಡೆಗಳ ನಡುವಿನ ನೆಲ. ಬೀಸುಮಳೆ. ಇಂತಹ ಗರಿಷ್ಠ ಸವಾಲುಗಳ ನಡುವೆ ತಪಸ್ಸಿನಂತೆ ಬೀಜ ಧ್ಯಾನವನ್ನು ಅವಲಂಬಿಸಿಕೊಂಡು ಬಂದವರು ದೇವರಾಯರು.

ಬ್ರಿಟಿಷರು ನಿಷೇಧಿಸಿದ ಇಂಡಿಯನ್ ಯೆಲ್ಲೋ!

» ಜಯಶ್ರೀ ಭಟ್ ಸಿಂಗಪುರ

ನಮ್ಮ ದೇಶದ ಪುರಾತನ ಆವಿಷ್ಕಾರವಾದ ಹಳದಿ ಬಣ್ಣ ಜಗತ್ತಿನಾದ್ಯಂತ 'ಇಂಡಿಯನ್ ಯೆಲ್ಲೋ' ಎಂದು ಕರೆಸಿಕೊಂಡು ಕಲಾಜಗತ್ತಿನಲ್ಲಿ ತನ್ನದೇ ಆದ ಮಹತ್ವದ ಸ್ಥಾನ ಪಡೆದಿತ್ತು. ಖ್ಯಾತನಾಮರಾದ ರೆಂಬ್ರಾಂಟ್, ವಿನ್ಸೆಂಟ್ ವ್ಯಾನ್ ಗೊ, ವಿಲಿಯಮ್ ಟರ್ನರ್ ಮೊದಲಾದವರ ಕಲಾಕ್ರತಿಗಳ ಶೋಭೆ ಹೆಚ್ಚಿಸಿತ್ತು. ಇಂತಹ ಹಳದಿ ಬಣ್ಣದ ತಯಾರಿಕೆ ಹೇಗೆ, ಇದರ ಸುತ್ತ ನಡೆದ ಕತೆ ಏನು ತಿಳಿಯೋಣ ಬನ್ನಿ.

ಪುರಾಣ ಪುರುಷನಾದ ಕೃಷ್ಣನ ಹೊಳೆಯುವ ಹಳದಿ ವಸ್ತ್ರವನ್ನು ಭಾರತೀಯ ಚಿಕಣಿ ಚಿತ್ರಗಳಲ್ಲಿ ನೋಡಿರುತ್ತೇವೆ. ನಮ್ಮದೇ ಪ್ರಖ್ಯಾತ ಅಡುಗೆ ಸಾಮಗ್ರಿಯಾದ ಅರಿಶಿನವನ್ನೇನೂ ಇದಕ್ಕೆ ಬಳಸಿಲ್ಲ. ಯಾಕೆಂದರೆ ಅರಿಶಿನಕ್ಕೆ ಚಿತ್ರಕಲೆಯಲ್ಲಿ ಬಳಕೆಯಾಗುವ ಬಣ್ಣಕ್ಕೆ ಬೇಕಾದ ನಿರ್ದಿಷ್ಟ ಗುಣಗಳಿಲ್ಲ. ಹಾಗಾಗಿ ಬುದ್ಧಿವಂತರಾದ ನಮ್ಮ ಪೂರ್ವಿಕರು ಚಿತ್ರಕಲೆಗೆಂದೇ ಒಂದು ವಿಶಿಷ್ಟ ಹಳದಿ ಬಣ್ಣ ತಯಾರಿಸಿ ಅದನ್ನೇ ಬಳಸುತ್ತಿದ್ದರು. ಇದು ಭಿತ್ತಿ ಚಿತ್ರಗಳಲ್ಲೂ, ಚಿಕಣಿ ಚಿತ್ರಗಳಲ್ಲೂ ಇಂದಿಗೂ ತನ್ನ ಹೊಳಪನ್ನು ಉಳಿಸಿಕೊಂಡಿರುವ ಕಿತ್ತಳೆ ಮಿಶ್ರಿತ ಹಳದಿ ಬಣ್ಣವಾಗಿದೆ.

17–18ನೇ ಶತಮಾನದಲ್ಲಿ ಯುರೋಪಿಯನ್ನರು ಭಾರತಕ್ಕೆ ಬಂದಾಗ, ಅವರಿಗೆ ಈ ಎಲ್ಲಾ ಚಿತ್ರಗಳಲ್ಲಿ ಕಾಣಸಿಗುತ್ತಿದ್ದ ಹಳದಿ ಬಣ್ಣ ಕಣ್ಸೆಳೆಯಿತು. ಅಲ್ಲಿಂದ ಮುಂದೆ ವಿದೇಶಗಳಿಗೆ ಇದರ ರಫ್ತು ಹಾಗೂ ಅಲ್ಲಿನ ಕಲೆಗಳಲ್ಲಿ ಈ ಬಣ್ಣದ ಬಳಕೆ ವ್ಯಾಪಕವಾಗಿ ವಿಸ್ತರಿಸಿತು. ಡಚ್ ಕಲಾವಿದರಾದ ರೆಂಬ್ರಾಂಟ್‌ನ ವಿಖ್ಯಾತ ಕಲಾಕ್ರತಿಗಳಲ್ಲೂ ಈ ಇಂಡಿಯನ್ ಯಲ್ಲೋ ಬಳಕೆ ಕಂಡುಬರುತ್ತದೆ.

ನಂತರ ಬಂದ ಇನ್ನೊಬ್ಬ ಡಚ್ ಮಾಸ್ಟರ್ ವಿನ್ಸೆಂಟ್ ವ್ಯಾನ್ ಗೋ ತನ್ನ ವಿಕ್ಷಿಪ್ತ ನಡವಳಿಕೆ, ಪೋಸ್ಟ್ ಇಂಪ್ರೆಶನಿಸ್ಟ್ ಕಲಾಶೈಲಿಯಿಂದ ಪ್ರಸಿದ್ಧ ಕಲಾವಿದನೆನಿಸಿಕೊಂಡಿದ್ದಾನೆ. ಆತನ ಪ್ರಸಿದ್ಧವಾದ ಕಲಾಕೃತಿಗಳಲ್ಲಿ ಒಂದಾದ 'ಸ್ಟಾರಿ ನೈಟ್ಸ್' ಎಂಬ ಕೃತಿಯಲ್ಲಿ ದಟ್ಟನೀಲಿ ಆಗಸದಲ್ಲಿ ಹಳದಿ ಬಣ್ಣದ ಹೊಳೆಯುವ ತಾರೆಗಳು ಚಲಿಸುತ್ತಿವೆಯೇನೋ ಎಂಬ ಭ್ರಮೆ ಹುಟ್ಟಿಸುತ್ತವೆ. ಈ ಹಳದಿ ತಾರೆಗಳ ಹೊಳೆಯುವ ಗುಣ 'ಇಂಡಿಯನ್ ಯಲ್ಲೋ' ಎಂಬ ಬಣ್ಣದಿಂದಲೇ ಬಂದಿದ್ದು.

ಇಂಗ್ಲಿಷ್ ಕಲಾವಿದ ವಿಲಿಯಂ ಟರ್ನರ್‌ನ ಖ್ಯಾತ ಕೃತಿಯಾದ 'ಏಂಜಲ್ ಸ್ಟ್ಯಾಂಡಿಂಗ್ ಇನ್ ದಿ ಸನ್'ನಲ್ಲಿ ಬಳಸಿರುವ ಹಳದಿ ಬಣ್ಣವೂ ಇದೇ. ಸ್ಕಾಟಿಷ್ ಕಲಾವಿದ ಜಾನ್ ಸಿಂಗರ್ ಸಾರ್ಜೆಂಟ್ ಕಾರ್ನೇಶನ್, ಲಿಲಿ, ರೋಸ್ ಎಂಬ ಪೇಂಟಿಂಗ್ ನಲ್ಲಿ ಕತ್ತಲಲ್ಲಿ ಹೊಂಬಣ್ಣ ಬೀರುವ ಲ್ಯಾಂಟರ್ನ್ ಚಿತ್ರಿಸಲು ಸೂಕ್ತವಾದ ಹಳದಿ ಪಿಗ್ ಮೆಂಟ್ ಯಾವುದೆಂದು ಹುಡುಕಾಡುವಾಗ, ಇಂಡಿಯನ್ ಯೆಲ್ಲೋ ಬಣ್ಣ ಸೂಕ್ತ ಎಂದು ಗುರುತಿಸಿ ಅದನ್ನೇ ಬಳಸಿದ. ಹೀಗೆ ವಿಶಿಷ್ಟವಾದ ಹೊಳೆಯುವ, ಪಾರದರ್ಶಕ ಗುಣವುಳ್ಳ ಹಳದಿ ಬಣ್ಣ ಬಳಸಿರುವ ಇನ್ನೂ ಹಲವು ಕಲಾವಿದರನ್ನು ಹೆಸರಿಸಬಹುದು. ಆದರೆ 20 ನೇ ಶತಮಾನದ ಆದಿಯಲ್ಲಿ ಇದ್ದಕ್ಕಿದ್ದಂತೆ ಇದು ಮಾರುಕಟ್ಟೆಯಿಂದ ಕಣ್ಮರೆಯಾಗಿ

ಹೋಯಿತು. ಇದಕ್ಕೆ ಯಾವೊಂದು ಸ್ಪಷ್ಟ ಕಾರಣವೂ ಎಲ್ಲೂ ಸಿಗದಿದ್ದರೂ, ಬ್ರಿಟಿಷರು ಕುತಂತ್ರದಿಂದ ಮುಂದೊಡ್ಡಿದ್ದ ಪ್ರಾಣಿ ದಯೆ ಎಂಬ ಕುಂಟುನೆಪವೇ ಇದರ ಹಿಂದಿನ ಕಾರಣ ಎಂಬುದು ಗುಟ್ಟಾಗಿ ಉಳಿದಿಲ್ಲ. ಲಂಡನ್ನಿನ ವಿನ್ಸರ್ ಎಂಡ್ ನ್ಯೂಟನ್ ಎಂಬ ಕಲಾಸಾಮಗ್ರಿ ಮಾರಾಟ ಮಳಿಗೆಗೆ ಕಲ್ಕತ್ತಾದಿಂದ ಮೂಟೆಗಟ್ಟಲೆ ಬಂದು ಬೀಳುತ್ತಿದ್ದ ಹಳದಿ ಉಂಡೆಗಳನ್ನು ಪುನಃ ಪರಿಶೀಲಿಸಿ ಅದರಲ್ಲಿ ಹಸಿರು ಮಿಶ್ರಿತ ಹಳದಿಯನ್ನು ಬೇರ್ಪಡಿಸಿ ಶುದ್ಧ ಹಳದಿಯನ್ನು ಬೇರೆ ಪ್ಯಾಕೇಜಿಂಗ್ ಮಾಡಿ ಮಾರಾಟ ಮಾಡಲಾಗುತ್ತಿತ್ತು. ಈ ಬಣ್ಣ ಯಾವುದರಿಂದ ತಯಾರಿಸಲಾಗುತ್ತಿತ್ತೆಂದು ಅದುವರೆಗೂ ಯಾರಿಗೂ ಗೊತ್ತಿರಲಿಲ್ಲ. ಒಂಟೆಯ ಮೂತ್ರ, ಹಾವಿನ ವಿಷ, ಎತ್ತಿನ ಕರುಳಿನ ದ್ರವ (ಬೈಲ್ ಜ್ಯೂಸ್) ಎಂದು ಏನೇನೋ ಊಹಿಸಲಾಗಿತ್ತು.

1883ರಲ್ಲಿ ಬಾಟನಿಸ್ಟ್ ಹಾಗೂ ಕ್ಯೂ ಗಾರ್ಡನ್‌ನ ಡೈರೆಕ್ಟರ್ ಆಗಿದ್ದ ಸರ್ ಜೋಸೆಫ್ ಹುಕರ್ ಇದರ ಆಳ ಅಗಲ ಅಳೆಯಲು ಹೊರಟರು. ಇವರ ಆದೇಶದಂತೆ ಸಂಶೋಧನೆ ಕೈಗೊಂಡು ಪತ್ರ ಬರೆದ ಟಿ ಎನ್ ಮುಖರ್ಜಿ ಎಂಬ ಅಧಿಕಾರಿ ಹೇಳಿದ ವಿಷಯ ಬೇರೆಯದೇ ಆಗಿತ್ತು. ಅವರ ಪತ್ರ 'ರಾಯಲ್ ಸೊಸೈಟಿ ಆಫ್ ಆರ್ಟ್ಸ್ ಜರ್ನಲ್'ನಲ್ಲಿ ಪ್ರಕಟವೂ ಆಯಿತು.

ಅವರ ಪತ್ರದ ಸಾರಾಂಶದ ಪ್ರಕಾರ ಮಿರ್ಜಾಪುರಕ್ಕೆ ಹೋಗಿ ಹಳದಿ ಬಣ್ಣದ ತಯಾರಿಕೆ ಹೇಗೆ ಎಂದು ವಿಚಾರಿಸಲಾಗಿ, ಅಲ್ಲಿನ ಗೋಪಾಲಕರು ತಮ್ಮ ಹಸುಗಳಿಗೆ ಮಾವಿನ ಎಲೆ ತಿನ್ನಿಸಿ ಅದರ ಮೂತ್ರ ಸಂಗ್ರಸಿ ಅದನ್ನು ಕುದಿಸಿ, ಆರಿಸಿ ಈ ಹಳದಿ ಉಂಡೆಗಳನ್ನು ತಯಾರಿಸಲಾಗುತ್ತಿತ್ತೆಂದು ಗೊತ್ತಾಯಿತು. ಇದು ಅಂದಿನ ಬ್ರಿಟಿಷ್ ಸರ್ಕಾರಕ್ಕೆ ಪ್ರಾಣಿಹಿಂಸೆಯಾಗಿ ಕಂಡಿತು. ಇದು ಅತ್ಯಂತ ಘೋರ ಅಪರಾಧ ಎಂದೂ, ಇನ್ನು ಮೇಲೆ ಈ ಬಣ್ಣ ತಯಾರಿಸುವಂತಿಲ್ಲ ಎಂದು ನಿರ್ಬಂಧನೆ ಹೇರಲಾಯ್ತು. ಹಾಗೆಂದು ಎಲ್ಲಿಯೂ ಅಧಿಕೃತ ಆದೇಶ ಇರಲಿಲ್ಲ. ಆದರೆ ಈ ಬಣ್ಣ ಮಾರುಕಟ್ಟೆಯಿಂದ ಶಾಶ್ವತವಾಗಿ ಮಾಯವಾಯಿತು!

ನಂತರ ಲಂಡನ್‌ನಲ್ಲಿದ್ದ 'ವಿನ್ಸರ್ ಎಂಡ್ ನ್ಯೂಟನ್' (ಸ್ಥಾಪನೆ 1832) ಎಂಬ ಕಂಪೆನಿ ಇದನ್ನು ಕೃತಕವಾಗಿ ತಯಾರಿಸಿ ಮಾರಾಟ ಮಾಡತೊಡಗಿತು. ಇದು ಅಧಿಕೃತವಾಗಿ ಮಾವಿನ ಎಲೆ ತಿಂದ ಗೋವಿನ ಮೂತ್ರದಿಂದಲೇ ತಯಾರಾಗುತ್ತಿತ್ತೆಂದು ಸಂಶೋಧನೆಯಿಂದ ದೃಢಪಟ್ಟಿದ್ದು 2018ರಲ್ಲಿ. ಕಾರ್ಲ್ ಗೇಬ್ ಎಂಬ ಕೆಮಿಸ್ಟ್ ಇದರ ಸಂಶೋಧನೆ ಮಾಡಿ ಇದರಲ್ಲಿ ಹಿಪ್ಪೂರಿಕ್ ಆಸಿಡ್ ಇದೆ ಎಂದು ದ್ರಢಪಡಿಸಿದ ಮೇಲೆ ಮುಖರ್ಜಿಯ ವರದಿಯನ್ನು ಒಪ್ಪಿಕೊಳ್ಳಲಾಯಿತು.

ತಮಿಳುನಾಡಿನ ಪ್ರಖ್ಯಾತ ತುಕ್ಕು ಹಿಡಿಯದ ಕಬ್ಬಿಣದ ಎದೆಗವಚ ತಯಾರಿಕೆಯನ್ನೂ ಸಹ, ಬ್ರಿಟಿಷ್ ಸರ್ಕಾರ ಹೀಗೆಯೇ ನಿರ್ಬಂಧಿಸಿ ಆ ಕುಶಲಕರ್ಮಿಗಳ ಆದಾಯವನ್ನು ಕಿತ್ತುಕೊಂಡು, ಬೀದಿ ಪಾಲು ಮಾಡಿತ್ತು. ಬಿಹಾರ, ಬಂಗಾಳದಲ್ಲಿ ಇಂಡಿಯನ್ ಯೆಲ್ಲೋ ಬಣ್ಣ ತಯಾರಿಸುತ್ತಿದ್ದ ಗೋಮಾಳಿಗಳ ಬದುಕೂ ಸಹ ಇದೇ ರೀತಿ ನುಚ್ಚುನೂರಾಗಿತ್ತು. ನಮ್ಮ ದೇಶದ ಅದೆಷ್ಟು ಕೌಶಲ್ಯಗಳನ್ನು ಕುಂಟು ನೆಪವೊಡ್ಡಿ, ಕಾರಣವೂ ಇಲ್ಲದೆ ಹೀಗೆ ಬ್ರಿಟಿಷ್ ಸರಕಾರ ನಿರ್ನಾಮ ಮಾಡಿತ್ತೋ ಏನೋ, ಅದರ ಪೂರ್ಣ ಅರಿವು ನಮಗೆ ಇನ್ನೂ ಇಲ್ಲ! ಅದೆಷ್ಟೇ ಕುತಂತ್ರ ಮಾಡಿದರೂ, ಕೃತಕವಾಗಿ ತಯಾರಾದರೂ ಸರಿ, ಹಳದಿ ಬಣ್ಣಗಳಲ್ಲಿ 'ಇಂಡಿಯನ್ ಯಲ್ಲೋ' ಹೆಸರು ಮಾತ್ರ ಇಂದು ಶಾಶ್ವತವಾಗಿ ಉಳಿದಿದೆ.

ಹತ್ತೊಂಬತ್ತನೆಯ ಶತಮಾನದ ತನಕ ಜಗತ್ತಿನ ಕಲಾವಿದರು ಹಳದಿ ಬಣ್ಣಕ್ಕಾಗಿ 'ಇಂಡಿಯನ್ ಯೆಲ್ಲೋ' ಉಪಯೋಗಿಸುತ್ತಿದ್ದರು. ಖ್ಯಾತ ಕಲಾವಿದ ವಿನ್ಸೆಂಟ್ ವ್ಯಾಂಗೋನ 'ಸ್ಟಾರಿ ನೈಟ್' (1889) ಚಿತ್ರದಲ್ಲಿ ಇದನ್ನು ಬಳಸಿದ ರೀತಿ ಅನನ್ಯ. ಆದರೆ, ಬ್ರಿಟಿಷರು ಕುಂಟು ನೆಪವೊಡ್ಡಿ, ಇದರ ತಯಾರಿಕೆಯನ್ನು ನಿಷೇಧಿಸಿದರು, ನಮ್ಮ ದೇಶದ ಈ ಸಹಜ ಉತ್ಪನ್ನವು ವಾಣಿಜ್ಯಕವಾಗಿ ರಫ್ತಾಗುವುದನ್ನು ನಿಲ್ಲಿಸಿದರು.



ಪುಸ್ತಕ ವಿಮಾನ

ಚೊಕ್ಕಣ್ಣನ ದುಃಖದ ಕಥೆ



» ವಾ. ಮುರಳೀಧರ ತೀರ್ಥಹಳ್ಳಿ

ಕನ್ನಡ ಚಲನಚಿತ್ರರಂಗದಲ್ಲಿ ಸಾಕಷ್ಟು ಹೆಸರು ಮಾಡಿದ ಕಲ್ಯಾಣ್ ಕುಮಾರ್ ಅವರು ಜನಪ್ರಿಯ ನಟರಾಗಿದ್ದರು. ಆದರೆ, ನಂತರದ ದಿನಗಳಲ್ಲಿ ತಮಗೆ ಒಂದಷ್ಟೂ ಅನುಭವ ಇಲ್ಲದ ಕ್ಷೇತ್ರದಲ್ಲಿ ಬಂಡವಾಳ ತೊಡಗಿಸಿ, ನಷ್ಟವನ್ನು ಅನುಭವಿಸಿ, ನೋವಿಗೀಡಾಗಿದ್ದು ಬೇಸರದ ವಿಚಾರ.

ಚೊಕ್ಕಣ್ಣ ಅನ್ನುವುದು ನಟ ಕಲ್ಯಾಣ್ ಕುಮಾರ್ ಅವರ ಕೌಟುಂಬಿಕ ಪ್ರಿಯ ಅಡ್ಡನಾಮ. ಕನ್ನಡ ಚಿತ್ರರಂಗದ ಕುಮಾರತ್ರಯರಲ್ಲಿ ಒಬ್ಬರಾಗಿ, ಚಿತ್ರರಂಗ ಮತ್ತು ಕಲಾವಿದರ ಏಳಿಗೆಗೆ ಶ್ರಮಿಸಿದ ನಟಶೇಖರ ಕಲ್ಯಾಣ್ ಕುಮಾರ್ ಅಲಿಯಾಸ್ ವೆಂಕಟರಂಗ ಅವರ ಬಗ್ಗೆ ಎಲ್ಲಿಯೂ ಮಾಹಿತಿ ಸಿಗುವುದಿಲ್ಲ ಎಂಬುದು ವಾಸ್ತವ. ಅವರ ಪತ್ನಿ ರೇವತಿ ಕಲ್ಯಾಣ್ ಕುಮಾರ್ ಬಹಳ ಹಿಂದೆ ಕನ್ನಡದ ವಾರಪತ್ರಿಕೆಯೊಂದರಲ್ಲಿನಿರೂಪಿಸಿದ ಅವರ ಜೀವನ ಚರಿತ್ರೆಯನ್ನು, ಈಗ ಟೋಟಲ್ ಕನ್ನಡ ಯೂ ಟ್ಯೂಬ್ ವಾಹಿನಿ, ಪುಸ್ತಕ ರೂಪದಲ್ಲಿ ಹೊರತಂದಿದೆ.

ತಮಿಳು ಚಿತ್ರರಂಗದಲ್ಲಿ ನಾಯಕ ನಟರಾಗಿ, ಕನ್ನಡದಲ್ಲಿ ಅಮರಶಿಲ್ಪಿ ಜಕಣಾಚಾರಿ, ಚೆಲುವಾಂತ ಚೆನ್ನಿಗ ಮೊದಲಾದ ಚಿತ್ರಗಳು, ಅವರನ್ನು ಉತ್ತಮ ನಟನನ್ನಾಗಿ ಪೂಚಯಿಸಿವೆ. ಕಲ್ಯಾಣ್ ಕುಮಾರ್ ಅವರ ಜೀವನ ಚರಿತ್ರೆ, ಗಾತ್ರದಲ್ಲಿ ಪುಟ್ಟ ದಾಗಿದ್ದರೂ ಮಹತ್ತಿನಲ್ಲಿ ಹಿರಿದಾಗಿದೆ. ಅಪರೂಪದ ಕಪ್ಪು ಬಿಳುಪಿನ ಛಾಯಾ ಚಿತ್ರಗಳನ್ನು ಒಳಗೊಂಡಿರುವ ಈ ಕೃತಿ ಸಂಗ್ರಹಯೋಗ್ಯವಾಗಿದೆ. ಕಣಗಾಲ್ ಪ್ರಭಾಕರ ಶಾಸ್ತ್ರಿಯವ ರಿಂದ 'ಶತಮಾನಕೊಬ್ಬ ಕಲ್ಯಾಣ್ ಕುಮಾರ್' ಎಂದು ಪ್ರಶಂಸಿಸಲ್ಪಟ್ಟ ಈ ಅಪರೂಪದ ಕಲಾವಿದನ ಬದುಕು ಬವಣೆ ಗಳನ್ನು ತೆರೆದಿಡುವ ಈ ಕೃತಿ, ಬಹಳ ಕುತೂಹಲಕಾರಿ ಎನಿಸಿದೆ. ಕಲ್ಯಾಣ ಕುಮಾರ್ ರಾಜ್ ಕಪೂರ್‌ರನ್ನು ಆರಾಧ್ಯ ದೈವವೆಂದು ಆರಾಧಿಸಿ, ನರ್ಗೀಸ್ ಜೊತೆ ನಟಿಸುವ ಹಂಬಲದಿಂದ ಬೊಂಬಾಯಿಗೆ ಹೋಗುತ್ತಾರೆ. ಅಲ್ಲಿ ಪಡಬಾರದ ಪಾಡುಪಟ್ಟು ಬರಿಗೈಯಲ್ಲಿ ಹಿಂದಿರುಗುವ ಕಲ್ಯಾಣ್ ಕುಮಾರ್ ಜೀವನದಲ್ಲಿ ಪವಾಡವೊಂದು ಜರುಗುತ್ತದೆ. ಅವರು ತಮಿಳಿನ ಹೆಮ್ಮೆಯ ನಾಯಕನಟನಾಗಿ ರೂಪುಗೊಂಡು, ನಂತರ ಕನ್ನಡದ ಬೆಳ್ಳಿತೆರೆಯ ಮೇಲೆ ಮಿಂಚಿದರು. 'ಚಿನ್ನದ ಗೊಂಬೆ' ಚಿತ್ರದ ಚಿತ್ರೀಕರಣದ ಸಮಯದಲ್ಲಿ ಕಲ್ಯಾಣ್ ತಾಯಿ ನಿಧನರಾಗುತ್ತಾರೆ. ಆಗ ಪಂತುಲು ಅವರ 'ಸತ್ತವರು ಬರುವುದಿಲ್ಲ, ಅಂದಮೇಲೆ ಇದ್ದವರು ನಷ್ಟದಿಂದ ಸಾಯಬಾರದು ಅಲ್ಲವೇ?' ಎಂಬ ವ್ಯವಹಾರದ ಮಾತಿಗೆ ಬದ್ಧರಾಗಿ ಕೇವಲ ತಾಯಿಯ ಮುಖ ದರ್ಶನ ಮಾಡಿ ಮರು ದಿನವೇ ಕರ್ತವ್ಯಕ್ಕೆ ಹಾಜರಾಗುವ ವೃತ್ತಿನಿಷ್ಠೆ ತೋರುತ್ತಾರೆ. ಮದ್ರಾಸಿನಲ್ಲಿ ಮನೆ ಕೊಂಡಾಗ ಗೆಳೆಯರಿಗೆ ಊಟ ಹಾಕಿಸದ ಜಿಪುಣ ಎಂದು ಎಲ್ಲರೂ ಜರೆದರೂ ತಾವು ಅನಾಥಾಶ್ರಮದಲ್ಲಿ ಆಗಾಗ್ಗೆ ಅನಾಥರಿಗೆ ಲಡ್ಡು ಸಹಿತ ಅನ್ನದಾನ ಮಾಡಿದ್ದನ್ನು ಗುಟ್ಟಾಗಿಯೇ ಇಡುತ್ತಾರೆ. ನಟಿ ಪಂಢರೀಬಾಯಿಯವರ ಮನೆ ಕಲಾವಿದರಿಗೆ ಅನ್ನ ಛತ್ರವಾಗಿದ್ದನ್ನು ದಾಖಲಿಸುತ್ತಾರೆ. 'ರಾಯರ ಸೊಸೆ' ಚಿತ್ರೀಕರಣ ಸಮಯದಲ್ಲಿ ರಾಜ್‌ಕುಮಾರ್ ಅವರ ಸರಳತೆಯನ್ನು ಕೊಂಡಾಡುತ್ತ ತಾವಿಬ್ಬರೂ ಒಂದೇ ಹಗ್ಗದ ಮಂಚದ ಮೇಲೆ ಜೊತೆಯಾಗಿ ಮಲಗಿದ ಸಂದರ್ಭವನ್ನು ಸಿಹಿ ತಿನಿಸಿನಂತೆ ಮೆಲುಕು ಹಾಕುತ್ತಾರೆ. ಇಮೇಜಿಗೆ ಕಟ್ಟು ಬೀಳಬೇಡಿ ಎಂಬ ಪುಟ್ಟಣ್ಣ ಮತ್ತು ವಂದನಾ ಅವರ ಮಾತಿಗೆ ಕಟ್ಟುಬಿದ್ದು, ಬೆಳ್ಳಿಮೋಡ ಮತ್ತು ಮೈಸೂರು ಟಾಂಗಾ ಚಿತ್ರಗಳ ಖಳನಾಯಕನಾಗಿ ಚಿತ್ರಗಳನ್ನು ಗೆಲ್ಲಿಸಿದರೂ, ತಾನು ಸೋಲು ಕಂಡ ಧೀರ ಕಲಾವಿದ ಕಲ್ಯಾಣ್ ಕುಮಾರ್.

ಕನ್ನಡ ಕಲಾವಿದರ ನೆರವಿಗಾಗಿ ಇವರು ಕಟ್ಟಿದ ಸಂಘದ ಹೆಸರು 'ಅಶಕ್ತ ಕಲಾವಿದರ ಕಲ್ಯಾಣ ಸಮಿತಿ'. ಸಂಘದ ಹೆಸರಿನಲ್ಲಿ 'ಕಲ್ಯಾಣ' ಎಂಬ ಪದವಿದ್ದದ್ದೇ ತಪ್ಪು ಎಂಬಂತೆ ಬಿಂಬಿಸಿ ಅವರು ಸಮಿತಿಯಿಂದ ಹೊರಬರುವಂತೆ ಮಾಡಿದ ಕೆಲವು 'ಶ್ರೇಯೋಭಿಲಾಷಿ'ಗಳ ಬಗ್ಗೆಯೂ ಇಲ್ಲಿ ಅವರು ವಿಷಾದದಿಂದ ಬರೆದಿದ್ದಾರೆ. ಕನ್ನಡಕ್ಕಾಗಿ ಮಡಿದ ದಿವಂಗತ ಹೋರಾಟಗಾರ ಮ.ರಾಮಮೂರ್ತಿ ಕುಟುಂಬಕ್ಕೆ ಆರ್ಥಿಕವಾಗಿ ನೆರವು ನೀಡಿದ ಕಲ್ಯಾಣ್ ಕುಮಾರ್, ಕಡೆಗಾಲದಲ್ಲಿ ಹೋಟೆಲು ನಡೆಸುವ ದುಸ್ಸಾಹಸಕ್ಕೆ ಕೈಹಾಕದಿದ್ದರೆ ಬಹುಶಃ ನೆಮ್ಮದಿಯಿಂದ ಇರುತ್ತಿದ್ದರೇನೋ? ಹೋಟೆಲು ಉದ್ಯಮದಲ್ಲಿ ಏನೇನೂ ಅನುಭವವಿಲ್ಲದೆ ಆರಂಭಿಸಿದ 'ಪಾಕಶಾಲೆ ನವರಸ್' ಅವರ ಪಾಲಿಗೆ ಬರೀ ಶೋಕರಸವನ್ನು ಉಳಿಸಿ ಬಿಡುತ್ತದೆ. ಕಡೆಯವರೆಗೂ ಐಷಾರಾಮದ ಬದುಕು ಬದುಕಿದ, ಹುಲಿ ಯಾವಾಗಲೂ ಹುಲ್ಲು ತಿನ್ನುವುದಿಲ್ಲ ಎನ್ನುತ್ತ ರಾಜನಂತೆಯೇ ಬದುಕಿದ ಕಲ್ಯಾಣ್ ಕುಮಾರ್ ಅವರ ಬದುಕು ಚಿತ್ರರಂಗದಲ್ಲಿ ಇರುವವರಿಗೆ ಹಾಗೂ ಮುಂದೆ ಬರುವವರಿಗೆ ಒಂದು ಪಾಠ ಮತ್ತು ಮಾರ್ಗದರ್ಶಿಯಾಗಿದೆ. ಜತೆಗೆ, ಚಲನಚಿತ್ರ ರಂಗದಲ್ಲಿ ಉತ್ತಮ ಹೆಸರು ಇರುವಾಗ, ಮುಂದಿನ ಜೀವನಕ್ಕಾಗಿ ಸೂಕ್ತ ಭದ್ರತೆ ಮಾಡಿಕೊಳ್ಳುವುದು ಎಷ್ಟು ಅಗತ್ಯ ಎಂಬುದನ್ನು ಸಹ ತಿಳಿಹೇಳುತ್ತದೆ. ಕನ್ನಡ ಚಿತ್ರರಂಗದ ಹಲವು ಒಳನೋಟಗಳನ್ನು ಒದಗಿಸುವ ಈ ಪುಸ್ತಕವನ್ನು, ಚಲನಚಿತ್ರಾಸಕ್ತರೆಲ್ಲರೂ ಓದಬಹುದು.

ಚೆಲುವಾಂತ ಚೆನ್ನಿಗ ಚೊಕ್ಕಣ್ಣನ ಕಥೆ
ಲೇ:ರೇವತಿ ಕಲ್ಯಾಣಕುಮಾರ್
ಪ್ರ: ಟೋಟಲ್ ಕನ್ನಡ
ಬೆಲೆ: ರು.120/-4

ಗ್ರಾಮೀಣ ಪ್ರದೇಶದಲ್ಲೇ ನೆಲೆಸಿ, ಜನಸಾಮಾನ್ಯರಿಗೆ ವೈದ್ಯಕೀಯ ಸೌಲಭ್ಯವನ್ನು ನೀಡಿದ, ಹಲವು ಬಾರಿ ಉಚಿತವಾಗಿಯೂ ಚಿಕಿತ್ಸೆ ನೀಡಿದ, 'ಮುದ್ರಾಡಿ ಡಾಕ್ಟ್ರು' ಎಂದೇ ಹೆಸರಾಗಿರುವ ಡಾ. ಎಂ.ಎಸ್.ರಾವ್ ಅವರ ಅಭಿನಂದನ ಗ್ರಂಥದ ಮುನ್ನುಡಿಯ ಆಯ್ದಭಾಗಗಳು ಇಲ್ಲಿವೆ.

ಜನಾನುರಾಗಿ ಹಳ್ಳಿ ಡಾಕ್ಟ್ರು

» ಮಂಜುನಾಥ ಕೆ. ಶಿವಪುರ

ಮುದ್ರಾಡಿ ಡಾಕ್ಟ್ರು ಎಂದೇ ಹೆಸರಾಗಿರುವ ಡಾ। ಎಂ.ಎಸ್. ರಾವ್ ಸರ್ವಜನ ಮಾನ್ಯರು, ವೈದ್ಯರಾಗಿ ಅವರು ಮಾಡಿದ ಸೇವೆ ಅನನ್ಯ ಮತ್ತು ಅಪೂರ್ವ. ತಮ್ಮ ಅಮೋಘ ಸೇವೆಯ ಮೂಲಕ ಜನಸಾಮಾನ್ಯರೆಲ್ಲರ ಪ್ರೀತಿಯ ಡಾಕ್ಟರ್ ಆಗಿ ಮನೆ ಮಾತಾದವರು. ಅಪದ್ಬಾಂಧವರಾದರು. ರೋಗಿಯ ಆರೈಕೆಯನ್ನೇ ಆದ್ಯತೆಯನ್ನಾಗಿಸಿಕೊಂಡು ಉತ್ತಮ ಕೈ ಗುಣದ ಡಾಕ್ಟರಾದವರು. ವೈದ್ಯರಾಗಿ ಡಾ। ಎಂ.ಎಸ್. ರಾವ್ ಅವರ ಸೇವೆ, ಅರ್ಪಣಾ ಮನೋಭಾವ, ಬದ್ಧತೆ ಮತ್ತು ಸರಳತೆಯ ಗುಣಗಳನ್ನು ವರ್ಣಿಸಲು ಅಸಾಧ್ಯ.

ಪ್ರವೃತ್ತಿಯಲ್ಲಿ ಯಕ್ಷಗಾನ, ತಾಳಮದ್ದಳೆ, ಸಾಹಿತ್ಯ, ಕ್ರೀಡೆ, ಸಂಘಟನೆ ಮತ್ತು ಶಿಕ್ಷಣ ಕ್ಷೇತ್ರದಲ್ಲೂ ಆಸಕ್ತಿ ಹೊಂದಿದ ಸಾಂಸ್ಕೃತಿಕ ರಾಯಭಾರಿ. ಸಿಂಪಲ್ ಲಿವಿಂಗ್ ಹೈ ಥಿಂಕಿಂಗ್ ಎಂಬ ಮಾತಿನಂತೆ ಜೀವನ ನಡೆಸುತ್ತಿರುವ ಋಷಿ ಸದೃಶ ವ್ಯಕ್ತಿತ್ವದವರು. 'ವನಸುಮ'ದಂತೆ ಪ್ರಶಸ್ತಿ ಸನ್ಮಾನ ಪ್ರಚಾರಗಳಿಂದ ದೂರವಿರುವ ಡಾ. ಎಂ.ಎಸ್.ರಾವ್ ಅವರ ಜೀವನವೇ ಒಂದು ಆದರ್ಶ. ಅವರ ಜೀವನದ ತತ್ವಾದರ್ಶಗಳು, ಜನಹಿತ ವೈದ್ಯಕೀಯ ಸೇವಾ ಗುಣ, ಸಾಂಸ್ಕೃತಿಕ ಸಾಹಿತ್ಯ ಸಂಘಟನಾತ್ಮಕ ಚಟುವಟಿಕೆಗಳು ದಾಖಲೀಕರಣ ಆಗಬೇಕೆಂಬುದು ಅವರಿಂದ ಉಪಕೃತರಾದವರು, ಒಡನಾಡಿಗಳು, ಬಂಧುಮಿತ್ರರು ಮತ್ತು ಅಭಿಮಾನಿಗಳ ಬಹು ವರ್ಷಗಳ ಆಶಯವಾಗಿತ್ತು. 2012ರಲ್ಲಿ ಮುದ್ರಾಡಿಯಲ್ಲಿ ವೈದ್ಯ ವೃತ್ತಿಯಿಂದ ಸ್ವಯಂ ನಿವೃತ್ತಿಯಾಗಿ ಪುತ್ತೂರು, ಮೈಸೂರಿನಲ್ಲಿ ನಿವೃತ್ತಿ ಜೀವನ ನಡೆಸುತ್ತಿದ್ದರೂ ಜನಮನದಿಂದ ನಿವೃತ್ತಿಯಾಗಿರಲಿಲ್ಲ.

ಅವರು ಜನಸಾಮಾನ್ಯರ ಡಾಕ್ಟರ್ ಆಗಿದ್ದರು. ರೋಗಿಗಳ ಜೇಬು ನೋಡುತ್ತಿರಲಿಲ್ಲ. ಜನರಿಗೆ ಆತ್ಮೀಯ ವೈದ್ಯರಾಗಿದ್ದರು. ಈಗಿರುವ ರೋಗ ಪತ್ತೆ ಹಚ್ಚುವ ಆಧುನಿಕ ಸಲಕರಣೆಗಳು ಇಲ್ಲದ ಕಾಲದಲ್ಲಿ ಡಾಕ್ಟರ್‌ರವರ ಕಣ್ಣು ರೋಗ ಪತ್ತೆ ಹಚ್ಚುವ ಬಹು ದೊಡ್ಡ ಸಲಕರಣೆ ಆಗಿತ್ತು. ಕೈ ಎತ್ತಿ ಕೊಟ್ಟ ಕೈ ಗುಣದ ಔಷಧಿಯ ಜೊತೆಗೆ ಧೈರ್ಯದ ಮಾತುಗಳು ರೋಗ ನಿರೋಧಕವಾಗಿತ್ತು. ಹಗಲು ರಾತ್ರಿಯೆನ್ನದೆ ಕಷ್ಟಕಾಲದಲ್ಲಿ ಮನೆ ಮನೆಗೆ ಹೋಗಿ ನೀಡಿದ ಔಷಧಿ, ಶುಶೂಷೆ ಸಂಜೀವಿನಿಯಾಗಿತ್ತು. ಅದನ್ನು ಯಾರೂ ಮರೆಯುವಂತೆ ಇರಲಿಲ್ಲ. ಕೆಲವೊಮ್ಮೆ ವ್ಯಕ್ತಿಗಳ ಬಗ್ಗೆ ಮಾಹಿತಿ ಪಡೆಯುವಾಗ ಸಹಜವಾಗಿ ಮುಖಸ್ತುತಿಗಾಗಿ ಧನಾತ್ಮಕ ಪ್ರತಿಕ್ರಿಯೆಗಳು ಬಂದರೂ ಮತ್ತೆ ನಿಧಾನವಾಗಿ ದೀಪದ ಬುಡದಲ್ಲಿ ಕತ್ತಲು ಗೋಚರವಾಗುತ್ತದೆ. ಆದರೆ ಎಂ.ಎಸ್. ರಾಯರ ಒಡನಾಡಿಗಳು, ಉಪಕೃತರು ಮಾತನಾಡುವಾಗ ಅವರ ಕಣ್ಣುಗಳಲ್ಲಿದ್ದ ಅಭಿಮಾನ ಸಪ್ತವಾಗಿ ಗೋಚರಿಸುತ್ತಿತ್ತು. ಅವರು 'ಡಾಕ್ಟರಲ್ಲ ದೇವರು' ಎಂಬರ್ಥದ ಮಾತುಗಳನ್ನು ಕೇಳಕಿತನಾಗುವಂತಾ ಯಿತು.



ಒಟ್ಟು ಅಭಿಪ್ರಾಯದಲ್ಲಿ ಡಾ। ಎಂ.ಎಸ್. ರಾವ್ ಅವರು ಓರ್ವ ಆಧುನಿಕ ವೈದ್ಯ ಸಂತನಂತೆ ಕಂಡರು ಎಂದರೆ ಖಂಡಿತವಾಗಿಯೂ ಅತಿಶಯೋಕ್ತಿ ಆಗಲಾರದು. ಮುದ್ರಾಡಿ ಡಾಕ್ಟರ್ ಎಂದೇ ಸರ್ವಜನ ಮಾನ್ಯರಾದುದ ರಿಂದ ಅಭಿನಂದನ ಗ್ರಂಥಕ್ಕೆ 'ಮುದ್ರಾಡಿ ಡಾಕ್ಟ್ರು' ಎಂಬುದೇ ಸಾರ್ಥಕ ಹೆಸರು. ಗ್ರಂಥದಲ್ಲಿ ಮೂರು ವಿಭಾಗಗಳಿದ್ದು ಭಾಗ ಒಂದರಲ್ಲಿ ಡಾ। ಎಂ.ಎಸ್. ರಾವ್ ಅವರ ಅಭಿಮಾನಿಗಳು ಮತ್ತು ಒಡನಾಡಿಗಳು ಬರೆದ ಲೇಖನಗಳ ಗೊಂಚಲು, ಎರಡನೆಯ ವಿಭಾಗದಲ್ಲಿ ಡಾಕ್ಟರ್ ಅವರ ಬದುಕಿನ ಪುಟಗಳಿಂದ ಬಂದ ಜೀವನ ದರ್ಶನವಿದೆ. ಮೂರನೇ ವಿಭಾಗದಲ್ಲಿ ಭಾವ ಚಿತ್ರಗಳಿವೆ.

ಹಳ್ಳಿಗಾಡಿನ ಪ್ರದೇಶದಲ್ಲಿ ಗ್ರಾಮೀಣ ಜನರ ಸೇವೆ ಮಾಡಿದ ಈ ವೈದ್ಯರ ಬದುಕು ಅನುಕರಣೀಯ.

(ಮುನ್ನುಡಿಯ ಆಯ್ದ ಭಾಗ)

ಮುದ್ರಾಡಿ ಡಾಕ್ಟ್ರು, ಸಂ: ಮಂಜುನಾಥ ಕೆ. ಶಿವಪುರ
ಒಲುಮೆ, ಮುಳ್ಳುಗುಡ್ಡೆ, ಶಿವಪುರ, 9900791090

ಕನ್ನಡ ಪ್ರೀತಿಯ ಅನನ್ಯ ರೀತಿ

ಕನ್ನಡ ಓದುಗರಿಗೆ 'ಆಹಿತಾನಲ' ಎಂಬ ಕಾವ್ಯನಾಮ ಸಾಕಷ್ಟು ಪರಿಚಿತ. ದೂರದ ಅಮೆರಿಕದಲ್ಲಿ ಹಲವು ದಶಕಗಳ ಕಾಲ ನೆಲೆಸಿ, ಕನ್ನಡ ಸಾಹಿತ್ಯವನ್ನು ಅಪಾರವಾಗಿ ಪ್ರೀತಿಸಿ, ತಾವೂ ಸಾಹಿತ್ಯ ರಚನೆ ಮಾಡುತ್ತಾ, ಇತರರಿಗೂ ಸಾಹಿತ್ಯ ರಚಿಸಲು ಪ್ರೋತ್ಸಾಹಿಸುತ್ತಾ, ಚಟುವಟಿಕೆಯಿಂದ ಬದುಕಿದ ಸಾಹಿತಿ ನಾಗ ಐತಾಳರ ಕಾವ್ಯನಾಮ ಅದು. ಅಮೆರಿಕದಲ್ಲಿ ಕನ್ನಡ ಸಾಹಿತ್ಯ ಚಟುವಟಿಕೆಗಳಿಗೆ ಅಪಾರ ಪ್ರೋತ್ಸಾಹ ನೀಡಿ, ಕರ್ನಾಟಕದಿಂದ ಅಲ್ಲಿಗೆ ಬಂದ ಹಲವು ಸಾಹಿತಿಗಳನ್ನು ಮನೆಗೆ ಬರಮಾಡಿಕೊಂಡು, ಆತಿಥ್ಯ ಒದಗಿಸಿ, ಅವರ ಸಾಹಿತ್ಯ ಕಾರ್ಯಕ್ರಮಗಳಿಗೆ ಅನುವು ಮಾಡಿಕೊಟ್ಟ ನಾಗ ಐತಾಳರು, ನಿಜಾರ್ಥದಲ್ಲಿ 'ಕನ್ನಡ ಮನಸು' ಹೊಂದಿದವರು. ಈಗ ನಮ್ಮೊಡನೆ ಅವರು ಇಲ್ಲ; ಅವರನ್ನು ಕುರಿತಾದ ಒಂದು ಪುಸ್ತಕ 'ಕಡಲು ಮತ್ತು ದಡ' ಇದೀಗ, ವಾಷಿಂಗ್ಟನ್ ಡಿ.ಸಿ.ಯಲ್ಲಿ, 18.5.2024ರಂದು, ಅಲ್ಲಿನ ಸಾಹಿತ್ಯೋತ್ಸವದ ಸಂದರ್ಭದಲ್ಲಿ ಲೋಕಾರ್ಪಣೆಗೊಂಡಿತು.

ವಿದೇಶದಲ್ಲೋ, ಬೇರೆ ರಾಜ್ಯದಲ್ಲೋ ಇರುವವರು ಕೆಲವು ಬಾರಿ ಒಂದು ಅಸಹಾಯಕತೆ ವ್ಯಕ್ತಪಡಿಸುವುದುಂಟು 'ಇಷ್ಟು ದೂರದಲ್ಲಿರುವಾಗ, ನನಗೆ ಕನ್ನಡದ ಒಡನಾಟವಿಲ್ಲ, ಆದ್ದರಿಂದ ಕನ್ನಡ ಸಾಹಿತ್ಯ ಓದುವ ಆಸಕ್ತಿ ಇದ್ದರೂ, ಬರೆಯುವ ಆಸಕ್ತಿ ಇದ್ದರೂ, ಅದು ಸಾಧ್ಯವಾಗುತ್ತಿಲ್ಲ' ಎಂಬ ಅಳಲು ಅದು. ಇಂತಹ ಅಳಲು ಹಲವು ಬಾರಿ ಪ್ರಾಮಾಣಿಕವೂ ಆಗಿರಬಹುದು; ಆದರೂ, ಕಳೆದ ನಾಲ್ಕಾರು ದಶಕಗಳಿಂದ ನಾಗ ಐತಾಳರು ಕನ್ನಡವನ್ನು ಪ್ರೀತಿಸಿದ ರೀತಿ, ಕನ್ನಡದ ಬರವಣಿಗೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡ ರೀತಿಯನ್ನು ಕಂಡರೆ, ಅಮೆರಿಕದಲ್ಲೇ ಇರಲಿ, ಅಸ್ಸಾಂನಲ್ಲೇ ಇರಲಿ, ಮನಸ್ಸು ಮಾಡಿದರೆ 'ಎಲ್ಲಿದ್ದರೇನ್, ಎಂತಿದ್ದರೇನ್..' ಕನ್ನಡ ಸಾಹಿತ್ಯ-ಸಂಸ್ಕೃತಿಯ ಒಡನಾಟವನ್ನು ಹೊಂದಿರಬಹುದು ಎಂಬುದನ್ನು ಮನಗಾಣಬಹುದು. 'ಕಡಲು ಮತ್ತು ದಡ' ಪುಸ್ತಕದಲ್ಲಿ ಸುಮಾರು 47 ಬರಹಗಳಿವೆ; ಮೊದಲ ಲೇಖನ ಲಕ್ಷ್ಮೀಶ ತೋಳ್ಪಾಡಿ ಅವರದ್ದು. ಆ ಲೇಖನದ ತಲೆಬರಹವನ್ನೇ ಪುಸ್ತಕಕ್ಕೆ ನೀಡಿರುವುದು ಅರ್ಥಪೂರ್ಣ. ಅವರ ಬದುಕು, ಬರಹದ ಕುರಿತು ಉತ್ತಮ ಸಮೀಕ್ಷೆ ನಡೆಸಿರುವ ತೋಳ್ಪಾಡಿಯವರು, ಬರಹದ ಕೊನೆಯಲ್ಲಿ ಹೀಗೆ ಬರೆಯುತ್ತಾರೆ 'ಕೋಟದ ಒಬ್ಬ ಹುಡುಗ ವಿಶ್ವ ಬೆರಗು ಪಡುವ ಸಂಶೋಧನೆಗಳನ್ನು ಮಾಡಿ, ಅಮೆರಿಕಾದಲ್ಲಿ ಬದುಕು ಕಟ್ಟಿಕೊಂಡದ್ದು ನನಗೆ ದೊಡ್ಡ ವಿಚಾರವಾಗಿ ಕಾಣಿಸುತ್ತಿಲ್ಲ; ಆದರೆ, ಹಾಗೆ ಮೇಲೆ ಏರಿದ ನಂತರ, ವಿಶ್ವದ ಭೂಪಟದಲ್ಲಿ ಒಂದು ಸೂಜಿ ಮೊನೆಯ ಗಾತ್ರವೂ ಇರದಿದ್ದ ಈ ಕೋಟಕ್ಕೆ ಮತ್ತೆ ಬಂದು, ಇಲ್ಲೆಲ್ಲೋ ತನ್ನ ಪಯಣದ ಆರಂಭವಿದ್ದಿತ್ತು ಎಂದದ್ದಿದೆಯಲ್ಲ, ಅದು ಈ ಊರಿನ ಮುಂದಿನ ತಲೆಮಾರಿಗೆ ಒಂದು ಅತ್ಯುನ್ನತ ಆದರ್ಶ; ಅಮೆರಿಕಾದಲ್ಲಿ ಕುಳಿತು ಕನ್ನಡದಲ್ಲಿ ಬರೆದದ್ದಿದೆಯಲ್ಲ, ಅದು ಅಲ್ಲಿ ಉಳಿದಿರುವವರಿಗೆ ಮಹೋನ್ನತ ಆದರ್ಶ; ಪ್ರಾಯ ಎಪ್ಪತ್ತು ಸನಿಹವಾದ ನಂತರ ಕನ್ನಡದಲ್ಲಿ ಬರೆಯತೊಡಗಿದ್ದಿದೆಯಲ್ಲ - ಅದು ಕನ್ನಡ ನಾಡಿಗೇ ಆದರ್ಶ.'



ನಾಗ ಐತಾಳರು ಹತ್ತಿಪ್ಪತ್ತು ಪುಸ್ತಕಗಳನ್ನು ಕನ್ನಡದಲ್ಲಿ ರಚಿಸಿದ್ದಾರೆ; ಅವರ ಪರಿಚಯ ಮಾಡಿಕೊಡುವ ಇಲ್ಲಿನ ಬರಹಗಳು ಒಂದಕ್ಕಿಂತ ಒಂದು ಮಹತ್ವಪೂರ್ಣ ಎನಿಸುತ್ತವೆ. ಕ್ರಿಯಾಶೀಲ ಮತ್ತು ಪರೋಪಕಾರಿ ಮನಸ್ಸೊಂದನ್ನು ಇಲ್ಲಿನ ಬರಹಗಳು ಗ್ರಹಿಸುವ ಪರಿ ಅನನ್ಯ. ಬದುಕಿನ ಕುರಿತು ಪ್ರೀತಿ ಇರುವವರೆಲ್ಲರೂ ಒಮ್ಮೆ ಯಾದರೂ ಈ ಪುಸ್ತಕವನ್ನು ಓದಬೇಕು.

-ಶ.ಹಾ.

ಕಡಲು ಮತ್ತು ದಡ
ಸಂ: ಮೈ.ಶ್ರೀ.ನಟರಾಜ ನಳಿನಿ ಮೈಯ ಪಿ.ಚಂದ್ರಿಕಾ, ಪ್ರ: ಕನ್ನಡ ಸಾಹಿತ್ಯ ರಂಗ, ಅಮೆರಿಕ ಮತ್ತು ಅಭಿನವ ಬೆಂಗಳೂರು, 9448804905, ಬೆಲೆ ರು.300/-

ಭಾರತವೆಂದರೆ ಅತಿಯಾದ ಪ್ರೀತಿ

ಇಂಗ್ಲಿಷ್‌ನಲ್ಲಿ ನೂರಾರು ಕೃತಿ ರಚಿಸಿರುವ ಇವರು ಮನಸ್ಸು ಮಾಡಿದ್ದರೆ, ಇಂಗ್ಲೆಂಡ್‌ಗೆ ಹೋಗಿ ನೆಲೆಸಬಹುದಿತ್ತು; ಆದರೆ ಹಿಮಾಲಯದ ತಪ್ಪಲಿನ ಒಂದು ಸಣ್ಣ ಊರಿನಲ್ಲಿ ಮನೆ ಮಾಡಿಕೊಂಡು ವಾಸಿಸುತ್ತಿದ್ದಾರೆ, ಇಂಗ್ಲಿಷ್‌ನಲ್ಲಿ ಇಂದಿಗೂ ಬರೆಯುತ್ತಲೇ ಇದ್ದಾರೆ. ಇಳಿವಯಸ್ಸಿನ ಇವರ ಬರಹಗಳಿಗೆ ಅಪಾರ ಸಂಖ್ಯೆಯ ಓದುಗರೂ ಇದ್ದಾರೆ; ಅವರಲ್ಲಿ ಕಿರಿಯ ವಯಸ್ಸಿನವರೇ ಅಧಿಕ !

» ನಿವೇದಿತಾ ಎಚ್.

ಬಹಳ ಹಿಂದೆ ಟಿ ವಿ ಎಂದರೆ ದೂರದರ್ಶನ ಮಾತ್ರ ಎಂದಿದ್ದ ಕಾಲದಲ್ಲಿ, ಕನ್ನಡ ಕಾರ್ಯಕ್ರಮಗಳ ಅವಧಿ ಬಹಳ ಚಿಕ್ಕದಾಗಿತ್ತು. ದೆಹಲಿಯಿಂದ ಪ್ರಸಾರವಾಗುವ ಕಾರ್ಯಕ್ರಮಗಳನ್ನೇ ಕಾದು ನೋಡುತ್ತಿದ್ದ ಆ ದಿನಗಳು ಸುಮಧುರ. ಚೆಕಾವ್‌ನ ಕತೆಗಳು, ಶಿಲಪ್ಪದಿಗಾರಮ್, ಶರತ್ಚಂದ್ರರ ಕಾದಂಬರಿಗಳು, ರವೀಂದ್ರರ ಸಣ್ಣಕತೆಗಳು, ಪ್ರೇಮಚಂದರ ಕೃತಿಗಳನ್ನು ಅಂದು ಧಾರಾವಾಹಿಯ ರೀತಿ ಪ್ರಸಾರ ಮಾಡಲಾಗುತ್ತಿತ್ತು.

ಆಗ ದೂರದರ್ಶನದಲ್ಲಿ 'ಏಕ್ ಥಾ ರಸ್ಟಿ' ಎಂಬ ಸರಣಿ ಕೂಡಾ ಬರುತ್ತಿತ್ತು. ಚಿಕ್ಕ ಹುಡುಗನ ಸಾಹಸಗಳು, ಅವನ ಮುಗ್ಧತೆ-ಸ್ನಿಗ್ಧತೆ, ಪರ್ವತ ಪ್ರದೇಶದಲ್ಲಿ ವಾಸಿಸುತ್ತಿದ್ದ ಅವನ ಸುಂದರ ಪರಿಸರ ಇವೆಲ್ಲವೂ ಆ ಧಾರಾವಾಹಿಯನ್ನು ಕಾದು ನೋಡುವಂತೆ ಮಾಡಿದ್ದವು. ಈ ಆಪ್ತ ಸರಣಿಯು, ರಸ್ಕಿನ್ ಬಾಂಡ್‌ನ ಪುಸ್ತಕವನ್ನು ಆಧರಿಸಿದ್ದು ಎಂಬುದನ್ನು ಟೈಟಲ್ ಕಾರ್ಡ್‌ನಲ್ಲಿ ನೋಡಿದ ನೆನಪು. ಆಗ ರಸ್ಕಿನ್ ಬಾಂಡ್ ಯಾರು ಎಂಬುದರ ಅರಿವೇ ಇರಲಿಲ್ಲ.

ಭಾರತದ ವರ್ಡ್ಸ್ ವರ್ತ್ ಎಂದು ಕರೆಯಲ್ಪಡುವ ರಸ್ಕಿನ್ ಬಾಂಡ್ ಹುಟ್ಟಿನಿಂದ ಆಂಗ್ಲರಾದರೂ ಅಪ್ಪಟ ಭಾರತೀಯ. ಬ್ರಿಟಿಷ್ ರಾಜ್‌ನ ಕಾಲದಲ್ಲಿ ಇಂಗ್ಲಿಷ್ ಅಪ್ಪ - ಅಮ್ಮನಿಗೆ ಜನಿಸಿದ ರಸ್ಕಿನ್ ಬಾಂಡ್, ಶಿಕ್ಷಣ ಪಡೆದದ್ದು ಹಿಮಾಲಯದ ತಪ್ಪಲಾದ ಮಸೂರಿಯಲ್ಲಿ. ಕೆಲಕಾಲ ಇಂಗ್ಲೆಂಡ್‌ಗೆ ಹೋದರಾದರೂ, ನಂತರ ವಾಪಸ್ ಬಂದು ನೆಲೆಸಿದ್ದು ಮಸ್ಸೂರಿಯಲ್ಲಿ. ನಮ್ಮ ದೇಶ ಎಂದರೆ ಅವರಿಗಿರುವ ಪ್ರೀತಿಯನ್ನು ಇದು ತೋರುತ್ತದೆ.



ಮಸೂರಿಯಲ್ಲಿ ನೆಲೆಸಿ ಇಂಗ್ಲಿಷ್‌ನಲ್ಲಿ ಸಾಹಿತ್ಯ ಸೃಷ್ಟಿಗೆ ತೊಡಗಿದ ಬಾಂಡ್‌ರ ಲೇಖನಿಯಿಂದ ಮೂಡಿಬಂದ ಕೃತಿಗಳು ಹಲವು. ಗಂಭೀರ ಕತೆ ಕಾದಂಬರಿಗಳನ್ನು ರಚಿಸಿದ್ದಾರಾದರೂ, ಅವರು ಮಕ್ಕಳಿಗಾಗಿ ರಚಿಸಿರುವ ಕೃತಿಗಳು ಮನಮೋಹಕ ಎಂದೇ ಹೇಳಬೇಕು. ಹಿಮಾಲಯದ ತಪ್ಪಲಿನ ಕಾಡು ಪ್ರದೇಶವನ್ನು, ಗ್ರಾಮೀಣ ಪರಿಸರವನ್ನು ಗಾಢವಾಗಿ ಪ್ರೀತಿಸಿದ ಬಾಂಡ್ ತನ್ನ ಕೃತಿಗಳಲ್ಲಿಯೂ ಅದೇ ಶಾಂತ ಸುಂದರ ಪರಿಸರವನ್ನು ಕಟ್ಟಿಕೊಟ್ಟಿದ್ದು, ಅವರ ಕೃತಿಗಳ ಓದನ್ನು ಮನೋಹರವಾಗಿಸುತ್ತಾರೆ.

ಬರೆದೇ ಜೀವಿಸಿದ ಈ ಅವಿವಾಹಿತ ಆಪ್ತ ಕೃತಿಕಾರ ಇದೇ ಮೇ 18ರಂದು ತಮ್ಮ ತೊಂಭತ್ತನೆಯ ವರ್ಷಕ್ಕೆ ಕಾಲಿಟ್ಟರು. 1934 ಮೇ 19ರಂದು ಜನಿಸಿದ ಬಾಂಡ್, ತಮ್ಮ ತುಂಬು ಜೀವನವನ್ನು ಬರವಣಿಗೆಗೇ ಮೀಸಲಿಟ್ಟವರು. 'ದ ರೂಮ್ ಆನ್ ದ ರೂಫ್' ನಿಂದ ಪ್ರಾರಂಭಗೊಂಡ ಇವರ ಸಾಹಿತ್ಯ ಸೇವೆಯ ಪರ್ವದಲ್ಲಿ ಕಾದಂಬರಿಗಳು, ಕಥಾ ಸಂಕಲನಗಳು, ಪ್ರಬಂಧಗಳು, ಸ್ಮೃತಿಚಿತ್ರಗಳು, ಜೀವನ ಚರಿತ್ರೆ ರಚಿಸಲ್ಪಟ್ಟಿವೆ. 300ಕ್ಕೂ ಹೆಚ್ಚಿನ ಇವರ ಕೃತಿಗಳಲ್ಲಿ ಹೆಚ್ಚಿನವು ನಮ್ಮ ದೇಶದ ಇತರ ಭಾಷೆಗಳಿಗೆ ಅನುವಾದಗೊಂಡಿವೆ.

ರಸ್ಕಿನ ಬಾಂಡ್ ಅವರ ಸಾಹಿತ್ಯ ಸೇವೆಗೆ, ಇದುವರೆದೂ ಸಂದ ಪ್ರಶಸ್ತಿಗಳಿಗೆ ಲೆಕ್ಕವಿಲ್ಲ. 1957ರಲ್ಲಿಯೇ ತಮ್ಮ ಪ್ರಥಮ ಕಾದಂಬರಿ 'ದ ರೂಮ್ ಆನ್ ದ ರೂಫ್' ಗೆ ಇಂಗ್ಲಿಷ್ ಕಾಮನ್ ವೆಲ್ತ್ ಬರಹಗಾರಿಗೆ ನೀಡುವ ಪ್ರತಿಷ್ಠಿತ ಜಾನ್ ಲೆವಿನ್ ರೈಸ್ ಪ್ರಶಸ್ತಿ ಪಡೆದರು. ನಂತರದ ವರ್ಷಗಳಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಮತ್ತು ಪದ್ಮಭೂಷಣ ಪ್ರಶಸ್ತಿ (2014) ಪುರಸ್ಕೃತರು.

ಇವರ ಕಾದಂಬರಿ 'ಎ ಫ್ಲೈಟ್ ಆಫ್ ಪಿಜನ್ಸ್', ಜುನೂನ್ ಎಂಬ ಹೆಸರಿನಲ್ಲಿ ಚಲನಚಿತ್ರವಾಗಿದೆ. ಹಾಗೆಯೇ, ಬ್ಲ್ಯೂ ಅಂಬ್ರೆಲ್ಲಾ ಕಾದಂಬರಿ ಅದೇ ಹೆಸರಿನಲ್ಲಿ ತೆರೆಯ ಮೇಲೆ ಬಂದು ರಾಷ್ಟ್ರ ಪ್ರಶಸ್ತಿಗೆ ಭಾಜನವಾಯಿತು. ಸಾಥ್ ಖೂನ್ ಮಾಫ್ ಕೂಡ ಇವರದೇ ಕಾದಂಬರಿಯ ಚಲನಚಿತ್ರ ರೂಪ. ಇವರು ರಚಿಸಿದ ಹಲವು ಸಣ್ಣಕತೆಗಳೂ ಕೂಡಾ ಟಿವಿಯಲ್ಲಿ ಧಾರಾವಾಹಿಗಳಾಗಿ ಬಂದಿವೆ.

ತನ್ನ ಬದುಕಿನಲ್ಲಿ ಹೆಚ್ಚು ಇಷ್ಟವಾದ ವಿಚಾರ ಯಾವುದು ಎಂದು ಪ್ರಶ್ನಿಸಿದಾಗ, ಬಾಂಡ್ ಅವರ ಉತ್ತರ ಹೀಗಿತ್ತು : 'ಇಷ್ಟು ದೀರ್ಘಕಾಲ ಬರೆಯಲು ಸಾಧ್ಯವಾಗಿದ್ದೇ ತೃಪ್ತಿ ತಂದಿದೆ. 17 ಅಥವಾ 18ನೆಯ ವಯಸ್ಸಿಗೆ ರೆಯಲು ಆರಂಭಿಸಿದೆ, ಇನ್ನೂ ಬರೆಯುತ್ತಿದ್ದೇನೆ. ನಿರಂತರವಾಗಿ ಕೃತಿ ಪ್ರಕಟಿಸುವ ವೃತ್ತಿಪರ ಲೇಖಕನಾಗಿರದೇ ಇದ್ದರೂ, ನಾನು ಬರೆಯುವುದನ್ನು ಮುಂದುವರಿಸುತ್ತಿದ್ದೆ.'

ಇವರು ಹಿಮಾಲಯವನ್ನು ಅತಿಯಾಗಿ ಪ್ರೀತಿಸುತ್ತಿದ್ದಾರೆ; ಆ ಪ್ರೀತಿಯನ್ನು ಮುಂದುವರಿಸಿದ್ದಾರೆ. ಉತ್ತರಾಖಂಡದ ಮಸೂರಿ ಪಟ್ಟಣದಲ್ಲಿ, ಸುಂದರ ಪ್ರಕೃತಿ ದೃಶ್ಯವಿರುವ ಜಾಗದಲ್ಲಿ ವಾಸಿಸುತ್ತಿದ್ದಾರೆ. ಅವರ ಮನೆಯ ಎದುರು ನಿಂತರೆ, ಹಿಮಭರಿತ ಪರ್ವತಶಿಖರಗಳ ನೋಟ ಕಾಣಿಸುತ್ತದೆ, ಗ್ರಾಮೀಣ ಬದುಕು ತೆರೆದುಕೊಳ್ಳುತ್ತದೆ. ಇಂದಿಗೂ ಮಸೂರಿಯ ಒಂದು ಕೆಫೆಗೆ ಸಂಜೆ ಬಂದು ಕುಳಿತು, ತನ್ನನ್ನು ಕಾಣಲು ಬರುವ ಸಾಹಿತ್ಯ ಪ್ರೇಮಿಗಳೊಂದಿಗೆ ಹರಟುವ ರಸ್ಕಿನ್ ಬಾಂಡ್ ಅದಮ್ಯ ಜೀವನ ಪ್ರೀತಿಗೆ ಮತ್ತೊಂದು ಹೆಸರು.

ವಿಶ್ವವಾಣಿ ಅಂಕಿತ ಟಾಪ್ ಟೆನ್



1
ಬದುಕು ಮತ್ತು ಭಾರತ
(ಬದುಕಿನ ಪ್ರಶ್ನೆಗಳಿಗೆ ವೈಜ್ಞಾನಿಕ ನೆಲೆಗಟ್ಟಿನಲ್ಲಿ ಉತ್ತರಿಸುವ ಪ್ರಯತ್ನ)
ಲೇ: ತೀರ್ಥರಾಮ ವಳಲಂಬೆ
ಪ್ರ: ಯಾನ ಪ್ರಕಾಶನ, ಮಂಗಳೂರು
ಬೆಲೆ : ರೂ 200/-



2
ಕಾವೇರಿ ವಿವಾದ
(ಒಂದು ಐತಿಹಾಸಿಕ ಹಿನ್ನೋಟ)
ಲೇ: ಸಿ. ಚಂದ್ರಶೇಖರ್
ಪ್ರ: ಅಭಿರುಚಿ ಪ್ರಕಾಶನ, ಮೈಸೂರು
ಬೆಲೆ : ರೂ 400/-

3
ಮೇಘದೂತ
(ಮಲ್ಲಿನಾಥನ ಸಂಜೀವನೀ ಸಂಕ್ಷಿಪ್ತ ವ್ಯಾಖ್ಯಾನ ಸಹಿತ)
ಲೇ: ಕಾಳಿದಾಸ ಮಹಾಕವಿ
ಅನು : ಮಹಾಬಲ ಸೀತಾಳಭಾವಿ
ಪ್ರ: ಅಂಕಿತ ಪುಸ್ತಕ, ಬೆಂಗಳೂರು
ಬೆಲೆ : ರೂ 195/-



4
ಭಾರತದ ಧೀರ ಚೇತನಗಳು
(ಭಾರತೀಯ ಇತಿಹಾಸದ ವೀರರ ಬಗೆಗೆ ನುಡಿ ಚಿತ್ರಗಳು)
ಲೇ: ವಿಕ್ರಮ್ ಸಂಪತ್
ಅನು : ಎಲ್.ವಿ. ಶಾಂತಕುಮಾರಿ
ಪ್ರ: ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ
ಬೆಲೆ : ರೂ 450/-

5
ಮಿಸ್ಸಿನ ಡೈರಿ
(ಮಕ್ಕಳನ್ನು ಮಕ್ಕಳಾಗಿ ನೋಡುವ ಪರಿ)
ಲೇ: ಮೇದಿನಿ ಕೆಸವಿನ ಮನೆ
ಪ್ರ: ವೀರಲೋಕ, ಬೆಂಗಳೂರು
ಬೆಲೆ : ರೂ 200/-



6
ಹಣ ಹಣಿ
(ಮಡಿಲಿನಿಂದ ಮಣ್ಣಿನವರೆಗೆ)
ಲೇ: ರಂಗಸ್ವಾಮಿ ಮೂಕನಹಳ್ಳಿ
ಪ್ರ: ಸಾವಣ್ಣ ಎಂಟರ್ ಪ್ರೈಸಸ್, ಬೆಂಗಳೂರು
ಬೆಲೆ : ರೂ 270/-



7
ಡೇರ್ ಡೆವಿಲ್ ಮುಸ್ತಾಫಾ
(ಚಿತ್ರಕಥೆ ಮತ್ತು ಆಯ್ದ ವಿಮರ್ಶೆಗಳು)
ಚಿತ್ರಕಥೆ : ಅನಂತ ಶಾಂದ್ರೇಯ ರಾಘವೇಂದ್ರ ಮಾಯಕೊಂಡ,ಶಶಾಂಕ್ ಸೋಗಾಲ್
ಪ್ರ: ಸಿನಿಮಾಮರ ಪ್ರಕಾಶನ, ಬೆಂಗಳೂರು
ಬೆಲೆ : ರೂ 250/-

8
ದೌಲತ್
(ಇತಿಹಾಸ ಪ್ರಸಿದ್ಧ ಕಾದಂಬರಿ)
ಲೇ: ವೀರಕೇಸರಿ ಸೀತಾರಾಮಶಾಸ್ತ್ರಿ
ಪ್ರ: ಸಾಹಿತ್ಯ ಸಾಧನ, ಬೆಂಗಳೂರು
ಬೆಲೆ : ರೂ 700/-



9
ಅದ್ವಿತಿಯ
(ಶೀನ ಶೆಟ್ಟಿ-ಕೃಷ್ಣ ಮೂಲ್ಯ ಸೇವಾಕಥನ)
ಲೇ: ನರೇಂದ್ರ ರೈ ದೇರ್ಲ
ಪ್ರ: ಆಕೃತಿ ಆಶಯ ಪಬ್ಲಿಕೇಷನ್ಸ್, ಮಂಗಳೂರು
ಬೆಲೆ : ರೂ 300/-



10
ಕಾಡು ಹೇಳಿದ ಕಥೆಗಳು
(ಕಾಡು ಮತ್ತು ವನ್ಯಜೀವಿಗಳ ಕುರಿತು)
ಲೇ: ಐತಿಚಂಡ ರಮೇಶ್ ಉತ್ತಪ್ಪ
ಪ್ರ: ಅಕ್ಷರ ಮಂಟಪ, ಬೆಂಗಳೂರು
ಬೆಲೆ : ರೂ 150/-

ಮಾಹಿತಿ: ಅಂಕಿತಪುಸ್ತಕ, 53, ಗಾಂಧಿಬಜಾರ್ ಮುಖ್ಯರಸ್ತೆ, ಬಸವನಗುಡಿ, ಬೆಂಗಳೂರು-560004. ದೂರವಾಣಿ: 26617100/26617755 ಮೊಬೈಲ್ ನಂ: 9019190502

ಬಿ.ಬಿ.ಸಿ.ಯಲ್ಲಿ ಕನ್ನಡ ವಾರ್ತೆಗಳನ್ನು ಓದಿದ್ದರು..

ಎತ್ತರದ ನಿಲುವು, ಕಂಚಿನ ಕಂಠ, ಅಗಾಧ ಜ್ಞಾಪಕ ಶಕ್ತಿ.. ಹೀಗೆ ಇಂದಿಗೂ ನನ್ನ ಕಣ್ಮುಂದೆ ನಿಲ್ಲುವ ಭವ್ಯ ನಿಲುವು ಡಾ.ಎಚ್.ಕೆ.ರಂಗನಾಥ್ ಅವರದ್ದು. ನನಗೆ ಅವರ ಒಡನಾಟ ಲಭಿಸಿದ್ದು ಅವರ ಆತ್ಮಕತೆ 'ನೆನಪಿನ ನಂದನ'ದ ಕರಡಚ್ಚು ತಿದ್ದುವ ಅವಕಾಶ ದೊರಕಿದ್ದರಿಂದ. ಮುಂದೆ ಇಂಗ್ಲಿಷಿಗೆ ಅನುವಾದಗೊಂಡಾಗಲೂ ನಾನೇ ಈ ಹೊಣೆ ನಿರ್ವಹಿಸಿದೆ. ಈ ಒಡನಾಟದಲ್ಲಿ ನನ್ನನ್ನು ಅಪಾರವಾಗಿ ಸೆಳೆದಿದ್ದು ಅವರ ಮಾತುಗಾರಿಕೆ, ಶಬ್ದಗಳನ್ನು ನಾಜೂಕಾಗಿ ಜೋಡಿಸುತ್ತಾ ಅವರು ಮಾತಿನ ಮನೆ ಕಟ್ಟುತ್ತಿದ್ದರು. ಅದಕ್ಕೆ ಪುಟವಿಟ್ಟಂತೆ ಜ್ಞಾಪಕಶಕ್ತಿ, ಹಲವು ದಿಗ್ಗಜರ ನಿಕಟ ಒಡನಾಟ ಹೊಂದಿದ ಅವರ ಅನುಭವಗಳೇ ಜ್ಞಾಪಕಚಿತ್ರಶಾಲೆ, ಆದರೆ ಅವರು ಸತ್ಯದ ಗೆರೆ ದಾಟುವವರಲ್ಲ. ನಾ. ಕಸ್ತೂರಿಯವರ ದನಿ ಮೋಹಕವಲ್ಲ, ಶ್ರೀರಂಗರು ನಿರ್ದೇಶನದ ತಂತ್ರದ ಹಂತಗಳನ್ನು ಏರಲಿಲ್ಲ ಹೀಗೆ ಖಚಿತವಾಗಿ ಹೇಳುತ್ತಿದ್ದರು.

2000ನೆಯ ಇಸವಿಯಲ್ಲಿ 'ಮಲ್ಲಿಗೆ' ಮಾಸಪತ್ರಿಕೆಯಲ್ಲಿ ನಾನು 'ಶತಮಾನದಂಚಿನಲ್ಲಿ ಹಿನ್ನೋಟ' ಎಂಬ ಅಂಕಣ ಮಾಡಿದಾಗ ಆಕಾಶವಾಣಿಯ ಹುಟ್ಟು ಬೆಳವಣಿಗೆ ಜೊತೆಗೆ ತಮ್ಮ ಅನುಭವಗಳು ಸೇರಿದ ಬಹಳ ಸೊಗಸಾದ ಲೇಖನವನ್ನು ಕೊಟ್ಟಿದ್ದರು. ಅವರು ಮಲ್ಲಿಗೆಯ ನನ್ನ ಅಂಕಣದ ನಿಕಟ ಓದುಗರಾಗಿದ್ದರು ಎನ್ನುವುದು ಧನ್ಯತೆಯನ್ನು ಮೂಡಿಸುತ್ತದೆ. ಪ್ರತಿ ಅಂಕಣದ ಕುರಿತೂ ಸುದೀರ್ಘವಾಗಿಯೇ ಪ್ರತಿಕ್ರಿಯಿಸುತ್ತಿದ್ದರು. ತಪ್ಪಿದ್ದರೆ ಮುಲಾಜಿಲ್ಲದೆ ಹೇಳುತ್ತಿದ್ದರು. ಶ್ರೀರಂಗರ ಕುರಿತ ಕಂತಿನ ಬಗ್ಗೆ ಅಕ್ಷರಶ: ತರಾಟೆಗೆ

ಒಡನಾಟ

» ಶ್ರೀಧರಮೂರ್ತಿ ಎನ್.ಎಸ್.

ತೆಗೆದು ಕೊಂಡಿದ್ದರು. ಈ ಮೂಲಕವೇ ನಮ್ಮನ್ನು ಬೆಳೆಸಿದರು. ಜೆ.ಪಿ.ನಗರದ ಅವರ ಮನೆಗೆ ಭೇಟಿ ನನಗೆ ಸದಾ ಮುದ ನೀಡುವ ಸಂಗತಿಯಾಗಿತ್ತು. ರಂಗನಾಥ್ ಭಾರತೀಯ ವಿದ್ಯಾ ಭವನದ ಕೇಂದ್ರವನ್ನು ಮೆಕ್ಸಿಕೋದಲ್ಲಿ ಸ್ಥಾಪಿಸಿದ ಹೆಗ್ಗಳಿಕೆಯನ್ನು ಹೊಂದಿದವರು, ಬೆಂಗಳೂರು ಕೇಂದ್ರದ ನಿರ್ದೇಶಕರೂ ಆಗಿದ್ದ ಅವರು ಸಾಂಸ್ಕೃತಿಕ ಮಹತ್ವದ ಅನೇಕ ಧ್ವನಿಮುದ್ರಿಕೆಗಳನ್ನು ವಿದ್ಯಾ ಭವನದಿಂದ ತಂದರು, ಮೌಲ್ಯಯುತ ಪುಸ್ತಕಗಳನ್ನು ಪ್ರಕಟಿಸಿ ಹೊಸ ಪರಂಪರೆ ರೂಪಿಸಿದರು. ಭಾರತೀಯ ವಿದ್ಯಾ ಭವನದ ಗಾಂಧಿ ವಿಜ್ಞಾನ ಮತ್ತು ಮಾನವೀಯ ಮೌಲ್ಯಗಳ ಕೇಂದ್ರದ ನಿರ್ದೇಶಕರೂ ಕೂಡ ಆಗಿದ್ದ ಅವರು ಈ ಕುರಿತು ಹತ್ತಾರು ಹೊಣೆಗಳನ್ನು ನೀಡಿ ನನ್ನ ಅನುಭವ ಪ್ರಪಂಚವನ್ನು ಗಮನಾರ್ಹವಾಗಿ ಹಿಗ್ಗಿಸಿದರು.

ಎಚ್. ಕೆ. ರಂಗನಾಥ ಅವರು 1924ರ ಆಗಸ್ಟ್ 8ರಂದು ಮೈಸೂರಿನಲ್ಲಿ ಜನಿಸಿದರು. (ಇದು ಅವರ ಜನ್ಮ ಶತಮಾನೋತ್ಸವದ ವರ್ಷ) ತಂದೆ ಎಚ್. ಕೃಷ್ಣಸ್ವಾಮಿ. ತಾಯಿ ಚಿನ್ನಮ್ಮ. ಮೈಸೂರಿನ ವೀವರ್ಸ್ ಲೇನ್ ಎಂಬ ಹರಹಿನಲ್ಲಿ ವಾಸಮಾಡುತ್ತಿದ್ದ ಕನ್ನಡದ ಹಿರಿಯ ವಿದ್ವಾಂಸರಾದ ಟಿ. ಎಸ್. ವೆಂಕಣ್ಣಯ್ಯನವರ ಮನೆಯ ಎದುರಿಗೆ ಎಚ್. ಕೆ. ರಂಗನಾಥ ಅವರ ಮನೆಯಿತ್ತು. ಬೆಳಗ್ಗೆ ಎದ್ದು ವೆಂಕಣ್ಣಯ್ಯನವರು ವಾಯುವಿಹಾರಕ್ಕೆ ಹೋಗುತ್ತಿದ್ದರು. ಹೇಗೋ ಒಂದು ಸಲ ಅವರೊಡನೆ ಹುಡುಗ ರಂಗನಾಥನೂ ವಾಯು ವಿಹಾರಕ್ಕೆ ಹೊರಟುಬಿಟ್ಟ. ಇದೇ ಅಭ್ಯಾಸವಾಗಿಹೋಯಿತು. ಈ ವಾಯುವಿಹಾರದ ವ್ಯಾಯಾಮ ರಂಗನಾಥನಿಗೆ ದೊಡ್ಡವರಂತೆ ಬಾಳುವ ಶಿಕ್ಷಣವಾಗಿಹೋಯಿತು. ಬಾಲಕ ರಂಗನಾಥನೊಡನೆ ಏನೇನೋ ಹರಟುತ್ತ ಅವನನ್ನು ನಗಿಸುತ್ತ ವೆಂಕಣ್ಣಯ್ಯನವರು ಹುಡುಗನಲ್ಲಿ ಅನೇಕ ಭವಿಷ್ಯದ ಕನಸುಗಳನ್ನು ಕಟ್ಟಿಬಿಟ್ಟರು. ಹೀಗೆ ದೊರೆತ ಜೀವನದರ್ಶನ ರಂಗನಾಥರಿಗೆ ಮುಂದಿನ ಜೀವನದಲ್ಲಿ ವ್ಯವಹರಿಸುವುದಕ್ಕೆ ಸದಾ ಮೇಲ್ಪಂಕ್ತಿಯಾಯಿತು. ರಂಗನಾಥರು ಕಾಲೇಜು ವಿದ್ಯಾಭ್ಯಾಸವನ್ನು ಮಾಡಬೇಕಾದಾಗ ವೆಂಕಣ್ಣಯ್ಯನವರು ತೀರಿಕೊಂಡರು. ಆದರೆ ಅವರು ಕಟ್ಟಿದ್ದ ಆದರ್ಶ ಮಾತ್ರ ರಂಗನಾಥರ ಮನಸ್ಸಿನಲ್ಲಿ ಸದಾ ಎಚ್ಚರವಾಗಿತ್ತು.

ಕಾಲೇಜು ಸೇರುವ ಹೊತ್ತಿಗೆ ಎಚ್. ಕೆ. ರಂಗನಾಥರಿಗೆ ಸಾಕಷ್ಟು ಸಂಗೀತದ ಕಲಿಕೆಯಾಗಿತ್ತು. ನಾಟಕದಲ್ಲಿ ನಟಿಸುವ ಹವ್ಯಾಸ ಬೆಳೆಯಿತು. ಶಿವರಾಮ ಕಾರಂತರ ರಚನೆಯಾದ 'ಕಿಸಾಗೋತಮಿ' ನಾಟಕದ ಪ್ರಮುಖ ಹೆಣ್ಣು ಪಾತ್ರವನ್ನು ಅಭಿನಯಿಸಿ ಅತ್ಯಂತ ಪ್ರಸಿದ್ಧಿಯನ್ನು ಪಡೆದಿದ್ದರು. ಹೀಗೆ ಕಾಲೇಜಿನ ಸಾಂಸ್ಕೃತಿಕ ಕಾರ್ಯಕ್ರಮಗಳ ಮುಖಂಡತ್ವ ಯಾವಾಗಲೂ ಅವರದ್ದಾಗಿತ್ತು. ಅವರು ವಿಶಿಷ್ಟ ಹಾಸ್ಯ ಪ್ರಜ್ಞೆಯ, ಎಲ್ಲರನ್ನೂ ನಕ್ಕು ನಗಿಸುವ ಮಾತುಗಾರಿಕೆಯ ಸೊಗಸುಗಾರರೆಂದು ಪ್ರಖ್ಯಾತಿ ಪಡೆದಿದ್ದರು. ಸುಮಾರು 1936ರ ವೇಳೆಗೆ ಮೈಸೂರಿಗೆ ಆಕಾಶವಾಣಿಯ ಪ್ರವೇಶವಾಯಿತು. ಪ್ರಸಿದ್ಧ ಮನಃಶಾಸ್ತ್ರಜ್ಞರಾಗಿದ್ದ ಡಾ. ಎಂ. ವಿ. ಗೋಪಾಲಸ್ವಾಮಿಯವರು ತಮ್ಮ ಸ್ವಂತ ಖರ್ಚಿನಿಂದ ಪ್ರಸಾರಮಾಧ್ಯಮವನ್ನು ತಂದು ಹುಟ್ಟುಹಾಕಿದ್ದರು. ಇಲ್ಲಿ ರಂಗನಾಥರಿಗೂ ವಾರ್ತೆಗಳನ್ನು ಓದುವ ಅವಕಾಶ ಸಿಕ್ಕಿತು. ಮುಂದೆ ಆಕಾಶವಾಣಿ ಪ್ರಾರಂಭಗೊಂಡಾಗ ರಂಗನಾಥರು ಆಕಾಶವಾಣಿಯ ನಾಟಕ ವಿಭಾಗದ ನಿರ್ದೇಶಕರಾಗಿ ಅಪಾರ ಯಶಸ್ಸನ್ನು ಪಡೆದರು. ಇದಕ್ಕೆ ಮುಂಚಿತವಾಗಿ ಎಚ್. ಕೆ. ರಂಗನಾಥರು ಮೈಸೂರು ವಿಶ್ವವಿದ್ಯಾಲಯದಲ್ಲಿ ಕೆಲಕಾಲ ಉಪನ್ಯಾಸಕರಾಗಿದ್ದರು. ಅಲ್ಲಿಂದ ಮುಂದೆ ಅವರು ತ್ರಿವಿಕ್ರಮಾವತಾರವನ್ನೇ ತಾಳಿದರು.

ಆಕಾಶವಾಣಿಯ ಮೊದಲ ವಾರ್ತವಾಚಕ ಎನ್ನುವ ಹೆಗ್ಗಳಿಕೆಯ ಅವರು ನಾಟಕ ಪರಂಪರೆಯ ಬಗ್ಗೆ ಡಾಕ್ಟರೇಟ್ ಪಡೆದ ಮೊದಲಿಗರು ಎನ್ನಿಸಿಕೊಂಡರು. ದಕ್ಷಿಣ ಭಾರತದ ಸಂಗೀತ ನಾಟಕ ವಿಭಾಗದ ಮುಖ್ಯಸ್ಥರಾಗಿ, ದಕ್ಷಿಣ ಭಾರತದ ಆಕಾಶವಾಣಿ ವಲಯ ನಿರ್ದೇಶಕರಾಗಿ ಕೊನೆಗೆ ದೆಹಲಿ ತಲುಪಿ ಮಹಾನಿರ್ದೇಶಕರಾಗಿ ನಿವೃತ್ತರಾದರು. ನಿವೃತ್ತಿಯ ನಂತರವೂ ಅವರ ಹೊಣೆಗಾರಿಕೆಗಳು ಕಡಿಮೆಯಾಗಲಿಲ್ಲ. ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಸಂಗೀತ ನಾಟಕ ವಿಭಾಗದ ಮೊದಲ ಪ್ರೊಫೆಸರ್ ಆಗಿ ನೇಮಕವಾಗಿ ಆ ವಿಭಾಗವನ್ನು ಬೆರಗಾಗುವಂತೆ ಕಟ್ಟಿದರು. ಯುನೆಸ್ಕೊ ಪರವಾಗಿ ಏಳು ವಾರಗಳಲ್ಲಿ ಹನ್ನೆರಡು ರಾಷ್ಟ್ರಗಳಲ್ಲಿ ವಿಶೇಷ ಉಪನ್ಯಾಸ ನೀಡಿ ದಾಖಲೆಯನ್ನೇ ಸ್ಥಾಪಿಸಿದರು. ಮಕ್ಕಳ ಯಕ್ಷಗಾನಕ್ಕೆ ಹೊಸ ರೂಪ ನೀಡಿದ ಅವರು ಜಗತ್ತಿನೆಲ್ಲೆಡೆ ಅದು ಪ್ರದರ್ಶಿತವಾಗುವಂತೆ ಮಾಡಿದರು. ಸಲಾಕೆ ಬೊಂಬೆ ಪ್ರದರ್ಶನವನ್ನು ಜಪಾನ್, ಸ್ವಿಡ್ಜರ್ ಲ್ಯಾಂಡ್, ಅಸ್ಟ್ರಿಯಾಗಳಲ್ಲಿ ನಡೆಸಿದರು. ಜಗತ್ತಿನ ಮೊದಲ ಬೊಂಬೆಯಾಟ ಕೇಂದ್ರ, ಯೂನಿಮಾಕ್ಕೆ ನಿರ್ದೇಶಕರಾದ ಮೊದಲ ಭಾರತೀಯ ಎನ್ನಿಸಿ ಕೊಂಡ ಅವರು ರಂಗಭೂಮಿ ತರಬೇತಿಗೆ ಫಿಲಿಪೈನ್ಸ್, ಬ್ರಿಟನ್, ಫ್ರಾನ್ಸ್ ಸರ್ಕಾರಗಳಿಂದ ವಿಶೇಷ ಆಹ್ವಾನ ಪಡೆದರು. ಪ್ರತಿಷ್ಠಿತ ಬಿ.ಬಿ.ಸಿ ಸಂಸ್ಥೆ ತನ್ನ ರಜತ ಮಹೋತ್ಸವದಲ್ಲಿ ಬೇರೆ ಬೇರೆ ಭಾಷೆಗಳಿಂದ ವಾರ್ತೆಗಳನ್ನು ಓದಿಸುವ ಪ್ರಯೋಗ ಮಾಡಿದಾಗ ರಂಗನಾಥ್ ಅಲ್ಲಿ ಕನ್ನಡದಲ್ಲಿ ವಾರ್ತೆಗಳನ್ನು ಓದಿ ಭಾಷೆಯ ಹಿರಿಮೆಯನ್ನು ಜಾಗತಿಕವಾಗಿ ಎತ್ತಿ ಹಿಡಿದಿದ್ದರು.

ಕಾಲೇಜಿನಲ್ಲಿದ್ದಾಗ, ಶಿವರಾಮ ಕಾರಂತರ ರಚನೆಯಾದ 'ಕಿಸಾಗೋತಮಿ' ನಾಟಕದ ಪ್ರಮುಖ ಹೆಣ್ಣು ಪಾತ್ರವನ್ನು ಅಭಿನಯಿಸಿ ಅತ್ಯಂತ ಪ್ರಸಿದ್ಧಿಯನ್ನು ಪಡೆದ ಇವರು, ರಂಗಭೂಮಿಯ ಕುರಿತು ಅಪಾರ ಪಾಂಡಿತ್ಯ ಪಡೆದಿದ್ದರು. ಕನ್ನಡ ಮತ್ತು ಇಂಗ್ಲಿಷಿನಲ್ಲಿ ಐವತ್ತಕ್ಕೂ ಹೆಚ್ಚು ಕೃತಿಗಳನ್ನು ರಚಿಸಿರುವ ರಂಗನಾಥ್ ಉತ್ತಮ ಬರಹಗಾರರೂ ಕೂಡ.

ಕನ್ನಡ ಮತ್ತು ಇಂಗ್ಲಿಷಿನಲ್ಲಿ ಐವತ್ತಕ್ಕೂ ಹೆಚ್ಚು ಕೃತಿಗಳನ್ನು ರಚಿಸಿರುವ ರಂಗನಾಥ್ ಉತ್ತಮ ಬರಹಗಾರರೂ ಕೂಡ. ಕನ್ನಡದಲ್ಲಿ ನಾಟಕಗಳ ಕುರಿತ ಅಧ್ಯಯನಕ್ಕೆ ಅಕಾಡಮಿಕ್ ರೂಪ ನೀಡಿದ್ದೇ ರಂಗನಾಥ್. ಶಿಷ್ಟ, ಜನಪದ ಎಂದು ವಿಂಗಡಿಸದೆ ರಂಗಭೂಮಿಯನ್ನು ಅವರು ಸಮಗ್ರವಾಗಿ ಗ್ರಹಿಸಿ ಒಳನೋಟಗಳನ್ನು ಕೊಟ್ಟರು, ಬೇರೆ ಮಾಧ್ಯಮಗಳ ಜೊತೆಗಿನ ಸಾವಯವ ಬಂಧವನ್ನು ಗುರುತಿಸಿದರು. ತಮ್ಮನ್ನು ವೈದ್ಯನಲ್ಲದ ಡಾಕ್ಟರ್ ಎಂದು ಕರೆದುಕೊಂಡ ರಂಗನಾಥ್ ಹಾಸ್ಯ ಸಾಹಿತ್ಯಕ್ಕೂ ದೊಡ್ಡ ಕೊಡುಗೆಯನ್ನು ನೀಡಿದರು. ಸಮಾಜದ ನಾಡಿ ಹಿಡಿದು ಚಿಕಿತ್ಸಕ ಹಾಸ್ಯವನ್ನು ಕೊಟ್ಟರು.

ವ್ಯಕ್ತಿಚಿತ್ರಗಳ ಮಟ್ಟಿಗಂತೂ ರಂಗನಾಥರದ್ದು ವಿಶಿಷ್ಟ ಸಾಧನೆ, ತಮ್ಮೊಡನೆ ಒಡನಾಡಿದ ವ್ಯಕ್ತಿಗಳ ಸ್ವಭಾವದ ಸಹಿತ ಜೀವಂತ ತಂದು ನಮ್ಮೆದುರು ನಿಲ್ಲಿಸಿದ ಸಾಧನೆ ಅವರದು. ಅವರ ಲೇಖನಿಗೆ ಇಂತಹವರೇ ಎಂಬ ಮಿತಿಯಿಲ್ಲ, ಅತಿರಥ-ಮಹಾರಥರ ಕುರಿತು ಬರೆದಂತೆ ಸಾಸ್ವೆ ಅಂಗಡಿ ಶಾಂತಪ್ಪ, ಶೀಗೆಹಳ್ಳಿ ರಂಗಪ್ಪನನ್ನೂ ವರ್ಣಿಸ ಬಲ್ಲವರಾಗಿದ್ದರು. ಎಲ್ಲರನ್ನೂ ನಮ್ಮವರೇ ಎಂದು ನಂಬಿದ ರಂಗನಾಥ್ ಅವರಿಗೆ ಅವರ ಹತ್ತಿರದವರೇ ಕೊನೆಯ ದಿನಗಳಲ್ಲಿ ನೋವನ್ನು ಕೊಟ್ಟರು. ನೋವನ್ನು ನುಂಗಿ ನಂಜುಂಡ ಸ್ವರೂಪರಾಗಿಯೇ ಡಾ. ಎಚ್. ಕೆ. ರಂಗನಾಥರು 2003ರ ಮಾರ್ಚ್ 26ರಂದು ಈ ಲೋಕವನ್ನಗಲಿದರು.

ಅವಿಚ್ಛಿನ್ನ ನಡೆಯಲ್ಲಿ ಅಭಿಜಿತ್ ಪ್ರಕಾಶನ

ಭಾಷಿಕ ಸಂವಹನವು ಮನುಷ್ಯ ನಾಗರಿಕತೆಯ ದಾರಿಯಲ್ಲಿ ಕಂಡುಕೊಂಡ ಕ್ರಿಯೆ. ದಿನನಿತ್ಯದ ವ್ಯವಹಾರಗಳ ವಿವರದ ದಾಖಲೆಗಾಗಿ ಅದು ಹುಟ್ಟಿಕೊಂಡಿತು ಎನ್ನಬಹುದೇನೋ. ನಮ್ಮೊಳಗೆ ನಾವು ಇಳಿಯಲು ಸಹಾಯ ಮಾಡುವುದು ಭಾಷೆಯೆಂಬ ಸೋಪಾನ. ಅವಿರತವಾಗಿ ಅವರವರ ಇಂಗಿತವನ್ನು ಭಾಷೆಯ ಮೂಲಕವೇ ಜನ ಮನಗಳಿಗೆ ಹೇಳುವುದು ಜಗದ ನಿಯಮವಾಗಿದೆ. ಗತಕಾಲದಿಂದಲೂ ಶಿಲೆಗಳ ಮೇಲೆ, ತಾಮ್ರದ ಪಟಗಳ ಮೇಲೆ, ತಾಳೆ ಗರಿಗಳ ಮೇಲೆ ಅಕ್ಷರಗಳನ್ನು ಅಚ್ಚುಮಾಡಿದ್ದರ ಹಿಂದಿರುವ ಉದ್ದೇಶವೇನಿತ್ತು? ಇಂದಿನ ದಿನಗಳಲ್ಲಿ ಕೃತಿಗಳನ್ನು ಪ್ರಕಟಿಸುವ ಕಾರಣವೇನು? ಇವೆರಡಕ್ಕೂ ಉತ್ತರವು ತ್ರಿಕಾಲಪ್ರಜ್ಞೆಯೇ? ನಮ್ಮ ಓದಿನ ಸಂಸ್ಕೃತಿಯು ಆರಂಭವಾದದ್ದು ಮಣ್ಣಿನ ಶಿಲಾಫಲಕಗಳಿಂದ. ಆ ನಂತರವೇ ಮಾನವ ರೂಪುಗೊಳ್ಳುತ್ತ ಬಂದು ಪ್ರಸ್ತುತದಲ್ಲಿ ತನ್ನದಲ್ಲದ ಲೋಕದ ಬಗೆಗೂ ತಿಳಿಯುವಂತಾಗಿದೆ. ಇವೆಲ್ಲವೂ ಓದುವ, ದಾಖಲಿಸುವ ಸಂಸ್ಕೃತಿಯಿಂದಲೇ ಹುಟ್ಟಿಕೊಂಡ ನಡವಳಿಕೆಗಳು ಎಂಬುದಾಗಿ ಹಿಂದಣ ಹೆಜ್ಜೆಗಳು ಹೇಳುತ್ತವೆ. ನಮ್ಮ ನಡೆ ಪಡೆಗಳನ್ನು ಸಂಸ್ಕಾರಗೊಳಿಸಿ ಅದನ್ನು ತಲೆಮಾರಿನಿಂದ ತಲೆಮಾರಿಗೆ ಬೆಳೆಸಿಕೊಂಡು ಹೋಗುವಾಗ ಅದಕ್ಕೆ ತಕ್ಕ ಸಿದ್ಧತೆಯಿಲ್ಲವಾದರೆ ಆ ಹರಿವು ಎಲ್ಲೋ ಒಂದು ಕಡೆ ಸ್ಥಗಿತವಾಗುತ್ತದೆ. ಮನದಿಂದಲೇ ಬದುಕನ್ನು ಓದುವುದರಿಂದ ಮೂಡಿದ ಬೆಳಕು ಒಂದು

ಮುಂಬಾಪುರಿ

» ಕಲಾ ಭಾಗ್ವತ್

ಬಗೆಯದು.

ಬುದ್ಧಿಯ ಬೆಳಗು, ಅನುಭವದ ಅಭಿವ್ಯಕ್ತಿ, ತಿಳುವಳಿಕೆಯ ತಂಪು ಎಲ್ಲವೂ ಒಂದಾಗಿ ಹುಟ್ಟಿಕೊಳ್ಳುವ ಸರ್ವ ಹೃದಯ ಸಂಸ್ಕಾರಿಯಾದ ಪುಸ್ತಕಗಳಿಗೆ ಹೊಸ ಹೊಳಪನ್ನು ನೀಡುವುದು ಇನ್ನೊಂದು ಬಗೆ. ಅದೇ ಪ್ರಕಾಶನ. ನಮ್ಮ ನೆಲದಲ್ಲೇ ಇದ್ದುಕೊಂಡು ಇದನ್ನು ಮಾಡುವಾಗ ಬಾಧಕಗಳು ಕಡಿಮೆ. ಆದರೆ ಬಹು ಸಂಸ್ಕೃತಿಯ ನೆಲದಲ್ಲಿ ನಿಂತು ಕನ್ನಡದ ನೆಲಕ್ಕೆ ಹೊಳಪು ಕೊಡುವುದು ಕಷ್ಟಸಾಧ್ಯ. ಹೀಗಿರುವಾಗ ಹೊರನಾಡಾದ ಮುಂಬೈಯಲ್ಲಿ 2004 ರಲ್ಲಿ ಆರಂಭವಾಗಿ ಪುಸ್ತಕ ಪ್ರಕಟಣೆಯನ್ನು ಸಾರಸ್ವತ ವ್ರತವೆಂಬಂತೇ ಪಾಲಿಸಿಕೊಂಡು ಬಂದಿರುವ ಅಭಿಜಿತ್ ಪ್ರಕಾಶನದ ಇಪ್ಪತ್ತು ವಸಂತಗಳು ಅರ್ಥಪೂರ್ಣವಾಗಿ ಕಳೆದಿರುವುದು ಹೆಮ್ಮೆ ಪಡಬೇಕಾದ ಸಂಗತಿ. ಮರಿಯಪ್ಪ ನಾಟೇಕರ್ ಅವರ 'ಇತಿಹಾಸವನ್ನು ಮರೆತವರು' ಎಂಬ ಕವನ ಸಂಕಲನವು ಇದರ ಮೊದಲ ಪ್ರಕಟಣೆಯಾಗಿದ್ದು ಈತನಕ ಸುಮಾರು 130 ವೈವಿಧ್ಯಮಯ ಕೃತಿಗಳನ್ನು ಪ್ರಕಟಿಸಿ ಮುಂಬೈಯ ಅನೇಕ ಹೊಸ ಬರಹಗಾರರನ್ನು ಬೆಳಕಿಗೆ ತರುವಲ್ಲಿ ಅಭಿಜಿತ್ ಪ್ರಕಾಶನ ಸಂಸ್ಥೆ ಯಶಸ್ವಿಯಾಗಿದೆ.

''ಕೆರೆಯಂ ಕಟ್ಟಿಸು ಬಾವಿಯಂ ಸವೆಸು ದೇವಾಗಾರಮಂ ಮಾಡಿಸಜ್ಜರೆಯೊಳ್ ಸಿಲ್ಕಿದನಾಥರಂ ಬಿಡಿಸು ಮಿತ್ರರ್ಗಂಬುಕೆಯ್ ನಂಬಿದರ್ಗೆರೆವಟ್ಟಾಗಿರು ಶಿಷ್ಟರಂ ಪೊರೆ''(ಕೆರೆಯ ಕಟ್ಟಿಸು, ಬಾವಿಯನ್ನು ಸವೆಸು, ದೇವಾಲಯಗಳನ್ನು ನಿರ್ಮಿಸು, ಸೆರೆಸಿಕ್ಕ ಅನಾಥರನ್ನು ಬಿಡಿಸು, ನಂಬಿದ ಮಿತ್ರರಿಗೆ ನೆರವು ನೀಡು, ಶಿಷ್ಟರನ್ನು ರಕ್ಷಿಸು) ಎಂಬ ಶಾಸನ ವಚನದ ಸಾಲುಗಳು ಕೆಲವು ವ್ಯಕ್ತಿಗಳನ್ನು ಕಂಡಾಗ ತಂತಾನೆ ನೆನಪಿಗೆ ಬರುವವು. ಕನ್ನಡ ತಾಯಿಯು ನಾಡು, ನುಡಿ, ಸಾಹಿತ್ಯವನ್ನು ಕಟ್ಟುವುದು ಹೇಗೆ ಎಂಬುದನ್ನು ಅಂಥವರಿಗೆ ಆಗಾಗ ಬಂದು ಹೇಳಿ ಹೋಗುವಳೋ ಎಂಬ ಗುಮಾನಿ ಬರುವಷ್ಟು ಅವರು ಕನ್ನಡದ ಕೆಲಸದಲ್ಲಿ ತಮ್ಮನ್ನು ತೇಯ್ದುಕೊಳ್ಳುತ್ತಾರೆ. ಅಂತಹ ವಿರಳರಾಗಿ ಮುಂಬೈಯ ಅಭಿಜಿತ್ ಪ್ರಕಾಶನದ ಸಂಚಾಲಕರಾದ ಪ್ರಾ. ಜಿ ಎನ್ ಉಪಾಧ್ಯ ಅವರು ಕಾಣುತ್ತಾರೆ. ಹಲವು ಲೇಖಕರಿಗೆ ಗುರುತನ್ನು ಕೊಡುವ ಗುರುವಾಗಿ ಅವರು ಮುಂಬೈ ವಿಶ್ವವಿದ್ಯಾಲಯ ಕನ್ನಡ ವಿಭಾಗದಲ್ಲಿ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಮುಂಬೈ ಮಹಾನಗರದಲ್ಲಿ ನೆಲೆನಿಂತು ಈ ಮಣ್ಣಿನಲ್ಲಿ ಕನ್ನಡತನವನ್ನು ಹುಡುಕಿ ಅದಕ್ಕೆ ಕಸುವು ತುಂಬುವಲ್ಲಿ ವಿಶೇಷ ಆಸ್ಥೆಯನ್ನು ಹೊಂದಿ ಉಭಯ ನಾಡುಗಳಿಗೆ ಕೊಂಡಿಯಾಗಿ ಅವರು ಕೊಟ್ಟ ಕೊಡುಗೆ ಗಮನಾರ್ಹವಾದುದು. ವರ್ತಮಾನದ ಸಮಾಜದಲ್ಲಿ ಸಾಹಿತ್ಯದ ಕುರಿತು ಹೊಸ ಪ್ರಜ್ಞೆಯನ್ನು ಮೂಡಿಸುವ ಜವಾಬ್ದಾರಿ ಅವರ ಮಾತು ಕೃತಿಗಳಲ್ಲಿ ಎದ್ದು ಕಾಣುತ್ತದೆ. ನಿಖರವಾದ ಶಾಸ್ತ್ರದೃಷ್ಟಿ, ವೈಜ್ಞಾನಿಕ ಮನೋಭಾವ, ಪಾರಿಭಾಷಿಕ ಪದಗಳ ಪರಿಜ್ಞಾನ, ಔಚಿತ್ಯಪ್ರಜ್ಞೆ, ನಿಸ್ವಾರ್ಥ, ವಿಶಾಲ ಮನಸ್ಥಿತಿ ಎಲ್ಲವನ್ನು ಸಿದ್ಧಿಸಿಕೊಂಡಿರುವ ಕಾಯಕಯೋಗಿಯು ಹಿಡಿದ ಕೆಲಸದಲ್ಲಿ ಹಿನ್ನಡೆಯದೇ ಲೇಖಕರಿಗೆ ಹೊರೆಯಾಗದಂತೆ ಪ್ರಕಟಣೆಯ ಕಾರ್ಯವನ್ನು ಕೈಗೊಂಡು ಈ ಪ್ರಕಾಶನ ಸಂಸ್ಥೆಯನ್ನು ಸಶಕ್ತವಾಗಿ ಮುನ್ನಡೆಸುತ್ತಿರುವುದು ದೊಡ್ಡ ಸಾಧನೆ.

ಭಾಷೆಯ ಬಣ್ಣ ಬನಿಯನ್ನು ಗಾಢಗೊಳಿಸಲು ಸಾಹಿತ್ಯವು ಪೂರಕ. ಸಾಹಿತ್ಯ ಕೃತಿಗಳ ಮೂಲಕ ನಾಡಿನ ಇತಿಹಾಸ, ಹಿರಿಮೆ ಗರಿಮೆಯನ್ನು ಹೊಸ ತಲೆಮಾರಿಗೆ ಪರಿಚಯಿಸಲು ಸಾಧ್ಯ. ಇದು ಕನ್ನಡದ ತೇರನೆಳೆಯುವ, ಕನ್ನಡವನ್ನು ಕಟ್ಟಿ ಬೆಳೆಸುವ ಕಾಯಕ. ಎದುರಾಗುವ ಅಡೆತಡೆಗಳನ್ನು ದಾಟಿ ಈ ಕೆಲಸವು ನಿರಂತರವಾಗಿ ನಡೆಯಬೇಕಾಗಿದೆ. ಎನ್ನುವ ಕಾಳಜಿಯೇ ಅವರ ಕನ್ನಡ ಪರಿಚಾರಿಕೆಗೆ ಸ್ಫೂರ್ತಿ ಎನ್ನಬಹುದು. ಅನೇಕ ಹಿರಿಯ ಸಾಹಿತಿಗಳ, ವಿದ್ವಾಂಸರ ಒಡನಾಟ, ಮಾರ್ಗದರ್ಶನ, ಸಹಾಯ, ಸಹಕಾರವನ್ನೇ ಶ್ರೀರಕ್ಷೆಯಾಗಿಟ್ಟುಕೊಂಡು ಮುಂಬೈಯಲ್ಲಿ ಕನ್ನಡ ಪರಿಚಾರಿಕೆಯನ್ನು ಅಲೆ ಬೇಸರವಿಲ್ಲದೆ ಅವರು ಮಾಡುತ್ತಿದ್ದಾರೆ. ಕನ್ನಡ ಮರಾಠಿ ಉಭಯ ಭಾಷಾಭಿಮಾನ, ಹಲವು ಸಂಸ್ಕೃತಿಗಳ ಹೊಂದಾಣಿಕೆ, ಎಲ್ಲವನ್ನೂ ಎಲ್ಲರನ್ನೂ ಅರಿಯುವ ಇಚ್ಛೆ ಇವೆಲ್ಲವೂ ಉಪಾಧ್ಯ ಅವರಿಗೆ ನಿತ್ಯ ಚಿಂತನೆಯ ವಿಷಯಗಳು. ಅವರ ಪ್ರಕಟಣೆಯ ಕೈಂಕರ್ಯವು ಕೇವಲ ಅಭಿಜಿತ್ ಪ್ರಕಾಶನಕ್ಕೆ ಮಾತ್ರ ಸೀಮಿತವಾಗಿಲ್ಲ. ಬದಲಾಗಿ ಮುಂಬೈ ವಿವಿ ಕನ್ನಡ ವಿಭಾಗದ ಮುಖಾಂತರ ವಿದ್ಯಾರ್ಥಿಗಳ ಪಿಎಚ್.ಡಿ, ಎಂ ಫಿಲ್, ಎಂ ಎ ಅಧ್ಯಯನಕ್ಕೆ ಸಂಬಂಧಿಸಿದ ಎಂಬತ್ತಕ್ಕೂ ಹೆಚ್ಚು ಕೃತಿಗಳನ್ನು ಅವರು ಪ್ರಕಟಿಸಿದ್ದಾರೆ. ಇಂದು ಪ್ರಕಟಣೆಯಲ್ಲಿ ಎಲ್ಲ ವಿಭಾಗಗಳಿಗಿಂತ ಕನ್ನಡ ವಿಭಾಗವು ಮುಂಚೂಣಿಯಲ್ಲಿದೆ ಎನ್ನುವುದು ಕನ್ನಡದ ಹಿರಿಮೆ. ಅವರದೇ ಕೃತಿಗಳು ಎಂಬತ್ತೈದರಷ್ಟಿವೆ. ಒಟ್ಟಿನಲ್ಲಿ ಸುಮಾರು ಮುನ್ನೂರು ಕೃತಿಗಳ ಪ್ರಕಟಣೆಯ ಹಿಂದೆ ಅವರ ಅವಿರತ ಪರಿಶ್ರಮವಿದೆ ಎನ್ನುವುದು ಗಮನಾರ್ಹವಾಗಿದೆ.

ಬದುಕನ್ನು ಕಟ್ಟಿಕೊಳ್ಳಲು ಮುಂಬೈಗೆ ಬಂದವರ ಭಾವ ಪ್ರಪಂಚದ ಭಾರವನ್ನು ಹಗೂರಾಗಿಸಿದ ವೈವಿಧ್ಯಮಯವಾದ ಕೃತಿಗಳ ಪ್ರಕಟಣೆಯು ಅಂದಿನ ಅಗತ್ಯತೆಯಾಗಿತ್ತು. ಅದನ್ನರಿತು ಮಹಾನಗರದಲ್ಲಿ ಹುಟ್ಟಿಕೊಂಡ ಅನೇಕ ಪ್ರಕಾಶನ ಸಂಸ್ಥೆಗಳ ಸಾಲಿನಲ್ಲಿ ನಿಂತು ಎರಡು ದಶಕಗಳ ಕಾಲ ಅವಿಚ್ಛಿನ್ನವಾಗಿ ಪ್ರಕಟಣೆಯ ಕಾರ್ಯವನ್ನು ಮುಂದುವರಿಸಿಕೊಂಡು ಬರುತ್ತಿರುವ ಅಭಿಜಿತ್ ಪ್ರಕಾಶನವು ಮುಂಬೈಯಲ್ಲಿ ಕನ್ನಡವು ಕೈ ಎತ್ತುವಂತೆ ಮಾಡುವಲ್ಲಿ ಇಂದು ಜಯಶಾಲಿಯಾಗಿದೆ.

ದೂರದ ಮುಂಬೈನಲ್ಲಿರುವ ಅಭಿಜಿತ್ ಪ್ರಕಾಶನವು ಇದುವರೆಗೆ 130ಕ್ಕೂ ಅಧಿಕ ಕನ್ನಡ ಪುಸ್ತಕಗಳನ್ನು ಹೊರತಂದಿದೆ ಎಂಬುದು ನಿಜಕ್ಕೂ ಅಭಿಮಾನ ಹುಟ್ಟಿಸುವ ಸಂಗತಿ.

ಅಹಲ್ಯಾಬಾಯಿ ಹೋಳ್ಕರ್ ಜನಿಸಿ 300 ವರ್ಷ!

ಈ ಅಸಾಧಾರಣ, ಜನಸ್ನೇಹಿ ಮಹಾರಾಣಿಯು ಜನಿಸಿ 300 ವರ್ಷಗಳಾದವು (ಜನ್ಮದಿನ 31.5.1725). ನಮ್ಮ ದೇಶದ ಸಂಸ್ಕೃತಿ, ಪರಂಪರೆಗೆ ಇವರು ನೀಡಿದ ಕೊಡುಗೆ ಅಪಾರ.

1725 ನೇ ಇಸವಿ ಮೇ 31 ರಂದು ಜನಿಸಿದ ಮಹಾರಾಣಿ ಅಹಲ್ಯಾಬಾಯಿ ಹೋಳ್ಕರ್ ಮರಾಠಾದ ಮಾಲ್ವಾ ಸಂಸ್ಥಾನದ ರಾಣಿಯಾಗಿ ಅಪಾರ ಕ್ಷಾತ್ರ ತೇಜಸ್ಸು, ರಾಜಕೀಯ ಮುತ್ಸದ್ದಿತನದೊಡನೆ 23 ವರ್ಷಗಳು ದಕ್ಷ ಆಡಳಿತ ನಡೆಸಿದ ಧೀರ ಮಹಿಳೆ ಎನ್ನುವುದು ನಮಗೆ ಹೆಮ್ಮೆಯ ಸಂಗತಿ. ಭಾರತದ ಸ್ತ್ರೀ ಶಕ್ತಿ ಮತ್ತು ಸಾಮರ್ಥ್ಯ ತುಂಬಿದ ಅವರ ಸಂಪೂರ್ಣ ವ್ಯಕ್ತಿತ್ವದಿಂದಾಗಿ ಸಾಮಾನ್ಯ ರಾಣಿಯ ಪದದಿಂದ ದೇವಿಯ ಸ್ಥಾನಕ್ಕೇರಿದ ಅಹಲ್ಯಾ ತನ್ನ ಕರ್ತವ್ಯನಿಷ್ಠೆ ಮತ್ತು ನೈತಿಕ ನಡವಳಿಕೆಯಿಂದಾಗಿ ತನ್ನ ಜೀವಿತಾವಧಿಯಲ್ಲೇ ದಂತಕಥೆಯಾಗಿದ್ದಳು.

18 ನೇ ಶತಮಾನದಲ್ಲಿ, ಬ್ರಿಟಿಷರು ನೆಲೆಗೊಳ್ಳುತ್ತಲಿದ್ದ ಕಾಲ; ಅತ್ತ ಮುಸ್ಲಿಮ್ ರಾಜರುಗಳ ಪ್ರಾಬಲ್ಯವೂ ಇತ್ತು. ಈ ಎರಡೂ ಆಡಳಿತದಿಂದಾಗಿ, ಭಾರತೀಯ ಸಂಸ್ಕೃತಿಗೆ ಕೊಡಲಿ ಪೆಟ್ಟು ಬೀಳುತ್ತಿದ್ದುದು ಅಂದಿನ ಹಲವಾರು ರಾಜರಿಗೆ ಅರಿಯಲಾಗಲಿಲ್ಲ. ಆ ಸಮಯದಲ್ಲಿ ಉದಯಿಸಿದ ಸ್ತ್ರೀ ರತ್ನ ಪುಣ್ಯಶ್ಲೋಕಿ ಅಹಲ್ಯಾಬಾಯಿ ಹೋಳ್ಕರ್. ಎಲ್ಲರನ್ನೂ ಸಮಾನ ಗೌರವದಿಂದ

» ಡಾ. ಜಯಂತಿ ಮನೋಹರ್

ಕಾಣುತ್ತಿದ್ದ ಅವಳ ಆಡಳಿತದಲ್ಲಿ ದಕ್ಷತೆ, ಧರ್ಮನಿಷ್ಠೆ, ವಿವಿಧ ದೇವಾಲಯಗಳ ನಿರ್ಮಾಣಗಳಲ್ಲಿನ ಕೊಡುಗೆ, ಶೌರ್ಯ, ನಿಸ್ವಾರ್ಥತೆ ಅನ್ಯಾದೃಶವಾದುದು. ಅಂದು ಉದಯಪುರ, ಜೋಧಪುರ, ಚಿತ್ತೂರುಗಢ ಸೇರಿದಂತೆ ಹಲವು ವಾಸ್ತು ನಿರ್ಮಿತಿಗಳು, ಸುಂದರ ಕಲಾಕೃತಿಗಳು ಕಾಶಿಯ ವಿಶ್ವೇಶ್ವರ ದೇವಾಲಯ, ಮಥುರೆಯ ಕೃಷ್ಣನ ದೇವಾಲಯ (ಕೇಶವ ದೇವ ದೇವಾಲಯ) ಮುಂತಾದ ಪ್ರಮುಖ ಕಲಾಕೃತಿಗಳನ್ನು ಧ್ವಂಸ ಮಾಡಲಾಗಿತ್ತು. ಔರಂಗಜೇಬನು ಹಿಂದೂಗಳ ಮೇಲೆ ಜೆಸಿಯಾ ತೆರಿಗೆಯನ್ನು ಮತ್ತೆ ಹೇರಿದ್ದ.

ಅವಳು ಸಾಮಾನ್ಯ ಜನರೊಂದಿಗೆ ಮತ್ತು ತನ್ನ ಪರಿಚಾರಕರೊಂದಿಗೆ ಸೌಹಾರ್ದಯುತವಾಗಿ ವ್ಯವಹರಿಸುತ್ತಿದ್ದಳು. ಅಂತೆಯೇ, ಅವಳು ದುಷ್ಟ ಮತ್ತು ಕ್ರೂರ ಜನರಿಗೆ ಕಟ್ಟುನಿಟ್ಟಾದ ಆಡಳಿತಗಾರಳಾಗಿದ್ದಳು.ಸಾಮಾನ್ಯ ಜನರಿಗೆ, ಪ್ರೀತಿಯ ತಾಯಿಯಾಗಿದ್ದಳು. ಅರಮನೆಯ ಪರಿಚಾರಕರು ಊಟ ಮಾಡುತ್ತಿದ್ದ ಊಟದ ಮನೆಯಲ್ಲಿಯೇ ಅಹಲ್ಯಾ ಊಟ ಮಾಡುತ್ತಿದ್ದಳು. ಒಬ್ಬ ವ್ಯಕ್ತಿಯು ತನ್ನ ಕರ್ತವ್ಯವನ್ನು ನಿರ್ವಹಿಸುವಲ್ಲಿ ವಿಫಲತೆ ಮತ್ತು ಉದ್ದೇಶಪೂರ್ವಕವಾಗಿ ಮಾಡಿದ ಅನೈತಿಕ ಮತ್ತು ದುಷ್ಕೃತ್ಯಗಳನ್ನು ಅವಳು ತೀವ್ರವಾಗಿ ಖಂಡಿಸುತ್ತಾ ಸಮರ್ಪಕ ಶಿಕ್ಷೆಯನ್ನು ವಿಧಿಸುತ್ತಿದ್ದಳು.

ಆ ಕಾಲದ ಎಲ್ಲಾ ಪ್ರಸಿದ್ಧ ರಾಜಮನೆತನದವರು ಅಹಲ್ಯೆ ಮುನ್ನಡೆಸಿದ ಯುದ್ಧರಂಗದಲ್ಲಿ ಹಾಗೂ ರಾಜತಾಂತ್ರಿಕ ಯುಕ್ತಿಗಳ ನಡೆಗಳಿಂದ ಸೋತಿದ್ದರು. ಸಮಕಾಲೀನ ಪುರುಷರಲ್ಲಿಯೂ ಸಹ ಅಂದು ಅಹಲ್ಯಾಳ ಬಹುಮುಖ ವ್ಯಕ್ತಿತ್ವಕ್ಕೆ ಹೋಲಿಸುವವರು ಯಾರೂ ಇರಲಿಲ್ಲ. ಆಕೆಯ ಜೀವನ ಶೈಲಿ ಮತ್ತು ವೇಷಭೂಷಣಗಳು ಸರಳ ಮತ್ತು ಆಡಂಬರವಿಲ್ಲದವು. ಪತಿಯ ಮರಣದ ನಂತರ ಅವಳು ಆಭರಣಗಳು ಮತ್ತು ಬಣ್ಣದ ಬಟ್ಟೆಗಳನ್ನು ಧರಿಸುವುದನ್ನು ನಿಲ್ಲಿಸಿದಳು. ಬಿಳಿ ಸೀರೆ ಮಾತ್ರ ಉಡುತ್ತಿದ್ದಳು. ಆ ದಿನಗಳಲ್ಲಿ, ರಾಜಮನೆತನದ ಮಹಿಳೆಯರು ಮುಸುಕು ಹಾಕುವ ವ್ಯವಸ್ಥೆಯನ್ನು ಕಡ್ಡಾಯವಾಗಿ ಪಾಲಿಸುತ್ತಿದ್ದರು. ಅಂತಹ ಪದ್ಧತಿಯಿಂದ ಹೊರಬಂದ ಅಹಲ್ಯಾ, ಯಾವುದೇ ಸಂಪ್ರದಾಯವನ್ನು ಕಣ್ಣುಮುಚ್ಚಿ ಒಪ್ಪಿಕೊಳ್ಳುತ್ತಿರಲಿಲ್ಲ.

ವಿಧವಾ ವಿವಾಹ!

ಬಾಲವಿಧವೆಯೊಬ್ಬಳ ಪುನರ್ವಿವಾಹ ಮಾಡಿಸಿ ದ್ದಳು. ಪತಿಯ ಮರಣದ ನಂತರ ಆ ಕಾಲದಲ್ಲಿದ್ದ ಸತಿ ಪದ್ಧತಿಯನ್ನು ಅವಳ ಮಾವ ಮಲ್ಹಾರ್ ರಾವ್ ಹೋಳ್ಕರ್ ವಿರೋಧಿಸಿ, ಅಹಲ್ಯೆಯನ್ನು ರಾಜಕಾರ್ಯದಲ್ಲಿ ಮುನ್ನಡೆಯಲು ಒತ್ತಾಯಿಸಿ, ಅವಳಿಗೆ 'ಚಿಕ್ಕ ರಾಣಿ' ಪದವಿಯನ್ನು ನೀಡಿ ಗೌರವಿ ಸಿದ್ದು ಚಾರಿತ್ರಿಕವಾಗಿ ಬಹು ದೊಡ್ಡ ಸಂಗತಿ. ಆದರೆ, ಅಹಲ್ಯಾ ತಂದ ಸುಧಾರಣೆಗಳು ಅವಳ ಕಾಲದಲ್ಲಿಯೇ ಶಿಥಿಲವಾದದ್ದು ದುರಂತ.

ವಿಧಿಯ ಒಂದೊಂದೇ ಕ್ರೂರ ಹೊಡೆತಗಳು ಅವಳನ್ನು ಘಾಸಿಗೊಳಿಸಿದವು. ಪತಿ ಖಂಡೇ ರಾವ್ ಹೋಳ್ಕರ್ ಅವರ ಅನಿರೀಕ್ಷಿತ ದುರ್ಮರಣವಾದಾಗ, ಅಹಲ್ಯಾಬಾಯಿ ಅವರಿಗೆ ಬೆಂಬಲವಾಗಿ ನಿಂತವರು ಮಾವ ಮಲ್ಹಾರ್ ರಾವ್ ಹೋಳ್ಕರ್. ಅವರು ಸಮರ ತರಬೇತಿಯನ್ನೂ ನೀಡಿದರು. ಮಾವನ ಮರಣಾನಂತರ ರಾಜನಾದವನು ಅಹಲ್ಯಾಬಾಯಿ ಹೋಳ್ಕರ್ ಅವರ ಮಗ, ಮಾಲೇರಾವ್ ಹೋಳ್ಕರ್. ವಿಧಿಯ ಲೀಲೆಯೇ ವಿಚಿತ್ರ. ಕಾಲಾಂತರದಲ್ಲಿ ಮಗ ಹಾಗೂ ಅಳಿಯ ಕೂಡ ಮರಣ ಹೊಂದಿದರು.

ಇಂತಹ ಆಘಾತದಿಂದ ಚೇತರಿಸಿಕೊಂಡ ಅಹಲ್ಯಾಬಾಯಿ, 1767 ರಲ್ಲಿ ತಾವೇ ಸ್ವತಃ ರಾಣಿಯಾಗಿ ಆಡಳಿತದ ಸೂತ್ರಗಳನ್ನು ತಮ್ಮ ಕೈಗೆ ತೆಗೆದುಕೊಂಡರು. ಮರಾಠಾ ರಾಜ ಪೇಶ್ವೆ ಒಂದನೆಯ ಮಾಧವರಾಯರ ಅನುಮತಿ ಪಡೆದು ಅಹಲ್ಯಾಬಾಯಿ ಹೋಳ್ಕರ್ ಇಂದೂರಿನ ಮಹಾರಾಣಿ ಆದರು. ಇಪ್ಪತ್ಮೂರು ವರ್ಷಗಳ ಅವರ ರಾಜ್ಯಭಾರ ವಿಸ್ಮಯ ತರುವಂತಹುದು. ಆ ಕಾಲದಲ್ಲಿ ಸಮಾಜದಲ್ಲಿ ಮಹಿಳೆಯರಿಗೆ ದ್ವಿತೀಯ ಸ್ಥಾನವಿತ್ತು. ಪುರುಷ ಪ್ರಧಾನ ಸಮಾಜವು ಅವರ ದಾರಿಯಲ್ಲಿ ಅನೇಕ ಅಡೆತಡೆಗಳನ್ನು ಹಾಕಿತು. ಆಪ್ತ ಸಹಚರರು ಮತ್ತು ಸಮಾಜದ ಪ್ರತಿಷ್ಠರು ಎನಿಸಿಕೊಂಡವರು ಅವಳ ದಾರಿಯಲ್ಲಿ ಮುಳ್ಳುಗಳನ್ನು ಹರಡುತ್ತಿದ್ದರು.

ಭಾರತಾದ್ಯಂತ ಅಹಲ್ಯಾಬಾಯಿ ಹೋಳ್ಕರ್ ಅವರು ಅನೇಕ ಪವಿತ್ರ ನದಿಗಳ ತೀರದಲ್ಲಿ ಸ್ನಾನಘಟ್ಟಗಳನ್ನು ನಿರ್ಮಿಸಿದರು. ಹಳೆಯ ಮತ್ತು ವಿಧ್ವಂಸಗೊಂಡ ದೇವಾಲಯಗಳ ಪುನರ್ನಿರ್ಮಾಣ ಮಾಡಿಸಿದರು. ಇಂದು ಕಾಶಿಯಲ್ಲಿ ಪೂಜೆಗೊಳ್ಳುತ್ತಿರುವ ಕಾಶಿ ವಿಶ್ವೇಶ್ವರನ ದೇವಾಲಯವನ್ನು ಪುನರ್ನಿರ್ಮಿ ಸಿದವರೇ ಅವರು (ಮೂಲ ದೇವಾಲಯ ಔರಂಗಜೇಬನಿಂದ 1669 ರಲ್ಲಿ ಧ್ವಂಸಗೊಂಡಿತು). ಬಾವಿಗಳನ್ನು, ಕೆರೆಗಳನ್ನು ಮತ್ತು ಭಾರತೀಯ ಶಿಲ್ಪಕಲೆಗೆ ಮೆರುಗು ತಂದ ಮೆಟ್ಟಿಲು - ಬಾವಿಗಳನ್ನೂ ಕಟ್ಟಿಸಿದರು. ಯಾತ್ರಿಗಳಿಗೆ ಛತ್ರಗಳನ್ನು ನಿರ್ಮಿಸಿದರು.

ಹಿಮಾಲಯದ ಬದರೀನಾಥ, ಕೇದಾರನಾಥ, ದಕ್ಷಿಣ ಸಮುದ್ರದ ರಾಮೇಶ್ವರಂ, ಪಶ್ಚಿಮದ ದ್ವಾರಕೆ - ಸೋಮನಾಥ, ಪೂರ್ವದ ಪುರಿ, ಗಯಾ, ಹರಿದ್ವಾರ, ಅವಂತಿ, ಕರ್ನಾಟಕದ ನಮ್ಮ ಗೋಕರ್ಣ - ಹೀಗೆ ಎಲ್ಲೆಡೆ ದೇವಾಲಯಗಳ ನಿರ್ವಹಣೆಗೆ ಧನಸಹಾಯ ಮಾಡಿದರು. ವ್ಯಾಪಾರಿಗಳಿಗೆ, ರೈತರಿಗೆ ಬೆಂಬಲವಾಗಿ ಅಹಲ್ಯಾ ನಿಂತರು. ವನವಾಸಿಗಳಾದ ಭೀಲರು - ಗೊಂಡರು ಮಾಹೇಶ್ವರ ರಾಜ್ಯದ ಗಡಿಭಾಗಗಳಲ್ಲಿ ದಾಳಿ ಮಾಡಿ ಕಿರುಕುಳ ಕೊಡುತ್ತಿದ್ದರು. ಅಂತಹವರಿಗೂ ರಾಣಿ ಅಹಲ್ಯಾಬಾಯಿ ಗುಡ್ಡಗಾಡುಗಳ ಭೂಭಾಗಗಳನ್ನು ಅಧಿಕೃತವಾಗಿ ನೀಡಿ, ಅಲ್ಲಿ ಹಾದುಹೋಗುವ ವ್ಯಾಪಾರಿಗಳಿಂದ (ಸಾರ್ಥಗಳಿಂದ) ಸಮಂಜಸವೆನ್ನುವಂತಹ ಸುಂಕ ವಸೂಲಿ ಮಾಡುವ ಅಧಿಕಾರ ನೀಡಿ, ಅವರ ಜೀವನೋಪಾಯಕ್ಕೂ ದಾರಿ ಮಾಡಿದರು. ಶಿಲ್ಪಿಗಳಿಗೆ, ನೇಕಾರರಿಗೆ ಅವರು ನೀಡಿದ ಪ್ರೋತ್ಸಾಹ ಮೆಚ್ಚುವಂತಹುದು.ಯುದ್ಧಕಾಲದಲ್ಲಿ ಅವರು ಸ್ವತಃ ಸಮರಾಂಗಣದಲ್ಲಿದ್ದು ಆಕ್ರಮಣ - ಪ್ರತ್ಯಾಘಾತಗಳನ್ನು ಯೋಜಿಸುತ್ತಿದ್ದರು. ಮಹಿಳೆಯರ ಸೈನ್ಯವನ್ನು ಕಟ್ಟಿ ಯುದ್ಧಗಳಲ್ಲಿ ಅವರು ಪಾಲ್ಗೊಳ್ಳುವಂತೆ ಧೈರ್ಯ ತುಂಬುತ್ತಿದ್ದರು.

ಹತ್ತೊಂಬತ್ತನೆಯ ಶತಮಾನದಲ್ಲಿ ಅಪೂರ್ವ ದೂರದೃಷ್ಟಿಯಿಂದ ರಾಜ್ಯವಾಳಿದ ಈ ಮಹಿಳೆಯು, ಮಹಿಳಾ ಸಮಾನತೆಗೆ ಒಂದು ಉದಾಹರಣೆಯೂ ಹೌದು.

ಸುಕ್ಕುಗಟ್ಟಿದ ಶರ್ಟ್!

» ಪ್ರಕಾಶ ಹೆಗಡೆ

ಸುಕ್ಕುಗಟ್ಟಿದ ದಿರಿಸನ್ನು ಧರಿಸಿ ಎಂದು ಮುಂಬಯಿ ಐಐಟಿ ಪ್ರೊಫೆಸರ್ ಚೇತನ್ ಸಿಂಗ್ ಸೋಲಂಕಿಯವರು ಒಂದು ಅಭಿಯಾನವನ್ನು 2020ರಲ್ಲಿ ಪ್ರಾರಂಭಿಸಿದರು. ಇದೊಂಥರ ನಮ್ಮ ವಿಶ್ವೇಶ್ವರ ಭಟ್ಟರು ನಡೆಸಿದ ಸ್ವಚ್ಛ ಬಾಳೆಲೆ ಅಭಿಯಾನದ ರೀತಿಯದ್ದು. ಪ್ರೊಫೆಸರ್ ಮಾತಿನಲ್ಲಿ ಹೇಳುವುದಾದರೆ-ಒಂದು ಉಡುಪನ್ನು ಇಸ್ತ್ರಿ ಮಾಡಲು ಐದರಿಂದ ಏಳು ನಿಮಿಷಗಳು ಬೇಕಾಗುತ್ತದೆ; ಪ್ರತಿ ಉಡುಪಿಗೆ 0.20 ಯುನಿಟ್ ವಿದ್ಯುತ್ ಬೇಕಾಗುತ್ತದೆ. ವಿಶ್ವದ ಹೆಚ್ಚಿನ ವಿದ್ಯುತ್ ಕಲ್ಲಿದ್ದಲಿನಿಂದ ತಯಾರಾಗುತ್ತದೆ.ನಾವು ಇಸ್ತ್ರಿ ಮಾಡುವಾಗ ಪ್ರತಿ ಬಾರಿಯೂ ಸುಮಾರು ಇನ್ನೂರು ಗ್ರಾಂ ಇಂಗಾಲವನ್ನು ಜಗತ್ತಿಗೆ ನೀಡುತ್ತಿದ್ದೇವೆ. ನಮ್ಮ ಬಟ್ಟೆಗಳನ್ನು ಇಸ್ತ್ರಿ ಮಾಡದೆ ಬಳಸಿದರೆ ವಾತಾವರಣದಲ್ಲಿ ಇಂಗಾಲದ ಬಿಡುಗಡೆಗೆ ಕೊಂಚ ಪ್ರಮಾಣದ ತಡೆಗಟ್ಟುವಿಕೆಯಲ್ಲಿ ಸಹಕಾರಿಯಾಗುತ್ತದೆ.

ಈ ಲೆಕ್ಕಾಚಾರವು ಪರಿಸರಸ್ನೇಹಿ; ಅದಕ್ಕಿಂತಲೂ ಹೆಚ್ಚಾಗಿ, ಪರಿಸರ ಕಾಳಜಿಯನ್ನು ಮೂಡಿಸುವಂತಹದ್ದು; ಇದನ್ನು ಅನುಸರಿಸುವವರ ಮನದಲ್ಲಿ 'ತಾನು ಪರಿಸರ ರಕ್ಷಿಸಲು ಅಳಿಲು ಸೇವೆ ಮಾಡುತ್ತಿದ್ದೇನೆ' ಎಂಬ ಅಭಿಮಾನ ಸದಾ ತುಂಬಿರುತ್ತದೆ! ಇದು ನಿಜಕ್ಕೂ ಸಕಾರಾತ್ಮಕ. ಜೂನ್ 5ರಂದು ಬರಲಿರುವ ಪರಿಸರ ದಿನದ ಅಂಗವಾಗಿ, ಇಂತಹದೊಂದು ಅಭಿಯಾನವನ್ನು ನಾವೂ ನಮ್ಮ ಬದುಕಿನಲ್ಲಿ ಆರಂಭಿಸಬಹುದು! ಈಗ 340 ಸಂಸ್ಥೆಗಳ ಸುಮಾರು 6.5 ಲಕ್ಷ ಜನರು ಈಗ ಈ ಅಭಿಯಾನವನ್ನು ಅನುಸರಿಸುತ್ತಿದ್ದಾರೆ. ಪ್ರೊಫೆಸರ್ ಸೋಲಂಕಿ ಅವರು ತಮ್ಮ ಮಗಳ ಮದುವೆಯಲ್ಲಿ ಸಮಾರಂಭಕ್ಕೆ ಹಾಜರಾಗುವ ಅತಿಥಿಗಳನ್ನು ಇಸ್ತ್ರಿ ಮಾಡದ ಬಟ್ಟೆಗಳನ್ನು ಧರಿಸಲು ಪ್ರೋತ್ಸಾಹಿಸಿದ್ದಾರೆ!

ಹವಾಮಾನ ಬದಲಾವಣೆಯ ಪ್ರತಿಕೂಲ ಪರಿಣಾಮಗಳಿಂದ ಮುಕ್ತವಾಗಿರಲು ಜನರಿಗೆ ಹಕ್ಕಿದೆ ಎಂದು ಭಾರತದ ಸರ್ವೋಚ್ಚ ನ್ಯಾಯಾಲಯವು ಗುರುತಿಸಿದೆ. ಯುರೋಪಿಯನ್ ಮಾನವ ಹಕ್ಕುಗಳ ನ್ಯಾಯಾಲಯವೂ ಇತ್ತೀಚೆಗೆ ಸ್ವಿಟ್ಜರ್ಲೆಂಡ್ ಈ ದಿಕ್ಕಿನಲ್ಲಿ ಸಾಕಷ್ಟು ಕೆಲಸ ಮಾಡುತ್ತಿಲ್ಲ ಎಂದು ಹೇಳಿದೆ. ಹವಾಮಾನ ಬದಲಾವಣೆಯ ಪರಿಣಾಮಗಳನ್ನು ನಿಯಂತ್ರಿಸಲು ಅಗತ್ಯವಾದ ಪ್ರಮುಖ ಎನಿಸುವ ಕೆಲಸವನ್ನು ಅಮೆರಿಕ ಅಥವಾ ಯುರೋಪ್ ಮಾಡುತ್ತಿಲ್ಲ. ಈಚಿನ ವರ್ಷಗಳಲ್ಲಿ ಯುರೋಪ್ ಅಭೂತಪೂರ್ವ ಬಿಸಿ ಅಲೆ ಬೀಸಿತು! ಬಾಂಗ್ಲಾದೇಶದಲ್ಲಿ ಸಮುದ್ರ ಮಟ್ಟ ಹೆಚ್ಚಾಗುತ್ತಿರುವುದರಿಂದ ಪ್ರತಿ ವರ್ಷ ಹತ್ತು ಲಕ್ಷಕ್ಕೂ ಹೆಚ್ಚು ಜನರು ವಲಸೆ ಹೋಗುತ್ತಿದ್ದಾರೆ. ಒಡಿಶಾದ ಒಂದು ಗ್ರಾಮವು ಇತ್ತೀಚೆಗೆ ನೀರಿನಲ್ಲಿ ಮುಳುಗಿ ಕಣ್ಮರೆಯಾಗಿದೆ. ವಿದ್ಯಾವಂತ ಜನರು, ರಾಜಕಾರಣಿಗಳು, ಅಧಿಕಾರಶಾಹಿಗಳು, ಮಾಧ್ಯಮಗಳು ಸಹ



ಶಕ್ತಿಯ ಋಣಾತ್ಮಕ ಪರಿಣಾಮಗಳನ್ನು ಅರ್ಥಮಾಡಿಕೊಳ್ಳಲು ಅಶಕ್ತರಾಗಿದ್ದಾರೆ. ಹವಾಮಾನ ಬದಲಾವಣೆಯ ಕುರಿತಾದ ಪ್ಯಾರಿಸ್ ಒಪ್ಪಂದವು ಜಾಗತಿಕ ಗಮನ ಸೆಳೆಯಲು ವಿಫಲವಾಯಿತು. ಅಮೆರಿಕದ ಹಿಂದಿನ ಅಧ್ಯಕ್ಷ ಟ್ರಂಪ್ ಅವರು, ಹವಾಮಾನದ ವೈಪರೀತ್ಯ ಕಡಿಮೆ ಮಾಡುವ ಕ್ರಮಗಳನ್ನು, ತತ್ವಗಳನ್ನು ಅಪಹಾಸ್ಯ ಮಾಡಿದರು ಮತ್ತು ಆ ಮೂಲಕ ಅಭಿವೃದ್ಧಿ ಹೊಂದಿದ ದೇಶಗಳು ಈ ಸಮಸ್ಯೆಯನ್ನು ಹೇಗೆ ನೋಡುತ್ತಿವೆ ಎಂಬುದಕ್ಕೆ ಕೆಟ್ಟ ಉದಾಹರಣೆಯಾದರು.

ಹವಾಮಾನ ಬದಲಾವಣೆಯ ಪ್ರತಿಕೂಲ ಪರಿಣಾಮಗಳನ್ನು ಜನರಿಗೆ ತಲುಪಿಸಲು ಸಣ್ಣಪುಟ್ಟ ವಿಷಯಗಳಾದ ಬಟ್ಟೆಗಳನ್ನು ಇಸ್ತ್ರಿ ಮಾಡದಿರುವ ಚಟುವಟಿಕೆಗಳನ್ನು ಪ್ರಚುರಪಡಿಸಬಹುದು. ಪ್ರೊಫೆಸರ್ ಸೋಲಂಕಿ ಹೇಳುತ್ತಾರೆ-ನಮ್ಮ ಜೀವನದಲ್ಲಿ ನಾವು ಮಾಡುವ ಚಟುವಟಿಕೆಗಳಾದ ಹಲ್ಲುಜ್ಜುವುದು, ಅಡುಗೆ, ಪ್ರಯಾಣ, ದೀಪಗಳನ್ನು ಬೆಳಗಿಸುವುದು, ಪೀಠೋಪಕರಣಗಳನ್ನು ಖರೀದಿಸುವುದು, ಕಟ್ಟಡಗಳ ನಿರ್ಮಾಣ ಇತ್ಯಾದಿ ಕಾರ್ಯಗಳು ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ವಿದ್ಯುಚ್ಛಕ್ತಿಯನ್ನು ಬಳಸುತ್ತದೆ. ಈ ಶಕ್ತಿಯ ಹೆಚ್ಚಿನ ಭಾಗವು ಕಲ್ಲಿದ್ದಲು, ತೈಲ ಮತ್ತು ಅನಿಲದಿಂದ ಬರುತ್ತದೆ. ನಾವು ಈ ಸಂಪನ್ಮೂಲಗಳನ್ನು ಬಳಸುವಾಗಲೆಲ್ಲಾ, ಅದು ಇಂಗಾಲದ ಡೈಆಕ್ಸೈಡ್ ಉತ್ಪತ್ತಿಗೆ ನಮ್ಮ ಕೊಡುಗೆ ನೀಡಿದಂತೆ! ಕೆಲವು ಅಭ್ಯಾಸಗಳ ದೀರ್ಘಾವಧಿಯ ಪರಿಣಾಮವನ್ನು ಅರಿತುಕೊಳ್ಳದೆ ಟಿಶ್ಯೂ ಪೇಪರ್ ಮತ್ತು ಪ್ಲಾಸ್ಟಿಕ್ ಬಾಟಲಿಗಳಂತಹ ವಸ್ತುಗಳನ್ನು ಬಳಸಿ ಎಸೆಯುತ್ತೇವೆ. ಹೀಗೆ ಮನಮುಟ್ಟುವಂತ ಮಾತುಗಳಲ್ಲಿ ಸೋಲಂಕಿಯವರು ತಮ್ಮ ವಾದವನ್ನು ಮಂಡಿಸುತ್ತಾರೆ.

ನೀವು ನಿಮ್ಮ ಬಟ್ಟೆಗಳನ್ನು ಇಸ್ತ್ರಿ ಮಾಡುವುದನ್ನು ಬಿಟ್ಟುಬಿಟ್ಟರೆ, ಇಂಗಾಲದ ಹೊರಸೂಸುವಿಕೆಯನ್ನು ತಡೆಯಲು ನೀವು ನಿಜವಾಗಿಯೂ ನಿಮ್ಮ ಕೈಲಾದಷ್ಟು ಮಾಡಬಹುದು. ಇದು ವಿಚಿತ್ರವಾಗಿ ತೋರಿದರೂ, ಸತ್ಯ.

ಇಸ್ತ್ರಿ ಮಾಡದೇ ಇರುವ ಶರ್ಟ್ ಧರಿಸಿದರೆ, ಹವಾಮಾನ ರಕ್ಷಿಸಲು ಕೊಡುಗೆ ನೀಡಿದಂತಾಗುತ್ತದೆ ಎಂದರೆ ನಂಬುತ್ತೀರಾ?

ಮತ್ತೆ ಶಾಲೆಯತ್ತ ಹೆಜ್ಜೆ..

» ಬೇದ್ರೆ ಮಂಜುನಾಥ

ಬಾಲ್ಯದಲ್ಲಿ ಕಲಿತ ಪಾಠಗಳು ಬದುಕನ್ನು ರೂಪಿಸಬಲ್ಲವು; ಸರಕಾರಿ ಶಾಲೆಯಾದರೂ, ವೈಜ್ಞಾನಿಕ ಚಿಂತನೆಯನ್ನು ಮಕ್ಕಳಲ್ಲಿ ಬೆಳೆಸಬಲ್ಲವು ಎಂಬುದಕ್ಕೆ ಇಲ್ಲಿನ ಬರಹವೇ ಸಾಕ್ಷಿ.

ಈಗ ಮತ್ತೆ ಶಾಲೆ ಆರಂಭ ಆಗಿದೆ. ಹತ್ತಿರ ಹತ್ತಿರ ಅರ್ಧ ಶತಮಾನದ ಹಿಂದೆ ನಡೆದ ಕೆಲವು ಘಟನೆಗಳು ನೆನಪಿನಂಗಳದಲ್ಲಿ ಇನ್ನೂ ಹಸಿರಾಗಿಯೇ ಇದೆ. ನೆನಪಿಸಿಕೊಂಡಾಗಲೆಲ್ಲಾ ಮತ್ತೆ ಮತ್ತೆ ತುಂಟ ಹುಡುಗನಾಗುತ್ತೇನೆ ಮನದಲ್ಲಿ. ನಮ್ಮ ತುಂಟತನವನ್ನು ಸಹಿಸಿಕೊಂಡ ಆ ಎಲ್ಲಾ ಶಿಕ್ಷಕ ಬಂಧುಗಳಿಗೆ ನಮಿಸುವುದು ಕರ್ತವ್ಯವಲ್ಲವೇ!

ನಮ್ಮ ರಕ್ತದಲ್ಲಿ ಕೆಂಪು ರಕ್ತಕಣ, ಬಿಳಿ ರಕ್ತಕಣ ಮತ್ತು ಪ್ಲೇಟ್‌ಲೆಟ್‌ಗಳಿರುತ್ತವೆ, ಎಂದು 5ನೇ ತರಗತಿಯ ವಿಜ್ಞಾನ ತರಗತಿಯಲ್ಲಿ ಶಿಕ್ಷಕಿ ರುಕ್ಮಿಣಮ್ಮ ಹೇಳುತ್ತಿದ್ದರೆ ಲಾರ್ಡ್ ಆಫ್ ಲಾಸ್ಟ್ ಬೆಂಚ್ ನನ್ನ ಪ್ರತಿಕ್ರಿಯೆ ಬೇರೇನೆ ಆಗಿತ್ತು. 'ರಕ್ತ ಬರೀ ಕೆಂಪಗಿರುತ್ತೆ ಅಷ್ಟೆ ಅಲ್ವಾ ಟೀಚರ್? ಉಳಿದದ್ದೆಲ್ಲಾ ಏನೂ ಕಾಣೋದೇ ಇಲ್ವಲ್ಲ?'

'ಲೋ, ತರಲೆ, ಹೋಗಿ ಸೈನ್ಸ್ ಕಿಟ್ ತಗೊಂಡು ಬಾ ಆಫೀಸ್ ರೂಮಿಂದ. ರಕ್ತದ ಕಣಗಳನ್ನು ತೋರಿಸಿಯೇ ಬಿಡ್ತೇನೆ' ಅಂತ ನನ್ನನ್ನೇ ಓಡಿಸಿ, ತರಿಸಿ, ಅದರಲ್ಲಿದ್ದ ಪುಟ್ಟ ಸೂಕ್ಷ್ಮದರ್ಶಕವನ್ನು (ಮೈಕ್ರೋಸ್ಕೋಪ್) ತೆಗೆದು, ಗಾಜಿನಪಟ್ಟಿ (ಸ್ಲೈಡ್) ಹಿಡಿದು, ನನ್ನದೇ ಉಂಗುರ ಬೆರಳಿನಿಂದ ಒಂದು ಹನಿ ರಕ್ತತೆಗೆದು, ಸ್ಲೈಡ್‌ಗೆ ಲೇಪಿಸಿ, ಸೂಕ್ಷ್ಮದರ್ಶಕದಲ್ಲಿ ಇರಿಸಿ, 'ಬಾರೋ ಇಲ್ಲಿ, ಈಗ ನೋಡು ನಿನ್ನದೇ ರಕ್ತದಲ್ಲಿರುವ ಕಣಗಳನ್ನು,' ಎಂದು ತೋರಿಸಿದರು.

ಲೆನ್ಸ್ ಮೂಲಕ ನೋಡಿದಾಗ ರಕ್ತದಲ್ಲಿನ ಕಣಗಳು ಕಂಡರೂ ಅದರಲ್ಲಿ ಕೆಂಪು, ಬಿಳಿ, ಪ್ಲೇಟ್‌ಲೆಟ್ ಯಾವುವು ಎಂದು ಗುರುತು ಹಿಡಿಯಲು ಆಗಲಿಲ್ಲ. ಒಟ್ಟಾರೆ ರಕ್ತದ ಕಣಗಳ ಪರಿಚಯವನ್ನು ಪ್ರಾಕ್ಟಿಕಲ್ ಮೂಲಕ ತೋರಿಸಿಕೊಟ್ಟಿದ್ದರು ಶಿವಮೊಗ್ಗದ ಹೊಸಮನೆ ಬಡಾವಣೆಯ ನಮ್ಮ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ, 1976-77ರಲ್ಲಿ! ಅಲ್ಲಿಂದ ಮುಂದೆ ಪ್ರತಿ ಪಾಠದಲ್ಲಿ ಬರುವ ಪ್ರಯೋಗಗಳನ್ನು ತರಗತಿಯಲ್ಲಿ ನಮ್ಮ ಕೈಯಲ್ಲಿಯೇ ಮಾಡಿಸಿ ಕಲಿಸಿದ ಅಪರೂಪದ ಶಿಕ್ಷಕಿ ರುಕ್ಮಿಣಿಯವರು ಮುಂದೆ ನಾವೆಲ್ಲಾ ಏಳನೇ ತರಗತಿ ಪಬ್ಲಿಕ್ ಪರೀಕ್ಷೆ ಮುಗಿಸಿ, ಪ್ರಥಮ ದರ್ಜೆಯಲ್ಲಿ ಪಾಸಾಗಿ, ಶಾಲೆಯಿಂದ ಹೊರಹೋಗುವಾಗ, ಆಶೀರ್ವದಿಸಿ, ಕಣ್ಣೀರು ತುಂಬಿಕೊಂಡು ಪ್ರೀತಿಯಿಂದ ಬೀಳ್ಕೊಡುವಾಗ, ನಮಗೂ ಕಣ್ಣೀರು ಬಂದದ್ದು ಸುಳ್ಳಲ್ಲ.

ಈ ಪ್ರಾಕ್ಟಿಕಲ್ ಕಲಿಕೆ ಪ್ರೌಢಶಾಲೆಯ ಎಲ್ಲಾ ತರಗತಿಗಳಲ್ಲೂ ಮುಂದುವರೆಸಿಕೊಂಡು ಹೋಗಲು ನಮ್ಮ ತರಲೆಯೇ ಕಾರಣವಾಗಿದ್ದೂ ಅಲ್ಲದೆ ಆಗ ತಾನೇ ಆರಂಭಗೊಂಡ ವಿಜ್ಞಾನ ಮೇಳಗಳಲ್ಲಿ ಹತ್ತಾರು ಮಾದರಿಗಳನ್ನು ಪ್ರದರ್ಶಿಸಲು, ಬಹುಮಾನ ಗಿಟ್ಟಿಸಲು, ಮರಿವಿಜ್ಞಾನಿಗಳಂತೆ ಮೆರೆಯಲು ಸಹಾಯಮಾಡಿತ್ತು!

ಅದೇ ಶಾಲೆಯಲ್ಲಿದ್ದ ಗಣಿತ ಶಿಕ್ಷಕರು ಮಾತ್ರ, ಗಣಿತದಲ್ಲಿ ಅಷ್ಟೇನೂ ಜಾಣನಲ್ಲದ ನನ್ನ ಅಂಗೈ ಹಸಿರುಗಟ್ಟುವಂತೆ ಬಾರಿಸಿದ್ದು, ಮತ್ತೆಂದೂ ಗಣಿತವನ್ನು ಕಲಿಯಲಾರೆನೆಂದು ಶಪಥ ಮಾಡಿ ಕನಿಷ್ಠ ಅಂಕಗಳಲ್ಲೇ ಪಾಸುಮಾಡುವಂತಹ ಪರಿಸ್ಥಿತಿ ಉದ್ಭವಿಸಿದ್ದು, ಆದರೆ ಶಾಲೆಯಿಂದ ಹೊರಹೋಗುವಾಗ ಮಾತ್ರ ನನ್ನನ್ನು ತಮ್ಮ ಮಗನಂತೆ ಮೈದಡವಿ ಸಾಂತ್ವನ ಹೇಳಿ, ಗಣಿತ ಕಲಿತರೆ ಏನೆಲ್ಲಾ ಅನುಕೂಲ ಎಂದು ತಿಳಿಸಿ, ಪ್ರೋತ್ಸಾಹದ ಮಾತುಗಳನ್ನಾಡಿ ಬೀಳ್ಕೊಟ್ಟಿದ್ದರು.

ಐದರಿಂದ ಏಳರವರೆಗೆ ಇಂಗ್ಲಿಷ್ ಕಲಿಸಿಕೊಟ್ಟ ಶಿಕ್ಷಕಿ ವಯಲೆಟ್ ಡಿಸೌಜ ಅವರ ಮಾರ್ಗದರ್ಶನ ಮುಂದೆ ಕನ್ನಡ ಮಾಧ್ಯಮದ ವಿದ್ಯಾರ್ಥಿಗಳು ಇಂಗ್ಲಿಷನ್ನು ಸುಲಭವಾಗಿ ಹೇಗೆ ಕಲಿಸಬಹುದು ಎಂದು ಹಲವು ಪ್ರಯೋಗಗಳನ್ನು ಮಾಡಿ, 'ಇಂಗ್ಲಿಷ್ ಭಾಷಾ ಆಟಗಳು' ಎಂಬ ಕೃತಿಯನ್ನು ರಚಿಸಲು ಪ್ರೇರಣೆ ನೀಡಿತು ಮತ್ತು ಆ ಕೃತಿಯ ಲಕ್ಷಕ್ಕೂ ಹೆಚ್ಚು ಪ್ರತಿಗಳು 'ದಿಕ್ಸೂಚಿ' ಸ್ಪರ್ಧಾಮಾಸಿಕದ ವಾರ್ಷಿಕ ಕೊಡುಗೆಯಾಗಿ ಉಚಿತವಾಗಿ ಹಂಚಲ್ಪಟ್ಟು ಕರ್ನಾಟಕದ ಬಹುತೇಕ ಎಲ್ಲಾ ಸರ್ಕಾರಿ ಶಾಲೆಗಳಲ್ಲಿ ಬಳಸಲ್ಪಟ್ಟಿತ್ತು! ಅದರ ಆಧಾರದ ಮೇಲೆ ರಚಿತವಾದ 'ಅಪ್ಲೈಡ್ ಇಂಗ್ಲಿಷ್ ಕೋರ್ಸ್' ಕೃತಿ ಇದೀಗ 80,000 ಪ್ರತಿಗಳಷ್ಟು ಖರ್ಚಾಗಿದೆ!

ಪ್ರಬಂಧ, ಕತೆ, ಕವಿತೆ ರಚನೆ, ಚರ್ಚೆ, ಆಶುಭಾಷಣ, ಏಕಪಾತ್ರಾಭಿನಯ, ಕಿರುನಾಟಕ, ಸಮೂಹಗಾಯನ, ಜ್ಞಾಪಕಶಕ್ತಿ ಸ್ಪರ್ಧೆಗಳು, ಆಟೋಟಗಳು ಹೀಗೆ ಹಲವು ಚಟುವಟಿಕೆಗಳಿಗೆ ಅವಕಾಶಮಾಡಿಕೊಟ್ಟ ಶಿವಮೊಗ್ಗದ ಹೊಸಮನೆ ಬಡಾವಣೆಯ ನಮ್ಮ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯನ್ನು 1979ರಲ್ಲಿ ಬಿಟ್ಟರೂ ಮುಂದೆ ಆಗಾಗ್ಗೆ ಅಲ್ಲಿಗೆ ಭೇಟಿ ನೀಡುತ್ತಿದ್ದೆ; ಶಾಲೆಯ ಕಟ್ಟಡದಲ್ಲಿ ಕೆಲವು ವರ್ಷ ಉಚಿತ ಇಂಗ್ಲಿಷ್ ವ್ಯಾಕರಣ ತರಗತಿ ನಡೆಸುವುದು, ಕ್ವಿಜ್, ವ್ಯಕ್ತಿತ್ವ ವಿಕಸನ ತರಬೇತಿ ನೀಡುವುದು, ಹೀಗೆ ಯುವಸಮುದಾಯಕ್ಕೆ ಉಪಯುಕ್ತವಾಗುವ ಹಲವು ಚಟುವಟಿಕೆಗಳನ್ನು ನಡೆಸಲು ಅವಕಾಶ ನೀಡಿದ್ದು ಎಲ್ಲವೂ ಅಭೂತಪೂರ್ವ! ಥ್ಯಾಂಕ್ಯೂ ಟೀಚರ್ಸ್! ಥ್ಯಾಂಕ್ಸ್ ಟು ಫ್ರೆಂಡ್ಸ್ ಅಂಡ್ ಸ್ಕೂಲ್!

ನಮ್ಮ ಬಾಲ್ಕನಿಯ ಹಕ್ಕಿಗಳು

» ಆಪ್ತಿ ಪಟವರ್ಧನ್



ಪಕ್ಷಿ ವೀಕ್ಷಣೆ ಒಂದು ಒಳ್ಳೆಯ ಹವ್ಯಾಸ; ನಿಜ; ಆದರೆ, ಪಕ್ಷಿವೀಕ್ಷಣೆಗೆ ಸಮಯ, ಸಂಯಮ ಹಾಗೂ ಹಣ ಎಲ್ಲವೂ ಬೇಕಾಗುತ್ತದೆ. ದೂರದ ಪ್ರದೇಶಗಳಲ್ಲೋ, ಬೆಟ್ಟ ಗುಡ್ಡಗಳಲ್ಲೋ, ಕೆರೆಯೊಂದರ ಪಕ್ಕದಲ್ಲೋ ಕಾಣಸಿಗುವ ಹಕ್ಕಿಯನ್ನು ನೋಡಲು, ಸಮಯ ಮಾಡಿಕೊಂಡು, ವಾಹನದಲ್ಲಿ ಸಂಚರಿಸುವುದು ಎಂದರೆ, ಸಾಕಷ್ಟು ಶ್ರಮದ ಕೆಲಸವೇ ಸರಿ. ಕೆಲವು ಬಾರಿ ಮನಸ್ಸು ಇದ್ದರೂ, ದೂರ ಪ್ರದೇಶಗಳಿಗೆ ಹೋಗಿ ಪಕ್ಷಿವೀಕ್ಷಣೆ ಕೈಗೊಳ್ಳುವುದು ಕಷ್ಟವಾಗಬಹುದು.

ಇದಕ್ಕೆ ಉತ್ತರ ಎಂದರೆ, ನಮ್ಮ ಮನೆಯ ಬಾಲ್ಕನಿ! ನಿಜ, ಇದ್ದಲ್ಲೇ ಕುಳಿತು ನಮ್ಮ ಹವ್ಯಾಸವನ್ನು ಬೆಳೆಸುವುದು! ನನಗೆ ನಮ್ಮ ಮನೆಯ ಬಾಲ್ಕನಿಯೇ ಅವೆಲ್ಲದಕ್ಕೆ ಧಾರಾಳ ಅವಕಾಶ ಕೊಡುತ್ತದೆ. ಮನೆಯ ಬಾಲ್ಕನಿಗೆ ಹೊಂದಿಕೊಂಡಂತೆ ಒಂದು ವಿಶಾಲವಾದ ಮಾವಿನಮರವಿರುವುದರಿಂದ ಹಕ್ಕಿಗಳಿಗೆ ಅದು ಇಷ್ಟವಾದ ತಾಣ; ಜತೆಗೆ ಅದು ಮಾರ್ಚ್‌ನಿಂದ ತೊಡಗಿ ಆಗಸ್ಟ್ ತಿಂಗಳವರೆಗೂ ಯಥೇಚ್ಛವಾಗಿ ಹಣ್ಣು ಕೊಡುವ ಮರವಾದ್ದರಿಂದ ಹಲವು ಪಕ್ಷಿಗಳಿಗೆ ಅದು ಆಶ್ರಯ ತಾಣವೇ ಆಗಿದೆ. ಮಾವಿನ ಹಣ್ಣಿನ ಸೀಸನ್ ಬಂತು ಎಮದರೆ, ನೂರಾರು ಕೆಂಪು ಮೂತಿ ಗಿಳಿಗಳು, ಕಾಮನ್ ಮೈನಾ, ಗೊರವಂಕ, ಪುಟಾಣಿ ಗುಬ್ಬಿಗಳು, ಕಿಂಗ್‌ಫಿಷರ್ ಹೀಗೆ ಹಲವು ಪಕ್ಷಿಗಳು ನಮ್ಮ ಮನೆಯ ಬಾಲ್ಕನಿಗೆ ಬರುತ್ತವೆ; ಬಾಲ್ಕನಿ ಎಂದರೆ, ಬಾಲ್ಕನಿಗೆ ಚಾಚಿಕೊಂಡಿರುವ ಆ ಮಾವಿನ ಮರಕ್ಕೆ ಬರುತ್ತವೆ. ಹಲವು ರೆಂಬೆಗಳಿರುವ ಆ ಮಾವಿನಮರವು, ಮಾತೃಹೃದಯದ ವೈಶಾಲ ಮನೋಭಾವವನ್ನು ತೋರಿ, ಎಲ್ಲರನ್ನೂ ಆಹ್ವಾನಿಸುತ್ತದೆ, ಯಾವ ಹಕ್ಕಿಗೂ ಬರಬೇಡ ಎನ್ನುವುದಿಲ್ಲ! ಆದ್ದರಿಂದ, ಅಲ್ಲಿ ಸದಾ ಕಾಲ ಹಕ್ಕಿಗಳ ಆಟ, ಹಾರಾಟ!

ಈ ಮರವು ನೂರಾರು ಹಕ್ಕಿಗಲನ್ನು ಪೊರೆಯುವುದರಿಂದ ನಮಗೆ ಶುಲ್ಕವಿಲ್ಲದೇ ಸಾಕಷ್ಟು ಹಕ್ಕಿಗಳ ಚಲನವಲನವನ್ನು ನೋಡಿ ಆಸ್ವಾದಿಸುವ ಸುಯೋಗ. ಹಕ್ಕಿ ಮಾತ್ರವಲ್ಲ, ಅಲ್ಲಿ ಇನ್ನೂ ಕೆಲವು ಜೀವಿಗಳಿಗೆ ಆಶ್ರಯ ದೊರಕಿದೆ! ವಿಶಾಲವಾದ ಮರದ ಗೆಲ್ಲಗಳಲ್ಲಿ ಒಂದೆರಡು ಬಾವಲಿಗಳು ಕೂಡ ಉಲ್ಟಾ ನೇತಾಡುತ್ತಿರುತ್ತವೆ. ಒಂದು ದಿನ ರಾತ್ರೆ, ಅವುಗಳನ್ನು ನೋಡಿ, ಯಾರೋ ಮರವೇರಿ ಕುಳಿತು ಕಳ್ಳತನ ಮಾಡಲು ಹೊಂಚು ಹಾಕುತ್ತಿದ್ದಾರೆ ಎಂದೇ ಭಯಪಟ್ಟಿದ್ದೆ. ಬಾಲ್ಕನಿಯ ದೀಪ ಹಾಕಲೂ ಕೂಡ ಧೈರ್ಯ ಸಾಲದೆ ಇರುವಾಗ ಅದು ಬಾವಲಿ ಎಂದು ಗೊತ್ತಾಗಿ ನಗು ಬಂತು.

ಮಾವಿನ ಮರಕ್ಕೆ ಬರುವ ಹಕ್ಕಿಗಳ ವೈವಿಧ್ಯ ಬೆರಗು ಹುಟ್ಟಿಸುವಂತಹದ್ದು. ಗುಬ್ಬಿಯನ್ನು ಹೋಲುವ ಅಷ್ಟೇ ಗಾತ್ರದ ವಿವಿಧ ಬಣ್ಣಗಳ ಹಕ್ಕಿಗಳು ಕೂಡ ತೀರಾ ಹತ್ತಿರ ಬಂದು ಕ್ಷಣಮಾತ್ರದಲ್ಲಿ ಅದೃಶ್ಯವಾಗುತ್ತವೆ. ಆಮೇಲೆ ಎಷ್ಟು ಹೊತ್ತು ಕಾದು ಕುಳಿತರೂ ಕಾಣುವುದೇ ಇಲ್ಲ. ಮತ್ತೊಮ್ಮೆ ಯಾವಾಗಲಾದರೂ ಅದರ ಬಗ್ಗೆ ಮರೆತೇ ಹೋಗಿರುವಾಗ ಮತ್ತೆ ಬಂದು ಕಾಣಿಸಿಕೊಂಡು, ಹಣ್ಣು ತಿಂದು, ಹಾರಿ ಹೋಗುತ್ತವೆ. ಅಂತಹ ಚುರುಕಿನ ಹಕ್ಕಿಗಳವು. ಪಕ್ಷಿಲೋಕವೇ ನಿಜವಾಗಲೂ ವಿಸ್ಮಯಕಾರಿ. ಇಷ್ಟೆಲ್ಲಾ ಹಕ್ಕಿಗಳ ಬಗ್ಗೆ ಬರೆದೆನಲ್ಲ, ಅಂದ ಮೇಲೆ, ಶನಿ ಮಹಾರಾಜನ ವಾಹನವನ್ನು ಮರೆತರೆ ಹೇಗೆ? ಅವುಗಳಂತೂ ಸಂಜೆಯ ಹೊತ್ತಿಗೆ ನಮ್ಮ ಎದುರುಗಡೆಯ ಬಾಲ್ಕನಿಯ ಜಂತಿಗಳ ಮೇಲೆ ಸಾಲುಗಟ್ಟಿ ಕುಳಿತು ತಮ್ಮ ಸಂಘಶಕ್ತಿಯನ್ನು ತೋರಿಸುತ್ತವೆ. ದೂರದಲ್ಲೊಂದು ಗಿಡುಗ ಮಹಾ ಗಾಂಭೀರ್ಯದಿಂದ ಹೊಂಚುಹಾಕುತ್ತಾ ಕುಳಿತಿರುತ್ತವೆ. ಇನ್ನು ಶಾಂತಿದೂತರಾದ ಪಾರಿವಾಳಗಳ ಸಂಖ್ಯೆಗೂ ಕಮ್ಮಿ ಇಲ್ಲ.

ಪಾರಿವಾಳಗಳ ಇನ್ನೊಂದು ತಾಪತ್ರಯ ಉಂಟು! ಇಲ್ಲೇ ಮನೆ ಮಾಡಿಕೊಳ್ಳುವ ಇವು, ಮೊಟ್ಟೆ ಇಡುವ ಸಮಯಕ್ಕೆ ಕಿಟಕಿಗಳ ಸಂದುಗಳಲ್ಲಿ, ಸಜ್ಜಾಗಳಿಗೆ ಪ್ರವೇಶ ಸಿಕ್ಕರೆ ಅಲ್ಲಿ ಠಿಕಾಣಿ ಹೂಡುತ್ತವೆ ಮತ್ತು ನಾವು ಹತ್ತಿರ ಹೋದರೆ ನಮಗೇ ಗದರಿಸುತ್ತವೆ! ದೂರದಲ್ಲೆಲ್ಲೋ ಕೋಗಿಲೆಯು ಪಂಚಮಸ್ವರದಲ್ಲಿ ಹಾಡುತ್ತದೆ. ಮುಂಜಾನೆದ್ದು ವಾಹನಗಳ ಗದ್ದಲ ಕಡಿಮೆಯಿರುವಾಗ ಹಕ್ಕಿಗಳ ವಿವಿಧ ಸ್ವರಗೋಷ್ಠಿಯನ್ನು ರೆಕಾರ್ಡ್ ಮಾಡಿಟ್ಟುಕೊಳ್ಳುವುದೇ ಮಜಾ ನೀಡುವ ಕೆಲಸ. ಹಕ್ಕಿಗಳ ಕೂಗನ್ನು ರೆಕಾರ್ಡ್ ಮಾಡಿಕೊಂಡು, ಅದಾವ ಹಕ್ಕಿ ಎಂದು ಗುರುತಿಸಲು ವೆಬ್ ಸೈಟ್ ಅಥವಾ ಆ್ಯಪ್ ಮೊರೆ ಹೋಗುತ್ತೇನೆ, ಅವುಗಳ ಹೆಸರನ್ನು ಪತ್ತೆ ಮಾಡುತ್ತೇನೆ, ಅವುಗಳನ್ನು ಮತ್ತೆ ಕಣ್ಣಾರೆ ನೋಡಲು ಹಾತೊರೆಯುತ್ತೇನೆ, ಒಟ್ಟಿನಲ್ಲಿ ಹಕ್ಕಿಗಳ ಲೋಕದಲ್ಲಿ ನಾನೂ ಕಳೆದು ಹೋಗುತ್ತೇನೆ! ಇಂದಿನ ಯುಗಮಾನದ ಧಾವಂತದ ಬದುಕಿನಲ್ಲಿ, ಈ ರೀತಿ ಕಳೆದು ಹೋಗಲು, ನಮ್ಮ ಮನೆಯ ಹತ್ತಿರವೇ ಒಂದು ಕಿಟಕಿ ಸಿಕ್ಕಿದರೆ, ಅದೇ ನನ್ನ ಅದೃಷ್ಟವಲ್ಲವೇ!

ಕಾನನದ ನಡುವೆ ಬತ್ತದ ಧ್ಯಾನ

» ಮೊದಲ ಪುಟದಿಂದ

ತಾವು ಬೆಳೆಸಿದ ಅಕ್ಕಿಯನ್ನು ತಾವೇ ಊಟ ಮಾಡಬೇಕಾದ್ರೆ ಏನಾದ್ರು ಮಾಡಬೇಕಲ್ಲ? 'ಮೊದಲೆಲ್ಲ ಜನ ಸಿಗುತ್ತಿದ್ದರು. ಮನೆಯಲ್ಲೇ ಕುಟ್ಟುವುದಿತ್ತು. ಕ್ರಮೇಣ ಕಷ್ಟವಾಯಿತು. ಒಂದು ಮುಡಿ ಅಕ್ಕಿ ಆಗಬೇಕಾದರೆ ನಾಲ್ಕು ಜನ ಬೇಕಿತ್ತು. ಅರ್ಧರ್ಧ ಸೇರು ಅಕ್ಕಿ ಮಜೂರಿ. ಮುಂದೆ 1979ರ ಸುಮಾರಿಗೆ ಕುಟ್ಟುವವರೂ ಸಿಗದೇ ಹೋದರು. ಬೇರೆ ಕಡೆ ಮಿಲ್ಲಿಗೆ ಭತ್ತ ಒಯ್ದು ಅಕ್ಕಿ ಮಾಡುವಂತಾಯಿತು. 1990ರಲ್ಲಿ ನಾನೇ ಮೂರುವರೆ ಸಾವಿರ ರುಪಾಯಿ ಕೊಟ್ಟು ಹಳೆಯ ಹಲ್ಲರ್ ಖರೀದಿಸಿದೆ. ನನ್ನ ಈ ಟಿಲ್ಲರ್‌ನಂತೆ ಅದಕ್ಕೂ ಈಗ ಮೂವತ್ತು ತುಂಬಿತು!'

ನಾಟೀ ರೈತರ ಯಶಸ್ಸಿನ ಹಿಂದೆ ಜೋಡಿಗೊಳ್ಳುವ ಒಂದು ಪದ 'ಕೈಗುಣ' ಎಂಬುದು. ಕೆಲವರ ಕೈಯಲ್ಲಿ ಬೀಜ ಹಾಕಬೇಕಾಗಿಲ್ಲ. ಗಿಡ ನೆಡಬೇಕಾಗಿಲ್ಲ. ಚೆಲ್ಲಿದ್ರೆ ಸಾಕು, ಸೊಂಪಾಗಿ ಬೆಳೆಯುತ್ತವೆ. ತುಳುವಿನಲ್ಲಿ ಇದು 'ಕೈಬಲ್ಪು-ಅದೃಷ್ಟ'.

ಒಂದು ಬೆಳೆಗೆ ನೂರಾರು ತಳಿ ಬೀಜ-ನೇಜಿ ಹಾಕುವುದು. ಅದನ್ನು ಗುರುತಿಸುವುದು, ಕೊಯ್ಯುವುದು ಇದೆಲ್ಲ ಸಾಧಾರಣ ಸಹನೆ, ತಾಳ್ಮೆ ಬೇಡುವ ಕೆಲಸಗಳಲ್ಲ. ನೀವೇ ಲೆಕ್ಕ ಹಾಕಿ. ದೇವರಾಯರ 60 ವರ್ಷಗಳ ಭತ್ತದ ಬೆಳೆ ಇತಿಹಾಸದಲ್ಲಿ ವಾರ್ಷಿಕ ನೂರೇ ತಳಿ ಎಂದು ಇಟ್ಟುಕೊಂಡರೂ ಇವುಗಳನ್ನು ಆವರ್ತನದಲ್ಲಿ ಮೊಳಕೆ ಬರಿಸುವುದು, ಬಿತ್ತುವುದು, ಬೆಳೆಸುವುದು, ಕಾಪಾಡುವುದು - ಆ ಚರಿತ್ರೆಯೇ ಬಲು ರೋಚಕ. (ಬಿ.ಕೆ.ದೇವರಾವ್: ಅನ್ನದಾರಿಯ ಅನಂತ ಹೆಜ್ಜೆ - ಈ ಪುಸ್ತಕದ ಆಯ್ದ ಭಾಗಗಳನ್ನೋದಿ ನಿಮಗೇನನ್ನಿಸಿತು? ಪ್ರತಿಕ್ರಿಯಿಸಿ: viramapost@gmail.com)

ಊಟಕ್ಕೆ ಕಜೆ ಅಕ್ಕಿ ಉತ್ತಮ

'ನಾನು ನಿತ್ಯ ಕುಚ್ಚುಲಕ್ಕಿ ತಿನ್ನುವವ. ಅದು ಅಂದರೆ ನನಗೆ ಪಂಚಪ್ರಾಣ. ನನಗೆ ಮಧ್ಯಾಹ್ನ ಗಂಜಿ ಊಟ ಆಗಲೇ ಬೇಕು. ಅದರ ಪೂರ್ವದಲ್ಲಿ ಒಂದು ಲೋಟ ಗಂಜಿ ನೀರು ಕುಡಿಯಲೇ ಬೇಕು. ಈ ಸುಖ ಬೇರೆಲ್ಲಿ ಸಿಗುತ್ತದೆ. ನೋಡಿ ನಾನು ವೈವಿಧ್ಯಮಯವಾದ ಕಜೆ ಅಕ್ಕಿಯನ್ನೇ ಜಾಸ್ತಿ ಬೆಳೆಸುತ್ತೇನೆ. ಅದಕ್ಕೆ ವೈಯಕ್ತಿಕ ಕಾರಣ ನನ್ನ ಅನ್ನ ಪ್ರೀತಿಯೇ. ನಮ್ಮ ನೆಲದಲ್ಲಿ ಕಜೆ ಚೆನ್ನಾಗಿ ಬರುವಷ್ಟು ಬೇರೆ ಯಾವುದೂ ಬರುವುದಿಲ್ಲ. ಎಲ್ಲದಕ್ಕಿಂತ ಹೆಚ್ಚು ಇದು ನನ್ನದೇ ಎನ್ನುವ ಭಾವ; ನಮ್ಮ ಮಣ್ಣಿನಲ್ಲಿ ಬೆಳೆದ ಅನ್ನವನ್ನೇ ನಾವು ಉಣ್ಣುವುದರಲ್ಲಿ ಸಿಗುವ ಪರಮಸುಖ ಇನ್ನೂ ಯಾವುದರಲ್ಲಿ ಇದೆ ಹೇಳಿ? ನಿಮಗೆ ಅಡಿಕೆ, ರಬ್ಬರ್, ವೆನಿಲ್ಲಾದಿಂದ ಹೆಚ್ಚು ಹಣ ಬರಬಹುದು. ಆದರೆ ಅನ್ನವನ್ನು ನೀವು ಅದೇ ಹಣದಿಂದ ಖರೀದಿಸಬೇಕಾಗುತ್ತದೆ. ಆದರೆ ನನ್ನ ಬದುಕಿನಲ್ಲಿ ಹಣದ ಮಧ್ಯವರ್ತಿ ಕೆಲಸವೇ ಇಲ್ಲ. ನೇರವಾಗಿ ನಾನೇ ಬೆಳೆಸುವ ಅನ್ನವನ್ನೇ ನಾನು ನನ್ನ ಕುಟುಂಬ ಉಣ್ಣುವುದು. ಇದು ಪರಮ ಸುಖವಲ್ಲವೇ?'

ಬಿ.ಕೆ.ದೇವರಾವ್
ಅನ್ನದಾರಿಯ ಅನಂತ ಹೆಜ್ಜೆ
ಲೇ: ನರೇಂದ್ರ ರೈ ದೇರ್ಲ
ಪ್ರ: ಕನಸು ಪ್ರಕಾಶನ, ಮಾಡಾವು ಅಂಚೆ,
ಪುತ್ತೂರು 574210 ಮೊ: 9448951939
ಬೆಲೆ ರು.100/-

ಬಾಟಲಿ ಸಂಗ್ರಹಿಸಿದರೆ ಬೇರೆಯವರು ತಪ್ಪು ತಿಳಿದಾರೇ?

Ask the Editor



» ವಿಶ್ವೇಶ್ವರ ಭಟ್

ಸತಾಯಿಸುವ ಪ್ರಶ್ನೆಗಳಿಗೆ ಸಂತೈಸುವ ಉತ್ತರ
ಯಾವುದೇ ವಿಷಯದ ಬಗ್ಗೆ ಏನು ಪ್ರಶ್ನೆಯನ್ನಾದರೂ ಕೇಳಿ
asktheeditorvv@gmail.com

ವಿನಯ ಪ್ರಕಾಶ, ಬೆಂಗಳೂರು

● ಭಟ್ರೇ, ನನಗೆ ಮದ್ಯದ ಬಾಟಲಿಗಳನ್ನು ಸಂಗ್ರಹಿಸುವ ಅಭ್ಯಾಸವಿದೆ. ಆದರೆ ನನಗೆ ಕುಡಿಯುವ ಚಟವಿಲ್ಲ. ಈ ಸಂಗ್ರಹವವನ್ನು ಬೇರೆಯವರಿಗೆ ತೋರಿಸಿಲ್ಲ. ತೋರಿಸಿದರೆ ಅವನ್ನೆಲ್ಲಾ ನಾನೇ ಕುಡಿದು ಖಾಲಿ ಮಾಡಿರಬಹುದು ಎಂದು ಭಾವಿಸಬಹುದೇನೋ ಎಂಬ ಅಂಜಿಕೆ. ನನ್ನ ಮಾನಸಿಕ ತೊಳಲಾಟಕ್ಕೆ ನಿಮ್ಮ ಪರಿಹಾರ?

-ನೀವು ಹಾಗೇಕೆ ಭಾವಿಸಿದ್ದೀರೋ ಅರ್ಥವಾಗುತ್ತಿಲ್ಲ. ಬಾಟಲಿಗಳನ್ನು ಸಂಗ್ರಹಿಸುವುದು ಒಂದು ಉತ್ತಮ ಅಭ್ಯಾಸ. ಬಾಟಲಿಗಳಲ್ಲಿ ಎಷ್ಟೆಲ್ಲಾ ವಿನ್ಯಾಸಗಳಿವೆ ಎಂಬುದು ಗೊತ್ತಾದೀತು. ಶಿವಮೊಗ್ಗದ ಖ್ಯಾತ ಮನಶ್ಶಾಸ್ತ್ರಜ್ಞ ಡಾ. ಅಶೋಕ ಪೈ ಅವರ ಸಹೋದರ ಮುಕುಂದ ಪೈ ಅವರ ಬಾಟಲಿಗಳ ಸಂಗ್ರಹವನ್ನು ನೋಡಿ, ಆಶ್ಚರ್ಯವಾಗಿತ್ತು. ನಾನು ಬಹಳ ವರ್ಷಗಳ ಹಿಂದೆ, ಅವರ ಬಗ್ಗೆ ಒಂದು ಲೇಖನ (ಖಾಲಿ ಶೀಷೆಗಳ ತುಂಬಿದ ಕೊಡ) ಬರೆದಿದ್ದೆ. ಶಿವಮೊಗ್ಗದಲ್ಲಿರುವ ಪೈ ಅವರ ಸಂಗ್ರಹದಲ್ಲಿ ಒಂದೂವರೆ ಸಾವಿರಕ್ಕೂ ಅಧಿಕ ಬೇರೆ ಬೇರೆ ರೀತಿಯ ಬಾಟಲಿಗಳಿದ್ದವು. ಅಮೆರಿಕ, ಬ್ರಿಟನ್, ಸಿಂಗಾಪುರ, ಜರ್ಮನಿ, ಜಪಾನ್, ಕೆನಡ, ಆಸ್ಟ್ರೇಲಿಯಾ, ಮಲೇಷಿಯಾ, ರಷ್ಯಾ, ನೇಪಾಳ ಸೇರಿದಂತೆ ಅನೇಕ ದೇಶಗಳ ಮದ್ಯ ಬಾಟಲಿಗಳನ್ನು ಅವರ ಸಂಗ್ರಹದಲ್ಲಿ ನೋಡಿದ್ದೆ. ಆದರೆ ಅವರು Teetotaller, ಕುಡಿಯುವ ಚಟದವರಲ್ಲ. ಮದ್ಯದ ರುಚಿಯನ್ನು ಸವಿದವರಲ್ಲ. ಅವರ ಸಂಗ್ರಹವನ್ನು ನೋಡಿದವರಾರೂ ಅವನ್ನೆಲ್ಲಾ ಅವರೇ ಖಾಲಿ ಮಾಡಿದ್ದು ಎಂದು ಅಂದುಕೊಂಡಿಲ್ಲ. ಅದು ಅವರ ಹವ್ಯಾಸ. ಕೆಲವರಿಗೆ ಬಾಟಲಿಗಳನ್ನು ಖಾಲಿ ಮಾಡುವುದಷ್ಟೇ ಗೊತ್ತು. ಅವನ್ನು ಸಂಗ್ರಹಿಸಿಡಬೇಕೆಂಬ ಆಸೆ ಇರುವುದಿಲ್ಲ. ಆದರೆ ಮುಕುಂದ ಪೈ ಅವರು ಕುಡಿಯದಿದ್ದರೂ ಅವನ್ನೆಲ್ಲಾ ಸಂಗ್ರಹಿಸಿ ಇಟ್ಟಿದ್ದಾರೆ. ಅವರ ಖಾಲಿ ಬಾಟಲಿ ಸಂಗ್ರಹಕ್ಕೆ ಬೆಲೆ ಕಟ್ಟಲಾಗದು. ಅದನ್ನು ನೋಡಿದರೆ ಎಷ್ಟೆಲ್ಲಾ ವಿಧಗಳ ಬಾಟಲಿ ಇವೆಯಲ್ಲಾ ಎಂಬ ಬೆರಗು ಮೂಡುತ್ತದೆ. ಅದನ್ನು ಅವರು ಮ್ಯೂಸಿಯಂ ಮಾಡಿದರೆ, ಅದೂ ಒಂದು ಪ್ರೇಕ್ಷಣೀಯ ತಾಣವಾಗುವುದರಲ್ಲಿ ಸಂದೇಹವೇ ಇಲ್ಲ.

ಆದ್ದರಿಂದ ವಿನಯ ಪ್ರಕಾಶ ಅವರೇ, ನೀವು ಪೈ ಅವರನ್ನು ಆದರ್ಶವಾಗಿಟ್ಟುಕೊಳ್ಳಬಹುದು. ಬೇರೆಯವರು ಏನು ಯೋಚಿಸುತ್ತಾರೋ ಎಂದು ಬಹಳ ತಲೆಕೆಡಿಸಿಕೊಳ್ಳಬಾರದು. ಇಂದೇ ನಾನಾ ವಿನ್ಯಾಸದ, ಬಣ್ಣದ ಮದ್ಯದ ಬಾಟಲಿಗಳನ್ನು ಸಂಗ್ರಹಿಸಿ; ಬಂದವರಿಗೆ ಅದನ್ನು ಹೆಮ್ಮೆಯಿಂದ ತೋರಿಸಿ. ಇದನ್ನು ಮಾಡಲು ಕುಡಿಯುವ ಚಟ ಬೆಳೆಸಿಕೊಳ್ಳುವ ಅಗತ್ಯವೇ ಇಲ್ಲ!

ಸುನೀಲಕುಮಾರ ಮೇಗೇರಿ, ಮಿಶಿಗನ್

● 'ಮನೆ ಕಟ್ಟಿ ನೋಡು, ಮದುವೆ ಮಾಡಿ ನೋಡು' ಅಂತ ಗಾದೆ ಮಾತಿದೆ, ಸದ್ಯದ ಪರಿಸ್ಥಿತಿಗೆ ಅನುಗುಣುವಾಗಿ ಅದಕ್ಕೆ ಹುಡುಗಿ ಹುಡುಕಿ ನೋಡು ಸೇರಿಸಬಹುದಲ್ಲವೇ?

-ಈಗಿನ ಕಾಲದಲ್ಲಿ ಮದುವೆಯಾಗುವುದು ಕಷ್ಟವಲ್ಲ, ಹುಡುಗಿ ಹುಡುಕುವುದು. ಹುಡುಗಿಯರೇ ಸಿಗುವುದಿಲ್ಲ ಎಂದು ಕೆಲವರು ಗೊಣಗುವುದನ್ನು ಕೇಳಿದ್ದೇನೆ. ಇನ್ನು ಕೆಲವರಿಗೆ problem of plenty. 'ಹತ್ತು ಸುಳ್ಳು ಹೇಳಿ ಮದುವೆ ಮಾಡಬೇಕು' ಎಂಬ ಗಾದೆಯನ್ನು ಹುಡುಗಿಯರಿಗೆ ಅನ್ವಯಿಸುತ್ತಿದ್ದರು. ಈಗ ಈ ಮಾತನ್ನು ಹುಡುಗರಿಗೆ ಅನ್ವಯಿಸಬೇಕಿದೆ. ಹುಡುಗಿ ಹುಡುಕುವ ಕೆಲಸವನ್ನು ಬೇರೆಯವರಿಗೆ ವಹಿಸಿದರೆ ಕಷ್ಟವಾಗುತ್ತದೆ. ನಿಮಗೆ ಇಷ್ಟದವಳನ್ನು ಹುಡುಕಲು ಬಹಳ ಸಮಯ ಬೇಕಿಲ್ಲ. ಅಪ್ಪ-ಅಮ್ಮ, ಮನೆಮಂದಿಯೆಲ್ಲ, ನೆರೆಯವರೆಲ್ಲ ಒಪ್ಪುವ ಹುಡುಗಿ ಹುಡುಕುವುದು ಕಷ್ಟ. ಎಲ್ಲವನ್ನೂ ಹೈಕಮಾಂಡ್ ತೀರ್ಮಾನಕ್ಕೋ, ಸಂಘ-ಪರಿವಾರದವರ ನಿರ್ಧಾರಕ್ಕೋ ಬಿಡಬಾರದು.

ರವಿ ಜೋರಾಪುರ, ಬೆಳಗಾವಿ

● ಸಾರ್, ಒಂದೆರಡು ತಿಂಗಳ ಹಿಂದೆ ಭೇಟಿಯಾದವರು ಎದುರಿಗೆ ಬಂದರೆ ಅವರ ಹೆಸರು ತಟ್ಟನೆ ನೆನಪಾಗುವುದಿಲ್ಲ. ಭೇಟಿಯಾದವರ ಹೆಸರುಗಳನ್ನು ನೆನಪಿಟ್ಟುಕೊಳ್ಳುವುದು ಹೇಗೆ?

-ರವಿ ಅವರೇ, ನನಗೂ ನಿಮ್ಮ ಹಾಗೆ ಮರೆವಿನ ಸಮಸ್ಯೆ ಇತ್ತು. ಭೇಟಿಯಾದವರ ಹೆಸರು ತಕ್ಷಣ ನೆನಪಾಗುತ್ತಿರಲಿಲ್ಲ. ಎಲ್ಲೋ ನೋಡಿದ್ನಲ್ಲಾ ಇವರನ್ನು, ಯಾರಿರಬಹುದು? ಹೆಸರು ನೆನಪಾಗ್ತಾ ಇಲ್ಲವಲ್ಲಾ ಎಂದು ತಡಬಡಾಯಿಸುತ್ತಿದ್ದೆ. ಈಗ ಆ ಸಮಸ್ಯೆಗೆ ಉತ್ತರ ಕಂಡುಕೊಂಡಿದ್ದೇನೆ. ಹಾಗಂತ ನಾನೇನು ಹೆಚ್ಚುವರಿ ಮೆಮರಿ ಕಾರ್ಡನ್ನು ನನ್ನ ಮೆದುಳಿನಲ್ಲಿ ಅಳವಡಿಸಲಿಲ್ಲ. ಬುದ್ಧಿಪೂರ್ವಕವಾಗಿ ನೆನಪಿನ ಕೋಶಗಳನ್ನು ಜಾಗೃತವಾಗಿಟ್ಟುಕೊಳ್ಳುವುದನ್ನು ಅಭ್ಯಾಸ ಮಾಡಲಾರಂಭಿಸಿದೆ. ಈಗ ನನಗೆ ಜನರ ಹೆಸರುಗಳನ್ನು ನೆನಪಿಟ್ಟುಕೊಳ್ಳುವುದಕ್ಕಿಂತ ಮರೆಯುವುದೇ ಕಷ್ಟವಾಗಿದೆ. ಭೇಟಿಯಾದವರ ಜತೆ ಒಂದು ಸಂಬಂಧವನ್ನು, ಸಣ್ಣ ನೆನಪನ್ನು ಬೆಸೆಯುವುದನ್ನು ರೂಢಿಸಿಕೊಳ್ಳಬೇಕು. ವ್ಯಕ್ತಿಗಳನ್ನು ಪ್ರೀತಿಸುವುದನ್ನು, ಗೌರವಿಸುವುದನ್ನು, ಅವರೊಂದಿಗೆ ಮೆಲಕು ಹಾಕುವ ಪ್ರಸಂಗವನ್ನು ಆಯ್ದುಕೊಳ್ಳುವುದನ್ನು ಬೆಳೆಸಿಕೊಳ್ಳಬೇಕು. ಯಮಕನಮರಡಿಯಲ್ಲಿ ನೀವು ಗೌಡರ ಮನೆಯಲ್ಲಿ ಮಧ್ಯರಾತ್ರಿ ಊಟ ಮಾಡಿದ್ದರೆ, ಎಷ್ಟೋ ವರ್ಷಗಳ ನಂತರವೂ, ಅವರ ಹೆಸರು ಬಸನಗೌಡ ಕಲ್ಲಪ್ಪ ಗೌಡ ಹತ್ತಿವಾಡ ಎಂಬುದನ್ನು ಹೇಗೆ ಮರೆಯುತ್ತೀರಿ?

ಮೌಂಟೇನ್ ಗೊರಿಲ್ಲಾಗಳ ಬಗ್ಗೆ ನಲವತ್ತು ವರ್ಷಗಳಿಂದ ಅಧ್ಯಯನ ಮಾಡುತ್ತಿರುವ ದಂಪತಿಗಳನ್ನು ನಾನು ರವಾಂಡ ದೇಶದ ದಟ್ಟ ಅರಣ್ಯದಲ್ಲಿ ಒಂಬತ್ತು ವರ್ಷಗಳ ಹಿಂದೆ ಭೇಟಿ ಮಾಡಿದೆ. ಆ ದಂಪತಿಗಳ ಹೆಸರು ಬಿಲ್ ವೆಬರ್ ಮತ್ತು ಎಮಿ ವೆಡರ್ ಅನ್ನೋದನ್ನು ನಾನು ಹೇಗೆ ಮರೆಯಲಿ? ಒಂದು ವೇಳೆ ಅವರ ಹೆಸರನ್ನು ಮರೆತರೆ, ನನಗೆ ಅವರ ಸಾಧನೆ ಪುಳಕವನ್ನುಂಟು ಮಾಡಿಲ್ಲ ಎಂದರ್ಥ. ನಾನು ಅವರನ್ನು ಗೌರವಿಸುವುದಾದರೆ, ಅವರ ಹೆಸರಿನ ಮೂಲಕವೇ ತಾನೇ? ಅವರ ಹೆಸರೇ ನನಗೆ ನೆನಪಾಗದಿದ್ದರೆ, ಅವರು ನನ್ನ ಮನಸ್ಸಿನಲ್ಲಿ ನೆಲೆಸಿಲ್ಲ ಎಂದರ್ಥ.

ನಾವು ಎಂದಾದರೂ ನನ್ನ ಮಗನ, ಹೆಂಡತಿ, ತಾತನ ಹೆಸರು ನೆನಪಾಗುವುದಿಲ್ಲ ಎಂದು ಹೇಳುತ್ತೇವಾ? ಸಾಧ್ಯವೇ ಇಲ್ಲ. ಭೇಟಿಯಾದ ಪ್ರತಿ ವ್ಯಕ್ತಿ ಜತೆ ಅಂಥ ಸಂಪರ್ಕ, ಸಂಬಂಧ ಬೆಸೆಯಬೇಕು. ಮೆಲುಕುಗಳನ್ನು ಸಲಹಬೇಕು, ನೆನಪುಗಳನ್ನು ಸಾಕಬೇಕು. ಕೆಲ ದಿನಗಳ ಹಿಂದೆ, ಒಬ್ಬರು ನನ್ನನ್ನು ನೋಡಲು ಬಂದಿದ್ದರು. 'ಸಾರ್, ನಾನು ಯಾರು ಗೊತ್ತಾಯ್ತಾ?' ಎಂದು ಕೇಳಿದರು. ನಾನು ತಕ್ಷಣ, 'ಯಾಕೋ ರಾಜು ಪಲ್ಲೇದ, ಯಾಕೆ ಈ ಪರಿ ಸೊರಗಿ ಹೋಗಿದ್ದೀಯಾ?' ಎಂದು ಕೇಳಿದೆ. ಅಷ್ಟಕ್ಕೇ ಆತ ಉಬ್ಬಿಹೋದ. 'ಏನ್ ಸಾರ್, ನೀವು ಇಷ್ಟು ವರ್ಷ ಆದ್ರೂ ನನ್ನ ಹೆಸರನ್ನು ನೆನಪಲ್ಲಿ ಇಟ್ಟೀರಲ್ಲ? ಭಾಳ ಸಂತೋಷ ಆತು' ಎಂದ. 'ನಿನ್ನ ಹೆಸರೊಂದೇ ಅಲ್ಲ, ನಿನ್ನ ಮೊಬೈಲ್ ನಂಬರ್ ಹೇಳಲೇನು?' ಎಂದೆ. ಆತನಿಗೆ ಇನ್ನೂ ಖುಷಿಯಾಯಿತು.

ನಾವು ಜನರ ಹೆಸರನ್ನು ನೆನಪಿಟ್ಟುಕೊಳ್ಳುವುದಕ್ಕಿಂತ ನಮ್ಮ ಮನಸ್ಸಿನಲ್ಲಿ ಅವರಿಗೆ ಜಾಗಕೊಡಬೇಕು. ಅವರ ಮನಸ್ಸಲ್ಲೂ ಜಾಗ ಪಡೆಯಬೇಕು. ಆಗ ಯಾರ ಹೆಸರನ್ನೂ ನೆನಪಿಟ್ಟುಕೊಳ್ಳಬೇಕಾದ ಅಗತ್ಯ ಬರುವುದಿಲ್ಲ. ಕಾರಣ ಅವರ ಹೆಸರನ್ನು ಮರೆಯುವುದೇ ಕಷ್ಟವಾಗುತ್ತದೆ. ಪ್ರಯತ್ನಿಸಿ.

ಕೆ.ಕೆ.ವಾಸುದೇವ, (ಇಮೇಲ್ ಮೂಲಕ)

● ಸಂಪಾದಕರೇ, ನಾನು ರಾತ್ರಿ ನಿದ್ದೆಯಲ್ಲಿ ಮಾತಾಡುತ್ತೇನೆ ಅಂತ ನನ್ನ ಪತ್ನಿ ಹೇಳುತ್ತಾಳೆ. ಕೆಲವೊಮ್ಮೆ ಏನೇನೋ ಅಸ್ಪಷ್ಟವಾಗಿ ಮಾತಾಡುತ್ತೇನಂತೆ. ನನ್ನ ಆತಂಕವೆಂದರೆ, ನಾನು ನಿದ್ದೆಯಲ್ಲಿ ಮಾತಾಡುವಾಗ, ಆಫೀಸಿನ ಮಹಿಳಾ ಸಹೋದ್ಯೋಗಿಗಳ ಹೆಸರು ಹೇಳಿದರೆ ನನ್ನ ಪತ್ನಿ ತಪ್ಪು ಭಾವಿಸಬಹುದೇನೋ ಎನ್ನುವುದು. ಹೀಗಾಗಿ ಅವಳಿಂದ ಪ್ರತ್ಯೇಕವಾಗಿ ಬೇರೆ ರೂಮಿನಲ್ಲಿ ಮಲಗಲಾರಂಭಿಸಿದ್ದೇನೆ. ಇದರಿಂದ ಅವಳಿಗೆ ನನ್ನ ಬಗ್ಗೆ ಅವ್ಯಕ್ತ ಸಂದೇಹ. ಬೆಳಗ್ಗೆ ಬೆಳಗ್ಗೆಯೇ ನನ್ನ ಮೇಲೆ ರೇಗುತ್ತಾಳೆ. ಇಡೀ ದಿನ ಮುಖ ಸೊಟ್ಟ ಮಾಡಿಕೊಂಡಿರುತ್ತಾಳೆ. ಈ ಸಮಸ್ಯೆಗೆ ಪರಿಹಾರವೇನು?

-ವಾಸುದೇವ ಅವರೇ, ವಾಸ್ತವವಾಗಿ ನಿಮಗೆ ಯಾವುದೇ ಸಮಸ್ಯೆ ಇಲ್ಲ, ಆದರೂ ಸಮಸ್ಯೆಯನ್ನು ಆಹ್ವಾನಿಸುತ್ತಿದ್ದೀರಿ. ಅದು ಇದೆ ಎಂದು ನಂಬಿಸಿಕೊಂಡು ಭಯಪಡುತ್ತಿದ್ದೀರಿ. ಸರಿ, ನಿದ್ದೆಗಣ್ಣಿನಲ್ಲಿ ಆಫೀಸಿನ ಮಹಿಳಾ ಸಹೋದ್ಯೋಗಿ ಅಥವಾ ನಿಮ್ಮ ಇಷ್ಟದ ಹೆಂಗಸಿನ ಹೆಸರನ್ನೇ ಹೇಳಿದರೆನ್ನಿ. ಅಷ್ಟಕ್ಕೇ ಆಕಾಶ ಕಳಚಿ ಬಿದ್ದವರಂತೆ ಯಾಕೆ ಭಯಪಡುತ್ತೀರೋ ಗೊತ್ತಾಗುತ್ತಿಲ್ಲ. ನಿಮ್ಮ ಪತ್ನಿಗೆ ನೀವು ಎಂಥವರು ಎಂಬುದು ಗೊತ್ತಿದೆ. ಪಕ್ಕದಲ್ಲಿ ಮಲಗಿದವಳಿಗೇ ಏನೂ ಮಾಡದ ನಮ್ಮ ಯಜಮಾನರು, ನಿದ್ದೆಯಲ್ಲಿ, ಕನಸಿನಲ್ಲಿ ಬಂದ ಹೆಂಗಸಿನ ಜತೆ ಏನು ಮಾಡಬಲ್ಲರು ಎನ್ನುವುದನ್ನು ಯೋಚಿಸದಷ್ಟು ದಡ್ಡಿ ಅಲ್ಲ. ಒಂದು ವೇಳೆ ಅವಳ ಹೆಸರು ಹೇಳಿದ್ದಕ್ಕೆ ತಪ್ಪು ತಿಳಿದುಕೊಂಡರೆ, ಪತ್ನಿಗೆ ಹೇಳಿ, 'ಕನಸಿನ ಮೇಲೆ ಯಾರಿಗೂ ನಿಯಂತ್ರಣವಿಲ್ಲ. ಕನಸಿನಲ್ಲಿ ಬಡಬಡಿಸಿದ ಮಾತ್ರಕ್ಕೆ ನನಗೂ ಅವಳಿಗೂ ಸಂಬಂಧ ಇದೆ ಎಂದು ಭಾವಿಸಬೇಡ. ಒಂದು ವೇಳೆ ನಾನು ಕನಸಿನಲ್ಲಿ ಮಾರಿಮುತ್ತು ಹೆಸರನ್ನು ಹೇಳಿದೆ ಅಂತಿಟ್ಟುಕೋ, ಆಗ ಏನು ಮಾಡ್ತೀಯಾ? ಹೀಗಾಗಿ ಅದಕ್ಕೆಲ್ಲ ಹೆಚ್ಚು ಮಹತ್ವ ಕೊಡಬಾರದು' ಎಂದು ಮನವರಿಕೆ ಮಾಡಿಕೊಡಿ.

ಆಗಲೂ ಮನವರಿಕೆ ಆಗದಿದ್ದರೆ, ಒಂದು ರಾತ್ರಿ ಕನಸಿನಲ್ಲಿ ಮಾತಾಡುವವರಂತೆ ನಟಿಸಿ. ಶೋಭಾ ಕರಂದ್ಲಾಜೆ, ಸೌಮ್ಯ ರೆಡ್ಡಿ, ಲಲಿತಾ ನಾಯಕ, ಪ್ರತಿಭಾ, ಉಷಾ ಹೀಗೆ ಬೇರೆ ಬೇರೆ ಹೆಸರುಗಳನ್ನು ಹೇಳಿ.. ಆಗ ನಿಮ್ಮ ಪತ್ನಿಯ ಪ್ರತಿಕ್ರಿಯೆ ಹೇಗಿತ್ತು ಎಂಬುದನ್ನು ಗಮನಿಸಿ. ಈ ಹೆಸರುಗಳನ್ನು ಹೇಳಿದಾಗ ಅವಳಲ್ಲಿ, ಯಾವ ಭಾವೋತ್ಕರ್ಷ ಪುಟಿಯದಿದ್ದರೆ, 'ನನ್ನ ಬಗ್ಗೆ ಹಾಗೆಲ್ಲ ಸಂದೇಹಪಡಬೇಡ' ಎಂದು ನೀವು ಆವಾಜ್ ಹಾಕಿ.

ಇವೆಲ್ಲಾ ಬಿಟ್ಟು, ಹೆಂಡತಿಯಿಂದ ದೂರವಾಗಿ ಬೇರೆ ರೂಮಿನಲ್ಲಿ ಮಲಗುವುದು, ನಿಮ್ಮ ಕನವರಿಕೆ ಕೇಳಿಸಿಕೊಂಡು ಪತ್ನಿ ಬೇಸರಿಸಿಕೊಳ್ಳಬಹುದೇನೋ ಎಂದು ಭಯಪಡುವುದೆಲ್ಲ ಶುದ್ಧ ನಾನ್ಸೆನ್ಸ್. ಗಂಡಸರು ಕುಡಿದಾಗ ಮಾತಾಡಿದ್ದನ್ನೇ ಹೆಂಡತಿ ಗಂಭೀರವಾಗಿ ತೆಗೆದುಕೊಳ್ಳುವುದಿಲ್ಲ. ಇನ್ನು ನಿದ್ದೆಯಲ್ಲಿ, ಕನಸಿನಲ್ಲಿ ಮಾತಾಡಿದ್ದನ್ನು ಸೀರಿಯಸ್ಸಾಗಿ ಸ್ವೀಕರಿಸುತ್ತಾರಾ? ಅಷ್ಟಕ್ಕೂ ಆಕೆಗೆ ಸಮಾಧಾನ ಆಗದಿದ್ದರೆ, 'ಇತ್ತೀಚೆಗೆ ನೀನೂ ಕನಸಿನಲ್ಲಿ ಗಂಡಸರ ಹೆಸರನ್ನು ಹೇಳುತ್ತಿರುವುದೇಕೆ, ನಾನೂ ಅದನ್ನು ರೆಕಾರ್ಡ್ ಮಾಡಿಕೊಂಡಿದ್ದೇನೆ. ಪೆನ್ ಡ್ರೈವ್ ನಲ್ಲಿದೆ, ಕೇಳಿಸಲಾ?' ಎಂದು ರೋಪು ಹಾಕಿ.

ಅದು ಬಿಟ್ಟು ನೀವು ... ಏನ್ ಮಾರ್ರೇ!

ಪಿ.ಜಾಹ್ನವಿ , ಬೆಂಗಳೂರು

● ಭಟ್ರೇ, ನನಗೆ ಹೋಟೆಲಿನಲ್ಲಿ ತಿನ್ನುವಾಗ ಸ್ಪೂನ್ ಬಳಸುವುದೆಂದರೆ ಆಗಿಬರುವುದಿಲ್ಲ. ಸಾವಿರಾರು ಜನ ಬಾಯಲ್ಲಿ ಹಾಕಿಕೊಂಡಿದ್ದನ್ನು ನಾನೂ ನನ್ನ ಬಾಯಲ್ಲಿಟ್ಟುಕೊಳ್ಳಬೇಕಾ ಎನಿಸುತ್ತದೆ. ವಾಂತಿ ಬಂದಂತಾಗುತ್ತದೆ. ಹೀಗಾಗಿ ಕೈಯಲ್ಲಿ ತಿನ್ನುತ್ತೇನೆ. ಕೆಲವೊಮ್ಮೆ ಕೈಯಲ್ಲಿ ತಿನ್ನುವುದು ಶಿಷ್ಟಾಚಾರವಲ್ಲ ಅಂತಾರೆ. ಇಂಥ ಸಂದರ್ಭದಲ್ಲಿ ಏನು ಮಾಡಬೇಕು?

-ಜಾಹ್ನವಿ ಅವರೇ, ಸ್ವಚ್ಛತೆ ಬಗ್ಗೆ ಅತಿಯಾಗಿ ತಲೆ ಕೆಡಿಸಿಕೊಂಡವರ ಫಜೀತಿಯಿದು. ಮನಶ್ಶಾಸ್ತ್ರಜ್ಞರನ್ನು ಕೇಳಿದರೆ ಇದನ್ನೂ ಒಂದು ಮಾನಸಿಕ ಕಾಯಿಲೆ ಅಂದಾರು. ನಿಮಗೆ ಸ್ಪೂನ್ ಹೇಗೋ, ನನಗೆ ಹೋಟೆಲ್ ಟಾವೆಲ್ ಮತ್ತು ಬೆಡ್ ಶೀಟ್. ಅವೆಷ್ಟೋ ಜನ ಬಳಸಿದ ಟಾವೆಲ್‌ನಲ್ಲಿ ಮೈ ಒರೆಸಿಕೊಳ್ಳುವುದುಂಟಾ ಎಂದು ನಾನು ಮುಖ ಕಿವುಚಿಕೊಳ್ಳುತ್ತೇನೆ. ಆ ಟಾವೆಲ್‌ನ್ನು ಅದೆಷ್ಟೇ ಸ್ವಚ್ಛವಾಗಿ ತೊಳೆದಿರಬಹುದು, ಆದರೂ ಬೇರೆಯವರು ಬಳಸಿದ್ದು ಎಂಬುದು ನೆನಪಾದರೆ ಅಸಹ್ಯವಾಗುತ್ತದೆ. ಹೀಗಾಗಿ ನಾನು ಎಲ್ಲಿಗೆ ಹೋದರೂ ನನ್ನ ಟಾವೆಲ್, ಬೆಡ್‌ಶೀಟ್ ಮತ್ತು ಚಾದರಗಳನ್ನು ತೆಗೆದುಕೊಂಡು ಹೋಗುವುದನ್ನು ಅಭ್ಯಾಸ ಮಾಡಿಕೊಂಡಿದ್ದೇನೆ. ಈಗ ಇಂಗ್ಲೆಂಡಿಗೆ ಬಂದಿದ್ದೇನೆ, ಇಲ್ಲೂ ಇದೇ ಪದ್ಧತಿ ಮುಂದುವರಿಸಿದ್ದೇನೆ! ಇದು ವ್ಯತ್ಯಾಸವಾದಾಗ ನಿದ್ದೆಯೇ ಬರುವುದಿಲ್ಲ. ಇದನ್ನು ನೋಡಿ ನನ್ನ ಸ್ನೇಹಿತರು ನಗುತ್ತಾರೆ, ವ್ಯಂಗ್ಯವಾಡುತ್ತಾರೆ. 'ಹೋಟೆಲ್ ಟಾವೆಲ್ ಕ್ಲೀನಾಗಿರುತ್ತದೆ, ಚೆನ್ನಾಗಿ ತೊಳೆದಿರುತ್ತಾರೆ' ಎಂದು ಸಮಜಾಯಿಷಿ ನೀಡಿ ನನ್ನನ್ನು ಒಪ್ಪಿಸಲು ಪ್ರಯತ್ನಿಸುತ್ತಾರೆ. ಕ್ಲೀನಾಗಿ ತೊಳೆದಿದ್ದಾರೆಂದು ಬೇರೆಯವರು ಬಳಸಿದ ನಿಕ್ಕರ್, ಟೂತ್ ಬ್ರಶ್‌ನ್ನು ನೀವು ಬಳಸುತ್ತೀರಾ ಎಂದು ಕೇಳಿದರೆ ಸುಮ್ಮನಾಗುತ್ತಾರೆ.

ನಾನು ಈಗಲೂ ಟಾವೆಲ್, ಬೆಡ್‌ಶೀಟ್ ಮತ್ತು ಚಾದರದ ವಿಷಯದಲ್ಲಿ ಅಷ್ಟೇ ಮೊಂಡ. ಹಿಂಸೆಯಾದರೂ ಪರವಾಗಿಲ್ಲ, ಕೆಲವು ಮೊಂಡು ಗುಣಗಳನ್ನು ಬಿಡಬಾರದು, ಪ್ರೀತಿಯಿಂದ ಪೊರೆಯಬೇಕು. ಸ್ಪೂನ್ ವಿಷಯದಲ್ಲಿ ನನಗೂ ಎಷ್ಟೋ ಸಲ ಹಾಗೆ ಅನಿಸಿದ್ದಿದೆ. ಅದೆಷ್ಟೇ ಸ್ವಚ್ಛವಾಗಿದ್ದರೂ, ಮತ್ತೊಮ್ಮೆ ಲೋಟದಲ್ಲಿರುವ ನೀರಿನಲ್ಲಿ ಅದ್ದಿ, ಟಿಷ್ಯೂ ಕಾಗದದಲ್ಲಿ ಒರೆಸಿಕೊಂಡು, ಸ್ಪೂನನ್ನು ನಾಲಗೆಗೆ ತಾಕಿಸದೇ ಆಹಾರ ಸೇವಿಸುತ್ತೇನೆ. ಸಮಯ, ಸಂದರ್ಭ ನೋಡಿ ಕೈಯಲ್ಲೂ ಸೇವಿಸುತ್ತೇನೆ. ಬಾಚಣಿಕೆ ಇಲ್ಲವೆಂದು ಬೇರೆಯವರದ್ದನ್ನು ಬಳಸಬಾರದು. ಆ ದಿನ ಕೂದಲು ಬಾಚಿಕೊಳ್ಳದಿದ್ದರೂ ಪರವಾಗಿಲ್ಲ. ಅಷ್ಟಕ್ಕೂ ನಮ್ಮ ಸ್ವಚ್ಛತೆ, ನಮ್ಮ ವ್ಯಕ್ತಿತ್ವ. ನಮ್ಮ ಹೆಮ್ಮೆ, ನಮ್ಮ ಸಂತೋಷ. ಈ ವಿಷಯದಲ್ಲಿ ರಾಜಿ ಮಾಡಿಕೊಳ್ಳಬಾರದು, ಲೂಸು ಅಂದ್ರೂ ಪರವಾಗಿಲ್ಲ. ಈ ವಿಷಯದಲ್ಲಿ ನಾನು ನಿಮ್ಮ ಪರ.

ಯಶವಂತ ಕೆ.ಶೆಟ್ಟಿ, ಉಡುಪಿ

● ಭಟ್ರೇ, ನಾನು ನಿಮ್ಮ ಹ್ಯಾಂಡ್‌ರೈಟಿಂಗ್ ಚೆನ್ನಾಗಿದೆಯೆಂದು ಕೇಳಿದ್ದೇನೆ. ನನಗೂ ನನ್ನ ಹಸ್ತಾಕ್ಷರವನ್ನು ಸುಂದರವಾಗಿಸಿಕೊಳ್ಳಬೇಕು ಎಂಬ ಆಸೆಯಿದೆ. ನನ್ನ ಹಸ್ತಾಕ್ಷರ ನೋಡಿ, ಹುಡುಗಿಯರು ಮೋಹಿತರಾಗಬೇಕು.. ಅಷ್ಟು ಸುಂದರ ಹ್ಯಾಂಡ್ ರೈಟಿಂಗ್ ನನ್ನದಾಗಬೇಕು. ಇದಕ್ಕೆ ನಾನು ಏನು ಮಾಡಬೇಕು? ಹೇಳಬಹುದಾ?

-ಶೆಟ್ಟಿಯವರೇ, ಇಂಗ್ಲಿಷಿನಲ್ಲೊಂದು ಮಾತಿದೆ - I don't have a bad handwriting. I have my own font. ಹಸ್ತಾಕ್ಷರ ಎನ್ನುವುದು ನಮ್ಮ ಸಹಿ, ವ್ಯಕ್ತಿತ್ವ ಇದ್ದ ಹಾಗೆ. ನಮ್ಮ ಅಕ್ಷರಗಳಲ್ಲಿ ನಾವಿದ್ದೇವೆ. ಅದಕ್ಕೇ ನಮ್ಮ ಸಹಿಗೆ ಅಷ್ಟು ಪ್ರಾಮುಖ್ಯ. Handwriting is more connected to the movement of the heart ಎಂದು ಹೇಳುವುದನ್ನು ಕೇಳಿರಬಹುದು. ನಾವು ಬೇರೆಯಲ್ಲ, ನಮ್ಮ ಹಸ್ತಾಕ್ಷರ ಬೇರೆಯಲ್ಲ. ಹಸ್ತಾಕ್ಷರಕ್ಕೆ ಹಸ್ತ ಮತ್ತು ಸಮಸ್ತವನ್ನು ನುಂಗುವ ತಾಕತ್ತಿದೆ. ಹೀಗಾಗಿ ಅದಕ್ಕೆ ಅಷ್ಟೆಲ್ಲ ಮಹತ್ವ.

ಸುಂದರವಾಗಿರುವವರ ಹ್ಯಾಂಡ್‌ರೈಟಿಂಗ್ ಸಹ ಸುಂದರವಾಗಿರುತ್ತದೆ ಎಂದು ಹೇಳಲಾಗುವುದಿಲ್ಲ. ಸುಂದರ ಹ್ಯಾಂಡ್‌ರೈಟಿಂಗ್ ಎನ್ನುವುದು ಒಂದು ವ್ರತ. ಅದು ಪರಿಶ್ರಮದಿಂದ ಸಿದ್ಧಿಸಿಕೊಳ್ಳುವಂಥದ್ದು. ಅದನ್ನು ಯಾರು ಬೇಕಾದರೂ ಕರಗತ ಮಾಡಿಕೊಳ್ಳಬಹುದು. ಆದರೆ ಅದಕ್ಕೆ ಸತತ ಅಭ್ಯಾಸ, ಹಠ, ಧ್ಯಾನಸ್ಥ ಮನಸ್ಸು, ಪರಿಶ್ರಮ ಬೇಕು. ಶಿಲ್ಪಿ ಶಿಲೆಯನ್ನು ಕೆತ್ತುವ ಹಾಗೆ, ಬರಹಗಾರ ಅಕ್ಷರಗಳನ್ನು ಕೆತ್ತುತ್ತಾನೆ. ಪ್ರತಿ ಅಕ್ಷರವನ್ನೂ ಒಲಿಸಿಕೊಳ್ಳಬೇಕು. ಪ್ರತಿ ಅಕ್ಷರ, ಒತ್ತಕ್ಷರ, ತಲೆಗೊಟ್ಟು, ಅರ್ಕ ಒತ್ತು, ಸೀಳೋದು ... ಎಲ್ಲವೂ ಒಂಥರಾ ಸಹಿ ಇದ್ದ ಹಾಗೆ. ಹೀಗಾಗಿ ಹಸ್ತಾಕ್ಷರಕ್ಕೆ ಅಷ್ಟೊಂದು ಮಹತ್ವ.

ನೀವು ಸುಂದರ ಹಸ್ತಾಕ್ಷರವನ್ನು ಒಲಿಸಿಕೊಂಡು ನಿಮ್ಮದಾಗಿಸಿಕೊಳ್ಳಬಹುದು.

ಹುಡುಗಿಯರನ್ನು ಬುಟ್ಟಿಗೆ ಹಾಕಿಕೊಳ್ಳಲು ಸುಂದರ ಹ್ಯಾಂಡ್‌ರೈಟಿಂಗ್ ಪ್ರಾಕ್ಟಿಸ್ ಮಾಡುವ ನಿಮ್ಮ ಹುನ್ನಾರ ಯಾಕೋ ಸರಿ ಕಾಣಲಿಲ್ಲ. ಈಗಿನ ಕಾಲದ ಹುಡುಗಿಯರು ಸುಂದರ ಹ್ಯಾಂಡ್‌ರೈಟಿಂಗ್‌ಗೆ ಬುಟ್ಟಿಗೆ ಬೀಳುತ್ತಾರೆ ಎಂದು ಅನಿಸುವುದಿಲ್ಲ.

ನೀವು ಪ್ರೇಮ ಪತ್ರ ಬರೆದರೆ ಓದಲು ಯಾರಿಗೆ ಪುರುಸೊತ್ತಿದೆ? ಕಂಪ್ಯೂಟರಿನಲ್ಲಿ ಸಾಕಷ್ಟು ಫಾಂಟ್‌ಗಳಿವೆ. ಅದರ ಬದಲು ಸುಂದರ ಹಸ್ತಾಕ್ಷಾರವನ್ನು ನಿಮ್ಮ ವ್ಯಕ್ತಿತ್ವದ ಭಾಗವಾಗಿ ಮಾಡಿಕೊಳ್ಳಿ. ನಿಮ್ಮ ಹಸ್ತಾಕ್ಷರ ನಿಮ್ಮನ್ನು ಮೆಚ್ಚಲು ಒಂದು ಪ್ರಮುಖ ಕಾರಣಗಳಲ್ಲೊಂದಾಗಲಿ. ಮಹಾನ್ ನಾಯಕರೆಂದು ಕರೆಯಿಸಿಕೊಂಡ ಎಲ್ಲರ ಹಸ್ತಾಕ್ಷರಗಳೂ ಬಹಳ ಸುಂದರವಾಗೇನೂ ಇಲ್ಲ. ಆದರೆ ಯಾರದ್ದು ಸುಂದರವಾಗಿದೆಯೋ, ಅವರಿಗೆ ಅವರ ಹಸ್ತಾಕ್ಷರ ಮತ್ತಷ್ಟು ಮೆರಗು ನೀಡಿರುವುದಂತೂ ದಿಟ.

ಇನ್ನು ಸುಂದರವಾಗಿ ಬರೆಯುವುದು ಹೇಗೆ? ಅದಕ್ಕೆ ಉತ್ತರ-ಬರೆಯುವುದು ಮತ್ತು ಹೆಚ್ಚು ಹೆಚ್ಚು ಬರೆಯುವುದು. ಅಕ್ಷರ ಸುಂದರವಾಗುವ ತನಕ ಬರೆಯುವುದು. ಇದರ ಹೊರತಾಗಿ ಬೇರೆ ಶಾರ್ಟ್‌ಕಟ್‌ಗಳಿಲ್ಲ. ಇದು ಪ್ರೀತಿಯಿಂದ ಸಾಧಿಸಿಕೊಳ್ಳುವಂಥದ್ದು. ನಮ್ಮ ಹಸ್ತಾಕ್ಷರವನ್ನು ಓದಲು ಲಿಪಿತಜ್ಞರ ಸಹಾಯವನ್ನು ಪಡೆಯುವ ಸ್ಥಿತಿ ಬರಬಾರದು. ಡಾಕ್ಟರ್ ಹೇಗೇ ಬರೆಯಲಿ, ಔಷಧ ಅಂಗಡಿಯವರು ಓದುತ್ತಾರೆ. ಹಾಗೆಯೇ ನೀವು ಹೇಗೆ ಬರೆದರೂ ಜನ ಓದಿಕೊಳ್ಳುತ್ತಾರೆ ಎಂದು ಭಾವಿಸಬಾರದು. ನಿಮ್ಮ ಹಸ್ತಾಕ್ಷರಗಳಲ್ಲಿ ನೀವಿರುತ್ತೀರಿ ಎಂಬುದು ಗೊತ್ತಿರಲಿ. ಆಗ ಸಹಜವಾಗಿಯೇ ನಿಮ್ಮ ಅಕ್ಷರಗಳು ಹೂವುಗಳಂತೆ ಕೋಮಲವಾಗಿ, ಸುಂದರವಾಗಿ ಅರಳುತ್ತವೆ. ಪ್ರಯತ್ನಿಸಿ.